೧. [illegible]

೨. ಸಿದ್ಧನೀತಿ

೩. ವಿರೂಪಾಕ್ಷ ನೀತಿ

೪. ಶಿವಭಕ್ತಿಸಾರ

೫. ನಿಜಲಿಂಗಶತಕ

೬. ಸರ್ವಜ್ಞಪದಗಳು

ಬೆಂಗಳ[illegible]ಂಟಿಂಗ್ ಮತ್ತು ಪಬ್ಲಿಷಿಂಗ್ ಕಂಪೆನಿಯಿಂದ
[illegible]ಕಟಿಸಲ್ಪಟ್ಟಿತು.

1920

[ಬೆಲೆ ೧ ರೂ.

ಬೆಂಗಳೂರು ಪ್ರೆಸ್.

ನೀತಿಸಾರ

ಪ್ರಥಮ ಭಾಗ

ಸೋಮೇಶ್ವರ ಶತಕ.

ಶ್ರೀಮತ್ಕೈಲಾಸವಾಸಂ ಸ್ಮಿತಮೃದುವಚನಂ ಪಂಚವಕ್ತ್ರಂ ತ್ರಿಣೇತ್ರಂ
ಪ್ರೇಮಾಂಗಂ ಪೂರ್ಣಕಾಮಂ ಪರಮಪರಶಿವಂ ಪಾರ್ವತೀಶಂ ಪರೇಶಂ॥
ಧೀಮಂತಂ ದೇವದೇವಂ ಪುಲಿಗಿರಿನಗರೀಶಾಸನಾಂಕಂ ಮೃಗಾಂಕಂ
ಸೋಮೇಶಂ ಸರ್ಪಭೂಷಂ ಸಲುಹುಗೆ ಸತತಂ ಶಂಭುವೆನ್ನಂ ಪ್ರಸನ್ನಂ॥೧॥

ಕೆಲವಂ ಬಲ್ಲವರಿಂದೆ ಕಲ್ತು ಕೆಲವಂ ಶಾಸ್ತ್ರಂಗಳಂ ಕೇಳ್ದು ತಾಂ
ಕೆಲವಂ ಮಾಳ್ಪವರಿಂದೆ ಕಂಡು ಕೆಲವಂ ಸುಜ್ಞಾನದಿಂ ನೋಡುತಂ॥
ಕೆಲವಂ ಸಜ್ಜನಸಂಗದಿಂದಮರಿಯಲ್ಸರ್ವಜ್ಞನಪ್ಪಂತೆ ತಾಂ
ಪಲವುಂ ಪಳ್ಳಸಮುದ್ರಮೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೨ ॥

ಅದರಿಂನೀತಿಯೆ ಸಾಧನಂ ಸಕಲಲೋಕಕ್ಕೆಲ್ಲ ಬೇಕೆಂದುಪೇ
ಳಿದ ಸೋಮಂ ಸುಜನರ್ಕಳೀಶತಕದೊಳ್ತಪ್ಪಿರ್ದೊಡಂ ತಿದ್ದಿತೋ ॥
ರ್ಪುದು ನಿಮ್ಮುತ್ತಮಸದ್ಗುಣಂಗಳ ಜಗದ್ವಿಖ್ಯಾತಮಂ ಮಾಡುತಂ
ಮುದದಿಂ ನಿಮ್ಮವನೆಂಬುದ್ದೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೩ ॥

ಮುಕುರಂ ಕೈಯೊಳಿರಲ್ಕೆ ನೀರನೆಳಲೇಕ್ಕೈ? ಕಾಮಧೇನಿರ್ದು ಮಾ
ಟಕೆಗೊಡ್ಡಾಕಳನಾಯ್ವರೇ? ಗುಣಯುತಪಾಲುಂಡು ಮೇಲುಂಬರೇ? ॥
ಶುಕನೋದಿಂದುರಿ ಚಿಲ್ಪೈಕಾಕರವ? ರಂಭಾನೃತ್ಯದಿಂಡೊಂಬರೇ?
ಸಖರಿಂದುನ್ನತವಸ್ತುವೇ? ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೪ ॥

ಮದನಂಗಂಜುವ ಯೋಗಿಯೇ? ಮನೆಯಪೆಣ್ಣಿಂಗಂಜುವಂ ಗಂಡಸೇ?
ಮದಕಂಜೋಡುವುದಾನೆಯೇ? ದುರುಳರೊಳ್ಕೂಡಿರ್ಪವಂ ಮಾನ್ಯನೇ?
ಬುಧನೇತರ್ಕದೊಳಂಜುವಂ? ಬೆದರಿಗಾಯುಕ್ಕಂಜೆ ದಿವ್ಯಾಶ್ವವೇ?
ಕದನಕ್ಕಂಜುವವೀರನೇ? ಹರಹರಾ ಶ್ರೀ ಚೆನ್ನಸೋಮೇಶ್ವರಾ ॥ ೫ ॥

ಹರನಿಂದುರ್ವಿಗೆ ದೈವವೇ? ಮಧುರದಿಂದಂ ಬೇರೆಸ್ವಾದುಂಟೆ? ಪೆ
ತ್ತರಿಗಿಂ ಕೂರ್ಪರೆ? ಪೆಣ್ಣಿಗಿಂದಧಿಕ ಭೋಗದ್ರವ್ಯಮೇ? ವಿದ್ಯೆಗೇಂ ॥
ಸರಿಯೇ ಬಾಂಧವರೇಂ? ಮನೋಜನಿದಿರೊಳ್ಬಿಲ್ಲಾಳೆ? ಮೂಲೋಕದೊಳ್
ಗುರುವಿಂದುನ್ನತ ಸೇವ್ಯನೇ? ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೬ ॥

ಸುರೆಯಂ ಸೇವಿಸುವಾತಬಲ್ಲನೆ ಮಹಾಯೋಗೀಂದ್ರರೆಂದೆಂಬುದಂ?
ದೊರೆಯೊಳ್ ಸ್ನೇಹವನಾಂತವಂ ಬಡವರಂತಾಂನೋಳ್ಪನೇ ಪ್ರೀತಿಯಿಂ?
ಪಿರಿಯರ್ಮಾನಿತರೆಂದು ಕಾಣ್ಬನೆ ಮಹಾ ದುರ್ಮಾರ್ಗ? ನೆಂತಾದೊಡಂ
ದುರುಳಂ ಬಲ್ಲನೆ ಯೋಗ್ಯರಂ? ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೭ ॥

ಪೊರೆದುಂಬಾಳವೆ ಪಂದಿನಾಯ್ಗಳೊಡಲಂ? ಮಾತಾಡವೇ ಭೂತಗಳ್?
ತರುಗಳ್ಜೀವಿಗಳಲ್ಲವೇ? ಪ್ರತಿಮೆಗಳ್ಮಾದಾಡವೇ? ತೀರ್ಥಗಳ್ ॥
ಮೊರೆಯುತ್ತಂ ಉಸುರಿಕ್ಕವೇ? ಗ್ರಹಗೃಹಂ ಚೆಲ್ವಾಗಿರಲ್ಸೇರದೇ?
ಇರಲೇಕಜ್ಞರನೇಕದಿಂ? ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೮ ॥

ಅವಿನೀತಂ ಮಗನೇ? ಅಶೌಚ ಮುನಿಯೇ? ಬೈವಾಕೆತಾಂ ಪತ್ನಿಯೇ?
ಸವಿಗೆಟ್ಟನ್ನವದೂಟವೇ? ಕುಜನರೊಳ್ಕೂಡಿರ್ಪವಂ ಮಾನ್ಯನೇ? ॥
ಬವರಕ್ಕಾಗದ ಬಂಟನೇ? ಎಡರಿಗಂತಾನಾಗದಂ ನೆಂಟನೇ?
ಶಿವನಂ ಬಿಟ್ಟವ ಶಿಷ್ಯನೇ? ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೯ ॥

ಮರಗಳ್ಪುಟ್ಟವೆ? ತಾಣವೊಂದೆ ಖಗಕಂ? ರಾಜ್ಯಂಗಳೇಂ ಪಾಳೆ? ಭೂ
ವರರೊಳ್ತ್ಯಾಗಿಗಳಿಲ್ಲವೇ? ಕವಿಗೆ ವಿದ್ಯಾಮಾತ್ರವೇಂ ಬಂಜೆಯೇ? ॥
ಪುರವೊಂದೇನುಣ ಪುಟ್ಟದೇ? ಜನನಿಗಂಡೆಂದೆನ್ನಳೇ? ಲೋಕದೊಳ್
ನರರಂಪುಟ್ಟಿಸಿ ಪುಲ್ಲಮೇಯಿಸುವನೇ? ಶ್ರೀಚೆನ್ನಸೋಮೇಶ್ವರಾ ॥೧೦॥

ಅಡಿಮೂರೀಯೆನಲೀಯನೇಬಲಿ ನೃಪಂ ಮೂಲೋಕವಂ? ದೇಹವಂ
ಕಡಿದೀಯೆಂದೆನೆ ಪಕ್ಕಿಗೀಯನೆ ನೃಪಂ ತನ್ನಂಗವಾದ್ಯಂತವಂ? ॥
ನೃಡಬೇಕೆಂದೆನೆ ಸೀಳ್ದು ತನ್ನ ಸುತನಂ ನೈವೇದ್ಯಮಂ ಮಾಡನೇ?
ಕೊಡುವರ್ಗಾವುದು ದೊಡ್ಡಿತೈ? ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೧೧ ॥

ಸರಿಯೇ ಸೂರ್ಯಗೆ ಕೋಟಿಮಿಂಚುಬುಳುಗಳ್ ನಕ್ಷತ್ರಮೆಷ್ಟಿರ್ದೊಡೇ
ನೊರೆಯೇ ಚಂದ್ರಗೆ? ಜೀವರತ್ನಕೆಣೆಯೇ ಮಿಕ್ಕಾದ ಪಾಷಾಣವಾ ?॥
ಉರಗೇಂದ್ರಂಗೆ ಸಮಾನ ನೀರ್ಪ್ಪುಳು? ಸುಪರ್ಣಂಗೀಡೆ ಕಾಕಾಳಿ? ಸ
ಕ್ಕರೆ ಗುಪ್ಪಂ ಸರಿಮಾಳ್ಪರೇ? ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೧೨ ॥

ಬೆಗುರೆಂದುಂ ಮೆಲೆ ಬೇವುಸ್ವಾದುವಹುದೇ? ತೇಳಲ್ಪಮಾಗಿರ್ದೊಡಂ
ತೆಗೆಯಲ್ಕಜ್ಜದೆ? ಪಾಲನೂಡಿ ಪುಲಿಯಂ ಸಾಕಲ್ಕೆ ವಿಶ್ವಾಸಿಯೇ? ॥
ಖಗಮಂ ಸಾಕುವೆನೆಂದು ಗೂಗೆಮರಿಯಂ ಶಬ್ದಕ್ಕೆ ತಂದಪ್ಪರೇ
ಪಗೆಯಂಬಾಲಕನೆಂಬರೇ? ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೧೩ ॥

ಬೆರಿಪಾರಣ್ಯಕ ಪಕ್ಷಿಗೊಂದು ತರು ಗೊಡ್ಡಾಗಲ್ಫಲಂ ತೀವಿದಾ
ಮರಗಳ್ಪುಟ್ಟವೆ? ಪುಷ್ಪವೊಂದು ಬಳಲಲ್ ಭೃಂಗಕ್ಕೆ ಪೂವಿಲ್ಲವೇ? ॥
ನಿರುತಂಸತ್ಕವಿವರ್ಗದಲ್ಲಿ ಪುಸಿದೊರ್ವಂ ಲೋಭಿಯಾಗಿರ್ದೊಡೇಂ?
ಧರೆಯೊಳ್ದಾತರುಪುಟ್ಟರೇ? ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೧೪ ॥

ಅರಿಯಂ ಸೀಳುವೊಡಾನೆ ಮೆಟ್ಟಲಹುದೇ? ಚಾಣಂಗಳಿಂದಲ್ಲದೇ
ಕಿರಿದಾಗಿರ್ದೊಡದೇನುಪಾಯಪರನೊರ್ವಂ ಕೋಟಿಗೀಡಕ್ಕು ಹೆ ॥
ಮ್ಮರನಿರ್ದೇನದರಿಂದಲೆತ್ತಬಹುದೇ ಬಲ್ಭಾರವಂ? ಸನ್ನೆ ಸಾ
ವಿರಕಾಲಾಳಿನಸತ್ವವೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೧೫ ॥

ಮರಗಳ್ಪುಟ್ಟವೆ? ನಿಂದುದಿಲ್ಲ ದಶಕಂಠಂಗಾಯಿತೇ ಲಂಕೆ? ಸಾ
ಗರದೊಳ್ಪೋಗದೆ ದ್ವಾರಕಾನಗರಿ? ಭಿಲ್ಲರ್ಗಾದುದೇಗೋಪುರಂ?॥
ಮರುಳರ್ಗಾದುದೆ ಷಟ್ಪುರಂ? ಮಧುರೆಯೊಳ್ಕಂಸಾಸುರಂ ಬಾಳ್ದನೇ?
ಸಿರಿಬಂದುಂ ನಿಲೆಪುಣ್ಯವೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೧೬ ॥

ಇರಿಯಲ್ಬಲ್ಲೊಡೆ ವೀರನಾಗು ಧರೆಯೊಳ್ನಾನಾಚಮತ್ಕಾರವಂ
ಅರಿಯಲ್ಬಲ್ಲೊಡೆಮಂತ್ರಿಯಾಗು ಪ್ರಭುವಾಗಾರೆಂದೊಡಂ ಕೋಪಮಂ ॥
ತೊರೆಯಲ್ಬಲ್ಲೊಡೆಯೋಗಿಯಪ್ಪುದರಿಷಡ್ವರ್ಗಂಗಳಂಗೆಲ್ಲೆನೀಂ
ತೆರಬಲ್ಲಪೂರ್ಣೆಯಪ್ಪುದೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೧೭ ॥

ಕಡಿದಾಡಲ್ ರಣರಂಗದೊಳ್ನೃಪರ್ಗಳಂ ತಾನಗ್ಗದೊಳ್ಕಾಯ್ದೊಡಂ
ನೃಪನಂಮೆಚ್ಚಿಸಿ ಕೇಳ್ದೊಡಂ ತೊಳಲಿತಾಂ ದೇಶಾಟನಂಗೆಯ್ದೊಡಂ ॥
ಕಡಲೇಳಂ ಮಗುಚಿಟ್ಟೊಡಂ ಕಲಿಯೆನಾನಾವಿದ್ಯ ಪದ್ಯಂಗಳಂ
ಪಡೆದಷ್ಟಲ್ಲದೆ ಬಪ್ಪುದೇ? ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೧೮ ॥

ಕುಲದೊಳ್ಕೂಡರು ಕೂಸನೀಯರು ನೃಪರ್ನಿಷ್ಕಾರಣಂ ದಂಡಿಪರ್
ಪೊಳಲೊಳ್ಸೇರರು ಪೋರುಗೆಯ್ಯು ಸತಿತಾಂ ಪೋಗಟ್ಟುವಳ್ನಾಲಿಗರ್ ॥
ಕಲುಗುಂಡಂ ಮಿಗೆಪೇರುವರ್ತೊಲಗಿರಲ್ಲಕ್ಷ್ಮೀಕಟಾಕ್ಷೇಕ್ಷಣಂ
ನೆಲಮುಟ್ಟಲ್ಮಾನಿದಪ್ಪುದೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೧೯ ॥

ಕೊಡಬಲ್ಲಂಗೆದರಿದ್ರಮಂ ಪ್ರವುಢಗಂ ಮುಗ್ಧಾಂಗನಾಸಂಗಮಂ
ಮಡೆಯಂಗುತ್ತಮಜಾತಿನಾಯಕಿಯ ಪಾಪಾತ್ಮಂಗೆ ನಿತ್ಯತ್ವಮಂ ॥
ಕಡುಲುಬ್ಧಂಗತಿದ್ರವ್ಯ, ಧಾರ್ಮಿಕನಿಗಲ್ಪಾಯುಷ್ಯಮಂ ಮಾಡುವಂ
ಕಡುಪಾಪಿಷ್ಠನುಬ್ರಹ್ಮನೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೨೦ ॥

ಉಡುರಾಜಂಕಳೆಗುಂದಿ ಪೆರ್ಚದಿಹನೇ? ನ್ಯಗ್ರೋಧಬೀಜಂಕೆಲಂ
ಪಿಡಿದುಂಪೆರ್ಮರನಾಗದೇ? ಎಳಗರುಂ ಎತ್ತಾಗದೇ? ಲೋಕದೊಳ್ ॥
ಮಿಡಿಪಣ್ಣಾಗದೆ? ದೈವದೊಲ್ಮೆಯಿರೆತಾಂ ಕಾಲಾನುಕಾಲಕ್ಕೆಕೇಳ್
ಬಡವಂಬಲ್ಲಿದನಾಗನೇ? ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೨೧ ॥

ಕರಿಯುಲ್ಮೃರ್ಗಗಳಿರ್ದುಕೇಳರು ಕರಂಗಳ್ಚೆಲ್ವನಾಂತಿರ್ದೊಡಂ
ಮುರಿದಂತಿರ್ಪರ ಮೇಲೆಹೇರಿನಡೆವರ್ಮಾತಿರ್ದೊಡಂ ಮೂಕರ ॥
ಪೈರುಕಾಲಿರ್ದೊಡೆ ತಾಕುತಿರ್ಪರೆಡಗಾಲಂ ಪೂರ್ವಪುಣ್ಯಂಗಳಿಂ
ಸಿರಿವಂತರ್ನೆಲೆಕಾಣರೈ ಹರಹರಾ ಶ್ರೀಚೆನ್ನ ಸೋಮೇಶ್ವರಾ ॥ ೨೨ ॥

ಮೃಡತಾಂ ಭಿಕ್ಷವಬೇಡನೇ? ದ್ರುಪದಿತಾಂತೊತ್ತಾಗಳೇ? ಪಾಂಡವರ್
ಪಿಡಿದೋಡಂ ತಿರಿದುಣ್ಣರೇ? ಖಳನಕೈಯೊಳ್ಸಿಕ್ಕಳೇ ಸೀತೆ? ತಾಂ ॥
ಸುಡುಗಾಡಿಕ್ಕೆಗೆ ಬಂಟನಾಗನೆ ಹರಿಶ್ಚಂದ್ರಂ? ನರಪೂರ್ವದೊಳ್
ಪಡೆದಷ್ಟುಣ್ಣದೆ ಪೋಗರ್ಕೆ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೨೩ ॥

ಹಲುಬೇಡಂ ಮುರವೈರಿಯುಂ ಕುರುಬನಾಶೂದ್ರೀಕನಂ ರಾವಣಂ
ಕುಲವೆಣ್ಣಿಂದೆ ಶಿಖಂಡಿ ಭೀಷ್ಮನನು ದ್ರೋಣಾಚಾರ್ಯನಂ ಶಸ್ತ್ರವಂ ॥
ತಳೆದಾತಂ ಹತನಾದರೇ ಫಣೆಯೊಳಂ ಪೂರ್ವಾರ್ಜಿತಂ ಸಂದಿರಲ್
ಕೊಲನೇಕ್ಷುದ್ರಸಮರ್ಥನಂ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೨೪ ॥

ಅನುಮಾನಂಬಿಡ ರಾಮನುರ್ವಿಜೆ ಬೃಹದ್ಭಾನಲ್ಲಿ ಪೊಕ್ಕೈತರಲ್
ವನದೊಳ್ನೇರಿಲೆಪಣ್ಣನಗ್ನಿಜೆಮಹಾವಿಖ್ಯಾತಿಯಿಂ ಪತ್ತಿಸಲ್ ॥
ದನುಜಾರಾತಿಸ್ಯಮಂತರತ್ನವನೃಪಂಗೀಯಲ್ಕನಂ ಮೆಚ್ಚಿತೇ?
ಜನರಂಮೆಚ್ಚಿಸಲಾಗದೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೨೫ ॥

ಕೃತಶಾಪಾನ್ವಿತನಾಹಿಮಾಂಶು ಗುರುವಿಂ, ಗೋತ್ರಾರಿ ಭಂಗಾಂಗ, ದ್ರೌ
ಪದಿಯಿಂ ಕೀಚಕನಂಬಕಾರಿಮುರಿದಂ ಸುಗ್ರೀವನಿಂ ವಾಲಿತಾಂ ॥
ಹತನಾದಂ ದಶಕಂಠನಾ ಹರಿಶರಕ್ಕೀಡಾದನೇ ವೇಳ್ಪೆನಾ
ನತಿಕಾಮುರ್ಗತಿಹಾನಿಯೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೨೬ ॥

ಮದನಂ ದೇಹವನೀಗಿದಂ ನೃಪವರಂ ಚಂಡಾಲಗಾಳಾದ ಪೋ
ದುದುಬ್ರಹ್ಮಂಗೆ ಶಿರಸ್ಸ ಭಾರ್ಗವನು ಕಣ್ಗಾಣಂ ನಳಂ ವಾಜಿಪಂ ॥
ಸುಧೆಯುಂಕೊಟ್ಟು ಸುರೇಂದ್ರಸೋಲ್ತು ಸತಿಯಂ ಪೋಗಾಡಿದಂ ರಾಘವಂ
ವಿಧಿಯುಂಮೀರುವನಾವನೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೨೭ ॥

ಸುಳಿದಾ ಹೊಮ್ಮಿಗವೆಯ್ದೆ ಸೀತೆಯ ಖಳಂ ಕೊಂಡೊಯ್ದುತಾಂಬಾಳ್ದನೇ?
ಸುಳಿದಂಭೋಧಿಯ ಬಾಳ್ದನೇ ತಮಸನಂದಾಮ್ನಾಯಮಂ ಕದ್ದುತಾಂ ॥
ತಲೆಯುಂಕಟ್ಟರೆ ಕಂಚಿವಾಳಮರದೊಳ್ ಶೂದ್ರೀಕವೀರಾಖ್ಯನಂ
ಕಳವೇಂ ಕೊಲ್ಲದೆ ಕಾಯ್ವುದೇ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೨೮ ॥

ಅಡವೀಹೊಮ್ಮೃಗವೆಂದು ಪೋದ ರಘುಜಂಭೂಪುತ್ರಿ ಸನ್ಯಾಸಿಯೆಂ
ದಡಿಯಿಟ್ಟಳ್ದಶಕಂಠ ವಿಪ್ರನಿಜವೆಂದಾಯುಷ್ಯವಂ ನೀಗಿದಂ ॥
ಕೊಡಬೇಡೆಂದೆನೆಶುಕ್ರ ರಾಜ್ಯವನಿತಂ ಪೋಗಾಡಿದಂ ರಾಕ್ಷಸಂ
ಕಡುಮೋಸಂ ನೆರೆಹಾನಿಯೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೨೯ ॥

ಬರೆದಾರಿದ್ರ್ಯದಿ ದ್ರೋಣನಂ ದ್ರುಪದ ಪೂರ್ವಸ್ನೇಹದಿಂಕಂಡನೇ?
ಕುರುಭೂಪಾಲನು ಪಾಂಡುಪುತ್ರರ ಮಹಾಧರ್ಮಾತ್ಮರೆಂದಿತ್ತನೇ ?॥
ಹರಿಯುಂತಂಗಿಯ ಬಾಲನೆಂದು ದಯೆಯಿಂ ಕಂಸಾಸುರಂ ಕಂಡನೇ?
ದೊರೆಗಳ್ಗಿತ್ತಣ ನೆಂಟರ್ರೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೩೦ ॥

ತ್ರಿಜಗಾಧೀಶ್ವರನೊಳ್ಮನೋಜ ಕಲಹಂತಾಳ್ದಗ್ನಿಗೀಡಾದ ವಾ
ರಿಜನಾಭಂಗಿದಿರಾಗಿ ಬಾಣ ಭುಜಸಾಹಸ್ರಂಗಳಂ ನೀಗಿದಂ ॥
ದ್ವಿಜರಾಜಂ ಸರಿಯೆಂದು ಚಕ್ರಹತಿಯಿಂ ಸ್ವರ್ಭಾನುಗೀಡಾಗನೇ?
ಗಜದೊಳ್ಪಂಡಗೆಯುದ್ಧವೇ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೩೧ ॥

ಹರಿಯೊಳ್ನಾರದ ಮಂದಿವಾಳದಿ ಮಹಾಶಾಪಂಗಳಂತಾಳನೇ?
ಸುರವೆಣ್ಣಿಂದಲಿ ಪುಷ್ಪದಂತ ವನದೊಳ್ತಾಂ ಕ್ರೋಡರೂಪಾಗನೇ ॥
ವಿರಸಂಬರ್ಪುದು ಬೇಡೆನಲ್ದ್ರುಪದೆಯಂ ಭೀಮಾರಿತಾಂ ಮಾಣ್ದನೇ?
ಸರಸಂ ವೆಗ್ಗಳವಲ್ಲವೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೩೨ ॥

ಮಹಿಯೊಳ್ಭೂಸುರವೇಷದಿಂದ ಕಲಿಯಲ್ಕರ್ಣಂ ಧನುರ್ವೇದವಂ
ರಹಿಗೆಟ್ಟಂ ಬಹುನೊಂದರಿಲ್ವಲ ಮಹಾವಾತಾಪಿಗಳ್ಶಕ್ರನಿಂ ॥
ದಹಿರಾಜಾತ್ಮಜೆ ಮಂತ್ರತಂತ್ರವರಿದಾಳ್ದಂ ಪೋಗೆತಾಂ ತಂದಳೇಂ?
ಬಹುವಿದ್ವಾಂಸನು ಭ್ರಾಂತನೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೩೩ ॥

ಮಧುರೇಂದ್ರಂ ಕಡುದುಷ್ಟನಾಗಲು ಬಳಿಕ್ಕೀಡೇರಿತೇ? ದ್ವಾರಕಾ
ಸದನಂವಾರ್ಧಿಯಕೂಡದೇ ? ಕುರುಕುಲಾಂಭೋರಾಶಿಯೊಳ್ಸೈಂಧವಂ ॥
ಪುದುಗಲ್ಬಾಳ್ಟನೆ? ಭೂಮಿಯುಂಬಗಿದು ಪೊಕ್ಕಂದುಂದುಭೀರಾಕ್ಷಸಂ
ವಿಧಿಕಾಡಲ್ಸುಖ ಬಾಳ್ವರೇ? ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೩೪ ॥

ಹರತಾಂ ಕುಂಟಣಿಯಾಗೆ ನಂಬಿ ಜರೆದಂ ಚಂದ್ರಾವತೀ ದೇವಿಗಂ
ಕರಕಷ್ಟಂಗಳಮಾಡಿದಂ ದ್ವಿಜ, ವಿರಾಟಂ ಧರ್ಮಭೂಪಾಲನಾ ॥
ಶಿರಮಂ ಚಿಟ್ಟೆಯೊಳಿಟ್ಟ, ದ್ರೌಪದಿಗೆ ಬಂದಾಪತ್ತನೇನೆಂಬೆನಾಂ
ಪರರಂಸೇವಿಸೆಕಷ್ಟವೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೩೫ ॥

ರವಿಯಾಕಾಶಕೆ ಭೂಷಣಂ ರಜನಿಗಾಚಂದ್ರಂ ಮಹಾಭೂಷಣಂ
ಕುವರಂ ವಂಶಕೆ ಭೂಷಣಂ ಸರಸಿಗಂಭೋಜಾತಗಳ್ಭೂಷಣಂ ॥
ಹವಿಯಜ್ಞಾಳಿಗೆ ಭೂಷಣಂ ಸತಿಗೆ ಪಾತಿವ್ರತ್ಯವೇ ಭೂಷಣಂ
ಕವಿಯಾಸ್ಥಾನಕೆ ಭೂಷಣಂ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೩೬ ॥

ಧರೆಯೇ ಬೀಜವನುಂಗೆ ಜೇಲಿ ಹೊಲನೆಲ್ಲಂ ಮೇದೊಡಂ ಗಂಡ ಹೆಂ
ಡಿರನತ್ಯುಗ್ರದಿ ಶಿಕ್ಷಿಸಲ್ಪ್ರಜೆಗಳಂ ಭೂಪಾಲಕಂ ಬಾಧಿಸಲ್ ॥
ತರುವೇ ಪಣ್ಗಳನೆಲ್ಲಮಾತೆ ವಿಷಮಂ ಪೆತ್ತರ್ಭಕಂಗೂಡಿಸಲ್
ದೊರೆಕೊಲ್ಲಲ್ಪರಕಾಯ್ವನೇ? ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೩೭ ॥

ಕೊಳನಂ ತಾವರೆಯಂ ತಳಿರ್ತವನಮಂ ಪೂದೋಟಮಂ ವಾಜಿಯಂ
ಗಿಳಿಯಂ ಬಾಲಮರಾಳನಂ ಬಸವನಂ ಜೆಲ್ವಕ್ಕಿಯಂ ಛತ್ರಮಂ ॥
ತಿಳಿನೀರ್ಪೂರ್ಣತಟಾಕಮಂ ಕುಮುದಮಂ ದೇವರ್ಕಳಂ ತುಂಬಿಯಂ
ತಿಳಿಯಲ್ಸ್ವಪ್ನದಿ ಲೇಸೆಲೈ ಹರಹರಾ ಶ್ರೀಚೆನ್ನಸೋಮೇಶ್ವರಾ । ೩೮ ॥

ಖಣಮಂ ನೆತ್ತರ ನೆಳ್ಳ ಕೋಣ ಕುರಿಯಂ ಹಾರಾಯುಧಂ ಬೀಳ್ವುದಂ
ಕಣನಂ ಕೊಲ್ವುದನಂಗಹೀನ ಪಶುತಾಂಮೇದಿರ್ಪುದಂ ಯೇರುವಂ ॥
ದಣಮಂ ಕೆಂಪಿನಪೂವನೆಣ್ಣೆದಲೆ ನೂತ್ನಾಗಾರಮಂ ದೈತ್ಯರಂ
ಕನಸೊಳ್ಕಾಣಲುಬಾರದೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೩೯ ॥

ಶುಕ ಶಂಖಂ ಗಜ ವಾಜಿ ವೀಣೆ ಪಶು ತಾಳಂ ಭೇರಿ ಶೋಭಾನಪಾ
ಠಕ ನೃತ್ಯಂ ಗಣಿಕಾಂಗನಾ ತಳಿರುಗಳ್ಪೊವಣ್ಣು ವಿಪ್ರದ್ವಯಂ ॥
ಮುಕುರಂ ಮಾಂಸವು ಮದ್ಯತುಂಬಿದಕೊಡಂಪೆರ್ಗಿಚ್ಚ ನಾರ್ಕಂಡೊಡಂ
ಶಕುನಂ ಶೋಭನಕಾಸ್ಪದಂ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೪೦ ॥

ಕಪಿಯಂ ಗಾಣಿಗ ಪಾವು ಕಾಷ್ಠಜಿನ ತಕ್ರಂ ತೈಲಸಿಕ್ತಂ ವಿರೋ
ಧಿಪನೊರ್ವಂದ್ವಿಜ ಮುಕ್ತಕೇಶಿ ಜಟಿ ರಕ್ತಂ ರಿಕ್ತಕುಂಭಂ ವಿರಾ ॥
ಜಿಪಭಿನ್ನಾಂಗನ ಕುಷ್ಠನಂ ವಿಧವೆಯುಂ ಕೊಂದಾಟವುಂ ಧೂಮವುಂ
ಚಪಳರ್ಕಂಡರೆ ಪೋಗರೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೪೧ ॥

ಕೊಡಬೇಕುತ್ತಮನಾದವಂಗೆ ಮಗಳಂ ಸತ್ಪಾತ್ರಕಂದಾನಮಂ
ಇಡಬೇಕೀಶ್ವರನಲ್ಲಿ ಭಕ್ತಿರಸಮಂ ವಿಶ್ವಾಸಮಂ ಸ್ವಾಮಿಯೊಳ್ ॥
ಬಿಡಬೇಕೈ ಧನಲೋಭಬಂಧುಜನರೊಳ್ದುಷ್ಪಾತ್ರರೊಳ್ಗೋಷ್ಠಿಯಂ
ಇಡಬೇಕಿರ್ದುಣಬೇಕೆಲ್ಲೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೪೨ ॥

ತೆರನಂ ಕಾಣದ ಬಾಳ್ಕೆ, ಸ್ವಲ್ಪಮತಿ, ಕ್ಷುದ್ರಾರಂಭಮಲ್ಪಾಶ್ರಯಂ
ಕಿರುದೋಟಂ ಕಡೆವಳ್ಳಿ ಬೀದಿಮನೆ ಮುಂಗೈಯಾರ್ಭಟಂ ಸಾಲದಾ ॥
ದೊರೆಗಾರ್ಯಂ ಘೃತವಿಲ್ಲದೂಟದಸುಖಂ ಮುಗ್ಧಾಪ್ತಮಧ್ಯಸ್ಥಮುಂ
ಬರಿಗೈಯಂ ಸುರಿದಂತೆಲ್ಲೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೪೩ ॥

ಕೊಲುತಿರ್ಪಣ್ಣಗಳೋದು ವ್ಯಾಧಿಯನೆ ಕೊಲ್ವಂತೌಷಧಂ ಪಾಳುಬಿ
ದ್ದುಳಿದಾರಂಬದಧಾನ್ಯ, ಶತ್ರುಜಯ, ಪುತ್ರೋತ್ಸಾಹ, ಕೈಗಿಕ್ಕಿದಾ॥
ಬಳೆ ರಾಜಾಶ್ರಯ ಮುಕ್ತಲಾಭದಧನಂ ಜೀಹಾರವಿಂತಿಷ್ಟು ಮು
ನ್ನಲಿಕಷ್ಟಂ ಕಡೆಲೇಸೆಲ್ಲೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೪೪ ॥

ಕೊಲುವಂತೂಟವು ಕಷ್ಟಮಿರ್ಪಕೆಲಸಂ ಕೈಲಾಗದಾರಂಭಮುಂ
ಗೆಲವೇನಿಲ್ಲದಯುದ್ಧ ಪಾಳುನೆಲದೊಳ್ಬೇಸಾಯ ನೀಚಾಶ್ರಯಂ ॥
ಹಲುಬಲ್ಯೋಚನೆ ಜೂಜುಲಾಭ ಮನೆಮಾರಾಟಂ ರಸಾದ್ಯೌಷಧಂ
ಫಲದಭ್ರಾಂತಿಯುತೋರ್ಪುವೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೪೫ ॥

ಸುಡುಸೂಪಂಘೃತವಿಲ್ಲದೂಟವಪರಾನ್ನಾಪೇಕ್ಷೆಯಾ ಜಿಹ್ವೆಯಂ
ಸುಡುದಾರಿದ್ರ್ಯದ ಬಾಳ್ಕೆಯುಂ ಕಪಟಕೋಪಂಮೂಢಸಂಗಾತಿಯುಂ ॥
ಸುಡುತಾಂಬೂಲ ವಿಹೀನವಕ್ತ್ರವ ಪರಸ್ತ್ರೀನೋಡುವಾ ಕಣ್ಗಳಂ
ನುಡಿದುಂತಪ್ಪುವರಾಜನಂ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೪೬ ॥

ಬಡಿಗೋಲಂ ಸಮಮಾಡಲಕ್ಕು ಮರೆಯೊಳ್ಪಾವಂಗಳಂ ತೋಡಲ
ಕ್ಕಿಡಿದುಕ್ಕರ್ಗಂ ಮೃದುಮಾಡಲಕ್ಕು ಮಳಲೊಳ್ತೈಲಂಗಳಂ ತೋಡಲ ॥
ಕ್ಕಡವೀಸಿಂಗವತಿದ್ದಲಕ್ಕು ಕರೆಯಲ್ಬಕ್ಕುಗ್ರದಾವ್ಯಾಘ್ರಮುಂ
ಕಡುಮೂರ್ಖಂ ಮತಿಗೇಳನೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೪೭ ॥

ಪೊಡೆಯೊಳ್ತುಂಬಿರೆಪಂಕ ಮೇಲೆ ತೊಳೆಯಲ್ ತಾಂ ಶುದ್ಧವೇನಪ್ಪುದೇ?
ಕಡುಪಾಪಿಷ್ಟನು ಮಿಾಯಲೇನು ಶುಚಿಯೇ ಕಾಕಾಳಿತಾಂಮಿಾಯವೇ? ॥
ಗುಡಪಾನಂಗಳೊಳಿರ್ದ ಬೇವಿನಫಲಂಸ್ವಾದಪ್ಪುದೇ ಬಾಹ್ಯದೊಳ್
ಮಡಿಯೇಂ? ನಿರ್ಮಲಚಿತ್ತವೇಮಡಿ ಹರಾ ಶ್ರೀಚೆನ್ನಸೋಮೇಶ್ವರಾ ॥೪೮॥

ಸುರಚಾಪಾಯತಮಿಂದ್ರಜಾಲದ ಬಲಂ ಮೇಘಂಗಳಾಕಾರ ಬಾ
ಲರುಕಟ್ಟುತ್ತಿಹ ಕಟ್ಟೆ ಸ್ವಪ್ನದಧನಂನೀರ್ಗುಳ್ಳೆಗಾಳೀಸೊಡರ್ ॥
ಪರಿವೃತ್ತಿರ್ಪಮರೀಚಿಕಾಜಲ ಜಲಾವರ್ತಾಕ್ಷರಂ ತುಂಬಿದಾ
ಸಿರಿಪುಲ್ಲಗ್ರದ ತುಂತುರ್ಪೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೪೯ ॥

ಪಣವಿರ್ದೇನುಣಸಾಗದಾಗ? ಸತಿಯಿರ್ದೇಂ ಯವ್ವನಂ ಪೋದಮೇ?
ಲೊಣಗಲ್ಪೈರಿಗೆ ಬಾರದಿರ್ದಮಳೆತಾಂ ಬಂದೇನದಾಪತ್ತಿನೊಳ್ ॥
ಮಣಿದುಂ ನೋಡದ ಬಂಧುವೇತ ಕೆಣಿಸಲ್ಕಾಲೋಚಿತಕ್ಕೆಯ್ದದಾ
ತೃಣವೇ ಪರ್ವತವಲ್ಲವೇ! ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೫೦ ॥

ಫಲವತ್ತಿಲ್ಲದ ರಾಜ್ಯದಲ್ಲಿ ಪ್ರಭುದಂಡಕ್ಕಾಸೆಗೆಯ್ವಲ್ಲಿ ಬ
ಲ್ಪುಲಿಕೂರ್ಸಿಂಗಗಳಿಕ್ಕೆಯಲ್ಲಿ ಪರಸ್ತ್ರೀಯಿರ್ದಲ್ಲಿ ಕುಗ್ರಾಮದೊಳ್ ॥
ಗೆಲವಂತೋರದೆ ದುಃಖಮಪ್ಪೆಡೆಗಳೊಳ್ ಭೂತಂಗಳಾವಾಸದೊಳ್
ನಲಿಬಲ್ಲರ್ನಿಲಸಲ್ಲದೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೫೧ ॥

ಸುತೆಯೆಂದಳ್ಕಿದುದಿಲ್ಲ ಬೊಮ್ಮ, ಋಷಿತಾಂ ಚಂಡಾಲವೆಣ್ಣೆಂದರುಂ
ಧತಿಯಂಬಿಟ್ಟನೆ? ವಿಷ್ಣುಗೋಪವಧುಗಳ್ ಬೇಡೆಂದನೇ? ಚಂದ್ರಮುಂ ॥
ಮತವಲ್ಲೆಂದನೆ? ಭೀಮಸಾವಸುಜೆಯೆಂದುಂಮಾಣ್ದನೇನೋಡೆ ಮ
ನ್ಮಥನಂ ಗೆಲ್ವನಾವನೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೫೨ ॥

ಕವಿಯೇಸರ್ವರೊಳುತ್ತಮಂ ಕನಕವೇ ಲೋಹಂಗಳೊಳ್ ಶ್ರೇಷ್ಠ, ಜಾ
ಹ್ನವಿಯೇತೀರ್ಥದೊಳುನ್ನತಂ ರತುನದೊಳ್ ಶ್ರೀರತ್ನವೇ ವೆಗ್ಗಳಂ ॥
ರವಿಯೇ ಸರ್ವಗ್ರಹಂಗಳೊಳ್ಸ್ವರಸದೊಳ್ ಶೃಂಗಾರವೇ ಬಲ್ಮೆಕೇಳ್
ಶಿವನೇ ದೈವ ಜಗಂಗಳೊಳ್ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೫೩ ॥

ಕಪಟಂ ಚಂದ್ರಮಗೆಯ್ದುದೇ? ಹರಿಯಸಾಮಂ ಜಾರನೆಂದೆನ್ನರೇ
ತಪನಂ ಕುಂತಿಯ ಸೋಂಕನೇ, ಬುಧಮಹಾಪುಣ್ಯಾತ್ಮನೇ, ವಾಯುಪಾ ॥
ದಪಗೂಳವರ್ಮನಿವೆಣ್ಗಳಿಂ ಬಹಳ ದೂರಂತಾಳರೇ ಸೂಕ್ಷ್ಮದಿಂ
ದಪನಿಂದ್ಯಂಬರೆಪೋಪುದೇ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೫೪ ॥

ರಣದೊಳ್ ಶಕ್ರನತೇರನೇರಿದ ಮಹಾಶೈಲಾಳಿ ಬೆಂಬತ್ತೆ ಪೂ
ರ್ಗಣದಿಂ ಚಿಮ್ಮಿದ ಸಪ್ತ ಸಾಗರಗಳಂ ದಿಕ್ಕೆಂಟು ಮೂಲೋಕಮಂ ॥
ಕ್ಷಣದೊಳ್ವೆಚ್ಚವಮಾಡಿ ಬೇಡೆ ಬಲಿಸಾಲಕ್ಕಂಜಿ ಬಿಟ್ಟೋಡಿದಂ
ಋಣಭಾರಕ್ಕೆಣೆಯಾವುದೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೫೫ ॥

ತೊನೆಯಲ್ತಾಳುಮೆಯುಳ್ಳವಂ ಬೆರೆತೊಡಂ ನಿರ್ಗರ್ವಿ ಕೊಟ್ಟಾಡಲಾ
ತನುಸತ್ಯವ್ರತಿ ಸೂರುಳಿಟ್ಟು ಪುಸಿಯಲ್ಭಾಷಾಪ್ರತೀಪಾಲಕಂ ॥
ಕನಲಲ್ಸ್ಥೈರಣೆವಂತನಕ್ಕುಲಜನಾಗಲ್ ನಿರ್ಗುಣಂತೋರಲಾ
ಧನಿಕಂ ಸತ್ಕುಲಜಾತನೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೫೬ ॥

ಪೋರಬೇಡಂಗಡಿಸಾಲ ಪೂರಪ್ರೋಣೆಯುಂ ನಿಂದ್ಯಂಗಳಂ ಪಾಪವಂ
ಮರೆಬೇಡಾತ್ಮಜ ಮಿತ್ರನೈಜಸತಿಯೊಳ್ ನ್ಯಾಯಂಗಳೊಳ್ಸತ್ಯಮಂ ॥
ಸೆರೆಬೇಡಂಗನೆ ಪಕ್ಷಿವೃದ್ಧತರಳರ್ ಗೋವಿಪ್ರದಾರಿದ್ರರಂ
ತೆರಬೇಡೊತ್ತೆಗೆ ಬಡ್ಡಿಯಂ ಹರಹರಾ ಶ್ರೀಚೆನ್ನ ಸೋಮೇಶ್ವರಾ ॥ ೫೭ ॥

ಗಿಡವೃಕ್ಷಂಗಳಿಗಾರು ನೀರನೆರೆವರ್ನಿತ್ಯಂ ಮಹಾಬೆಟ್ಟಗಳ್
ಕಡುಕಾರ್ಪಣ್ಯದಿ ಕೇಳ್ವವೇ ನೆಲಜಲಾಗ್ನೀವಾಯುವಾಕಾಶಮಂ ॥
ಪಡೆದಂಡಂಗಳನಾವ ಸಾಕುವ ಜಗತ್ರೈರೇಪಕಂ ನೀನಿರಲ್
ಕೊಡುವರ್ಕೊಂಬರು ಮರ್ತ್ಯರೇ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೫೮ ॥

ಮಡೆಯಂಗುತ್ತಮವಿದ್ಯೆಬೆಟ್ಟ ಕುರುಡಂಗಂ ಮಾರ್ಗವೇ ಬೆಟ್ಟಕೇಳ್
ಬಡವಂಗೆಲ್ಲರ ದ್ವೇಷಬೆಟ್ಟ ಜಡದೇಹಿಂಗಂಜರೇ? ಬೆಟ್ಟ ಮು ॥
ಪ್ಪಡಿಸಿದ್ದಾತಗೆ ಪೆಣ್ಣು ಬೆಟ್ಟ ಋಣವೇ ಪೆರ್ಬೆಟ್ಟ ಮೂಲೋಕದೋಳ್
ಕಡುಲೋಭಂಗಿಡೆ ಬೆಟ್ಟವೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೫೯ ॥

ದ್ವಿಜಾಧೀಶ್ವರಗಕ್ಷಿ ದೇಹವನಿತುಂ ನೋಡಲ್ಕೆ ಶುಭ್ರಾಂಶುವಾ
ಶಿವನೇತ್ರಂ ಹರಿಗಬ್ಜಮುಂ ನಯನವಾ ವೈಶ್ವಾನರಂ ರಾತ್ರಿಗಂ ॥
ರವಿಲೋಕತ್ರಯಕೆಲ್ಲಲೋಚನ ಬುಧವ್ರಾತಕ್ಕೆ ಶಾಸ್ತ್ರಾಂಬಕಂ
ಕವಿಯೋ ರಾಜರ ಕಣ್ಣೆಲೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೬೦ ॥

ಹಿತಮಂ ತೋರುವನಾತ್ಮಬಂಧು, ಪೊರೆವಾತಂ ತಂದೆ ಸಾಧ್ವೀತ್ವದಾ
ಸತಿಯೇ ಸರ್ವಕೆಸಾಧನಂ ಕಲಿಸಲೋದಂ ವರ್ಣಮಾತ್ರಂಗುರು ॥
ಮತಮಾರ್ಗಂ ಬಿಡದಾತ ಸುವ್ರತಿ ಮಹಾ ಸದ್ವಿದ್ಯೆಯೇ ಪುಣ್ಯದಂ
ಸುತನೇ ಸದ್ಗತಿದಾತನೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೬೧ ॥

ಪ್ರಜೆಯಂ ಪಾಲಿಸಬಲ್ಲೊಡಾತನರಸಂ ಕೈಯಾಸೆಯಂ ಮಾಡದಂ
ನಿಜಮಂತ್ರೀಶ್ವರ, ತಂದೆತಾಯ ಸಲಹಲ್ಬಲ್ಲಾತನೇ ಧಾರ್ಮಿಕಂ ॥
ಭಜಕಂ ದೈವದೆ ಭಕ್ತಿಯುಳ್ಳೊಡೆ ಭಟಂ ನಿರ್ಭೀತತಾನಾದವಂ
ದ್ವಿಜನಾಚಾರತೆಯುಳ್ಳವಂ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೬೨ ॥

ಪುರದುರ್ಗಂಗಳ ಬಲ್ಮೆಮಾಡದೆ ಪ್ರಜಾಕ್ಷೋಭಂಗಳಂ ನೋಡದೆ
ಲ್ಲರು ವಿಶ್ವಾಸಿಗಳೆಂದು ನಂಬಿಬಹುದಂ ಪೋದಪ್ಪುದಂ ಕಾಣದಾ ॥
ತುರದಿಂದುಂಡತಿ ನಿದ್ರೆಗೆಯ್ದು ಮದನಂಗಾಳಾಗಿಹಂ ಲೋಕದೊಳ್
ದೊರೆಯೇ ಸೊಕ್ಕಿದ ಕೋಣನೈ, ಹರಹರಾ ಶ್ರೀಚೆನ್ನಸೋಮೇಶ್ವರಾ ॥೬೩॥

ಬಲವಂತರ್ಬಲವಾಗಲಿಕ್ಕೆ ಲದವರ್ಮಿತ್ರತ್ವಮಂ ಮಾಡಲುಂ
ನೆಲನೆಲ್ಲಂ ಬೆಸಲಾಗೆ ಧಾನ್ಯತತಿಯಂ ನಿಷ್ಕಾರಣಂ ದಂಡಮಂ ॥
ಕೊಳದೆಲ್ಲರ್ಸುಖರಾಗೆ ಸಂಬುಗೆಗಪ್ರೋಹಂ ಬಾರದಾಳ್ವಲ್ನಿಜಂ
ಬಲುಭಾಗ್ಯಂ ದೊರೆಗಪ್ಪುದೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೬೪ ॥

ಖಳವೇದಂಗಳನೊಯ್ದವಂ ಧರೆಯನೆಲ್ಲಂ ಚಾಪೆವೋಲ್ಸುತ್ತಿದಂ
ಬಲದಿಂ ಪೋರಿದನೆಲ್ಲರಂ ಗೆಲಿದುಬಂದಾಪೆಣ್ಣ ಕೊಂಡೋಡಿದಂ ॥
ತಲೆಯೊಳ್ಕಾದಿದ ನೂರುಗಳ್ಪಡೆದನೆಲ್ಲರ್ಗೆಲ್ಲು ತಾವಾಳ್ದರೇ
ಬಲು ಗರ್ವಂ ಕೊಲದಿರ್ಪುದೇ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೬೫ ॥

ಧುರದೊಳ್ತನ್ನಯ ವೀರರೊಳ್ಪ್ರಜೆಗಳೊಳ್ನ್ಯಾಯಾದ್ಯರೊಳ್ ಭೃತ್ಯರೊಳ್
ಪುರದೊಳ್ಬಂಧುಜನಂಗಳೊಳ್ಸ್ವಜನರೊಳ್ವೈದ್ಯಾಳಿಯೊಳ್ಮಂತ್ರಿಯೊಳ್ ॥
ಅರಿಯೊಳ್ಜ್ಯೋತಿಷಮಂತ್ರವಾದಿ ಕುಹನಾವಿದ್ವಾಂಸರೊಳ್ ಸ್ತ್ರೀಯರೊಳ್
ಅರಸಿಂಗೆಚ್ಚರುಬೇಕೆಲೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೬೬ ॥

ಧರಣೀಶಂಧುರಧೀರನಾಗೆ ಧನಿಕಂ ತಾಂತ್ಯಾಗಿಯಾಗಲ್ಕವೀ
ಶ್ವರಸಂಗೀತದಿ ಜಾಣನಾಗೆ ಸುಕಲಾಪ್ರೌಢಂಗೆ ತಾಂಚೆಲ್ವೆಯುಂ ॥
ಬಡವಂ ಧಾರ್ಮಿಕನಾಗೆ ಮಂತ್ರಿಚತುರೋಪಾಯಂಗಳಂ ಬಲ್ಲೊಡಂ
ದೊರೆದೋಲ್ಚಿನ್ನಕೆಸೌರಭಂ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೬೭ ॥

ವರವಿದ್ವಾಂಸಕವೀಂದ್ರಗಾಯಕ ಪುರಾಣೀಕರ್ಮಹಾಪಾಠಕರ್
ಪರಿಹಾಸಸ್ವರ ಶಾಸ್ತ್ರಮಂತ್ರಶಕುನಜ್ಞರ್ಕೋವಿದರ್ವೇಶ್ಯೆಯರ್ ॥
ಸ್ಮರಶಾಸ್ತ್ರಾದಿಸಮಸ್ತವಿದ್ಯೆಯರಿತರ್ಕಾಲಾಳು ಮೇಲಾಳಿರಲ್
ದೊರೆಯೊಡ್ಡೋಲಗಚೆಲ್ವಲೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೬೮ ॥

ಕೆಡುಮುಪ್ಪಾಗಿರೆ ಕುಂಟನಾಗೆ ಕುರುಡಂತಾನಾಗಲೆತ್ತೇರಿದಾ
ಮುಡುಬಂ ಮೂಕನುಮೊಂಡನೆಗ್ಗಕಿವುಡಂ ಚಂಡಾಲ ತಾನಾದೊಡಂ ॥
ಕೆಡುವಾಕುಷ್ಠಶರೀರಿಯಾಗಲೊಲಿವರ್ಪೊನ್ನಿತ್ತೊಡಾ ಪೆಣ್ಣುಗಳ್
ಕೊಡುಗೈಸ್ತ್ರೀಜನವಶ್ಯವೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೬೯ ॥

ಮದನಂಗೀಶ್ವರಶತ್ರು ಬಂಧುನಿಜಯುಕ್ತಂಜಾರೆಯೇ ಶತ್ರು ಪೇ
ಳದವಿದ್ಯಂಗಳ ತಂದೆ ಶತ್ರು ಕುಮರರ್ಗಂಶತ್ರು ಮಾನ್ಯರ್ಗೆ ಈ ॥
ಸದನಕ್ಕಂಕಡುಸಾಲ ರೂಪವತಿತಾನೇಶತ್ರುಗಂಡಂಗೆ ಮೇಣ್
ಮುದಿಗಾಯಮ್ಮನೆಶತ್ರುವೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೭೦ ॥

ಕ್ಷಿತಿಯಂ ಶೋಧಿಸಲಕ್ಕು ತಾರೆಗಳ ಲೆಕ್ಕಂ ಮಾಡಲಕ್ಕಾಗಸೋ
ನ್ನತಿಯಂ ಕಾಣಲುಬಕ್ಕು ಸಾಗರಗಳೇಳಂ ದಾಂಟಲಕ್ಕುಂನಭೋ ॥
ಗತಿಯಂ ಸಾಧಿಸಲಕ್ಕು ಬೆಟ್ಟಗಳಚೂರ್ಣಂ ಮಾಡಲಕ್ಕೀಕ್ಷಿಸಲ್
ಸತಿಯಾಚಿತ್ತವಭೇದ್ಯವೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೭೧ ॥

ಗತಿಯಿಂ ಗಾಡಿಯ ಸೊಂಪಿನಿಂ ಗಮಕದಿಂ ಗಾಂಭೀರ್ಯದಿಂ ಸೋಟದಾ
ಯತದಿಂ ಸನ್ಮೃದುವಾಕ್ಯದಿಂ ಸರಸದಿಂ ಸಂಗೀತಸಾಹಿತ್ಯದಿಂ ॥
ಪ್ರತಿಪಾಡಿಲ್ಲದರೂಪಿನಿಂ ಪ್ರವುಢಿಯಿಂದೈತಪ್ಪಪದ್ಮಾಕ್ಷಿಗಾ
ಯತಿಯುಂತಾನುರೆಸೋಲುವಂ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೭೨ ॥

ವರಬಿಂಬಾಧರೆಯಾಗಿ ಚಂದ್ರಮುಖಿತಾನಂಭೋಜ ಶೋಭಾಕ್ಷಿಯಾ
ಗೆರವಂಮಾಡದಳಾಗಿ ಚಿತ್ತವರಿದೆಲ್ಲಾಸೌಖ್ಯಮುಂ ತೋರ್ಪಸುಂ ॥
ದರಿತಾನುತ್ತಮಜಾತಿಯಾಗಿ ಸೊಗಸಿಂದಂ ಕೂಡುವಳ್ಳೇರಲಾ
ಹರುಷಕ್ಕಿಂದುರುಸೌಖ್ಯವೇ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೭೩ ॥

ಚತುರಾಸ್ಯಂಮುಖವಿತ್ತ ಶಂಕರಜಟಾಜೂಟಾಗ್ರಮಂ ಮೆಟ್ಟಿದಳ್
ಗತಿಯಿಂಕೃಷ್ಣನವಕ್ಷದೊಳ್ನೆಲಸಿದಳ್ ದೇವೇಂದ್ರನಾ ಮುದ್ರೆಯಂ ॥
ಹಿತದಿಂತಾಳಿದ ಮಿಕ್ಕಲೋಕಗಳ ನಾನೇವಣ್ಣಿಪೆಂ ನೋಡಲಾ
ಸತಿಯುರ್ಗಾವನುಸಿಕ್ಕನೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೭೪ ॥

ಜಡನಂ ಮೂರ್ಖನ ಕೋಪಿಯಂಪಿಸುಣನಂ ದುರ್ಮಾರ್ಗದಿಂತಪ್ಪಿನೊಳ್
ನಡೆಯುತ್ತಿರ್ಪನನೆಂಟರುಣ್ಣಲುಡಲುಂಟಾಗಿರ್ದೊಡಂ ತಾಳದಾ ॥
ಕಡುಪಾಪಿಷ್ಟನ ಜಾಣ್ಮೆಹೀನನಕನಿಷ್ಠಂ ಮಾಳ್ಪನಂನೋಡೆತಾಂ
ನುಡಿಯನೊರ್ಡರುನಾರಿಯರ್ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೭೫ ॥

ಪಶುಗಳ್ಕ್ರೂರಮೃಗಂಗಳಂಗನೆಯರುಂ ಸರ್ಪಂಗಳುಂ ಕಣ್ಗೆ ಕಾ
ಣಿಸದತ್ಯುಗ್ರಗ್ರಹಂಗಳುಂ ಪಟುಭಟರ್ವಿದ್ವಜ್ಜನಂ ಮಂತ್ರಿಗಳ್ ॥
ಋಷಿಗಳ್ಮಿತ್ರರು ಬಂಧುಗಳ್ ಪ್ರಜೆಗಳುಂ ತಾವೆಲ್ಲರುಂ ತಮ್ಮಯಾ
ಶಿಶುವಂಲಾಲಿಸುತಿರ್ಪರೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೭೬ ॥

ಕುರುಡಂ ಕನ್ನಡಿಯುಂ ಕವೀಂದ್ರರ ಮಹಾದುರ್ಮಾರ್ಗಿಗಳ್ತ್ಯಾಗಿಯುಂ
ಬರಡಂ ಬಾಲರಮುದ್ದು ಬಂಜೆ ಕಡುಚೋರಂ ಚಂದ್ರನಂ ಕಾವ್ಯದ॥
ಚ್ಚರಿಯುಂಗಾಂಪರು ಪಾಪಿಗಳ್ಸಜನರಂ ಮಾಣಿಕ್ಯಮುಂ ಮರ್ಕಟಂ
ಜರೆಯಲ್ಸಿಂಗಕೆಗ್ರಾಮಸಿಂಹವೆಣೆಯೇ ಶ್ರೀಚೆನ್ನಸೋಮೇಶ್ವರಾ ॥ ೭೭ ॥

ತೆರನಂ ಕಾಣದ ತಾಣ ತಾಟಕತನಂಗಳ್ಮಾಳ್ಪರಿರ್ಪಲ್ಲಿ ನಿ
ಷ್ಠುರಭಾಷಾನೃಪನಲ್ಲಿ ನಿಂದೆಬರಿದೇಬರ್ಪಲ್ಲಿ ಯನ್ನೋದಕಂ॥
ಕಿರಿದಾದಲ್ಲಿ ರಿಪುವ್ರಜಂಗಳೆಡೆಯೊಳ್ದುಸ್ಸಂಗದುರ್ಗೋಷ್ಠಿಯೊಳ್
ಇರಸಲ್ಲಿರ್ದೊಡೆ ಹಾನಿಯೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೭೮ ॥

ಧನಕಂಧಾನ್ಯಕೆ ಭೂಷಣಾಂಬರಸುಪುಷ್ಪಂಗಳ್ಗೆ ಮೃಷ್ಟಾನ್ನಭೋ
ಜನಕಂ ಪಣ್ಫಲ ಚಂದನಾದಿಯನುಲೇಪಂಗಳ್ಗೆ ಕಣ್ಣಿಕ್ಕದಾ ॥
ವನಿತಾಸಂಗಕೆ ರಾಜಭೋಗಕೆ ಸುವಿದ್ಯಂಗಳ್ಗೆಯಾರಾದೊಡಂ
ಮನದೊಳ್ಕಾಮಿಸಿ ನೋಡರೇ? ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೭೯ ॥

ಸವಿವಣ್ಣಲ್ಲಿನಿಮಾವುಸರ್ವರಸದೊಳ್ ಶೃಂಗಾರ ಸಂಭಾರದೊಳ್
ಲವಣಂ ಕೇಳ್ವೊಡೆ ಬಾಲಭಾಷೆ ಸುಖದೊಳ್ ಸ್ತ್ರೀಗೋಷ್ಠಿ ದೈವಂಗಳೊಳ್॥
ಶಿವ ಬಿಲ್ಲಾಳಿನೊಳಂಗಜಂ ಜನಿಸುವಾ ಜನ್ಮಂಗಳೊಳ್ಮಾನವಂ
ಕವಿತಾವಿದ್ಯೆಸುವಿದ್ಯೆಯೊಳ್ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೮೦ ॥

ಚಪಳಚೋರರರು ಜೂಜುಗಾರರು ವಿಟರ್ತಾರ್ಪ್ರೇಷ್ಠರೆಂದುಬ್ಬುವರ್
ಕಪಟೋಪಾಯದಕೂಟಸಾಕ್ಷಿಯ ಜನರ್ಕೊಂಡಾಡುವರ್ಕೊಂಡೆಯರ್ ॥
ಅಪನಿಂದಾನ್ವಿತರಾತ್ಮಬೋಧಕುಹಕರ್ಸಾಮಿಪ್ಯಮಾತ್ರೇಷ್ಟರುಂ
ನೃಪರೊಳ್ಮಾನ್ಯರೆನಿಪ್ಪರೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೮೧ ॥

ಧುರಧೀರರ್ಗರೆಗಂಜಿ ಹೇಡಿಗಳಿಗಂ ಮೃಷ್ಟಾನ್ನ ಸತ್ಕೀರ್ತಿಯುಂ
ಧರೆಯೊಳ್ಬಿತ್ತುವಗಡ್ಡದುಡ್ಡು ಜರೆವರ್ಗಿಷ್ಟಾರ್ಥದಾನಂಗಳುಂ ॥
ಅರೆಮೆಯ್ಪೆಣ್ಗರೆಭೋಗ ವೇಶಿಯರಪಾಲಾಗಿರ್ಪರೆಂವೆಂದುಮಾ
ದೊರೆಗಳ್ಗಿತ್ತಣ ನೀತಿಯೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೮೨ ॥

ಪರರಾಯರ್ಕಳಸೇನೆಯಂಗೆಲಿದು ಮತ್ತೇಭಂಗಳಂ ಸೀೞ್ದು ತ
ನ್ನರಿಯೆಂದೆಂಬರನೊಕ್ಕಲಿಕ್ಕುವ ಭಟರ್ಗಂಗಂಜಿ ಕೀೞ್ನಾಯಿಗಂ ॥
ನಿರುತಂಭೋಜ್ಯವಿಶೇಷವಿತ್ತು ಪೊರೆವರ್ವಾಸಂಗಳೆಲ್ಲಿರ್ಪುವೈ
ಪರಪೋಷ್ಯರ್ಕಡುಕಷ್ಟಕ್ಕೆ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೮೩ ॥

ಮೊೞೆಯಲ್ಲಿಕ್ಕಿದಜೇನು ಶೂದ್ರಕಲಿತಿರ್ಪಾವಿದ್ಯೆ ಯುಚ್ಛಿಷ್ಟವಾ
ಗಲುವೃಷ್ಟಾನ್ನವು ಸರ್ಪಕಾಯ್ವಧನಮುಂ ಲುಬ್ಧರ್ಕಳಾಭಾಗ್ಯಮುಂ ॥
ಬಲುಪಾಡಿಂದಲಿಕೂಡಲಿಕ್ಕೆ ಪರರಿಂಗೀಡಾಗಿತಾಂಪೋಪವೋಲ್
ಗಳಿಸಿರ್ದುಣ್ಣದೆಪೋದಪರ್ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೮೪ ॥

ಸತಿಯಾಮಾತಿಗೆ ಸೋಲ್ವಜೂಜಿಗೆ ಖಳರ್ಕೊಂಡಾಡುತಿರ್ಪಲ್ಲಿಗಂ
ಅತಿಪಾಪಂಬಹಕಾರ್ಯಕಲ್ಪವಿಷಯಕ್ಕಂ ದಾಸಿಯಾಗೋಷ್ಠಿಗಂ ॥
ಪ್ರತಿತಾನಿಲ್ಲದ ಮದ್ದುಮಂತ್ರಮಣಿಗಂ ಸಂದೇಹಮಪ್ಪಲ್ಲಿಗಂ
ಮತಿವಂತರ್ಮರುಳಪ್ಪರೇ? ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೮೫ ॥

ಅಗಲರ್ಸೊಳೆಯ ನಾಳರಾಕುಲಜೆಯಂ ಸಂಕೀರ್ಣವಂ ಮಾಳ್ಪರಾ
ವಗದುರ್ಗೋಷ್ಠಿಯೊಳಿರ್ಪ ರೇಳು ವ್ಯಸನಕ್ರೀಡಪ್ಪರಾಚಾರಮಂ ॥
ಬಗೆಯುಸ್ವಾರ್ಥವಿಚಾರಕಲ್ಪಮತಿಗೀವರ್ಧರ್ಮಮಂ ಪಾಲಿಸರ್
ಯುಗಧರ್ಮಂನೃಪರೆಯ್ದುವರ್ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೮೬ ॥

ಸ್ವಕುಲೋದ್ಧಾರಕನಾಗಿ ಭಾಗ್ಯಯುತನಾಗಾಯುಷ್ಯಮುಳ್ಳಾತನಾ
ಗಕಳಂಕಂಘನಮಾಗಿಬಾಳ್ವಸತಿಯಿರ್ದಾನಂದಮಂ ಮಾಳ್ಪಬಾ ॥
ಲಕನಾಗೀಶ್ವರ ಭಕ್ತನಾಗಿತನುದಾರ್ಢ್ಯಂಕೂಡಿದಾ ಮರ್ತ್ಯನಾ
ಸುಖಪೂರ್ವಾರ್ಜಿತಪುಣ್ಯವೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೮೭ ॥

ಬಿಡಿಯಲ್ಕಿಂಗವಮತ್ಸರಂ ಕಳೆವುದೇ? ದುರ್ಗಂಧಮುಂ ಗಾಳಿಯೊಳ್
ತಡೆಯಲ್ಕಾರದೆ? ನಾಯಬಾಲಸೆಡೆಯಂ ಕಟ್ಟಲ್ಕೆಚೆನ್ನಪ್ಪುದೇ? ॥
ಸುಡುಚೇಳಂತೆಗೆಯಲ್ಕೆ ಸುಮ್ಮನಿಹುದೇ? ಏನೆಂದೊಡೆಷ್ಟಾದೊಡಂ
ಬಿಡತನ್ನಂದವನೀಚತಾಂ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೮೮ ॥

ಮಳೆಯೇಸರ್ವಜನಾಸ್ಪದಂ ಶಿವನೆದೇವರ್ಗೆಲ್ಲತಾನಾಸ್ಪದಂ
ಬೆಳೆಯೇಸರ್ವಕೆ ಜೀವನಂ ಬಡವನೇಸರ್ವರ್ಗೆ ಸಾಧಾರಣಂ ॥
ಬಳೆಯೇಸರ್ವವಿಭೂಷಣಕ್ಕೆಮೊದಲಾ ಪುತ್ರೋತ್ಸವಂ ಹರ್ಷವಾ
ಕಳೆಯೇಸರ್ವರೊಳುತ್ತಮಂ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೮೯ ॥

ಸುಚರಿತ್ರರ್ಸಲೆ ಕೀರ್ತಿಗೋಸುಗ ಮಹಾ ಕಷ್ಟಂಗಳಂ ತಾಳಿಸೂ
ರಿಚಯಕ್ಕೆಂದು ಶರೀರಮಾನಗಳನಿತ್ತಾಚಂದ್ರತಾರಾರ್ಕವಾ ॥
ಗಚಲಖ್ಯಾತಿಯುತಾಳ್ದರೀಗಲಿಳೆಯೊಳ್ ತಾವೀಯರ್ಕ್ಕೈ ಪೋಗಲಾ
ವಚನಕ್ಕೇನುದರಿದ್ರವೈ? ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೯೦ ॥

ಘನದೈನಂಬಡುವರ್ಗುರುತ್ವಕೆಡುವಗ್ರಾಸಕ್ಕೆಕುಗ್ರಾಮವಾ
ಗನುಗೆಟ್ಟರ್ಪರು ವೀಕ್ಷಣಕ್ಕೆ ಮುನಿವರ್ಮಾತಾಡರ್ಕೈ ಬೀಗಿ ಬಿ ॥
ರ್ರನೆ ಬಾಗರ್ತಲೆಗೇರಿ ಸೊಕ್ಕಿತೊನೆವರ್ತಾವೆಲ್ಲರಂ ನಿಂದಿಪರ್
ಮನುಜರ್ಗೆತ್ತಣ ನೀತಿಯೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೯೧ ॥

ಅತಿಗಂಭೀರನು ದಾರಧೀರನು ಮಹಾಸಂಪನ್ನಸರ್ವಾತ್ಮನೂ
ರ್ಜಿತನಾನಾಲಿಪಿಭಾಷೆಯೊಳ್ಪರಿಚಿತಂ ಲಂಚಕ್ಕೆ ಕೆಟ್ಟಾಡದ ॥
ಪ್ರತಿಸದ್ಧರ್ಮನು ಯುಕ್ತಿಶಾಲಿ ಚತುರೋಪಾಯಂಗಳಂ ಬಲ್ಲವಂ
ಪತಿಕಾರ್ಯರ್ಗಂ ಹಿತಮಂತ್ರಿಯೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೯೨ ॥

ಬಹುಳೋಪಾಯದೊಳಾರ್ಜಿಸುತ್ತಧನಮಂ ತನ್ನಾಳ್ದನಂ ದೈವವೆಂ
ದಹಿತರ್ತನ್ನವರನ್ಯರೆನ್ನದಣುಮಾತ್ರಂ ಪೋಗದೊಲ್ ತ್ರಾಸಿನಂ ॥
ತಿಪ ನೊಕ್ಕಲ್ಗತಿಪ್ರೀತಿಪಾತ್ರನಿಳೆಮೆಚ್ಚಲ್ ಶಾನುಭಾಗಾಖ್ಯನೀ
ಮಹಿವಾರಾಣಸಿಯಪ್ಪನೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೯೩ ॥

ಅಣುಮಾತ್ರಂ ಕೊಸರಿಲ್ಲದಾಣ್ಮನೆಡೆಯೊಳ್ ಲಂಚಕ್ಕೊಡಂಬಟ್ಟುಪೊ
ಪ್ಪಣಮಂಕೊಂಡತಿದ್ರವ್ಯಮಂಕೆಡಿಸಿ ಚಾಡೀಪೇಳಿದ್ರೋಹಂಗಳ ॥
ನ್ನೆಣಿಸುತ್ತೆಲ್ಲರಬಾಳ್ಗೆ ನೀರನೆರೆ ದಾರುಂಕಾಣದೇ ಭಕ್ಷಿಪಾ
ಗಣಕಂ ಹೆಗ್ಗಣಕಂ ಸಮಂ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೯೪ ॥

ಇಳಿಯಾಣ್ಮಂತನಗಿಂತ ವೆಗ್ಗಳವೆನುತ್ತಂ ಪಾರುಪತ್ಯಂಗಳಂ
ಖಳಗೀಯಲ್ಸುಲಿತಿಂದು ರಾಜ್ಯವನಿತಂ ನೀವೇಕೆತಾವೇತಕೆಂ ॥
ದುಳಿದರ್ಗೀಯದೆ ಜೀತವುಂ ಕಪಿಯ ಪೊಳ್ಕೈಕಟ್ಟೆ ಕೂಗುತ್ತಿಹಾ
ದಳವಾಯೇತಳವಾಯೆಲ್ಲೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೯೫ ॥

ಒಡೆಯುಂಗುತ್ಸಹವಾಗೆ ಸರ್ವಜನವಾನಂದಂಬಡಲ್ ರಾಜ್ಯ ಜೇ
ಗೊಡವೊಲ್ತುಂಬಿ ತುಳುಂಕೆ ಪೈರುಫಲದಿಂದಾಭೂಮಿಯಿಂಬಿಲ್ಲೆನಲ್ ॥
ಗಡಿದುರ್ಗಂಗಳು ಭದ್ರವಾಗೆ ಧನಧಾನ್ಯಂತೀವೆ ಭಂಡಾರದೊಳ್
ನಡೆವಂ ಭಾಗ್ಯದಕರ್ತನೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೯೬ ॥

ಕೆಳವಿಂಪೋದುದ ಪೋಗಿ ಹೆಜ್ಜೆವಿಡಿದಾ ಮರ್ಮಂಗಳಂ ಕಾಣದೇ
ಪೊಳಲೊಳ್ಪೊಕ್ಕರಪೋದರಂ ನುಡಿದವಾತಂಕಾಣದೇ ಸಾದರಂ ॥
ಪಳಿವನ್ಯಾಯವನೋಡದನ್ಯನಿವನೆಂ ದೂರೆಲ್ಲರಂಬಾಧಿಪಾ
ತಳವಾರಂಬೆಳವಾರನೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೯೭ ॥

ತೊನೆವಾವಾತಿಗೆ ಸೋಲ್ತು ತನ್ನತಲೆಯೊಳ್ಕೈಯಿಟ್ಟು ಬೊಬ್ಬಿಟ್ಟು ಕೈ
ಯನು ಬಿಟ್ಟಿಲ್ಲರವುಂದೆ ತೋಳನೆಗಹುತ್ತಂ ಕೋತಿಯಂತೇಡಿಸು ॥
ತ್ತಿನಿತುಂ ಹೇಸದೆ ಲಜ್ಜೆಯಿಲ್ಲದನಿಬರ್ತಾಂ ಮಾನ್ಯರೆಂದೆನ್ನದೇ
ಘನಮಾರ್ಗಂಗತಿಗಾಣನೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೯೮ ॥

ರಚನಂಗೆಯ್ಯದೆ ಧರ್ಮಕೀರ್ತಿಯೆರಡಂ ಸದ್ಧರ್ಮವುಂ ಪಾಪದಾ
ನಿಚಯಕ್ಕಿಕ್ಕದೆತತ್ವಕೇಳಿ ಜಗವೆಲ್ಲಂ ಬ್ರಹ್ಮವೆಂದೆನ್ನದೇ ॥
ಉಚಿತಾಲೋಚನೆಯಿಂದೆ ತನ್ನನಿಜವುಂ ತಾಂ ಕಾಣದೇ ವಾದಿಪಾ
ವಚನಬ್ರಹ್ಮದಿಮುಕ್ತಿಯೇ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೯೯ ॥

ಸಚರಸ್ಥಾವರಕೆಲ್ಲ ಸರ್ವಸುಖದುಃಖಂಗಳ್ಸಮಾನಂಗಳೆಂ
ದಚಲಾನಂದದಿತನ್ನನನ್ಯರೆಣಿಸಲ್ಸುಜ್ಞಾನಿಗಳ್ಮೆಚ್ಚೆನೊಳ್ ॥
ಕುಚದೊಳ್ಪಾದವನಿಟ್ಟುತೋರ್ಪತೆರದೊಳ್ ತಾನಾಗದೇ ವಾದಿಪಾ
ವಚನಬ್ರಹ್ಮದಿಮುಕ್ತಿಯೇ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೧೦೦ ॥

ಶುಚಿತಾನಾಗದೆ ಸರ್ವಶಾಸ್ತ್ರನಿಪುಣಂ ತಾನಾಗದೇ ಕಾಮುವಂ
ರಚನಂಗೆಯ್ಯದೆ ಕ್ರೋಧಮಂಬಿಡದೆ ಲೋಭಚ್ಛೇದಮಂ ಮಾಡದೇ ॥
ರಚನಾಮೋಹವಮುಗ್ಗಿನೆಗ್ಗಿ ಮದಮಾತ್ಸರ್ಯಂಗಳಂ ನೀಗದೇ
ವಚನಬ್ರಹ್ಮದಿಮುಕ್ತಿಯೇ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೧೦೧ ॥

ಪ್ರಚುರಂಪತ್ರೊಳಗಾಗೆ ರಂಧ್ರದೊಳಗೊಲ್ಲಾ ಎಂಟನೀಗೇಳ ಬಿ
ಟ್ಟುಚಿತಂತಾನೆನಿಪಾರಕಟ್ಟೆ ಯಯಿದಕ್ಕೀಡಾಗದೇ ನಾಲ್ವರಂ ॥
ರಚನಂಗೆಯ್ಯದೆ ಮೂರತೋರುವೆರಡಂ ಬಿಟ್ಟೊಂದರೊಳ್ನಿಲ್ಲದೇ
ವಚನಬ್ರಹ್ಮದಿಮುಕ್ತಿಯೇ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೧೦೨ ॥

ಪೃಥುರೋಮೇಶತಿಮಿಂಗಿಲಂ ತಿಮಿಯನೂಕಲ್ಸಿಂಧು ತಾನುಕ್ಕದೇ?
ಶಿಥಿಲತ್ವಂಪಡೆದಿರ್ಪವಂಶ ಮಥಿಸಲ್ಕೆಚ್ಚೇಳದೇ? ಮಂದರಂ ॥
ಮಥಿಸಲ್ ಕ್ಷೀರಸಮುದ್ರದೊಳ್ಬಹುವಿಷಂ ತಾಂಪುಟ್ಟದೇ?ಮರ್ತ್ಯರೊಳ್
ಮಥನಂವೆಗ್ಗಳಹೊಲ್ಲದೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೧೦೩ ॥

ಕೊರಚಾಡೆಲ್ಲರ ಮುಂದೆ ರಚ್ಚೆಗೆಳೆವುತ್ತಂ ಕಿತ್ತುಮೈಯೆಲ್ಲಮಂ
ಹರಿತಂದುಳ್ಳಸುವಸ್ತುವಂ ಕಡೆಯೊಳೊರ್ವಂಗಿತ್ತು ತಾಂಭಾಷೆಯಂ ॥
ಬರಿಗಂಟಿಕ್ಕುವೆನೆಂದು ತಾಯ ಹೊಸೆಯುತ್ತಪ್ಪುತ್ತೆ ಕಾಪಟ್ಯದಿಂ
ಚರಿಪಳ್ತಾಂನೆರೆಸೂಳೆಯೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೧೦೪ ॥

ಪಳಿಯರ್ಪುಂಶ್ಚಲಿಯೆಂದು ಪುತ್ರವತಿಯೆಂದೆಂಬರ್ಸದಾದೇವತಾ
ಕೆಲಸಂ ಮುಂಜಿವಿವಾಹಶೋಭನಶುಭಕ್ಕಂ ಯೋಗ್ಯಮನ್ನೋದಕಂ ॥
ಗಳನೀಡಲ್ಕುಲಕೋಟಿ ಮುಕ್ತಿ ಮನೆಗಂ ಸುಜ್ಞಾನದಿಂ ಕೂಡಿದಾ
ಕುಲವೆಣ್ಣಿಂಗೆಣೆಯಾವುದೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೧೦೫ ॥

ಒಲವಂಬೀರ್ವಕುಚಂಗಳುಂ ಮೃದುಲತಾಸತ್ತೋಮಲಂ ಬಾಹು ಮುಂ
ದಲೆ ಮೇಘಾಯಿತಮೀಕ್ಷಣಂ ಶಫರಿ ಪೂರ್ಣೇಂದುಪ್ರಭಂ ವಕ್ತ್ರಮುಂ ॥
ಕಳೆವಿದ್ಯುನ್ನಿಭ ಸರ್ವಭಾವ ಚೆಲುವಂಗಂ ನೋಡೆಮಾರ್ದರ್ಪಣಂ
ಬೆಲೆವೆಣ್ಣೆಂಬುದುಮೋಹವೈ ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೧೦೬ ॥

ಹಣವುಳ್ಳಂಹೆಣನಾದೊಡಂ ಮಮತೆಯಿಂ ತಾನಾವಗಂ ಬಿಟ್ಟಿರಳ್
ಕ್ಷಣಮಾತ್ರಂ ಬಹುಬೂಟಕಂಗಳಲಿ ರತ್ಯುತ್ಸಾಹದಿಂ ಹಾಲಮುಂ॥
ದಣ ಬೆಕ್ಕಾಡುವೊಲಾಡಿಕೊಂಡು ಧನತಾಂಪೋಗಲ್ಕೆ ಮಾತಾಡಳ್ಳೆ
ಗಣಿಕಾಸ್ತ್ರೀಗುಣವೇತಕೋ? ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೧೦೭ ॥

ಮತಿಯಂಬುದ್ಧಿಯಜಾಣ್ಮೆಯಂಗಮಕಮಂಗಾಂಭೀರ್ಯಮಂ ನೀತಿಯಾ
ಯತಮಂ ನಿಶ್ಚಲಚಿತ್ತಮಂ ನೃಪವರಾಸ್ಥಾನೋಚಿತಾರ್ಥಂಗಳಂ॥
ಅತಿಮಾಧುರ್ಯಸುಭಾಷಿತಂಗಳ ಮಹಾಸತ್ಕೀರ್ತಿಯಂ ವಾರ್ತೆಯಂ
ಶತಕಾರ್ಥಂಕೊಡದಿರ್ಪುದೇ? ಹರಹರಾ ಶ್ರೀಚೆನ್ನಸೋಮೇಶ್ವರಾ ॥ ೧೦೮ ॥

ಸ್ವಾಮಿಾ! ನನ್ನಿಂದನೀನಿಂತೊರೆಯಿಸಿದೆ ಕೃಪಾದೃಷ್ಟಿಯಂಬೀರಿ ಲೋಕ
ಪ್ರೇಮಂತಾಳ್ದಿಂತುನೀತಿಪ್ರಕಟನೆ ಪಡೆನಾಲ್ಸಾಸಿರಂ ನಾಲ್ಕುನೂರುಂ॥
ಈ ಮಾಯಾಪೂರ್ಣಕಲ್ಯಬ್ದದೆಗತಿಸೆ ವಿಕಾರ್ಯಬ್ದದಲ್ಲೀಶ್ವರಾನಿ
ನ್ನಾಮಾಹಾತ್ಮ್ಯಂಷ್ಪಿಗಿತ್ತೆಂ ಪುಲಿಗಿರಿನಗರೀಶಾಸನಾಂಕಾ ಮಹೇಶಾ॥೧೦೯॥

ಸಿದ್ಧನೀತಿ.

ಕಂದಂ.

ಶ್ರೀಗಿರಿಜೇಶಂ ಭಕ್ತಸು
ರಾಗಂ ವೃಷರಾಜವಾಹನೂರ್ಜಿತ ತೇಜಂ ॥
ಯೋಗಿಮನೋನಿಲಯಂ ಶಿವ
ನೀಗೆಂದುಂ ಮತಿಯನೆಯ್ದೆ ಸಿದ್ಧಂಗೊಲವಿಂ ॥ ೧ ॥

ಕುಕ್ಷಿಯೊಳೀರೇಳ್ಜಗಮಂ
ರಕ್ಷಿಪ ಪುರಪಂಚಶರರನುರಿಪಿದ ನೊಸಲೊಳ್ ॥
ಚಕ್ಷುವಿನಿಂ ಪರಿಶೋಭಿಪ
ದಕ್ಷನ ಶಿರವರಿದ ವೀರನೋವುಗೆನಮ್ಮಂ ॥ ೨ ॥

ಅಗ್ಗಣಿಯಿಂ ವರಪುಷ್ಪದ
ಮೊಗ್ಗೆಗಳಿಂ ಧೂಪದೀಪಗಂಧಾದಿಗಳಿಂ ॥
ವೆಗ್ಗಳದಿಂ ದುಪಚರಿಸುವೆ
ನಗ್ಗದ ಶಿವಪುತ್ರ ಮತಿಯನೀವುದು ಗಣಪಾ ॥ ೩ ॥

ಖರಕಿರಣಸಹಸ್ರಂಬೋಲ್
ಪಿರಿದೊಪ್ಪುವತೇಜದಿಂದ ಮೆಸೆವಗಣೇಶಾ ॥
ವರಮೂರ್ತಿ ವಿಘ್ನನಾಯಕ
ಕರುಣಿಸು ಮುದದಿಂದಲೆನಗೆ ಶಾಶ್ವತ ಸುಖಮಂ ॥ ೪ ॥

ಗುರುವೆಂಬಗ್ಗಳದೆರಡ
ಕ್ಷರವಂ ನೆನೆಯುತ್ತಿರಲ್ಕೆ ದುರಿತಂ ಕಿಡುಗುಂ ॥
ಹರಪದವೊದವುಗು ಮುದರಿಂ
ಗುರುವರಪಾದಾರವಿಂದಮಂ ಜಾನಿಸುವೆಂ ॥ ೫ ॥

ಇನ್ನೊರೆವೆಂ ನೀತಿಗಳಂ
ಚೆನ್ನಾಗಿಯೆ ಕಷ್ಟವುಳಿದು ಪಡೆಯುಲ್ಲೊಗವುಂ ॥
ತನ್ನಯ ಬಂಧುಗಳುಂ ಮೇ
ಣೆನ್ನುಳಿದರ್ ಶಿಷ್ಯವರ್ಗದೊಳ್ಸಂದವರುಂ ॥ ೬ ॥

ತೊರೆದಾಮತ್ಸರವೆಂಬುದ
ನರಸುತ್ತಂ ಗುಣವನಾದಿಯಲ್ಲಿಯೆ ಬಳಿಕಂ ॥
ನೆರೆನೋಡಿ ತಿದ್ದಿ ತಪ್ಪಂ
ಕಿರಿಯನ ಬಿನ್ನಪವನಾಲಿಪುದು ಸರ್ವಜನಂ ॥ ೭ ॥

ಬರ್ಬೂರದ ಬೇಲದ ನೆಲೆ
ಗಿರ್ಬ್ಬರೆ ಮಾತಾಡುವೆಡಗಮಾಲೆಗಳೆಡೆಗಂ ॥
ದುರ್ಬೋಧಮೆಸಗುವೆಡೆಗಂ
ಪೆರ್ಬುಯ್ಯಲ್ಮಸಗಿದೆಡೆಗೆ ಪುಗದಿರು ಪುತ್ರಾ ॥ ೮ ॥

ಕೋಪವ ತೊಲಗಿಸು ದೂರದೊ
ಳಾಪತ್ತಿನ ಕಾಲವಲ್ಲಿ ಬಗೆಗುಂದದಿರೈ ॥
ದೀಪಿಸು ನಿನ್ನಯ ಗುಣದಿಂ
ಪಾಪಾತ್ಮರೆನಿಪ್ಪ ಮನುಜರಂ ಪೊರ್ದದಿರೈ ॥ ೯ ॥

ಕೌಂಬಿಡು ಮಾತಿಗೆ ನಿಚ್ಚಂ
ಸಂಬಳವಂ ಕೊಂಡು ಹಾದಿ ನಡೆಯದಿರಶನಾ ॥
ರ್ಥಂಬಂದರ್ಗರೆಯಿಕ್ಕದೆ
ಬೆಂಬಳಿಯಾಪತ್ತಿನಲ್ಲಿ ಬಂದರಸಲಹೈ ॥ ೧೦ ॥

ಉಂಟೆಂದು ಶಿವನ ಮರೆಯದೆ
ನಂಟರ್ಕಳ್ಬಡವರೆಂದು ಕೀಳ್ಮಾಡದೆ ನೀಂ ॥
ಕಂಟಕತನದಿಂ ನಡೆಯದೆ
ಬಂಟರನಾಳದಿರುಪುತ್ರ ಮಾರ್ನುಡಿವವರಂ ॥ ೧೧ ॥

ಗುರುವೊಳವಗುಣವನರಸದೆ
ಪಿರಿಯರ ಕೈಯಿಂದೆ ಸೇವೆಯಂ ಕೊಳ್ಳದಿರೈ ॥
ಇರುಳೊಳ್ಪರವಾರ್ತೆಯು ನುಳಿ
ಪರಜನರಿಗೆ ಭಾಷೆಯಿತ್ತು ತಪ್ಪದಿರನಿಶಂ ॥ ೧೨ ॥

ಗರ್ವಿಗಳಂ ನುಡಿಸದಿರೈ
ಸರ್ವಜನಂಗಳ್ಗೆ ಧರೆಯೊಳೊಳ್ಳಿದನೆನಿಸೈ ॥
ಕೊರ್ವದಿರೈ ಸಿರಿಬಂದೊಡೆ
ಯೊರ್ವನೆ ಇರುಳಲ್ಲಿಪೋಗದಿರು ಕಾನನದೊಳ್ ॥ ೧೩ ॥

ಮಾಡು ಪರರ್ಗುಪಕೃತಿಯಂ
ಕೂಡದೆ ಗುಣಹೀನ ದುಷ್ಟಸಂಘದೊಳನಿಶಂ ॥
ಚಾಡಿಯಮಾತಂ ಪೇಳದಿ
ರಾಡದಿರೈ ಜೂಜಿನಾಟಮಂ ನೆನೆ ನಳನಂ ॥ ೧೪ ॥

ನುಡಿಯದೆ ಪೆರರವಗುಣಗಳ
ಪಿಡಿಯದಿರೈ ಲೋಗರೊಡವೆಯೆನಿಸುವ ಪಾವಂ ॥
ಬಿಡು ಮೂದಲಿಸುವನೆಂಟನ
ನಡಿಯಿಡದಿರು ದೂರುಬರ್ಪತಾಣದೊಳೆಂದುಂ ॥ ೧೫ ॥

ಮಕ್ಕಳಿಗೆ ಸದರಕೊಡದಿರು
ಕಕ್ಕಸದಾರ್ಪುಳ್ಳರೊಡನೆ ವೈರವಬಿಡು ನೀಂ ॥
ಟಕ್ಕಿಗರಂ ನಂಬದಿರೈ
ಲೆಕ್ಕಿಸದಿರ್ನಿನ್ನದಾನಧರ್ಮವನೆಂದುಂ ॥ ೧೬ ॥

ಪ್ರಾಣಿಗಳಂ ಕೊಲಲಾಗದು
ಜಾಣತನಂ ತೋರ್ಪುದರಿದುಮೆಚ್ಚುವ ಜನರೊಳ್ ॥
ಮಾಣ್ಬುದು ಪಸಿವಳಿದುಣಿಸಂ
ಕೇಣವಬಿಡು ಸುಗುಣರಲ್ಲಿ ಸತತಂ ಪುತ್ರಾ ॥ ೧೭ ॥

ವಾಸಿಯನುಳಿ ನಿನ್ನವರೊಳ್
ದಾಸಿಯರೊಳ್ಸರಸವಾಣಿಯಂ ನುಡಿಯದಿರ್ಕೈ ॥
ವೇಸಿಗೆ ನೀಂ ಮರುಳಾಗದಿ
ರಾಸೆಯನುಳಿ ಕೊಟ್ಟು ತಂದ ಬಿರ್ದಿನರೆಡೆಯೊಳ್ ॥ ೧೮ ॥

ಕಾಮದೊಳಿರ್ಪುದು ಮಿತದಿಂ
ದಾಮಯದೊಳ್ಮೀರೆ ತಪ್ಪಿನಡೆಯದಿರೆಂದುಂ
ಸ್ವಾಮಿದ್ರೋಹವ ಬಿಡು ನೀಂ
ಕಾಮಿನಿಯರ ಸೆರೆಯ ಹಾಕದಿರು ನಿರ್ದಯೆಯಿಂ ॥ ೧೯ ॥

ನೀರೊಳು ಗುಣ್ಪಿರಿದಿಳಿವುದು
ಜಾರರ್ಕಳಮಾತು ಕೇಳ್ದು ಮರುಳಾಗದಿರ್ಕೈ ॥
ಆರವೆಯಂ ನೀಂ ಕೆಡಿಸದಿ
ರೂ ರೊಳ್ಪಗೆ ಸಲ್ಲದೆಂದನಾಕವಿಸಿದ್ಧಂ ॥ ೨೦ ॥

ನೇರಿಲನರಳಿಯ ನೆಲವವ
ನೇರದಿರಾಗದಿರದಾರ್ಗಮಾ ಕೊಣೆಗಾರಂ ॥
ಮಾರುವುದಂ ಕಳವಿಂಕೊಳೆ
ಬೇರೊಂದಿಲ್ಲಡರ್ದ ಮಾರಿಯದು ನಿಶ್ಚಯದಿಂ ॥ ೨೧ ॥

ಖೂಳರ ಸಹವಾಸವ ನುಳಿ
ಯಾಲೋಚನೆಯಿಲ್ಲದೊಂದುಮಂ ಮಾಡದಿರ್ಕೈ ॥
ಕೇಳದಿರ್ಕೈ ಕೊಂಡೆಯಗಳ
ಪೇಳದಿರವಮತಿಯ ಪಡೆದುದಂ ನಿಖಿಲರ್ಗಂ ॥ ೨೨ ॥

ಅಂಜುವುದಪವಾದಕೆ ನೀಂ
ಮಂಜುರೆಕವಿದಿರಲು ಪಯಣಮಂ ಪೋಗದಿರ್ಕೈ ॥
ಎಂಜಲನಿಕ್ಕದಿರಾರ್ಗಂ
ಸಂಜೆಯಕಾಲದೊಳೆ ಕಲಹವಂ ಮಾಡದಿರ್ಕೈ ॥ ೨೩ ॥

ಹಲವರ ವಿರೋಧಸಲ್ಲದು
ಫಲವಿಲ್ಲದ ಕಾರ್ಯದಲ್ಲಿ ಬಿಡು ಯತ್ನವ ನೀಂ ॥
ಸ್ಖಲಿಸದಿರು ನೀತಿಪಥದಿಂ
ಚಲವಂ ಬಿಡು ಪುತ್ರಮಿತ್ರಬಾಂಧವಬುಧರೊಳ್ ॥ ೨೪ ॥

ಮೇಂಗಾಲಂ ತುರಿಸದೆ ಇರು
ಸಂಗಡಿಗರ ಗುಣವನರಿದುಕೊಳ್ವುದು ಮರೆಯೊಳ್ ॥
ಸಿಂಗರಮಂ ಬಿಡು ಭಯದೊಳ್
ಹಿಂಗಿಯೆ ಕಳೆ ಕೇಡುಪೊರ್ದುವಾನಾಡಿಂದಂ ॥ ೨೫ ॥

ಪರಿಕಿಸದಿರು ದುರ್ಜೀವಿಯ
ಪರಜನಕುಸಿರದಿರು ಮನೆಯ ಜಗಳದಬಗೆಯಂ ॥
ಹರೆಯದೊಳೆಂದುಂ ಮದಿಸದಿ
ರರಿ ತಾಂ ಕಾಳಗದೆ ಕೈಯಮುಗಿದೊಡೆ ಸಲಹೈ ॥ ೨೬ ॥

ಮುಂದಾಗಿ ಮಾಡು ಕೃಷಿಯಂ
ವಂದಿಸು ಗುರುಹಿರಿಯರನ್ನು ಕಂಡೊಡನೆಯೆ ನೀಂ ॥
ತಂದೆಯಮಾತಂ ಮೀರದಿ
ರೆಂದುಂ ಬಡವಂಗೆ ತರದಿರಿರ್ಮಡದಿಯರಂ ॥ ೨೭ ॥

ಕರುಣದಿನಿಡು ಭಿಕ್ಷೆಯ ನೀಂ
ಬರಿಕಾಲೊಳ್ದಾರಿಯಲ್ಲಿ ಸಂಚರಿಸದಿರೈ ॥
ಪೆರರಂ ನಿನ್ನ ವೊಲೀಕ್ಷಿಸು
ನೆರೆನೋಂಪುದು ಪುಣ್ಯಗತಿಯಪಡೆವೊಡೆಮನುಜಂ ॥ ೨೮ ॥

ಪಣಮಿರ್ಪುದೆಂದು ಬೆರೆಯದೆ
ಗುಣಮಂ ಸ್ವೈರಣೆಯನೊಂದು ಪಿರಿದುಂ ಜನದೊಳ್ ॥
ಎಣೆಯರಿದು ಪೆಣ್ಣನೀವುದು
ತೃಣಮಂ ಸೀಳದಿರು ಗಣಕಸಿದ್ಧನವಚನಂ । ೨೯ ॥

ಉಡಿಯದಿರುಗುರಂ ದಶನದೆ
ಬಿಡುಮುಂಡೆಯ ನಾರಿಸುತ್ತೆ ಸಂಚರಿಸದಿರ್ಕೈ ॥
ಕೊಡದಿರು ಧನಿಕಗೆದಾನವ
ಕಡನಂ ಕೊಡಲೊತ್ತೆ ಪಿಡಿವುದುತ್ತಮಮಾರ್ಗಂ ॥ ೩೦ ॥

ಮಸವಲ್ಲದುದಂ ಮಾಡದೆ
ಪೆಸರೆಣ್ಣೆಸೆಯಲ್ಲಿ ಪರ್ಬುವಂದದೆ ನಡೆಯ್ಯೊ ॥
ಹುಸಿಯಂ ನುಡಿಯದಿರೆಂದಿಗು
ಮೆಸೆವಾಕೇದಗೆಯ ಮುಲರಗತಿಯೇನಾಯ್ತು? ॥ ೩೧ ॥

ಅಕ್ಕಿಯಸಾಲವ ತರದಿರು
ಧಿಕ್ಕರಿಸಲ್ಮೂರ್ಖಜನರು ಲೆಕ್ಕಿಸದಿರು ನೀಂ ॥
ತಕ್ಕುದನವಸರದೊಳ್ನುಡಿ
ಯಿಕ್ಕಿದಕೂಳಂ ಸಮುಂತು ನೀಂ ಪಳಿಯದಿರ್ಕೈ ॥ ೩೨ ॥

ನೆಳಲಗ್ಗಣಿಯಂ ಕುಡಿಯದಿ
ರಳಿಯನಚಿತ್ತಕ್ಕೆ ನೋವನೆಸಗದಿರೆಂದುಂ॥
ಕಳೆ ಯೆಲೆಯತೊಟ್ಟುಮೊನೆಗಳ
ಪೊಳೆತುಂಬಿರಲಲ್ಲಿಪಾಯ್ತು ಮುಳುಗದಿರಣುಗಾ ॥ ೩೩ ॥

ದಯೆಯಂ ಬಿಡದಿರುಮನದೊಳ್
ವ್ಯಯುವಂಮಾಡುವುದು ತಕ್ಕ ಪೋಲಾರ್ಜಸೆಗಂ ॥
ಪ್ರಿಯುರಂತೆ ನಟಿಸುವಾವಿಷ
ಮುಯುರಂ ಬಿಡು ಕೌರವರ್ಕಳಂ ಪೋಲ್ತವರಂ ॥ ೩೪ ॥

ಹಂಗಿಸುವ ನೆಂಟರನು ಬಿಡು
ಮಂಗಳಕಾರ್ಯದೊಳೆ ಕೆಟ್ಟುದಂ ನುಡಿಯದಿರ್ಕೈ ॥
ಲಿಂಗ ದೊಳಿಡು ಸುಯಿಧಾನವ
ನಿಂಗಿತಮಂ ತಿಳಿವುದನ್ಯರಾಕೃತಿಯಿಂದಂ ॥ ೩೫ ॥

ಸೊೞೆಂಕದಿರಾನೆಯ ಸುಂಡಿಲ
ಮುಂಕಣ್ಣಿಯ ಪಿಡಿದು ನೋಡದಿರು ದಿಕ್ಕುಗಳಂ ॥
ಸಂಕಲಿಗರನುಸಿರಿಸದಿರು
ಕಿಂಕರನೆನಿಸುವುದು ಶಿವನ ಭಕ್ತರ್ಗಣುಗಾ ॥ ೩೬ ॥

ಸಾಲಕ್ಕೆ ಹೆದರುವುದು ನೀಂ
ನಾಲಿಗೆಯುಂಟೆಂದು ಬರಿದೆಗಳಹದಿರೆಂದುಂ ॥
ಆಲಸ್ಯವೆಂಬುದಂಕಳೆ
ಯಾಲೋಕಿಸಬೇಡ ನಿನ್ನ ನೆಳಲಂ ನೀರೊಳ್ ॥ ೩೭ ॥

ಜೇನೊಳಗಿಡದಿರು ಕಿಚ್ಚನು
ಮಾನಿಸರಿವರೆಂದು ಪಳಿಯಬೇಡಂ ಪರರಂ ॥
ದಾನಕ್ಕಡ್ಡಿಯ ಮಾಡದಿ
ರೇನೊಂದಂನೆನೆಯಬೇಡಧ್ಯಾನಿಸುವಾಗಳ್ ॥ ೩೮ ॥

ಊಟಕ್ಕೆ ನಾಣ್ಚಲಾಗದು
ಕೂಟಕೆಬೇಹಾರಕೋದಿಗಂ ನಾಣ್ಚದಿರೈ ॥
ಬೂಟಾಟವ ಬಿಡು ಜನರೊಳ್
ನೋಟಂ ಸಲ್ಲದು ಪರಾಂಗನೆಯರಿರ್ಪೆಡೆಯೊಳ್ ॥ ೩೯ ॥

ನಿಂದಗ್ಗಣಿಯಂ ಕುಡಿಯದೆ
ನಂದನರಂ ಲಾಲನಂಗಳಿಂ ಕೆಡಿಸದೆನೀಂ ॥
ನೊಂದವರಂ ನೋಯಿಸದಿರು
ಮಿಂದಲ್ಲದೆ ಪಗಲೊಳೂಟವನು ಮಾಡದಿರೈ ॥ ೪೦ ॥

ಬಗೆಯದ ನಂಟರಮನೆಗಂ
ಜಗಳವನಾಡುತ್ತಲಿರ್ಪ ದುರುಳರಮನೆಗಂ ॥
ಪಗೆಯಿರ್ಪ ಪಳ್ಳಿಗಂ ತಾಂ
ಪುಗಲಾಗದು ಕಷ್ಟವೆಂದನಾ ಕವಿಸಿದ್ಧಂ ॥ ೪೧ ॥

ಸುಂಕಿಗರೊಳು ಚಲಸಲ್ಲದು
ಲೆಂಕಿಗರಂ ಕಂಡೊಡೆಯ್ದೆ ವಿನಯವತೋರ್ರೈ ॥
ಝೊಂಕಿಸದಿರಾರ್ಯವರ್ಯರ
ನಂಕಂ ಸಮನಿಸದು ರಾತ್ರಿಸಮಯದೆ ಪುತ್ರಾ ॥ ೪೨ ॥

ಪಸೆಯೊಳ್ಪವಡಿಸದಿರು ನೀಂ
ಪೊಸಪಣ್ಣಂ ಕೊಳ್ವುದೀಶಗರ್ಪಿಸಿಮುನ್ನಂ ॥
ರಸಿಕರ ಜಾಣ್ನುಡಿಕೇಳ್ವುದು
ಮುಸುಕಿದ ಜರೆಯಲ್ಲಿ ಮದುವೆ ಸಲ್ಲದು ಪುತ್ರಾ ॥ ೪೩ ॥

ಕೆಡಿಮುಟ್ಟಿದ ವಸ್ತ್ರಂಗಳ
ನುಡದಿರು ಸವಿಯುಣಿಸನೊರ್ವನೇ ಭುಜಿಸದಿರೈ ॥
ನುಡಿಸದಿರು ನಿನ್ನ ಮಿತ್ರನ
ಮಡದಿಯ ನವಳೊಪನಿಲ್ಲದಿರ್ಪವಸರದೊಳ್ ॥ ೪೪ ॥

ತೊಂಡರೊಳು ಸೇರಲಾಗದು
ಭಂಡರಿಗಂ ನೀತಿಮಾರ್ಗ ಬೋಧಿಸಬೇಡೈ ॥
ಕೊಂಡಾಡಿಕೊಳ್ಳದಿರುನೀಂ
ಚಂಡಿಯ ದುಶ್ಶೀಲೆಸತಿಯ ಬಿಡುವುದು ಬೇಗಂ ॥ ೪೫ ॥

ಉಳ್ಳಾಗ ಮಾಡು ದಾನವ
ನೊಳ್ಳುಡೆಯುಂಧರಿಸಿ ಪೋಗು ರಾಜನಸಭೆಯೊಳ್ ॥
ಕಳ್ಳರೊಡನಾಡಲಾಗದು
ಕುಳ್ಳಿರವೇಡೊಲ್ದು ಮನ್ನಿಸದ ಜನರೆಡೆಯೊಳ್ ॥ ೪೬ ॥

ಬೆಟ್ಟದೊಳೆ ಕಿಚ್ಚ ನಿರಿಸದಿ
ರಿಟ್ಟೆಡೆಯೊಳಗಹಿತಕೃತ್ಯವಂ ನೆನೆಯದಿರೈ ॥
ಕಟ್ಟಳೆಯ ಮೀರಿ ನಡೆಯದಿ
ಟ್ಟುಳಿಗಾದರನೆ ಮರೆಯಲಾಗದುಪುತ್ರಾ ॥ ೪೭ ॥

ಸೋಂಕದಿರಾನೆಯ ಸುಂಡಿಲ
ಮುಂಕಣ್ಣಿಯ ಪಿಡಿದು ನೋಡದಿರು ದಿಕ್ಕುಗಳಂ ॥
ಸಂಕಲಿಗರನುಸಿರಿಸದಿರು
ಕಿಂಕರನೆನಿಸುವುದು ಶಿವನ ಭಕ್ತರ್ಗಣುಗಾ ॥ ೩೬ ॥

ಸಾಲಕ್ಕೆ ಹೆದರುವುದು ನೀಂ
ನಾಲಿಗೆಯುಂಟೆಂದು ಬರಿದೆಗಳಹದಿರೆಂದುಂ ॥
ಆಲಸ್ಯವೆಂಬುದಂಕಳೆ
ಯಾಲೋಕಿಸಬೇಡ ನಿನ್ನ ನೆಳಲಂ ನೀರೊಳ್ ॥ ೩೭ ॥

ಜೇನೊಳಗಿಡದಿರು ಕಿಚ್ಚನು
ಮಾನಿಸರಿವರೆಂದು ಪಳಿಯಬೇಡಂ ಪರರಂ ॥
ದಾನಕ್ಕಡ್ಡಿಯ ಮಾಡದಿ
ರೇನೊಂದಂನೆನೆಯಬೇಡಧ್ಯಾನಿಸುವಾಗಳ್ ॥ ೩೮ ॥

ಊಟಕ್ಕೆ ನಾಣ್ಚಲಾಗದು
ಕೂಟಕೆಬೇಹಾರಕೋದಿಗಂ ನಾಣ್ಚದಿರೈ ॥
ಬೂಟಾಟವ ಬಿಡು ಜನರೊಳ್
ನೋಟಂ ಸಲ್ಲದು ಪರಾಂಗನೆಯರಿರ್ಪೆಡೆಯೊಳ್ ॥ ೩೯ ॥

ನಿಂದಗ್ಗಣಿಯಂ ಕುಡಿಯದೆ
ನಂದನರಂ ಲಾಲನಂಗಳಿಂ ಕೆಡಿಸದೆನೀಂ ॥
ನೊಂದವರಂ ನೋಯಿಸದಿರು
ಮಿಂದಲ್ಲದೆ ಪಗಲೊಳೂಟವನು ಮಾಡದಿರೈ ॥ ೪೦ ॥

ಬಗೆಯದ ನಂಟರನುನೆಗಂ
ಜಗಳವನಾಡುತ್ತಲಿರ್ಪ ದುರುಳರನುನೆಗಂ ॥
ಪಗೆಯಿರ್ಪ ಪಳ್ಳಿಗಂ ತಾಂ
ಪುಗಲಾಗದು ಕಷ್ಟವೆಂದನಾ ಕವಿಸಿದ್ಧಂ ॥ ೪೧ ॥

ಸುಂಕಿಗರೊಳು ಚಲಸಲ್ಲದು
ಲೆಂಕಿಗರಂ ಕಂಡೊಡೆಯ್ದೆ ವಿನಯವತೋರ್ರೈ ॥
ಝೊಂಕಿಸದಿರಾರ್ಯವರ್ಯರ
ನಂಕಂ ಸಮನಿಸದು ರಾತ್ರಿಸಮಯದೆ ಪುತ್ರಾ ॥ ೪೨ ॥

ಪಸೆಯೊಳ್ಪವಡಿಸದಿರು ನೀಂ
ಪೊಸಪಣ್ಣಂ ಕೊಳ್ವುದೀಶಗರ್ಪಿಸಿಮುನ್ನಂ ॥
ರಸಿಕರ ಜಾಣ್ನುಡಿಕೇಳ್ವುದು
ಮುಸುಕಿದ ಜರೆಯಲ್ಲಿ ಮದುವೆ ಸಲ್ಲದು ಪುತ್ರಾ ॥ ೪೩ ॥

ಕಿಡಿಮುಟ್ಟಿದ ವಸ್ತ್ರಂಗಳ
ನುಡದಿರು ಸವಿಯುಣಿಸನೊರ್ವನೇ ಭುಜಿಸದಿರೈ ॥
ನುಡಿಸದಿರು ಸಿನ್ನ ಮಿತ್ರನ
ಮಡದಿಯ ನವಳೋಪನಿಲ್ಲದಿರ್ಪವಸರದೊಳ್ ॥ ೪೪ ॥

ತೊಂಡರೊಳು ಸೇರಲಾಗದು
ಭಂಡರಿಗಂ ನೀತಿಮಾರ್ಗ ಬೋಧಿಸಬೇಡೈ ॥
ಕೊಂಡಾಡಿಕೊಳ್ಳದಿರುನೀಂ
ಚಂಡಿಯ ದುಶ್ಶೀಲೆಸತಿಯ ಬಿಡುವುದು ಬೇಗಂ ॥ ೪೫ ॥

ಉಳ್ಳಾಗ ಮಾಡು ದಾನವ
ನೊಳ್ಳುಡೆಯಂಧರಿಸಿ ಪೋಗು ರಾಜನಸಭೆಯೊಳ್ ॥
ಕಳ್ಳರೊಡನಾಡಲಾಗದು
ಕುಳ್ಳಿರವೇಡೊಲ್ದು ಮನ್ನಿಸದ ಜನರೆಡೆಯೊಳ್ ॥ ೪೬ ॥

ಬೆಟ್ಟದೊಳೆ ಕಿಚ್ಚ ನಿರಿಸದಿ
ರಿಟ್ಟೆಡೆಯೊಳಗಹಿತಕೃತ್ಯವಂ ನೆನೆಯದಿರೈ ॥
ಕಟ್ಟಳೆಯ ಮೀರಿ ನಡೆಯದಿ
ಟ್ಟುಳಿಗಾದರನೆ ಮರೆಯಲಾಗದುಪುತ್ರಾ ॥ ೪೭ ॥

ಸೋಂಕದಿರಾನೆಯ ಸುಂಡಿಲ
ಮುಂಕಣ್ಣಿಯ ಪಿಡಿದು ನೋಡದಿರು ದಿಕ್ಕುಗಳಂ ॥
ಸಂಕಲಿಗರನುಸಿರಿಸದಿರು
ಕಿಂಕರನೆನಿಸುವುದು ಶಿವನ ಭಕ್ತರ್ಗಣುಗಾ ॥ ೩೬ ॥

ಸಾಲಕ್ಕೆ ಹೆದರುವುದು ನೀಂ
ನಾಲಿಗೆಯುಂಟೆಂದು ಬರಿದೆಗಳಹದಿರೆಂದುಂ ॥
ಆಲಸ್ಯವೆಂಬುದಂಕಳೆ
ಯಾಲೋಕಿಸಬೇಡ ನಿನ್ನ ನೆಳಲಂ ನೀರೊಳ್ ॥ ೩೭ ॥

ಜೇನೊಳಗಿಡದಿರು ಕಿಚ್ಚನು
ಮಾನಿಸರಿವರೆಂದು ಪಳಿಯಬೇಡಂ ಪರರಂ ॥
ದಾನಕ್ಕಡ್ಡಿಯ ಮಾಡದಿ
ರೇನೊಂದಂನೆನೆಯಬೇಡಧ್ಯಾನಿಸುವಾಗಳ್ ॥ ೩೮ ॥

ಊಟಕ್ಕೆ ನಾಣ್ಚಲಾಗದು
ಕೂಟಕೆಬೇಹಾರಕೋದಿಗಂ ನಾಣ್ಚದಿರೈ ॥
ಬೂಟಾಟವ ಬಿಡು ಜನರೊಳ್
ನೋಟಂ ಸಲ್ಲದು ಪರಾಂಗನೆಯರಿರ್ಪೆಡೆಯೊಳ್ ॥ ೩೯ ॥

ನಿಂದಗ್ಗಣಿಯಂ ಕುಡಿಯದೆ
ನಂದನರಂ ಲಾಲನಂಗಳಿಂ ಕೆಡಿಸದೆನೀಂ ॥
ನೊಂದವರಂ ನೋಯಿಸದಿರು
ಮಿಂದಲ್ಲದೆ ಪಗಲೊಳೂಟವನು ಮಾಡದಿರೈ ॥ ೪೦ ॥

ಬಗೆಯದ ನಂಟರಮನೆಗಂ
ಜಗಳವನಾಡುತ್ತಲಿರ್ಪ ದುರುಳರಮನೆಗಂ ॥
ಪಗೆಯಿರ್ಪ ಪಳ್ಳಿಗಂ ತಾಂ
ಪುಗಲಾಗದು ಕಷ್ಟವೆಂದನಾ ಕವಿಸಿದ್ಧಂ ॥ ೪೧ ॥

ಸುಂಕಿಗರೊಳು ಚಲಸಲ್ಲದು
ಲೆಂಕಿಗರಂ ಕಂಡೊಡೆಯ್ದೆ ವಿನಯವತೋರ್ರೈ ॥
ಶ್ಶುಂಕಿಸದಿರಾರ್ಯವರ್ಯರ
ನಂಕಂ ಸಮನಿಸದು ರಾತ್ರಿಸಮಯದೆ ಪುತ್ರಾ ॥ ೪೨ ॥

ಪಸೆಯೊಳ್ಪವಡಿಸದಿರು ನೀಂ
ಪೊಸಪಣ್ಣಂ ಕೊಳ್ಪುದೀಶಗರ್ಪಿಸಿಮುನ್ನಂ ॥
ರಸಿಕರ ಜಾಣ್ನುಡಿಕೇಳ್ವುದು
ಮುಸುಕಿದ ಜರೆಯಲ್ಲಿ ಮದುವೆ ಸಲ್ಲದು ಪುತ್ರಾ ॥ ೪೩ ॥

ಕಿಡಿಮುಟ್ಟಿದ ವಸ್ತ್ರಂಗಳ
ನುಡದಿರು ಸವಿಯುಣಿಸನೊರ್ವನೇ ಭುಜಿಸದಿರ್ರೈ ॥
ನುಡಿಸದಿರು ನಿನ್ನ ಮಿತ್ರನ
ಮಡದಿಯು ನವಳೋಪನಿಲ್ಲದಿರ್ಪವಸರದೊಳ್ ॥ ೪೪ ॥

ತೊಂಡರೊಳು ಸೇರಲಾಗದು
ಭಂಡರಿಗಂ ನೀತಿಮಾರ್ಗ ಬೋಧಿಸಬೇಡೈ ॥
ಕೊಂಡಾಡಿಕೊಳ್ಳದಿರುನೀಂ
ಚಂಡಿಯು ದುಶ್ಶೀಲೆಸತಿಯು ಬಿಡುವುದು ಬೇಗಂ ॥ ೪೫ ॥

ಉಳ್ಳಾಗ ಮಾಡು ದಾನವ
ನೊಳ್ಳುಡೆಯಂಧರಿಸಿ ಪೋಗು ರಾಜನಸಭೆಯೊಳ್ ॥
ಕಳ್ಳರೊಡನಾಡಲಾಗದು
ಕುಳ್ಳಿರವೇಡೊಲ್ದು ಮನ್ನಿಸದ ಜನರೆಡೆಯೊಳ್ ॥ ೪೬ ॥

ಬೆಟ್ಟದೊಳೆ ಕಿಚ್ಚ ನಿರಿಸದಿ
ರಿಟ್ಟೆಡೆಯೊಳಗಹಿತಕೃತ್ಯವಂ ನೆನೆಯದಿರ್ರೈ ॥
ಕಟ್ಟಳೆಯ ಮಿಾರಿ ನಡೆಯದಿ
ಟ್ಟುಳಿಗಾದರನೆ ಮರೆಯಲಾಗದುಪುತ್ರಾ ॥ ೪೭ ॥

ಕಳ್ತಲೆಯೊಳ್ಬೊಡರಿಲ್ಲದೆ
ತಳ್ತಿಡೆಯಾಡದಿರು ಪೆಂಡಿರೊಳ್ಪೋರದಿರ್ೖೆ ॥
ಪೊಳ್ತರೆಯೇಳಲೊಡಂ ನೀ
ನಳ್ತಿಯೊಳಭಿನಮಿಸು ದೇವರಂಘ್ರಿಗೆ ನಿಚ್ಚಂ ॥ ೪೮ ॥

ಹೋೞಿಕರಿದು ಮಾಡುಕಾರ್ಯವ
ನಾಕರ್ಷಿಸಬೇಡ ಕುದುರೆವಾಲವನೆಂದುಂ ॥
ಲೋಕಾಪವಾದಕಂಜಿರು
ಶೋೞಿಕಿಗೆ ಸಂತಸದ ವಾರ್ತೆಯಂ ಪೇಳದಿರ್ೖೆ ॥ ೪೯ ॥

ತಕ್ಕಂದ ವಿಡುಗೃಹಂಗಳ
ನಿಕ್ಕಣಿಸನು ಪಙ್ತಿಭೇದವಿಲ್ಲದ ತೆರದಿಂ ॥
ಪಕ್ಕಿಗಳಂ ಸೆರೆಹಾಕದಿ
ರೊಕ್ಕಲನೆಸಗದಿರು ಸಚಿವ ನಿಲ್ಲದ ನಾಡೊಳ್ ॥ ೫೦ ॥

ಜವವಿಲ್ಲದ ಕುದುರೆಯ ನುಳಿ
ಕವಿಯಂ ನೃಪನಂ ಕೆರಳ್ಚದಿರು ಪಾಚಕನಂ ॥
ನೆವದಿಂ ಬೈದುದನೆಣಿಸದೆ
ಕವಣೆಯನಿಡುವಲ್ಲಿ ಸಾರಿ ನಿಲ್ಲದಿರಣುಗಾ ॥ ೫೧ ॥

ಡಿಂಗರವಾಗದು ಖಳರೊಳ್
ತೆಂಗಿನಮರದಡಿಗೆ ಪೋಗಿ ನಿದ್ರಿಸಬೇಡಂ ॥
ಭಂಗುರವಸ್ತುವನೆಳಸದಿ
ರಂಗಕೆಲೇಪಿಸದಿರರೆಯೊಳೊಂದಿದತಿಗುರಂ ॥ ೫೨ ॥

ಬೇೞಿಹಾರದಲ್ಲಿ ಸೋಲದಿ
ರಾಹಾರವನಿಕ್ಕುವವರೊಳಿಸೆಯದು ಚುನ್ನಂ ॥
ನೇಹಂ ಬೆಳೆದಿಹ ನಂಟರ
ಗೇಹಕೆ ಬರಿಕೈಯೊಳಾವಗಂ ಪೋಗದಿರ್ೖೆ ॥ ೫೩ ॥

ದರಿಯೊಳಗೆ ಕೈಯನಿಕ್ಕದಿ
ರರಸಿನ ವಸ್ತುಗಳನೊತ್ತೆಯಂ ಪಿಡಿಯದಿರೈ ॥
ಎರವಿಕ್ಕಿಪಯಣವಾಗದು
ಪುರುಳಂಬೆಲೆಯರಿದು ನೋಡಿ ಕೊಳ್ವುದು ಪುತ್ರಾ ॥ ೫೪ ॥

ಓದುಬರೆಹಂಗಳಂ ಕ
ಲ್ತಾದಿಯೊಳಾ ಬಳಿಕ ಲೆಕ್ಕಮಂ ತಿಳಿ ಜವದಿಂ ॥
ಸೋದರರಗೊಲ್ಬಿಡು ಜಗಳವ
ನಾದರಿಸೈ ನಲಿದುಮನೆಗೆ ಬಂದತಿಥಿಗಳಂ ॥ ೫೫ ॥

ದೃಷ್ಟಿಯಬೇನೆಯೊಳೊರಸದಿ
ರಷ್ಟಗುಣಂ ಬೆರಸಿಮಾಡು ದೇವಾರ್ಚನೆಯಂ ॥
ವೃಷ್ಟಿಯೊಳೋಡದಿರೈ ಸಲೆ
ಧೃಷ್ಟತೆಯಿರ ವೇಳ್ಕು ಮಂಗನಾಸಮುದಯದೊಳ್ ॥ ೫೬ ॥

ಗೊಡ್ಡಾಕಳೆಂದು ನೀನದ
ನೊಡ್ಡದಿರೈ ಬಂಡಿಗಿರಿಸಲಾಗದು ಪೊರೆಯಂ ॥
ಸಡ್ಡೆಯನಿಡು ಸತ್ಕಥೆಯೊಳ್
ಹೆಡ್ಡರನೀಕ್ಷಿಸುತೆನಾಡೆ ನಗದಿರು ಮಗನೇ ॥ ೫೭ ॥

ಇರಿಸುವುದೈ ಮನದೊಳಿದಂ
ಗುರುವಿಂಗರುಸುತ್ತನುರ್ವಿಯಾಣ್ಮಂಗೈದಂ ॥
ಸರಿದೊರೆಗೆ ಮೂರುಸುತ್ತಂ
ಕರವಾಳ್ಗಿರ ದೆರಡುಸುತ್ತನಿಕ್ಕುವುದುಚಿತಂ ॥ ೫೮ ॥

ಬಾಗದಿರು ಭವಿಗೆ ತನುವೊಳ್
ರೋಗಂಸಂಗಡಿಸೆ ನಿಯಮಮಂ ಬಿಡಲಕ್ಕುಂ ॥
ಕೂಗದಿರು ಶಯಿತನೆಡೆಯೊಳ
ಗಾ ಗಸ್ಕರನಡಿಗೆ ಬೀಳ್ದೊಡಭಯವ ಕೊಡುನೀಂ ॥ ೫೯ ॥

ನಾಗನರ್ಸಿಂ ಕೊಲಲಾಗದು
ಯೋಗಕ್ಕೆಳಸುವೊಡೆ ಜಯಿಸು ಪಂಚೇಂದ್ರಿಯಮಂ ॥
ಆಗದರ ನಂಬಿಕೆಡದಿರು
ಬಾಗಿಲೊಳಿರಲಾಗದಿರುಳಿನೊಳ್ಪರಗೃಹದಾ ॥ ೬೦ ॥

ಉಚ್ಚರಿಸು ನಿನಗೆತಿಳಿದುದ
ನುಚ್ಚೈರ್ಧ್ವನಿಯಿಂದ ಕೂಡಿದೆಲ್ಲಾ ಸಭೆಯೊಳ್ ॥
ಸಚ್ಚರಿತನೆನಿಸು ಧರೆಯೊಳ್
ನೆಚ್ಚದಿರರಮನೆಯ ನಸಿಯನಾಂತಿರ್ಪವಸಂ ॥ ೬೧ ॥

ಒಳ್ಳಿದರಾರೆನೆ ತಿಳಿವುದು
ತಳ್ಳಿಯೊಳಂ ಬಿಡದೆಕಜ್ಜಮಂ ಸಾಧಿಸುವಂ ॥
ಎಳ್ಳನಿತಂ ವಂಚಿಸದವ
ನುಳ್ಳವರೊಳ್ಕ್ರಗೆ ಕರುಂಬಿ ಕೇಡೆಣಿಸದವಂ ॥ ೬೨ ॥

ಗಿರಿಗಳೊಳೆಲ್ಲಂ ರನ್ನಂ
ದೊರೆಯದು ಮುತ್ತಿಲ್ಲ ನೋಡಲಾನೆಯೊಳೆಲ್ಲಂ ॥
ಧರೆಯೆಲ್ಲೆಡೆಯೊಳ್ಸಜ್ಜನ
ನಿರನ್ನೈ ಚಂದನಮುದಿಲ್ಲ ಕಾಡಿನೊಳೆಲ್ಲಂ ॥ ೬೩ ॥

ಉತ್ತಮರಿವರೆಂದೆಂಬರ್
ಚಿತ್ತದೆ ಬೇಸರದೆ ಮಾಡುವಂ ಪರಹಿತಮಂ ॥
ಪೆತ್ತವರಸಾಕುವವನುಂ
ತುತ್ತಿಂಗೋಲೈಸುವವರ ನಳಲಿಸದವನುಂ ॥ ೬೪ ॥

ಚಂದನಮುದುತಾಂ ಶಿಶಿರಂ
ಚಂದನದಿಂ ಶಿಶಿರಮಪ್ಪುದುಡುಪತಿ ಬಿಂಬಂ ॥
ಚಂದನದಿಂ ಶಶಿಮಂಡಲ
ದಿಂದಂ ಪಿರಿದಾದ ತಣ್ಪುಸತ್ಸಂಗತಿಯೊಳ್ ॥ ೬೫ ॥

ಸೇರಿನಡೆವವನೆ ತಾಂ ಸಖ
ನಾರಯ್ವುತೆನೋಡಿ ಸಲಹುವಾತನೆ ಪಿತರಂ ॥
ಹೋರಾಡುವ ಬಂಧುವೆ ಪಗೆ
ಸೈರಿಸಬಲ್ಲವನೆ ಉತ್ತಮೋತ್ತಮನಿಳೆಯೊಳ್ ॥ ೬೬ ॥

ಹೊಲ್ಲದರಾರೆನೆ ಜಾರರ
ಬಲ್ಲಹನುಂ ಚೋರನಧಿಕ ಜೂದುಂಗಾರಂ ॥
ಸೊಲ್ಲೊಳ್ಕಾರ್ಯದೊಳಂಮನ
ದಲ್ಲಿಯುಮೊಂದೊಂದು ತೆರದೊಳಾಚರಿಸುವನುಂ ॥ ೬೭ ॥

ಅಣುಮಾತ್ರ ಮಿಲ್ಲತಪ್ಪಂ
ದೆಣಿಸುತೆ ಭಯರಹಿತನಾಗಿ ಯಿರಸಲ್ಲದು ಕೇಳ್ ॥
ಗುಣವಂತರ ಗುಣವೇ ಕಾ
ರಣಮುಪ್ಪುದುದುರ್ಜನರ್ಗೆ ತಪೆಮುತ್ಸರಿಸಲ್ ॥ ೬೮ ॥

ಕೆಟ್ಟಜ್ಞರದಾರೆಂದೊಡೆ
ನೆಟ್ಟನೆ ತಾಂ ಪಿಡಿದನೋಂಪಿಯುಂ ತ್ಯಜಿಸಿದವಂ ॥
ಕೊಟ್ಟುತಂದಲ್ಲಿ ಪಳಿವಂ
ಪುಟ್ಟಿದಮಕ್ಕಳ್ಗೆ ವಿದ್ಯೆಯುಂ ಕಲಿಸದವಂ ॥ ೬೯ ॥

ತ್ರದುರ್ಬಿಳಿದೆನಿಪುದಕ್ಕಂ
ತಿದುರ್ವುದಕ್ಕಾಗದಜ್ಞರುರು ಮೂರ್ಖತೆಗಂ ॥
ಬರ್ದ್ದಿಯರಬೀಳ್ದ ಮೊಲೆಗಂ
ಮದುರ್ಂಟೆಂಬುವನೆ ಮರುಳನೆಂದೆನಿಸಿದಪಂ ॥ ೭೦ ॥

ಮನೆಯೊಳಗಣೂರಕೇರಿಯ
ಜನರಿಂದಿರೊಳೆ ತನ್ನ ಕಾರ್ಯಮಂ ಸಾಧಿಪೆನೆಂ
ದೆನುತಂ ಪೇಳ್ವನಭೀಷ್ಟಂ
ಕನಸಿನ ಕೈಗಂಟಿನಂತೆ ತಾಂ ಪರಿಣಮಿಕುಂ ॥ ೭೧ ॥

ಪಾಪಿಗಳಾರೆಂದೆನೆ ಕೇಳ್
ಕೋಪವನುಳಿಯದವನನ್ನೆಯಂ ನುಡಿವವನುಂ ॥
ಆಪತ್ತಿಂಗಾದವರಂ
ಶಾಪಿಸುವಂ ಲೋಭವಾರ್ಧಿಯೊಳ್ಮುಳುಗಿದನುಂ ॥ ೭೨ ॥

ಅಕ್ಕರವ ಕಲಿಸಿದಾರ್ಯನ
ಧಿಕ್ಕರಿಸುತೆ ನುಡಿದು ಮಲೆವಪಾಪಿಗಳೆಲ್ಲಂ ॥
ಪೊಕ್ಕುನರಕದೊಳಗಾಳುತೆ
ರಕ್ಕಸರಂದದೊಳೆ ಬಾಯಬಿಟ್ಟಪರಕಟಾ ! ॥ ೭೩ ॥

ಪುರುಷಂ ಕಂಡೊಡೆ ಕೊಂದಪ
ನರಸರಿದೊಡೆ ದಂಡಮಕ್ಕುಮುಳಿದರ್ಪಳಿವರ್ ॥
ನರಕಂತಪ್ಪದುಕಡೆಯೊಳ್
ಪರವಧುವಿಂಗಳಿಪೆ ಕೇಡು ಪಲವಗೆಯಿಂದಂ ॥ ೭೪ ॥

ಪತಿಯಿರೆ ಪರರಂ ನೆನೆದಪ
ಳತಿಶಯದಿಂ ಪೊರೆವ ಗಂಡನಂತೊತ್ತೆಂಬಳ್ ॥
ಹಿತವಂತೆಯ ವೋಲ್ನುಡಿವಳ್
ಸತಿಯರ ನಂಬದಿರು ಮೋಸಗಾತಿಯರನು ನೀಂ ॥ ೭೫ ॥

ಕಿರುಕುಣಿ ನೆಲನಂ ಮುಟ್ಟದೆ
ಪಿರಿಪೊಡೆಯಂ ನೀಳ್ದಕೊರಲಪೆರ್ಚಿದನೊಸಲಾ ॥
ಪೊರವಲ್ಲ ದೊಡ್ಡಮೂಗಿನ
ಕುರುಪಿನ ಪೆಣ್ಣಿಂ ತರಲ್ಕೆ ತಪ್ಪದು ಕಷ್ಟಂ ॥ ೭೬ ॥

ಕೇಳದೆ ಮಾಡುವ ಸತಿಯಂ
ಪೇಳಿದುದಂ ಮಾರಿನಡೆವ ಬಾಂಧವಜನಮಂ ॥
ಕಾಳಗದೊಳೋಡಿ ಪಿಂದೆಗೆ
ವಾಳಂ ನಂಬುವುದು ಕಷ್ಟ ತಪ್ಪದು ನಷ್ಟಂ । ೭೭ ॥

ಆಳಾದವಂಗೆ ರೂಪುವಿ
ಶಾಳಬಲಂ, ಪೆಣ್ಗೆ ರೂಪು ಪಾತಿವ್ರತ್ಯಂ ॥
ಕೇಳ್ವೈವಿಲಕ್ಷಣಾಕೃತಿ
ತಾಳಿದವಂಗೆಸೆವ ವಿದ್ಯೆಯೆಂಬುದು ರೂಪಂ ॥ ೭೮ ॥

ಬಿಡು ಪರರಮನೆಯ ವಾಸವ
ನೆಡರಿಲ್ಲಂ ತನ್ನಮನೆಯೊಳಿರಲದು ಲೇಸೈ ॥
ಮಡದಿಯ ತವರ್ಮನೆಯೊಳಗಿ
ರ್ದೊಡೆ ತಪ್ಪದುಸಾಲ ಬಡತನಂಗಳ ದುಃಖಂ ॥ ೭೯ ॥

ಪೆಣ್ಗಾಂ ಪ್ರಾಣಕೆ ಮುನಿಯಲ್
ಚಿಣ್ಣಂಪಾದರಿಗನಾಗಿ ಕಳವಂಮಾಡಲ್ ॥
ಮಣ್ಣಾಂ ಬರಡಾಗಿರಲಾ
ಪೆಣ್ಣಂಚಿಣ್ಣನು ಮನಗಲ್ದು ಕಳೆಯಾ ಮಣ್ಣಂ ॥ ೮೦ ॥

ಉತ್ತರವನೀವ ಪೆಂಡಿತಿ
ಪೆತ್ತವರಂ ಬಯ್ವಸೂನು ಕೂರದನೆಂಟಂ ॥
ಮತ್ತೆಸೊಸೆ, ಕಳ್ಳಬಂಟಂ
ಮಿತ್ತುವಿವರ್ ಹಿತವರೆಂದು ತಿಳಿಯಲ್ಬೇಡಂ ॥ ೮೧ ॥

ಬಗೆಯರಿದು ನಡೆಯೆ ಪೆಂಡಿತಿ
ಮಗನುಂತಾಂಪೇಳ್ದವಾಕ್ಯವಂ ಮೀರದಿರಲ್ ॥
ಬಗೆಯಲ್ವಿಭವದೊಳೊಗೆ ವೀ
ಜಗದೊಳಗದೆ ಸ್ವರ್ಗಸೌಖ್ಯಮೆನಿಪುದು ಪುಸಿಯೇ? ॥ ೮೨ ॥

ಮಾತಿಂದವೆ ಸಿರಿಯುಕ್ಕುಂ
ಮಾತಿಂ ದೀನತ್ವಮುಹುದು ಮಾತೊಳೆ ಸಖ್ಯಂ ॥
ಮಾತಿನೊಳೇಪಗೆತನಮುಂ
ಮಾತಿನತತ್ವವನು ತಿಳಿಯೆ ಪೆರತೊಂದೇಕೈ? ॥ ೮೩ ॥

ಗೀತಸುಧಾರಸಮುಂಜಲ
ಜಾತಾಂಬಕಿಯರಕಳೇವರದಸೊಬಗುಂ ಮೇಣ್ ॥
ಪ್ರೀತಿಕರಮೆನಿಸಲಾಡುವ
ಮಾತುಂಜಗದೊಳಗದಾರಮೆರ್ಚಿಸದಿರ್ಕುಂ ? ॥ ೮೪ ॥

ಉರೆವೊಲನ ಪರಳಗುಪ್ಪೆಯ
ಹರಗಣೆಯಿಂದುತ್ತುಬಿತ್ತಿ ಗೊಬ್ಬರವಿಡುತುಂ ॥
ನೆರೆಬೇಸಾಯವನೆಸಗಲ್
ಪರಿಹೃತವಾದಪುದುಸಾಲಮುಂಬಡತನಮುಂ ॥ ೮೫ ॥

ಕುಡಲುಂ ಭುಂಜಿಸಲುಂ ತಾಂ
ಪಡೆದಿಲ್ಲಂ ಪಣಮೆನಿಪ್ಪುದಂಕಡುಲುಬ್ಧಂ ॥
ನಡೆಮುಟ್ಟಿತುಷ್ಟಿವಡೆವಂ
ಮಡದಿಯಸೋಂಕಿನೊಳೆಸುಖಿಸುವಾಷಂಡನವೋಲ್ ॥ ೮೬ ॥

ಕಡುಜಾಣ್ಮೆಯಿಂದೆ ಕೂಡಿ
ರ್ದೊಡಮೆಸೆಯದುಬಡವನುಕ್ತಿ ಧನಿಕನಪೊರೆಯೊಳ್ ॥
ಘುಡುಘುಡಿಸುವಘನದುಂದುಭಿ
ಯೆಡೆಯೊಳ್ವೀಣೆಯ ಮೃದುಸ್ವರಂ ಸೊಗಯಿಪುದೇ ? ॥ ೮೭ ॥

ಅನ್ನವೆ ತಾಂ ವಿಷವಪ್ಪುದು
ತನ್ನಯ ಜನರಲ್ಲಿ ವೈರಮುಂಪಿರಿದಕ್ಕುಂ ॥
ಪೊನ್ನುಂ ಮಣ್ಣಪ್ಪುದುಲೋ
ಕೋನ್ನತವಹದೈವದೊಲುಮೆತಪ್ಪಿದಬಳಿಕಂ ॥ ೮೮ ॥

ಆಗುವುದು ಪೆರ್ಮೆ ಮಕ್ಕಳ
ಭೋಗಂಮೊದಲಾದವೈಭವಂಸಮನಿಸುಗುಂ ॥
ರೋಗಂ ಮಾಣ್ದಪುದರಿಗಳ್
ಬಾಗುವರಡಿಗಳ್ಗೆ ವಿಧಿಯಕೃಪೆದೊರೆಯಲೊಡಂ ॥ ೮೯ ॥

ದೈವವನು ವಿಚಾರಲಾಗದು
ದೈವಂಕೊಟ್ಟನಿತರಲ್ಲಿ ತಣಿಯುತೆ ಸುಖಿಸೈ ॥
ಭಾವಿಸದಿರು ಬಡತನವಂ
ಕಾವುದು ಪುಟ್ಟಿಸಿದ ದೈವವೆಲ್ಲರ ನಿಳೆಯೊಳ್ ॥ ೯೦ ॥

ಶರಣಂಪುಗೆ ಕಾವನೆ ವಿಭು
ವೆರೆಯಲ್ಕಿಲ್ಲೆನ್ನದೀವನೇ ದಾತಾರಂ ॥
ಒರೆದುದಗ್ರಹಿಪನೆ ಶಿಷ್ಯಂ
ಕರೆಯಲ್ಸಮಯಕ್ಕೆ ಸಾರಿಬರ್ಪನೆನೆಂಟಂ ॥ ೯೧ ॥

ಪೊಡಮಟ್ಟಶ್ವವನೇರೈ
ಬಿಡದಿರುನೆಲನಂಪರಂಗೆ ಕಾಳಗದೆಡೆಯೊಳ್ ॥
ಪಡೆಯೊಡೆಯ ನನಗಲದೆಮುಂ
ಕಡಿದರಿಯಂಗೆಲ್ದು ಬರ್ಪುದೈ ನೀನರಸಾ ॥ ೯೨ ॥

ಚೆನ್ನಾಗಿ ಬರೆದು ಲೆಕ್ಕವ
ನನ್ಯಾಯುವ ಮಾಡದರಿಯದಿರ್ಪರ್ಗೆಂದುಂ ॥
ಪೊನ್ನೊಳಧಿಕಾಶೆಯಂ ಬಿಡೆ
ಮನ್ನಿಸಿ ಶಾನಾಯಭಾಗನುತ್ತಮನೆಂಬರ್ ॥ ೯೩ ॥

ನೆನೆನೆನೆದು ಬರೆದು ಲೆಕ್ಕವ
ನನುಮಾನಿಸಿ ಯಿನಿತುತೊಡೆದು ಲಂಚಂಗೊಳುತುಂ ॥
ಜನರಂ ಕೆಡಿಸುವಗಣಕಂ
ಗನುಗೊಳ್ಳದೆ ಮಾಣದರಸನುಗ್ರದ ದಂಡಂ ॥ ೯೪ ॥

ಎಲ್ಲರ್ತನ್ನವರುಳ್ಳೊಡೆ
ಯಿಲ್ಲದ ಬಡತನಮದೊದವೆ ತನ್ನವರನ್ಯರ್
ಎಲ್ಲರುಮಂ ನಚ್ಚದೆ ನೀಂ
ಬಲ್ಲೊಡೆನೆರೆನಂಬುಪೊರೆವ ಜಗದೀಶ್ವರನಂ ॥ ೯೫ ॥

ಪುಸಿಕಳವು ಪಾದರಂಮೇಣ್
ಪಸುಳೆಯ ಕೊಲೆಯಾದಿಯಾದ ತಪ್ಪುಗಳಿಂದಂ ॥
ಮುಸುಕಿದ ದುರಿತಂತಾಗಲು
ಪಶುಪತಿ ಶರಣೆಂಬುದಲ್ಲದೇಂಪೆರತುಂಟೆ? ॥ ೯೬ ॥

ಕೀವುನೆಣನೆತ್ತರಡಗಿಂ
ತೀವಿದ ಪುಳುವೆಲುವು ಕಂಡತೊವಲೊಳ್ಪುದಿದಿ ॥
ರ್ಶಿೀವಿಗ್ರಹ ಮುರುಳದಿರ
ಲ್ಯಾವ ಪರಬ್ರಹ್ಮಮೂರ್ತಿಯಂ ನೆನೆ ಜೀವಾ ॥ ೯೭ ॥

ಒಡಲಲಳಿಯೆ ಬಂಧುಬಳಗಂ
ಮಡದಿ ಸಖರ್ಮಕ್ಕಳಾರ್ಜಿಸಿರ್ದೊಡವೆಗಳುಂ ॥
ಒಡನೈತರವಾಸೆಯನುಳಿ
ವೃಡನೇ ಗತಿಯೆಂದು ನಂಬಲಾತನೆ ಕಾವಂ ॥ ೯೮ ॥

ಧರ್ಮವನೆಮಾಡು ನಿಚ್ಚಂ
ನಿರ್ಮಲತರಚಿತ್ತನಾಗಲುದ್ಯೋಗಿಸು ನೀಂ ॥
ಕರ್ಮಂಗಳಂ ಕಳಲ್ಕುತೆ
ಶರ್ಮಾವಹಮಾದ ಪದವಿಯಂ ಪಡೆಪುತ್ರಾ ॥ ೯೯ ॥

ಕೇಳಲಘುಸಿದ್ಧನೀತಿಯ
ದಾಳಾಪಿಸೆಸೈಪದೆಂತೆನಲ್ನಿಗಮನುತಂ ॥
ಭಾಳಾಕ್ಷನಿತ್ತು ಮತಿಯಂ
ಪೇಳಿಸಿದಂ ಲಕ್ಕಪಾತ್ಮಭವಸಿದ್ಧಪನಿಂ ॥ ೧೦೦ ॥

ಕಳಿಲೆಯ ನಾಡೊಳ್ಜನಿಯಿಸಿ
ಫಳದಾಯಕಮಾದ ನೀತಿಯಂ ಸರ್ವಜನಂ ॥
ತಿಳಿಯಲ್ಕಿಂತುಟು ಪೇಳಿದ
ನಿಳೆಯೊಳ್ಬೈಲೂರಲಕ್ಕ ದೇವಜಸಿದ್ಧಂ ॥ ೧೦೧ ॥

ವಿರೂಪಾಕ್ಷನೀತಿ.

ರುಜೆಯಂಪರಿವನೆ ವೈದ್ಯಂ
ಗಜ ಗಮನದಿ ರಣವಪೊಕ್ಕು ಜಯಿಪನೆವೀರಂ ॥
ಭುಜಗಾಭರಣನೆ ದೈವಂ
ಪ್ರಜೆಗಳಪಾಲಿಪನೆ ಅರಸು ಸುಜನಮನೋಜಾ ॥ ೧ ॥

ಚಿಂತೆ ಬಡತನಕೆ ಸಲ್ಲದು
ಭ್ರಾಂತಿಯ ಸತಿಸುತರ ನೆಚ್ಚಿಕೊಂಡಿರಸಲ್ಲಂ ॥
ಪಙ್ತಿಯೊಳು ಭೇದಸಲ್ಲದು
ಸಂತೆಯೊಳೇಕಾಂತಸಲ್ಲ ಶ್ರೀ ವಿರುಪಾಕ್ಷಾ ॥ ೨ ॥

ಬರಿವನೊಳು ಹಗೆಯುಸಲ್ಲದು
ಸರಸವನರಸನೊಳಗಾಡಿನಗುವುದು ಸಲ್ಲಂ ॥
ದುರುಳರೊಡನಾಟಸಲ್ಲದು
ಬರಿಗೈ ಬೇಹಾರಸಲ್ಲ ಶ್ರೀ ವಿರುಪಾಕ್ಷಾ ॥ ೩ ॥

ಪರಸತಿಯ ಬೇಟಸಲ್ಲದು
ಅರಸುಗಳೊಲುಮೆಯನು ನೆಚ್ಚಿಕೊಂಡಿರಸಲ್ಲಂ ॥
ನೆರೆಯೊಳು ಕಲಹವು ಸಲ್ಲದು
ಬಿರುದಿನ ಭಟನಂಜಸಲ್ಲ ಶ್ರೀ ವಿರುಪಾಕ್ಷಾ ॥ ೪ ॥

ಬಲುಬಿಸಿಯನುಣ್ಣಸಲ್ಲದು
ಹೊಲೆಯುಗೆ ಸಾಲವನುಕೊಟ್ಟು ನೆಚ್ಚಿರಸಲ್ಲಂ ॥
ಗೆಲುವನೊಳು ಜೂಜುಸಲ್ಲದು
ಬಲವಂತರ ಸೆಣಸಸಲ್ಲ ಶ್ರೀ ವಿರುಪಾಕ್ಷಾ ॥ ೫ ॥

ಹೆಚ್ಚಿಂನಡೆವುದುಸಲ್ಲದು
ಮೆಚ್ಚಿರುತಿಹ ಹೆಣ್ಣಿನಲ್ಲಿ ಪುಸಿನುಡಿಸಲ್ಲಂ ॥
ರಚ್ಚೆಗಳೊಳಿಕ್ಕಸಲ್ಲದು
ಮುಚ್ಚರ ಮನೆಯೊಳಗೆಸಲ್ಲ ಶ್ರೀ ವಿರುಪಾಕ್ಷಾ ॥ ೬ ॥

ತುಂಬಿಗೆ ಸಂಪಗೆಸಲ್ಲದು
ಕುಂಬಳಕಾಯೊಳಗೆ ಆದ ಸಂಡಿಗೆಸಲ್ಲಂ ॥
ಇಂಬಿಲ್ಲದಮನೆಸಲ್ಲದು
ಚುಂಬನ ಬೋಡಂಗೆಸಲ್ಲ ಶ್ರೀ ವಿರುಪಾಕ್ಷಾ ॥ ೭ ॥

ಕಬ್ಬಿಗನಿರದೂರ್ಸಲ್ಲದು
ಹೆಬ್ಬಾಗಿಲಕಿರಿದುಮಾಡಿಕೊಂಡಿರಸಲ್ಲಂ ॥
ಕಬ್ಬಿಲ್ಲದ ವನ ಸಲ್ಲದು
ಒಬ್ಬನೆಯಿರಸಲ್ಲಮನೆಯೊಳೆಲೆ ವಿರುಪಾಕ್ಷಾ ॥ ೮ ॥

ಅಲ್ಪರಸಂಗವುಸಲ್ಲದು
ಸ್ವಲ್ಪದಕಾರ್ಯಕ್ಕೆ ಕಲಹದುಸ್ಥಿತಿಸಲ್ಲಂ ॥
ಕಲ್ಪಿತವವಿಚಾರಸಲ್ಲದು
ಬಲ್ಪಿನಸ್ತ್ರೀಸಂಗಸಲ್ಲ ಶ್ರೀ ವಿರುಪಾಕ್ಷಾ ॥ ೯ ॥

ಮಡದಿಯುಹುರುಡಿಸಸಲ್ಲದು
ತಡಿವಸ್ತ್ರದಮುಡಿಯನುಟ್ಟುಕೊಂಡಿರಸಲ್ಲಂ ॥
ನಡೆವೆಡೆಗೆವೋಹಸಲ್ಲದು
ನುಡಿಯೆರಡನು ನುಡಿಯುಸಲ್ಲ ಶ್ರೀ ವಿರುಪಾಕ್ಷಾ ॥ ೧೦ ॥

ಉಂಡಮನೆಕೆಡಿಸಸಲ್ಲದು
ಕೊಂಡೆಯಗಳಹೇಳಿಯೊಡಲಹೊರೆವುದುಸಲ್ಲಂ ॥
ಕಂಡವರಬೈಯುಸಲ್ಲದು
ಷಂಡನು ಸ್ತ್ರೀ ಬಯುಸಸಲ್ಲವೆಲೆ ವಿರುಪಾಕ್ಷಾ ॥ ೧೧ ॥

ಯೋಗಿಗಿಸುಖ ಬಯಸಸಲ್ಲದು
ಆಗಮ ವರಿತವನು ಪರರಬಾಧಿಸಸಲ್ಲಂ ॥
ತ್ಯಾಗಿಗೆ ಬಡತನ ಸಲ್ಲದು
ರೋಗಿಗೆ ಬಾಯಿಚ್ಛೆಸಲ್ಲ ಶ್ರೀ ವಿರುಪಾಕ್ಷಾ ॥ ೧೨ ॥

ಹುಲುಮನೆ ಹರದಗೆಸಲ್ಲದು
ಒಲುಮೆಯ ಪೆಣ್ಣಲ್ಲಿ ವಂಚನೆಯುತಾಸಲ್ಲಂ ॥
ಸುಳಿವೇಕಾಂತಕೆ ಸಲ್ಲದು
ಬಲುಹುಳ್ಳನವೈರಸಲ್ಲ ಶ್ರೀ ವಿರುಪಾಕ್ಷಾ ॥ ೧೩ ॥

ಹುಣ್ಣಿಮೆ ಕಮಲಕೆ ಸಲ್ಲದು
ಕಣ್ಣಿಲ್ಲದವಂಗೆ ಪಾರುಪತ್ಯವು ಸಲ್ಲಂ ॥
ಹೆಣ್ಣಿಗೆ ಜಡತನ ಸಲ್ಲದು
ತಣ್ಣೀರೌಷಧಕೆಸಲ್ಲ ಶ್ರೀ ವಿರುಪಾಕ್ಷಾ ॥ ೧೪ ॥

ಹೇಡಿಗೆ ದೊರೆತನ ಸಲ್ಲದು
ಬೇಡಿದಗಿಲ್ಲೆಂಬುವನಿಗೆ ಯಜ್ಞವು ಸಲ್ಲಂ ॥
ಕೂಡಿದೆಡೆಗೆರಡು ಸಲ್ಲದು
ಕಾಡಿಗೆ ಧಾವತಿಯುಸಲ್ಲ ಶ್ರೀ ವಿರುಪಾಕ್ಷಾ ॥ ೧೫ ॥

ಜಾಣಂಗೆ ಮರವೆಸಲ್ಲದು
ಗಾಣವನಾಡಿಸುವ ಮಡಿಯನುಟ್ಟರಸಲ್ಲಂ ॥
ಬಾಣತಿಯ ಕೂಟಸಲ್ಲದು
ಮಾಣದಮಳಿತಿಲಕೆಸಲ್ಲ ಶ್ರೀ ವಿರುಪಾಕ್ಷಾ ॥ ೧೬ ॥

ಬೇಟ ಬೆಳಕಿನೊಳು ಸಲ್ಲದು
ಕೋಟೆಯಕಾವಲಿಗೆ ಕೊನಬುಗಾಡಿಕೆ ಸಲ್ಲಂ ॥
ಲೂಟಿಯುರಸರ್ಗೆ ಸಲ್ಲದು
ಕಾಟಕಮನೆಯೊಳಗೆಸಲ್ಲ ಶ್ರೀ ವಿರುಪಾಕ್ಷಾ ॥ ೧೭ ॥

ತೋಟದೊಳು ದಾರಿಸಲ್ಲದು
ಕೋಟೆಯ ಹಿಂಗಡೆಗೆ ಬೆಟ್ಟವಿರುವುದು ಸಲ್ಲಂ ॥
ಪಾತದೆನಾಚಿಕೆಸಲ್ಲದು
ಕೋಟಲೆಯೊಳು ಬದುಕಸಲ್ಲ ಶ್ರೀ ವಿರುಪಾಕ್ಷಾ ॥ ೧೮

ನೆಂಟರೊಳು ಸರಸಸಲ್ಲದು
ಬಂಟರನಾಳುವಗೆ ಲೋಭತನವದುಸಲ್ಲಂ ॥
ಕೋಂಟೆತಗ್ಗಿನೊಳು ಸಲ್ಲದು
ನಾಂಟ್ಯವುನಡುಹಗಲುಸಲ್ಲ ಶ್ರೀ ವಿರುಪಾಕ್ಷಾ ॥ ೧೯ ॥

ಕೊಟ್ಟವನ ಕೆಡಿಸಸಲ್ಲದು
ತಾಟಕರಲಿ ವೊಲುಮೆವೆಣ್ಣ ಬಿಟ್ಟರಸಲ್ಲಂ ॥
ಬೂಟಕದ ನಡತೆಸಲ್ಲದು
ದುಷ್ಟರ ನೆರೆನೇಂಬಸಲ್ಲ ಶ್ರೀ ವಿರುಪಾಕ್ಷಾ ॥ ೨೦ ॥

ಮಂತ್ರಿಗೆ ಮತ್ಸರಸಲ್ಲದು
ತಂತ್ರವಮಾಡುವನು ನಾಡ ಕೆಡಿಸಲುಸಲ್ಲಂ ॥
ಯಂತ್ರಕೆ ಓಲೆಯುಸಲ್ಲದು
ಮಂತ್ರಕ್ಕೌಷಧವು ಸಲ್ಲ ಶ್ರೀ ವಿರುಪಾಕ್ಷಾ ॥ ೨೧ ॥

ಕರಣಿಕನ ಹಗೆಯುಸಲ್ಲದು
ದೊರೆಯಾದಗೆ ಸರ್ವರಲ್ಲಿ ಮತ್ಸರಸಲ್ಲಂ ॥
ಸುರತಕೆ ಕತ್ತಲೆಸಲ್ಲದು
ಸಿರಿವಂತಗೆ ಲೋಭಸಲ್ಲ ಶ್ರೀ ವಿರುಪಾಕ್ಷಾ ॥ ೨೨ ॥

ಕೆರೆಯೂರವೇಲೆ ಸಲ್ಲದು
ಸೆರೆಯಲ್ಲಿದ್ದವಗೆ ಚಾಡಿಚಡಿತವುಸಲ್ಲಂ ॥
ಉರಗನಮಂದಿರಸಲ್ಲದು
ಬರಿಗೈಯಾತ್ಯಾಗಸಲ್ಲ ಶ್ರೀ ವಿರುಪಾಕ್ಷಾ ॥ ೨೩ ॥

ಕಂಡುದನಾಡಲುಸಲ್ಲದು
ದಿಂಡೆಯರನುಮನೆಯಕೂಡಿಕೊಂಡಿರಸಲ್ಲಂ ॥
ಭಂಡಗೆಗೌರವಸಲ್ಲದು
ಬಂಡಾಟದಬದುಕುಸಲ್ಲ ಶ್ರೀ ವಿರುಪಾಕ್ಷಾ ॥ ೨೪ ॥

ವೇಶಿಯರನಂಬಸಲ್ಲದು
ರಾಶಿಯನಳಿವಾಗಸುತ್ತ ಗಲಗದುಸಲ್ಲಂ ॥
ದೋಷವನುಗಳಿಸಸಲ್ಲದು
ಮಾಸಾಳಿಗೆಮುರಹುಸಲ್ಲ ಶ್ರೀ ವಿರುಪಾಕ್ಷಾ ॥ ೨೫ ॥

ಬಲ್ಲವರಚಲವುಸಲ್ಲದು
ಗುಳ್ಳಿಗಳಿದ್ದಲ್ಲಿಮನೆಯಹೊಗುವುದುಸಲ್ಲಂ ॥
ಹುಲ್ಲಂಬೆಳೆಯಿಸಸಲ್ಲದು
ಕಲ್ಲರೆಯೊಳುಕುದುರೆಸಲ್ಲ ಶ್ರೀ ವಿರುಪಾಕ್ಷಾ ॥ ೨೬ ॥

ಬೇಟದಾರಿಯೊಳುಸಲ್ಲದು
ಕೂಟದಮನ್ನೆಯರನೆಚ್ಚಿಕಾಳಗಸಲ್ಲದು ॥
ಊಟದೆಲೌಭ್ಯವುಸಲ್ಲದು
ಕಾಟದಕಜ್ಜಗಳುಸಲ್ಲ ಶ್ರೀ ವಿರುಪಾಕ್ಷಾ ॥ ೨೭ ॥

ಸೂಳೆಗೆಮಕ್ಕಳುಸಲ್ಲದು
ಕೋಳಿಯಕಾಳಗವು ದೊಡ್ಡಭಟನಿಗೆಸಲ್ಲಂ ॥
ಮಾಳಿಗೆಯೊಳಡಿಗೆಸಲ್ಲದು
ಪಾಳೆಯುಗಿಡದೊಳಗೆಸಲ್ಲ ಶ್ರೀ ವಿರುಪಾಕ್ಷಾ ॥ ೨೮ ॥

ಜಪದೆಡೆಗೆಗಲಗುಸಲ್ಲದು
ಕಪಟದಮಾನವರಕೂಡೆಮತ್ಸರಸಲ್ಲಂ ॥
ಕೃಪಣರನುಬೇಡಸಲ್ಲದು
ಅಪಕೀರ್ತಿಯುಗಳಿಸಸಲ್ಲ ಶ್ರೀ ವಿರುಪಾಕ್ಷಾ ॥ ೨೯ ॥

ಪಾತ್ರೆಯು ಸಣ್ಣದು ಸಲ್ಲದು
ಪಾತ್ರದ ಹೆಣ್ಣಿಂಗೆ ಮೇಲುಕೂದಲು ಸಲ್ಲಂ ॥
ಯಾತ್ರೆಯೊಳು ಕಲಹಸಲ್ಲದು
ಗಾತ್ರದ ಮುತ್ತಿಡಲುಸಲ್ಲ ಶ್ರೀ ವಿರುಪಾಕ್ಷಾ ॥ ೩೦ ॥

ವಿದ್ಯೆಯೊಳು ಗರ್ವಸಲ್ಲದು
ಪದ್ಯಂಗಳನೋದುವವಗೆ ನಾಚಿಕೆ ಸಲ್ಲಂ ॥
ಮಧ್ಯಸ್ಥಗೆ ಮರೆ ಸಲ್ಲದು
ವೈದ್ಯಗೆ ಚಳಿಜ್ವರವು ಸಲ್ಲ ಶ್ರೀ ವಿರುಪಾಕ್ಷಾ ॥ ೩೧ ॥

ಅರಸಿಗತಿಕೋಪ ಸಲ್ಲದು
ಪರರೂರಿಗೆ ಹೋಗಿ ವ್ಯಭಿಚರಿಸಸಲ್ಲದು ತಾಂ ॥
ಹರದಗೆ ಬಡತನ ಸಲ್ಲದು
ತರುಣಿಗೆ ಹೊರಕಾಲುಸಲ್ಲ ಶ್ರೀ ವಿರುಪಾಕ್ಷಾ ॥ ೩೨ ॥

ಪ್ರಜೆಗಳ ನೋಯಿಸಸಲ್ಲದು
ರುಜೆಯಲಿ ಬಿದ್ದವಗೆ ಬಾಯ ಸವಿಯದು ಸಲ್ಲಂ ॥
ಭಜಿಸದ ದೈವವು ಸಲ್ಲದು
ಯಜಮಾನಗೆ ಕಷ್ಟಸಲ್ಲ ಶ್ರೀ ವಿರುಪಾಕ್ಷಾ ॥ ೩೩ ॥

ಅಳತೆಯ ಬೀಯವು ಸಲ್ಲದು
ಮಲಿನವನುಟ್ಟಿರುವ ನೂಟಕಿಡಸಲ್ಲದು ತಾಂ ॥
ಬಳಗಕೆ ಲೋಭತೆ ಸಲ್ಲದು
ಬಳೆಗಾರಗೆ ನೀಟುಸಲ್ಲ ಶ್ರೀ ವಿರುಪಾಕ್ಷಾ ॥ ೩೪ ॥

ಸೂಳೆಗೆ ಧೂರ್ತತೆ ಸಲ್ಲದು
ವಾಳಿಯ ಹೋಗುವಗೆ ಯೇರುವಂದಣ ಸಲ್ಲಂ ॥
ಊಳಗ ಮೂರ್ಖಗೆ ಸಲ್ಲದು
ಆಳಪ್ಪಗೆ ಭೀತಿಸಲ್ಲ ಶ್ರೀ ವಿರುಪಾಕ್ಷಾ ॥ ೩೫ ॥

ಮಳೆಗಾಲದಿ ಸೆಲೆಸಲ್ಲದು
ಚಳಿಗಾಲದಿಮೆಚ್ಚುವೆಣ್ಣಬಿಟ್ಟಿರಸಲ್ಲಂ ॥
ಹೊಳೆಯೊತ್ತಿನೂರುಸಲ್ಲದು
ಎಳೆಪೆಣ್ಣಳ ನಗಿಸಸಲ್ಲ ಶ್ರೀ ವಿರುಪಾಕ್ಷಾ ॥ ೩೬ ॥

ಹೆಸರಿಡಿಸಿಕೊಳಲು ಸಲ್ಲದು
ಅಸಗನ ಕೂಲಿಯನು ಕೊಡದೆ ನೋಯಿಸಸಲ್ಲಂ ॥
ವ್ಯಸನಕೆಧಾವತಿ ಸಲ್ಲದು
ರಸಿಕಗೆದೊರೆತನವು ಸಲ್ಲ ಶ್ರೀ ವಿರುಪಾಕ್ಷಾ ॥ ೩೭ ॥

ಕಳ್ಳನಸಂಗತಿ ಸಲ್ಲದು
ಅಳ್ಳೆದೆಯಾದವಗೆ ಮಣಿಹಪ್ಪೈಕವುಸಲ್ಲಂ ॥
ಮುಳ್ಳಿಲಿಪಯಣವುಸಲ್ಲದು
ಸುಳ್ಳನನಂಬುವುದು ಸಲ್ಲ ಶ್ರೀ ವಿರುಪಾಕ್ಷಾ ॥ ೩೮ ॥

ಹಸಿದವಗೆ ಶೀಲಸಲ್ಲದು
ಪಶುಪತಿಯನು ಭಜಿಸುವಂಗೆ ಪಿಸುಣತೆಸಲ್ಲಂ ॥
ಪಶುವಿಗೆ ಕಳಿಲೆಯು ಸಲ್ಲದು
ವಸುಧಾಪತಿಗೆಡರುಸಲ್ಲ ಶ್ರೀ ವಿರುಪಾಕ್ಷಾ ॥ ೩೯ ॥

ಹೊಣೆ ಹರಿಕಾರಗೆಸಲ್ಲದು
ಮಣಿಹದಮಾನವನ ಹಗೆಯು ಸಲ್ಲದು ಧರೆಯೊಳ್ ॥
ಋಣಶೇಷ ಮುಳಿಸಸಲ್ಲದು
ಕಣೆಯೊಳಜಾಗ್ರತೆಯು ಸಲ್ಲ ಶ್ರೀ ವಿರುಪಾಕ್ಷಾ ॥ ೪೦ ॥

ವೇಶಿಯು ತಿರುಗಲುಸಲ್ಲದು
ಲೇಸಿನ ಹೆಂಗಳನು ಹೊರಗೆ ಕಳುಹಲುಸಲ್ಲಂ ॥
ದಾಸಿಯ ಸಂಗವುಸಲ್ಲದು
ಮಾಸಿದವಸ್ತ್ರಗಳ ಧರಿಸಸಲ್ಲದು ಪುತ್ರಾ ॥ ೪೧ ॥

ಪರುಪಿಗೆ ನಸುಹುಳಿಸಲ್ಲದು
ತಿರುಪೆಯು ಬೇಡುವಗೆ ನೆಲದಿಕಲ್ಲಿರಸಲ್ಲಂ ॥
ದೊರೆಯನು ಹುರುಡಿಸಸಲ್ಲದು
ಗುರುವಿಗೆ ವ್ಯವಹಾರಸಲ್ಲ ಶ್ರೀ ವಿರುಪಾಕ್ಷಾ ॥ ೪೨ ॥

ಗಿಣಿಯಂ ಸಾಕಲು ಸಲ್ಲದು
ಪಣವಂ ಕೊಡುವವಗೆ ಬಿರುಬುಗಾರಿಕೆಸಲ್ಲಂ ॥
ಕಣಿಕ ಬರಿದುಣ್ಣಸಲ್ಲದು
ರಣದೊಳು ಕೈಮರೆಯಸಲ್ಲ ಶ್ರೀ ವಿರುಪಾಕ್ಷಾ ॥ ೪೩ ॥

ಕೊಟ್ಟವಗೆ ಕೊಸರು ಸಲ್ಲದು
ಬಿಟ್ಟಿಯಮಾಡುವವ ಬಿರುಬಮಾಡಲುಸಲ್ಲಂ ॥
ದುಷ್ಟರನಂಬಿರಸಲ್ಲದು
ಬಟ್ಟೆಯೊಳೇಕಾಂತಸಲ್ಲ ಶ್ರೀ ವಿರುಪಾಕ್ಷಾ ॥ ೪೪ ॥

ಉಪ್ಪಿಲ್ಲದೂಟಸಲ್ಲದು
ಕುಪ್ಪಸವನು ತೊಡದೆ ಗರತಿ ತಿರುಗಲುಸಲ್ಲಂ ॥
ತುಪ್ಪಂ ತೃಷ್ಣೆಗೆಸಲ್ಲದು
ಹೆಪ್ಪಿಲ್ಲದ ಮೊಸರುಸಲ್ಲ ಶ್ರೀವಿರುಪಾಕ್ಷಾ ॥ ೪೫ ॥

ತಳವಾರಂ ಕಳಸಲ್ಲದು
ಹೊಲವಂತಿರುಗುವನಕೈಯ ಹೊನ್ನಿರಸಲ್ಲಂ ॥
ಬೆಳಿಗೆ ಬಲು ಮಳೆಯು ಸಲ್ಲದು
ಒಳಲಂಚಕೆ ಪತ್ರಸಲ್ಲ ಶ್ರೀ ವಿರುಪಾಕ್ಷಾ ॥ ೪೬ ॥

ಮಾಗಿ ಕೋಗಿಲೆಗೆ ಸಲ್ಲದು
ರಾಗವ ಕಲಿಯುವವ ಬಹಳ ಹುಳಿಯುಣಸಲ್ಲಂ ॥
ತ್ಯಾಗಿಗೆ ಬಡತನ ಸಲ್ಲದು
ನಾಗನ ಕೆಣಕುವುದುಸಲ್ಲ ಶ್ರೀ ವಿರುಪಾಕ್ಷಾ ॥ ೪೭ ॥

ಇರುಳೌತಣ ಮುಣಸಲ್ಲದು
ತರುಣಿಯರನು ಕೇಳಿ ಬದುಕಮಾಡಲು ಸಲ್ಲಂ ॥
ಎರಕಕೆ ತಾಮ್ರವು ಸಲ್ಲದು
ಎರವಿನ ಬಂಗಾರಸಲ್ಲ ಶ್ರೀ ವಿರುಪಾಕ್ಷಾ ॥ ೪೮ ॥

ಹರದಗೆ ಬಡತನ ಸಲ್ಲದು
ಗುರುಹಿರಿಯರ ಕೂಡೆ ಗರ್ವಮತ್ಸರ ಸಲ್ಲಂ ॥
ದುರುಳನ ಸಂಗವು ಸಲ್ಲದು
ಅರೆಯೊಳು ಬಿದ್ದಿರಲು ಸಲ್ಲ ಶ್ರೀ ವಿರುಪಾಕ್ಷಾ ॥ ೪೯ ॥

ಬಿಸಿಲಿಂಗರಿಸಿನ ಸಲ್ಲದು
ವ್ಯಸನದ ಸವಿಗಾರವಿಟನು ಹುಳಿಯುಣಸಲ್ಲಂ ॥
ಎಸೆವಂಬು ಡೊಂಕುಸಲ್ಲದು
ಶಶಿಧರನಾನಿಂದೆ ಸಲ್ಲ ಶ್ರೀ ವಿರುಪಾಕ್ಷಾ ॥ ೫೦ ॥

ಗುರುವಿನೊಳು ಗರ್ವಸಲ್ಲದು
ಬರಗಾಲದಿ ಸೌಖ್ಯಗಳನು ಬಯಸಲುಸಲ್ಲಂ ॥
ಹರಿಹರ ವಿಭೇದಸಲ್ಲದು
ವರವೀಯದ ದೈವಸಲ್ಲ ಶ್ರೀ ವಿರುಪಾಕ್ಷಾ ॥ ೫೧ ॥

ರಾವುತಗೆ ಮರಹುಸಲ್ಲದು
ಗೋವುಗಳನು ಬಾಧೆಪಡಿಸಸಲ್ಲದು ಧರೆಯೊಳ್ ॥
ಮಾವುತಗಲಸತೆಸಲ್ಲದು
ಹಾವಡಿಗಾಲಸ್ಯಸಲ್ಲ ಶ್ರೀ ವಿರುಪಾಕ್ಷಾ ॥ ೫೨ ॥

ಕಾಟಕತನವದುಸಲ್ಲದು
ಆಟದ ಹೆಂಗಳನು ನೋಡಿ ಮೋಹಿಸಸಲ್ಲಂ ॥
ಪೋಟಗೆ ಸಾಧಕಸಲ್ಲದು
ಗೋಟಡಕೆಯು ವೀಳ್ಯಸಲ್ಲ ಶ್ರೀ ವಿರುಪಾಕ್ಷಾ ॥ ೫೩ ॥

ಒಲಿಯದಳ ರಾಗಸಲ್ಲದು
ಕುಲಗೇಡಗೆ ಹೆಣ್ಣುಕೊಟ್ಟು ಹೋರಲುಸಲ್ಲಂ ॥
ಹೊಲೆಯಳ ಸಂಗವುಸಲ್ಲದು
ಬಲವಂತನ ವೈರಸಲ್ಲ ಶ್ರೀ ವಿರುಪಾಕ್ಷಾ ॥ ೫೪ ॥

ಮುಪ್ಪಿಲಿ ಬಡತನಸಲ್ಲದು
ತಪ್ಪಿತಗಳ ಕಂಡುಕಂಡು ಮುಚ್ಚಲುಸಲ್ಲಂ ॥
ಕರ್ಪುರಕೆ ಎಣ್ಣೆಸಲ್ಲದು
ಒಪ್ಪದ ಕೆಲಸಗಳುಸಲ್ಲ ಶ್ರೀ ವಿರುಪಾಕ್ಷಾ ॥ ೫೫ ॥

ಒಲುಮುನಿಸು ಸತಿಗೆಸಲ್ಲದು
ಒಲುಮೆಯ ಸತಿಯನ್ನು ವಂಚಿಪುದು ತಾಂಸಲ್ಲಂ॥
ಕಲಹದ ಕೂಟವು ಸಲ್ಲದು
ಗೆಲವಿನೊಳನ್ಯಾಯಸಲ್ಲ ಶ್ರೀ ವಿರುಪಾಕ್ಷಾ ॥ ೫೬ ॥

ಕೆಸವೆಗೆ ನಸುಹುಳಿಸಲ್ಲದು
ವ್ಯಸನವು ಶೃಂಗಾರವರಿತ ಜಾಣಗೆಸಲ್ಲಂ ।
ಹುಸಿವನ ನಂಬಲುಸಲ್ಲದು
ಮುಸುಕಿನ ಗುದ್ದಾಟಸಲ್ಲ ಶ್ರೀ ವಿರುಪಾಕ್ಷಾ ॥ ೫೭ ॥

ಲಘುಟಿಪ್ಪಣಿ.

ಸೋಮೇಶ್ವರಶತಕ.

೧. ಸ್ಮಿತ–ನಗೆಯಿಂದಕೂಡಿದ, ಪ್ರೇಮಪೂರ್ಣವಾದ ಅಂಗವುಳ್ಳವನು. ೬. ಸ್ವಾದು–ಸಿಹಿ, ಕೂರ್ಪರೇ—ಪ್ರೀತಿಯುಳ್ಳವರುಂಟೆ? ೧೧. ನೃಪಂ—ಶಿಬಿ ಚಕ್ರವರ್ತಿ, ಗಿಡಗಕ್ಕೆ ಅಂಗವನ್ನು ಕೊಯ್ದುಕೊಟ್ಟನು. ಸಿರಿಯಾಳನು ತನ್ನ ಮಗನನ್ನು ಕಡಿದು ಮಾಂಸವನ್ನು ಶಿವನಿಗೆ ನೈವೇದ್ಯ ಮಾಡಿದನು. ೧೯. ಪೊಳಲೊಳ್—ಪಟ್ಟಣದಲ್ಲಿ, ಪೋರುಗೆಯ್ದು—ಹೋರಾಡಿ, ಪೇರು—ಹೊರಿಸು. ೨೧. ನ್ಯಗ್ರೋಧ—ಆಲದಬೀಜ, ಮಿಡಿ—ಹೀಚು, ಬಲ್ಲಿದನು–ಹಣಗಾರನು. ೨೨. ದ್ರೌಪದಿಯು ವಿರಾಟನಗರದಲ್ಲಿ ದಾಸಿಯಾಗಿದ್ದಳು, ಹರಿಶ್ಚಂದ್ರನು ಮಸಣಕ್ಕೆ ಕಾವಲಾಗಿದ್ದನು. ೨೫. ಉರ್ವಿಜೆ—ಸೀತೆ, ಬೃಹದ್ಭಾನಲ್ಲಿ—ಬೆಂಕಿಯಲ್ಲಿ, ಅಗ್ನಿಜೆ–ದ್ರೌಪದಿ. ೨೬. ಗೋತ್ರಾರಿ–ಇಂದ್ರ, ಬಕಾರಿ–ಭೀಮನು ೨೭. ಭಾರ್ಗವ—ಶುಕ್ರನು, ವಾಜಿಪ—ಕುದುರೆಯ ಚಾಕರನು, ಸುಧೆ—ಅಮೃತ. ೨೮. ಆಮ್ನಾಯ–ವೇದ, ಹೊಂಮಿಗ–ಚಿನ್ನದಮೃಗ. ೩೧. ಸ್ವರ್ಭಾನು–ರಾಹು, ಪುಂಡ—ಒಂದುಬಗೆ ಕಬ್ಬು. ೩೩. ರಹಿಗೆಟ್ಟಂ–ಫಲವನ್ನು ಕಳೆದುಕೊಂಡನು, ಅಹಿರಾಜಾತ್ಮಜೆ—ಉಲೂಪಿ. ೪೧. ಕೂರ್ಸಿಂಗ—ಕ್ರೂರವಾದಸಿಂಹ, ಆವಾಸ--ಮನೆ. ೪೮. ತಪನಂ–ಸೂರ್ಯನು, ಪಾದಪಗೂಳರ್–ಅಗ್ನಿಯು. ೪೬. ಅಕ್ಕುಲಜಂ–ಹೀನಕುಲದಲ್ಲಿಹುಟ್ಟಿದವನು, ಸೂರುಳ್–ಆಣೆ. ೭೫. ಪಿಸುಣಂ–ನೀಚನು. ೭೭. ಬರಡಂ–ಲೋಭಿ, ಗ್ರಾಮಸಿಂಹ–ನಾಯಿ. ೮೨. ಅರೆಮೆಯ್ವೆಣ್ಣು—ಮದುವೆಯಾದ ಹೆಂಡತಿ. ೯೮. ಏಡಿಸುತ್ತಾ—ಹಾಸ್ಯಮಾಡುತ್ತಾ.. ೧೦೧. ಪಚನಂಗೆಯ್ಯದೆ—ಸುಟ್ಟುಹಾಕದೆ? ೧೦೨. ಪತ್ತು ಇಂದ್ರಿಯಗಳು, ರಂಧ್ರ–ನವರಂಧ್ರಗಳು, ಎಂಟು–ಅಷ್ಟಮದಗಳು, ಏಳು–ಸಪ್ತವ್ಯಸನಗಳು, ಆರು–ಷಡ್ವರ್ಗ, ಐದು–ವಿಷಯಗಳು, ನಾಲ್ಕು—ಪುರುಷಾರ್ಥಗಳು, ಮೂರು–ಹೆಂಡತಿ ಮಗ ಮತ್ತು ಹಣ, ಎರಡು—ದ್ವೈತ. ೧೦೩. ಪೃಥುರೋಮೇಶ—ದೊಡ್ಡಮೀನು, ವಂಶ—ಬಿದುರು. ೧೦೫. ಪುಂಶ್ಚಲಿ—ವ್ಯಭಿಚಾರಿಣಿ ಸ್ತ್ರೀ, ಕುಲವೆಣ್ಣು–ಪತಿವ್ರತೆ. ೧೦೬. ಶಫರಿ—ಮೀನು, ವಕ್ತ್ರ–ಮುಖ, ವಿದ್ಯುನ್ನಿಭ—ಮಿಂಚಿಗೆ ಸಮ. ೫ ನೆಯ ಪದ್ಯದಲ್ಲಿ ೨ ನೇ ಲೈನಿನಲ್ಲಿ ಮದ ಎಂಬುದಕ್ಕೆ ಕದ ಎಂದು ಓದಿ.

ಸಿದ್ಧನೀತಿ.

೧. ಸುರಾಗಂ—ಕಲ್ಪವೃಕ್ಷ. ೩. ಅಗ್ಗಣಿ—ಅಘ್ರ್ಯೋದಕ, ವೆಗ್ಗಳದಿಂ—ಹೆಚ್ಚಾಗಿ. ೮. ಬಬ್ರ್ರ—ಬೊಬ್ಬುಳಿ, ಪೆಬ್ರ್ಯ್ಯಲ್—ದೊಡ್ಡಕಲಹವು. ೧೦. ಕುಂಬಿಡು—ನಮಸ್ಕರಿಸು, ಅರೆಯಿಕ್ಕದೆ—ಹೊಟ್ಟೆಯತುಂಬ ಬಡಿಸದೆ. ೧೮. ಬಿರ್ದಿನರು—ಬೀಯಗರು, ಸರಸವಾಣಿ—ಹಾಸ್ಯದನುಡಿ. ೧೯. ಆಮಯದೊಳ್—ರೋಗದಲ್ಲಿ. ೨೦. ಗುಣ್ಪು—ಆಳ, ಆರವೆ—ತೋಟ. ೨೧. ಎಲವ-ಬೂರುಗ, ಕಳವಿನಬಡವೆ ಕೊಳ್ಳಬೇಡ. ೨೨. ಕೊಂಡೆಯ—ಚಾಡಿ. ೨೬. ಹರೆಯ—ಪ್ರಾಯ. ೩೨. ನೆಳಲಗ್ಗಣಿ—ನೆರಳಿನಲ್ಲಿ ಹರಿದುಬಂದನೀರು. ೩೫. ಸುಯಿಧಾನ—ಶ್ರದ್ಧೆ (ಭಕ್ತಿ). ೩೬. ಸಂಕಲಿಗರ್—ಸೆರೆಯಲ್ಲಿರುವವರನ್ನು, ಮಾತನಾಡಿಸಬೇಡ. ೪೨. ಸುಂಕಿಗ—ಸುಂಕದವನು, ಲೆಂಕಿಗರು—ಸೇವಕರು, ಅಂಕಂ—ಯುದ್ಧವು. ೪೭. ಅಟ್ಟುಳಿಗಾದರನೆ—ಕಷ್ಟಕಾಲದಲ್ಲಿ ಸಹಾಯಮಾಡಿದವರನ್ನು. ೪೮. ಪೊಳ್ತರೆ—ಹೊತ್ತಾರೆ, ಅಳ್ತಿ—ಪ್ರೀತಿ. ೪೯. ಹೋಕರಿದು—ಆಗುಹೋಗುಗಳನ್ನು ತಿಳಿದು, ಶೋಕಿ—ದುಃಖಿಸುವವನು. ೫೦. ಒಕ್ಕಲನೆಸಗದಿರು—ವಾಸಮಾಡಬೇಡ. ೫೨. ಡಿಂಗರಂ—ಸೇವೆ, ಅರೆಯೊಳೊಂದಿದತಿಗುರು—ಬಂಡೆಗೆ ಬಳಿದ ಗಂಧ. ೫೩. ಚುನ್ನಂ—ಕಪ್ಪದ್ರವು, ಗೇಹ—ಮನೆ. ೫೮. ಗುರುವಿಗೆ ಆರುಸುತ್ತೂ, ಕರವಾಳ್ಗೆ—ಕತ್ತಿಗೆ, ೫೯. ಭವಿಗೆ—ಮತಾಂತರದವರಿಗೆ, ಆಗಸ್ಕರ—ಅಪರಾಧಿ, ಶಯಿತ—ಮಲಗಿರುವವನು. ೬೧. ಅಸಿಯನು—ಕತ್ತಿಯನ್ನು. ೬೨. ತಳ್ಳಿಯೊಳಂ—ಕಷ್ಟದಲ್ಲಿಯೂ, ಕರುಂಬಿ—ಆಸೂಯೆಗೊಂಡು. ೬೪. ತುತ್ತಿಂಗೆ ಒಲ್ಯೆಸುವವರನ್ನು ಅಳಲಿಸದವನು. ೬೭. ಸೊಲ್ಲಿನಲ್ಲೊಂದು, ಕಾರ್ಯದಲ್ಲಿ ಒಂದು, ಮನಸ್ಸಿನಲ್ಲಿ ಒಂದು ಈರೀತಿ ಮಾಡುವವನು. ೭೦. ತದುರ್ಗ ಕುಷ್ಠರೋಗ, ಬರ್ದಯರು—ಮುದುಕಿಯರು. ೭೬. ಕಿರುಕುಣಿ—ಕಿರಿಯಬೆಟ್ಟು, ಪಿರಿಪೊಡೆ—ದೊಡ್ಡಹೊಟ್ಟೆ, ಪೊರವಲ್ಲ—ಹೊರಕ್ಕೆ ಬಂದಿರುವ ಹಲ್ಲಿನ, ಇವೆಲ್ಲದುರ್ಲಕ್ಷಣಗಳು. ೯೯. ಶರ್ಮಾವಹ—ಸುಖವನ್ನುಂಟುಮಾಡುವ.

ವಿರೂಪಾಕ್ಷನೀತಿ.

೧. ರುಜೆ—ರೋಗ. ೩. ಬೇಹಾರ—ವ್ಯಾಪಾರ. ೧೩. ಹರದಗೆ—ವ್ಯಾಪಾರಿಗೆ. ೧೬. ಮಾಣದೆ ಇರುವ ಮಳೆ ಎಳ್ಳಿಗೆ ಸಲ್ಲದು. ೧೭ ಕೊನಬುಗಾರಿಕೆ—ಜಂಭ (ಸೊಗಸುಗಾರಿಕೆ) ಕಾಟಕ—ಕಲಹ. ೨೪. ದಿಂಡೆಯರು—ದುರ್ವೃತ್ತಿಯವರು. ೨೫. ಗಲಗು—ಗಲಭೆ(ಶಬ್ದ) ಮಾಸಾಳು—ತಿಂಗಳ ಸಂಬಳದವನು. ೩೪. ಬೀಯ—ವೆಚ್ಚ. ೩೫. ದಾಳಿ—ಜೈತ್ರಯಾತ್ರೆ. ಆಂದಣ—ಪಾಲಕಿ. ೩೭. ಅಸಗ—ಅಗಸನು. ೩೮. ಅಳ್ಳೆದೆಯಾದವಗೆ—ಹೆದರುವವನಿಗೆ. ೪೨. ಪರುಪು—ಬೇಳೆ(ತೊವ್ವೆ).

ನೀತಿಸಾರ

ದ್ವಿತೀಯ ಭಾಗ

---

೧. ಶಿವಭಕ್ತಿಸಾರ

೨. ನಿಜಲಿಂಗಶತಕ

ಶಿವಭಕ್ತಿಸಾರ.

ಶ್ರೀಗಿರಿಜೆ ಗಭಿರಾಮ ವೆನಿಸುವ
ಯೋಗಿಗಳ ಹೃದಯದಲಿ ಚರಿಸುವ
ಆಗಮ ಶ್ರುತಿತತಿಗಳರಸುವ ನಿಮ್ಮ ಪದಯುಗವ ॥
ರಾಗರಸ ರುಚಿವಚನ ರಚನೆಗ
ಳಾಗಿನುತಿಸುವ ಮತಿಯನಿತ್ತುಸ
ರಾಗದಲಿ ಶಂಕರನೆ ರಕ್ಷಿಸು ನಮ್ಮ ನನವರತ ॥ ೧ ॥

ಗೌರಿ ಶೈಲಕುಮಾರಿ ಜಗದಾ
ಧಾರಿ ಶಾಂಭವಿ ಗುಹಜನನಿ ಹ್ರೀಂ
ಕಾರಿ ಮಾಹೇಶ್ವರಿ ಮೃಡಾನಿ ಭವಾನಿ ಶರ್ವಾಣೀ ॥
ಶೌರಿ ಸೋದರಿ ಸರ್ವಮಂಗಳೆ
ಚಾರುಗಾತ್ರೆ ಯಪರ್ಣೆ ಪಾರ್ವತಿ
ಸಾರತರಮತಿ ಯಿತ್ತು ರಕ್ಷಿಸು ನಮ್ಮನನವರತ ॥ ೨ ॥

ಗಜವದನ ಹೇರಂಬ ಗಣಪತಿ
ಭುಜಗ ಭೂಷಣ ವಿಘ್ನಮದ ಸಾ
ಮಜಕೆ ಪಂಚಾನನ ಮಹೇಶ್ವರ ಪುತ್ರ ಶುಭಗಾತ್ರ ॥
ಸುಜನಪಾಲಕ ವರವಿನಾಯಕ
ಭಜಿಸಿ ಪೂಜಿಸಿ ನಮಿಸಿ ನುತಿಸುವೆ
ನಿಜಮತಿಯ ನೆನಗಿತ್ತು ರಕ್ಷಿಸು ನಮ್ಮನನವರತ ॥ ೩ ॥

ಶರದಚಂದ್ರನ ಕಿರಣಗಳ ಧಿ
ಕ್ಕರಿಪ ಶುಕ್ಲಾಂಬರದ ಪದನೂ
ಪುರದ ಕಾಂಚಿಯ ಕಂಕಣದ ಕಿಂಕಿಣಿಯ ಝೇಂಕೃತಿಯ ॥
ಕೊರಳಹಾರದ ಕರ್ಣಪೂರದ
ಕರದ ವೀಣೆಯ ಪುಸ್ತಕದ ಶುಭ
ಕರ ವದನೆ ವಾಗ್ದೇವಿ ರಕ್ಷಿಸು ನಮ್ಮನನವರತ ॥ ೪ ॥

ಮೂಲಪುರುಷ ಕರಾಳವದನ ತ್ರಿ ।
ಶೂಲಡಮುರುಗಹಸ್ತ ಕೊರಳ ಕ
ಪಾಲಮಾಲಾಧರ ಸುರಾರ್ಚಿತ ಕಾಶಿಯಧಿನಾಥ ॥
ಕಾಲಭಯಹರ ಕರ್ಮಭಯಹರ
ವ್ಯಾಳಭಯಹರ ವ್ಯಾಘ್ರಭಯಹರ
ಕಾಲಭೈರವ ದೇವ ರಕ್ಷಿಸು ನಮ್ಮನನವರತ ॥ ೫ ॥

ರಜತಗಿರಿಗೆಸಮಾನ ದೇಹದ
ಭುಜಗವಲಯದ ಕಾಲುಕಡಗದ
ಅಜನಲೋಕವ ಚುಂಬಿಸುವ ಸಿರಿಮೊಗವ ಕೋಡುಗಳ ॥
ತ್ರಿಜಗರಕ್ಷಕ ನೆನಿಪ ಬಿರುದಿನ
ಧ್ವಜಪಟದ ಬಾಲದ ವಿಲಾಸದ
ಕುಜನಹರ ವೃಷಭೇಶ ರಕ್ಷಿಸು ನಮ್ಮನನವರತ ॥ ೬ ॥

ದಕ್ಷ ಶಿಕ್ಷಾಧ್ಯಕ್ಷ ಕರುಣಾ
ಪೇಕ್ಷ ಸಜ್ಜನರಕ್ಷ ದುರಿತವಿ
ಪಕ್ಷ ಶುಭಗುಣ ಲಕ್ಷಣೇಕ್ಷಣವೀರ ವಿಜಯಜಯಾ ॥
ಅಕ್ಷಯಾನ್ವಿತ ಬಾಣಧರ ಹರಿ
ಯಕ್ಷ ಶೈವಾಗಮಪ್ರಸಿದ್ಧ ಮು
ಮುಕ್ಷು ವೀರೇಶ್ವರನೆ ರಕ್ಷಿಸು ನಮ್ಮನನವರತ ॥ ೭ ॥

ಹರನ ವರದಕುಮಾರ ಚಾಮೀ
ಕರದ ವರ್ಣಶರೀರ ತೇಜೋ
ಭರಿತ ಪಾರಾವಾರ ಷಣ್ಮುಖ ದೇವ ರಣಧೀರ ॥
ಶರವಣೋತ್ಥಿತ ಶೂರ ಭವಸಾ
ಗರಕೆ ಬಡಬಾಕಾರ ಗುಹ ಪತಿ
ಕರಿಸಿ ಯಾದರದಿಂದ ರಕ್ಷಿಸು ನಮ್ಮನನವರತ ॥ ೮ ॥

ವಿವಿಧಕಾರ್ಯದ ವಚನ ರಚನೆಯ
ಸವಿನುಡಿಯ ಸರಸೋಕ್ತಿಲಕ್ಷಣ
ನವವಿಧಾಮಲಭಕ್ತಿಯುಕ್ತಿಯ ಲಕ್ಷ್ಯಭಾವಗಳ ॥
ವಿವರಗಳ ನಾನರಿಯೆ ಗೌರೀ
ಧವನಕೃಪೆಯಲಿ ಪೇಳ್ವೆನಿದ ಬ
ಲ್ಲವರು ತಪ್ಪೆನದಂತೆ ರಕ್ಷಿಸು ನಮ್ಮ ನನವರತ ॥ ೯ ॥

ಶಂಕರನೆ ಭವಹರನೆ ದುರಿತಭ
ಯಂಕರನೆ ಪುರಹರನೆ ಶಶಿಧರ
ಪಂಕಜಾಸನ ವಿಷ್ಣು ಸುರಮುನಿವರರು ಪೂಜಿಸಲು ॥
ಪಂಕಜೋಪಮಪಾದಯುಗಳದ
ಲಂಕೃತಿಯ ಸೌಭಾಗ್ಯರಚನೆಯ
ಸಂಖ್ಯೆ ಬಣ್ಣಿಸಲರಿದು ರಕ್ಷಿಸು ನಮ್ಮನನವರತ ॥ ೧೦ ॥

ಕರದುಗುರ ಕೊನೆಯೊಳಗೆ ಬ್ರಹ್ಮನ
ಶಿರವರಿದು ನೀಂಪಿಡಿದೆ ಮಹದೇ
ವರೆ ನಯನದಗ್ನಿಯಲಿ ಭಸ್ಮೀಕೃತನು ಮನ್ಮಥನು ॥
ಶಿರದಜಡೆಯಲಿ ಪುಟ್ಟಿ ಬಂದವ
ತರಿದುಬಿಸುಟನು ದಕ್ಷನನು ಪುರ
ಹರನೆ ಶಂಕರ ದೇವ ರಕ್ಷಿಸು ನಮ್ಮನನವರತ ॥ ೧೧ ॥

ನೋಡುವುದು ಸಾಲೋಕ್ಯ ಪೂಜೆಯ
ಮಾಡುವುದು ಸಾಮೀಪ್ಯ ಧ್ಯಾನವ
ಮಾಡಿ ಹೃತ್ಕಮಲದಲಿ ನಿಲಿಪ ಸಮಾಧಿಸಾರೂಪ್ಯ ॥
ಕೂಡಿ ಭಕ್ತರೊಳಾಡಿ ನುತಿಗಳ
ಮಾಡುವುದೆ ಸಾಯುಜ್ಯ ನಿಮ್ಮನು
ಬೇಡಿಕೊಂಬೆನು ಶಿವನೆ ರಕ್ಷಿಸು ನಮ್ಮನನವರತ ॥ ೧೨ ॥

ಕಮಲಭವವಂದಿತನೆ ಗಿರಿಜಾ
ರಮಣ ಭಕ್ತಕುಟುಂಬಿ ದೇವೋ
ತ್ತಮ ತ್ರಿಯಂಬಕ ಶೂಲಿ ಪರಮೇಶ್ವರ ಕೃಪಾಜಲಧಿ ॥
ಉಮೆಯರಸ ಕೈಲಾಸಪತಿ ನಿರು
ಪಮ ನಿರಂಜನ ನಿತ್ಯ ನಿರ್ಮಲ
ಅಮಿತಮಾಯಾಮಹಿಮ ರಕ್ಷಿಸು ನಮ್ಮನನವರತ ॥ ೧೩ ॥

ಶರಧಿಮಥನದೊಳುದಿಸಿ ವಿಷವಾ
ವರಿಸುತ್ತಿರೆ ಕಂಡು ದೇವಾ
ಸುರರು ಮುನಿಗಳು ಬಂದು ನಿಮ್ಮಡಿಗೆರಗಿ ಮರೆಹೊಗಲು ॥
ಪರಮಕರುಣಾಸಿಂಧು ಭಕ್ತರ
ಪೊರೆದುಗರಳವ ಕರೆದು ಕಂಠದಿ
ಧರಿಸಿದೈ ಪರಮಾತ್ಮ ರಕ್ಷಿಸು ನಮ್ಮನನವರತ ॥ ೧೪ ॥

ಪರಮವೈಷ್ಣವನೆನಿಸಿದರ್ಜುನ
ಹರುಷಪುಳಕದೊಳಿಂದ್ರಕೀಲದೆ
ಧರೆಯೊಳಂಗುಷ್ಠಾಗ್ರದಲಿ ನಿಂದಿರುತ ಕರಯುಗವ ॥
ಶಿರದೊಳಾನುತಜಪಿಸಿ ಪಂಚಾ
ಕ್ಷರಿಯ ತಪಸಿನೊಳಿರ್ದನವನಿಗೆ
ವರವ ನೀ ಪಾಲಿಸಿದೆ ರಕ್ಷಿಸುನಮ್ಮನನವರತ ॥ ೧೫ ॥

ಶಿರಗಳಂಬರ ಕುಕ್ಷಿಸಾಗರ
ಧರಣಿ ಪೀಠ ಸುಧಾಂಶುಪಾವಕ
ತರಣಿನಯನ ಭುಜಂಗಳೇದಶದಿಕ್ಕು ವೇದಮುಖ ॥
ಚರಣತಳ ಪಾತಾಳ ತಾರಾ
ಭರಣ ಗ್ರಹಗಣಕುಸುಮ ವಿಶ್ವೋ
ದ್ಧರಣ ಗೌರೀರಮಣ ರಕ್ಷಿಸುನಮ್ಮ ನನವರತ ॥ ೧೬ ॥

ಧರಣಿಯೇರಥ ಗಾಲಿಗಳು ಹಿಮ
ಕಿರಣಭಾಸ್ಕರ ರಜನಿಸಾರಥಿ
ತುರಗಗಳು ಶ್ರುತಿತತಿಗಳುರುಹೇಮಾದ್ರಿಯೇಚಾಪ ॥
ಉರಗಪತಿಯೇ ಸೂತ್ರ ಲಕ್ಷ್ಮೀ
ವರನೆನಿಮ್ಮಯ ಬಾಣ ತ್ರಿಪುರವ
ತರಿದಸರ್ವೋತ್ತಮನೆ ರಕ್ಷಿಸು ನಮ್ಮನನವರತ ॥ ೧೭ ॥

ಈಶ ನುತವಾಗೀಶ ದುರಿತವಿ
ನಾಶ ಪುಷ್ಕರಕೇಶ ನಾಗವಿ
ಭೂಷ ಸಜ್ಜನಪೋಷ ನಿಗಮವಿಲಾಸ ಶ್ರುತಿಘೋಷ ॥
ಕ್ಲೇಶನಾಶ ಮಹೇಶ ಶೈಲನಿ
ವಾಸ ಪಂಚಬ್ರಹ್ಮಮಯ ಸ
ರ್ವೇಶ ಬಹುಭೂತೇಶ ರಕ್ಷಿಸು ನಮ್ಮನನವರತ ॥ ೧೮ ॥

ಸರ್ವಲೋಕಾರಾಧ್ಯ ಪುರಹರ
ಸರ್ವನಿಗಮಾಗಮ ಕಗೋಚರ
ಸರ್ವಮಂಗಳೆಯರಸ ಭವಹರ ಸರ್ವಶಕ್ತಿಧರಾ ॥
ಸರ್ವಮಂತ್ರಶರೀರ ಶಂಕರ
ಸರ್ವಶಾಸ್ತ್ರಾಗಮ ಗಣಸ್ತುತ
ಸರ್ವದಾ ನಂಬಿದೆನು ರಕ್ಷಿಸು ನಮ್ಮನನವರತ ॥ ೧೯ ॥

ಮೂರುಮೂರ್ತಿಗೆ ಮೂಲಕಾರಣ
ಮೂರುಗುಣಗಳಿಗಾದಿಕಾರಣ
ಮೂರುಲೋಕದ ಕಾರ್ಯಕಾರಣ ಪಾರ್ವತೀರಮಣಾ ॥
ಮೂರುಕಾಲದ ಕರ್ಮಕಾರಣ
ಮೂರುವೇದಾಗಮ ಪರಾಯಣ
ಮೂರುಕಣ್ಣಿನ ಮೂರ್ತಿ ರಕ್ಷಿಸು ನಮ್ಮನನವರತ ॥ ೨೦ ॥

ಕರನಯನ ಸರ್ವಾಂಗ ಗುಹ್ಯಾಂ
ತರ ಮನೋವಾಕ್ಕಾಯ ಕರದಲಿ
ಅರಿತು ಅರಿಯದೆಮಾಡಿದಪರಾಧಗಳನೆಲ್ಲವನು ॥
ಮರೆತು ರಕ್ಷಿಪ ಬಿರುದು ನಿನ್ನದು
ಹರನೆ ಗಂಗಾಧರನೆ ಗೌರೀ
ವರನೆ ಶಶಿಶೇಖರನೆ ರಕ್ಷಿಸು ನಮ್ಮನನವರತ ॥ ೨೧ ॥

ತೊಳಗಿ ಬೆಳಗುವ ಚಂದ್ರಕೋಟಿಯ
ಕಳೆಯ ವಲಯದ ಕಾಂತಿಯಲಿ ಥಳ
ಥಳಿಪ ಚರ್ಮಾಂಬರದ ದಂತದ್ಯುತಿಯ ಕೌಮುದಿಯ ॥
ಬೆಳಗಿಡುವ ಕೆಂಜಡೆಯ ನಿಜಕರ
ತಳೆದ ಹರಿಣಮೃಗಾಕ್ಷಮಾಲೆಯ
ತಳೆದ **ಸದ್ಯೋಜಾತ** ರಕ್ಷಿಸು ನಮ್ಮನನವರತ ॥ ೨೨ ॥

ಹೇಮಕೋಟಿಪ್ರಭೆಯೊಳೊಪ್ಪುವ
ರಾಮಣೀಯಕ ಕುಂಕುಮಾಂಗದ
ಸಾಮಜಾಜಿನದಮಲದಂತದ್ಯುತಿಯ ಕಾಂತಿಗಳ ॥
ವಾಮದೇವಾನನದ ಚಂದ್ರಕ
ಶಾಮಕುಟವರಪರಶುಧರನಾ
ಲಾಮನೋಜ್ಞಸುರೂಪ ರಕ್ಷಿಸು ನಮ್ಮನನವರತ ॥ ೨೩. ॥

ನೀಲಮೇಘದ ಕಾಯಕಾಂತಿಯ
ಥಾಳಿಸುವ ದಂಷ್ಟ್ರಾಳಿಗಳಮಣಿ
ಮಾಲಿಕೆಯ ನೂಪುರದ ಪಾಶಾಂಕುಶದ ಡಮರುಗದ ॥
ಶೂಲ ಬ್ರಹ್ಮಕಪಾಲ ಖಡ್ಗ ಕ
ರಾಳನಯನದ**ಘೋರಮುಖನೆ** ಕೃ
ಪಾಳು ಪರಮೋದಾರ ರಕ್ಷಿಸು ನಮ್ಮನನವರತ ॥ ೨೪ ॥

ಸ್ಫುರಿಪ ಚಂದ್ರನ ಜರೆವಕಾಂತಿಯ
ಕರದ ಡಮರುಗ ಖಡ್ಗಧನು ಶರ
ಧರಿಸಿರುವ ರಕ್ತಾಂಬರದ ಫಣಿಭೂಷಣದ್ಯುತಿಯ ॥
ಕೊರಳಕಪ್ಪಿನ ದೇವನೀಂ **ತ**
ತ್ಪುರುಷಮುಖದಲಿ ಸುಧೆಯಸೂಸುತ
ಹರನೆ ಗಂಗಾಧರನೆ ರಕ್ಷಿಸು ನಮ್ಮನನವರತ ॥ ೨೫ ॥

ಕರದಿ ಧರಿಸಿದ ಖಡ್ಗ ಧನು ಶರ
ಹರಿಣ ಶೂಲ ಕಪಾಲಗಳ ವಿ
ಸ್ತರದ ಚರ್ಮಾಂಬರದ ಜಡೆಗಳವಟ್ಟ ಶಶಿಕಳೆಯ ॥
ಕಿರಣಲಹರಿಯ ಧವಳಗಂಗೆಯ
ಮೆರೆಯೆನಿಪ **ಈಶಾನವಕ್ತ್ರದ**
ಪರಮಶಿವ ಸರ್ವೇಶ ರಕ್ಷಿಸು ನಮ್ಮನನವರತ ॥ ೨೬ ॥

ಪಂಚಮುಖ ಈಶಾನ ತ್ರಿಣಯನ
ಪಂಚ ಪಂಚಾಕ್ಷರಿಯ ಮೂರುತಿ
ಪಂಚವರ್ಣದಪಕ್ಷಿ ಪಂಜರದಲ್ಲಿ ತೋರ್ಪಂತೆ ॥
ಪಂಚವಿಂಶತಿ ತತ್ವ ದೇಹದಿ
ಪಂಚಕೋಶದ ನಡುವೆನೆಲಸಿ ಪ್ರ
ಪಂಚವೆನಿಸುವ ದೇವರಕ್ಷಿಸು ನಮ್ಮನನವರತ ॥ ೨೭ ॥

ವೇದಪಾದಸ್ತವದಿ ಪೇಳಿದ
ಸಾದರದಿ ಜೈಮಿನಿ ಮಹಾಮುನಿ
ಯಾದಿನಾರಾಯಣನು ಪ್ರಾರ್ಥಿಸಿ ನಯನಕಮಲದಲಿ ॥
ಆದಿಮೂಲವಿದೆಂದುದೇವರ
ಪಾದಪದ್ಮವ ನರ್ಚಿಸಿದ ಶಿವ
ನೀ ದಯಾಂಬುಧಿಶರಣು ರಕ್ಷಿಸು ನಮ್ಮನನವರತ ॥ ೨೮ ॥

ಮೂರುಲೋಕಂಗಳಿಗೆ ಅಧಿಪತಿ
ಶೂರಪದ್ಮಾಸುರನ ದಳಪತಿ
ತಾರಕಾಸುರನೆಂಬ ದನುಜನಕಂಡುಖತಿಗೊಂಡು ॥
ಭೂರಿಭುಜಬಲನೆನಿಪನಿನ್ನಕು
ಮಾರಕನ ದೆಸೆಯಿಂದ ಕೊಲ್ಲಿಸಿ
ಮೂರುಲೋಕವ ಪೊರೆದೆ ರಕ್ಷಿಸು ನಮ್ಮನನವರತ ॥ ೨೯ ॥

ಶರ್ವ ಸರ್ವಮುಖ್ಯೈಕವಿಗ್ರಹ
ಪಾರ್ವತೀಪ್ರಿಯ ಶಿವಪುರಾರಿ ಸು
ಪರ್ವರಕ್ಷಕ ಕಾಲಕಂಠ ತ್ರಿಶೂಲಿ ಪಂಚಮುಖಾ ॥
ಉರ್ವಿಪಾವನ ಭಕ್ತಜೀವನ
ಪೂರ್ವಸಂಚಿತಪಾಪನಾಶನ
ಪರ್ವತಾಧಿಪ ಶಿವನೆ ರಕ್ಷಿಸು ನಮ್ಮನನವರತ ॥ ೩೦ ॥

ಮುನಿ ಮೃಕಂಡುಕುಮಾರ ಸರ್ವಾ
ತ್ಮನುರೆ ಶಿವನೆಂದರಿತು ಪೂಜಿಸಿ
ಜನನಮರಣವ ಕಳೆದು ನಿಂದಿಹನಯ್ಯ ಸ್ಥಿರವಾಗಿ ॥
ಧನದ ನರ್ಚಿಸಿ ಭಜಿಸಿಪಡೆದನು
ಕನಕ ಮಣಿಮೊದಲಾದ ನಿಧಿಗಳ
ಜನಜನಿತವರಿತಿರಲು ರಕ್ಷಿಸು ನಮ್ಮನನವರತ ॥ ೩೧ ॥

ಏಸುಜನ್ಮದ ಪುಣ್ಯಫಲವೋ
ಭೂಸುರನು ಶಿವರಾತ್ರಿಯೊಳು ಸಂ
ತೋಷದಲಿ ವೇಶ್ಯೆಯನಿವಾಸದೊಳಿರುತ ಮನದಲ್ಲಿ ॥
ಈಶಪೂಜಾಸ್ತವದಮಹಿಮೆಯ
ಬೇಸರದೆ ನುಡಿಯಲ್ಕೆನೀಂ ಕೈ
ಲಾಸಪದವಿಯನಿತ್ತೆ ರಕ್ಷಿಸು ನಮ್ಮನನವರತ ॥ ೩೨ ॥

ಆರು ನೋಡ ಲಣೋರಣೀಯನು
ಆರು ಪರ ಮಹತೋ ಮಹೀಯನು
ತೋರಿತೋರದ ಸಚ್ಚಿದಾನಂದೈಕವಿಗ್ರಹನು ॥
ಮೂರವಸ್ಥೆಯ ಮೀರಿ ಸಹಜಾ
ಕಾರ ಜ್ಯೋತಿರ್ಮಯನೆನಿಪಕಾ
ಮಾರಿ ನೀಮೆಯ್ದೋರಿ ರಕ್ಷಿಸು ನಮ್ಮನನವರತ ॥ ೩೩ ॥

ಶ್ರುತಿಯು ಮುಪನಿಷದರಸಿಕಾಣವು
ಸ್ಮೃತಿಯು ಶಾಸ್ತ್ರಗಳೊರಲಿ ದಣಿಯವು
ಅತಿಶಯಪುರಾಣಾಗಮಂಗಳು ಮಂತ್ರಕೋಟಿಗಳು ॥
ಸತತ ಪೊಗಳುವು ವಂಬಿಕಾಪತಿ
ಗತಿಪಶೂನಾಂಪತಿಯೆ ಎನ್ನಯ
ಮತಿಗೆ ಮಂಗಳವಿತ್ತು ರಕ್ಷಿಸು ನಮ್ಮನನವರತ ॥ ೩೪ ॥

ಸುಧೆಯ ರುಚಿಯನು ಸುರರು ಚಂದ್ರನು
ನುದಿಸುವುದನು ಚಕೋರಸಂತತಿ
ಪದುಮವನವನು ಹಂಸೆಗಳು ಪುರುಷನನು ಕುಲವನಿತೆ ॥
ನಿಧಿಯನಾರ್ತನು ಬಯಸುವಂದದಿ
ಹೃದಯದೊಳು ನಾಂ ನಿನ್ನ ನೆನೆವೆನು
ಮದನರಿಪು ಮೆಯ್ದೋರಿ ರಕ್ಷಿಸು ನಮ್ಮನನವರತ ॥ ೩೫ ॥

ತೊಡೆಯ ಗೌರಿಯ ಜಡೆಯ ಗಂಗೆಯ
ನುಡಿಯ ಬೆಳಕಿನ ಗಳದ ಕಪ್ಪಿನ
ಪಿಡಿದಶೂಲದ ಯೆಡಗಡೆಯ ಘುಡುಘುಡಿಪಡಮುರುಗದ ॥
ಮುಡಿಯ ಚಂದ್ರನ ಕಡೆಯ ನಾಗರ
ಪೆಡೆಯ ಕಾಂಚನ ರುಂಡಮಾಲೆಯ
ಒಡೆಯನೆನಿಸುವ ಮೃಡನೆ ರಕ್ಷಿಸುನಮ್ಮನನವರತ ॥ ೩೬ ॥

ಯಜ್ಞಕರ್ತೃವೆ ಯಜ್ಞಭೋಕ್ತೃವೆ
ಯಜ್ಞಪೂರ್ತಿಯೆ ಯಜ್ಞಸಾಧಕ
ಯಜ್ಞಬೋಧನ ಯಜ್ಞಮೂರ್ತಿಯೆ ಯಜ್ಞ ಯಜ್ಞಾಂಗ ॥
ಯಜ್ಞದಾದಿಯೆ ಯಜ್ಞದಂತ್ಯನೆ
ಯಜ್ಞವಿಜ್ಞಾನ ಸ್ವರೂಪನೆ
ಯಜ್ಞಪುರುಷನೆ ನೀನು ರಕ್ಷಿಸುನಮ್ಮನನವರತ ॥ ೩೭ ॥

ಆರುವರ್ಣದೊಳಾಡಿ ತೋರುವೆ
ಸೇರಿಯೈದರೊಳಂಜಿರಂಜಿಪೆ
ನಾರಿ ನೊಂದರೊಳೊಂದಿ ಅವ್ವಯನೆನಿಸಿ ನೀತೋರ್ಪೆ ॥
ಬೇರೆಬೇರೆ ಉಪಾಸನೆಗೆ ಮೆ
ಯ್ದೋರಿತೋರದ ಶಿವಪರಾತ್ಪರ
ಮೂರುಕಣ್ಣಿನ ಮಹಿಮ ರಕ್ಷಿಸುನಮ್ಮನನವರತ ॥ ೩೮ ॥

ಅನುಪಮಾನಂದಾಬ್ಧಿ ಚಂದ್ರಮ
ಮುನಿಜನಕೆ ಮೆಯ್ದೋರುವನುಪಮ
ಜನನಮರಣವಿದೂರ ಚಿನ್ಮಯ ರಮ್ಯಗುಣಧಾಮ ॥
ಘನಕೆ ಘನವೆನಿಸುವ ಪರಾಕ್ರಮ
ದಿನಪಕೋಟಿಸುತೇಜ ವಿಭ್ರಮ
ನೆನಿಪ ಧೂರ್ಜಟಿ ದಯದಿ ರಕ್ಷಿಸುನಮ್ಮನನವರತ ॥ ೩೯ ॥

ಸುರನರರು ಕಿಂನರರು ವಿದ್ಯಾ
ಧರರು ಖಚರರು ಮುನಿವರರು ಕಿಂ
ಪುರುಷಯಕ್ಷರು ಗರುಡ ದಿಕ್ಪಾಲಕರು ರಾಕ್ಷಸರು ॥
ನಿರುತನಿಮ್ಮನು ಭಜಿಸಿ ಪೂಜಿಸಿ
ವರವಪಡೆದರು ಶಿವನೆ ನಿನ್ನಯ
ಶರಣನಲ್ಲವೆ ನಾನು ರಕ್ಷಿಸುನಮ್ಮನನವರತ ॥ ೪೦ ॥

ತಂದೆಬಾರೈ ಚಂದ್ರಶೇಖರ
ಎಂದ ವಚನಕೆ ಪಾಪಪರಿಹರ
ಬಂದು ನಿಲುಮಂದಾಕಿನೀಧರ ಸರ್ವಸಿದ್ಧಿಕರ ॥
ಮುಂದೆನಗೆ ಶುಭತತಿ ಪರಂಪರೆ
ಯಿಂದ ಕೈಸಾರುವುದುಶಂಕರ
ದಂದಶೂಕಾಭರಣ ರಕ್ಷಿಸುನಮ್ಮನನವರತ ॥ ೪೧ ॥

ಪ್ರತ್ಯಗಾತ್ಮ ಪರಾತ್ಮನದ್ವಯ
ಸತ್ಯನಿತ್ಯಜ್ಞಾನ ನಿರ್ಮಳ
ನಿತ್ಯಶುದ್ಧ ವಿಬುದ್ಧಶಾಂತ ನನಂತನಿಶ್ಚಿಂತ ॥
ಅತ್ಯಧಿಕ ನನಪೇಕ್ಷನನುಪಮ
ಸ್ತುತ್ಯನಚಲನನಾಥಬಂಧುವೆ
ಕೃತ್ತಿವಾಸ ಗಿರೀಶ ರಕ್ಷಿಸುನಮ್ಮನನವರತ ॥ ೪೨ ॥

ಕದನ ಮುಖದಲಿ ಬಿದಿರದಿದಿರಿಸೊ
ಳೊದರಿ ಚಾಪವ ಪಡೆದ ಗಾಯಗ
ಳಿದಿಗೊ ನಿನ್ನಯ ಶಿರದಿಪಾರ್ಥನ ಪ್ರಹರದಾಭರಣ ॥
ಅದು ನಿನಗೆ ಹಿತವಾಯ್ತು ಗಿರಿಜೆಯ
ಹೃದಯ ಕನುನಯವಾಯ್ತು ನರನಿಗೆ
ವದನ ವಿಕಸಿತವಾಯ್ತು ರಕ್ಷಿ ಸುನಮ್ಮನನವರತ ॥ ೪೩ ॥

ಕಾಮಹರಜಯ ಕಾಲಹರಜಯ
ಸಾಮಜಾಸುರಹರನೆ ಜಯಜಯ
ಹೇಮಕಾಂತ ಸಹಸ್ರ ಚರ್ಮಾಂಬರನೆ ಶಂಕರನೆ ॥
ಸಾಮಗಾನಪ್ರಿಯ ಸದಾಶಿವ
ವ್ಯೋಮಕೇಶ ಸುರೇಂದ್ರವಂದಿತ
ಸೋಮಧರ ಭೂತೇಶ ರಕ್ಷಿಸುನಮ್ಮನನವರತ ॥ ೪೪ ॥

ಅಷ್ಟಮೂರ್ತಿಯೆ ಜಯ ನಮಶ್ಶಿವ
ಪುಷ್ಟಿವರ್ಧನ ಜಯ ನಮಶ್ಶಿವ
ಇಷ್ಟಬಂಧುವೆ ಜಯನಮಶ್ಶಿವ ಜಯಮಹಾದೇವ ॥
ಸೃಷ್ಟಿಪಾಲಕ ಜಯನಮಶ್ಶಿವ
ವೃಷ್ಟಿವರ್ಧನ ಜಯನಮಶ್ಶಿವ
ಕಷ್ಟಗಳ ಪರಿಹರಿಸಿ ರಕ್ಷಿಸುನಮ್ಮನನವರತ ॥ ೪೫ ॥

ಏಕಬಿಲ್ವಾರ್ಚನೆಯ ಮಾಡಲ
ನೇಕವಾಯ್ತೆಂದೆಣಿಪೆ ಭಕ್ತರು
ಬೇಕೆನಿಪಪದವಿಗಳ ಕೊಡುವೆ ಮನೋನುರಾಗದಲಿ ॥
ಸಾಕುವವ ನೀನೀಗ ಜಗದೊಳು
ಏಕಮೇವಾದ್ವಿತಯನೆಂಬುದು
ಲೋಕದೊಳು ಸಿದ್ಧಾಂತ ರಕ್ಷಿಸುನಮ್ಮನನವರತ ॥ ೪೬ ॥

ಮಾರಹರ ಭವದೂರ ವಿಶ್ವಶ
ರೀರ ತ್ರಿಗುಣಾಕಾರ ವಿಮಲೋಂ
ಕಾರ ಭುವನೋದ್ಧಾರ ಸಂಗರಶೂರ ದಾತಾರ ॥
ಚಾರುತರ ಶೃಂಗಾರ ಪಾರಾ
ವಾರ ದಕ್ಷಕುಠಾರ ಖಳಸಂ
ಹಾರ ಕರುಣಾಪಾರ ರಕ್ಷಿಸುನಮ್ಮನನವರತ ॥ ೪೭ ॥

ವೃಂದೆಯೆಂಬಳ ಪತಿಜಲಂಧರ
ಕೊಂದುಕೂಗಿದನಸುರ ನಾತನ
ಮುಂದೆ ಗತಿಯಾರೆಂದು ಕಮಲಜ ಬಂದು ಬಿನ್ನೈಸೆ ॥
ನಂದಿವಾಹನವೇರಿ ನಸುನಗೆ
ಯಿಂದಲಸುರನ ಸೀಳಿ ಬಿಸುಟುಪು
ರಂದರನ ಪೊರೆದಂತೆ ರಕ್ಷಿಸುನಮ್ಮನನವರತ ॥ ೪೮ ॥

ಹಿಂದೆ ನಾನಾಜನ್ಮದಲಿ ಬಳಿ
ಸಂದಪಾತಕ ಬೆಂದುಹೋಹುದು
ಒಂದುಕ್ಷಣ ಧ್ಯಾನಿಸುತ ಶಿವಶಿವ ಎಂದಮಾತ್ರದಲಿ ॥
ಗಂಧಪುಷ್ಪಾಕ್ಷತೆ ಸುಧೂಪಗ
ಳಿಂದಲರ್ಚಿಸಿ ಭಜಿಸಿ ನಮಿಸುವ
ಮಂದಭಾಗ್ಯನದೆಂತು? ರಕ್ಷಿಸುನಮ್ಮನನವರತ ॥ ೪೯ ॥

ದೊರೆಯೆನಗೆ ಗಣನಾಥ ಶಿಕ್ಷಾ
ಗುರುವೆ ಸುಬ್ರಹ್ಮಣ್ಯ ಪಿತಶಂ
ಕರನು ಮಾತೃಭವಾನಿ ಮಂದಾಕಿನಿಯೆ ಚಿಕ್ಕಮ್ಮ ॥
ಸುರರೆ ನೆಂಟರು ಬಂಟರಸುರರು
ನರರು ಗಣ್ಯವೆ ನನಗೆ ನಿನ್ನಯ
ಶರಣನಲ್ಲವೆ ನಾನುರಕ್ಷಿಸುನಮ್ಮನನವರತ ॥ ೫೦ ॥

ಒದರಿ ನಿಮ್ಮಯ ದಿವ್ಯನಾಮವ
ಮುದದಿ ಜಪಿಸಲು ಮೃತ್ಯುಬೇಗದಿ
ಬಿದರಿ ಬೆಟ್ಟವಸೇರಿಕೊಂಬುದು ತುದಿಯಮಾತೇನು? ॥
ಮದನಮದಹರ ಕಾಲರುದ್ರನ
ವದನ ಶೌರ್ಯಸಮುದ್ರ ಭಕ್ತಾ
ಭ್ಯುದಯಕಾರ್ಯ ಸುಭದ್ರ ರಕ್ಷಿಸುನಮ್ಮನನವರತ ॥ ೫೧ ॥

ಮಂಡಲತ್ರಯದೊಳು ವಿರಾಜಿಪ
ಖಂಡಪರಶುವ ನೆನೆವಭಕ್ತರ
ದಂಡೆಯೊಳಗಿರುತಿರ್ಪಮನುಜಗೆ ಯಮನಭಯಮುಂಟೆ? ॥
ರುಂಡಮಾಲಾಧರ ಪಿನಾಕಿಯ
ಖಂಡಲಾರ್ಚಿತಪಾದ ಗೌರಿಯ
ಗಂಡ ದೇವೋದ್ದಂಡ ರಕ್ಷಿಸುನಮ್ಮನನವರತ ॥ ೫೨ ॥

ಪರಮಪಾವನ ಗರುಡವಾಹನ
ಸರಸಿಜಾಕ್ಷನು ರಾಮಭದ್ರನು
ಧುರವಜಯಿಸಲು ನಿಮ್ಮ ಭಜಿಸಿದ ಬಹಳಪ್ರೀತಿಯಲಿ ॥
ಧರೆಗೆ ಭೂಕೈಲಾಸ ರಾಮೇ
ಶ್ವರನೆನಿಸಿಕೊಂಡಿರ್ಪೆ ಸರ್ವೇ
ಶ್ವರನೆ ಭವಭಯಹರನೆ ರಕ್ಷಿಸುನಮ್ಮನನವರತ ॥ ೫೩ ॥

ಪರಮಪದವಿಯ ಕೋಶ ಸಕಲೈ
ಶ್ವರಿಯಗಳಿಗಾವಾಸ ನಿರ್ಮಲ
ಕರದಶ್ರೀಯವಿಲಾಸ ಹರನೀನಿರುವಕೈಲಾಸ ॥
ಪುರವಯಾತ್ರೆಯಮಾಡಿ ಕೃಷ್ಣನು
ಮುರಳಿ ನಡೆದನು ಸುತರಪಡೆದನು
ಗುರುವರನೆ ಶಂಕರನೆ ರಕ್ಷಿಸುನಮ್ಮನನವರತ ॥ ೫೪ ॥

ಬಾರಿಬಾರಿ ಮಹೇಶಮಂತ್ರೋ
ಚ್ಚಾರಣೆಯ ಮಾಡುವಮಹಾತ್ಮರ
ಮೋರೆಕಂಡರೆ ಮಾರಿಮಸಣಿ ಪಿಶಾಚಭೂತಗಳು ॥
ಘೋರಸಿಂಹಧ್ವನಿಗೆ ಬೆದರುವ
ಭೂರಿಮೃಗಗಣದಂತೆ ಪೋಪುವು
ಮಾರಹರ ಮೆಯ್ಯೋರಿ ರಕ್ಷಿಸುನಮ್ಮನನವರತ ॥ ೫೫ ॥

ಹರನಪೂಜಿಪ ಕರವೆಕರ ಪುರ
ಹರನನುತಿಸುವ ಜಿಹ್ವೆಜಿಹ್ವೆಯು
ಗಿರಿಜೆಯರಸನ ನೆನೆವಬುದ್ಧಿಯೆಬುದ್ಧಿ ಶಂಕರನ ॥
ಚರಣಕೆರಗುವ ಶಿರವೆಶಿರ ಶಶಿ
ಧರನ ಧ್ಯಾನಿಪಮನವೆಮನ ವೆಂ
ದರಿವಭಕ್ತಿಯನಿತ್ತು ರಕ್ಷಿಸುನಮ್ಮನನವರತ ॥ ೩೬ ॥

ಶೂಲಿಸದ್ಗುಣಶಾಲಿ ಕರದಕ
ಪಾಲಿ ಉಮೆಗನುಕೂಲಿ ಪನ್ನಗ
ಮಾಲಿ ನುತವಿಬುಧಾಳಿ ಮೋಹನಬಾಲಶಶಿಮೌಳಿ ॥
ಕಾಳಿ ಭಜಿಸುವ ಪಂಚಮುಖದ ಕ
ರಾಳಿ ಅಮಿತಪ್ರಭಾಳಿ ಭಸ್ಮೋ
ದ್ಧೂಳಿ ಲೀಲಾಮೂರ್ತಿ ರಕ್ಷಿಸುನಮ್ಮನನವರತ ॥ ೩೭ ॥

ಹರನಭಕ್ತರ ಜರೆವಮನುಜರ
ಮರಣಕಾಲಕೆ ಯಮನದೂತರು
ಭರದಿಬರುವರು ಹಿಡಿದು ಹೊಡೆಯೆನುತವನನಾಲಿಗೆಯ ॥
ತರಿದು ತೊತ್ತಿನಮಗನೆ ಎನುತಲಿ
ನರಕದಲಿ ಬೀಳ್ಗೆಡಹಿ ಹಿಂಸಿಪ
ತೆರನ ತಪ್ಪಿಸಿ ಶಿವನೆ ರಕ್ಷಿಸು ನಮ್ಮನನವರತ ॥ ೩೮ ॥

ಕುಕ್ಷಿಯೊಳು ಬ್ರಹ್ಮಾಂಡ ತಂಡವ
ರಕ್ಷಿಸುವ ಪರಮಾತ್ಮ ನೀಂವಟ
ವೃಕ್ಷದಡಿಯಲಿ ಬಲಿದ ಪದ್ಮಾಸನದ ಚಿನ್ಮುದ್ರೆ ॥
ಅಕ್ಷಮಾಲೆಯ ಧರಿಸಿ ಕರದಿ ಮು
ಮುಕ್ಷುಗಳ ಮಧ್ಯದಲಿ ಕುಳಿತಿಹ
ದಕ್ಷಿಣಾಮೂರುತಿಯೆ ರಕ್ಷಿಸು ನಮ್ಮನನವರತ ॥ ೩೯ ॥

ವಿಶ್ವಕರ್ತೃ ಉಮಾಮಹೇಶ್ವರ
ವಿಶ್ವಭರ್ತೃ ಭವಾನಿಶಂಕರ
ವಿಶ್ವಮಾತೃ ಸುಧಾಂಶುಶೇಖರ ಧವಳಭೂತಿಧರ ॥
ವಿಶ್ವಪಿತೃವಿಶ್ವೇಶ್ವರೇಶ್ವರ
ವಿಶ್ವಮಾಯಾಮಹಿಮ ಪುರಹರ
ವಿಶ್ವಬಾಹು ವಿಲಾಸ ರಕ್ಷಿಸು ನಮ್ಮನನವರತ ॥ ೬೦ ॥

ಜಯನಮಶ್ಶಿವ ಸಾಂಬ ಶಂಕರ
ಜಯನಮೋ ದುರಿತಾಂಧಭಾಸ್ಕರ
ಜಯನಮೋಹರ ಚಂದ್ರಶೇಖರ ಜಯತುಪಂಚಶಿರ ॥
ಜಯನಮೋ ಜಗದೀಶ ಪುರಹರ
ಜಯನಮೋ ಕಲಿಕಾಲಭಯಹರ
ಜಯ ಮಹೇಶ್ವರ ಜಯತು ರಕ್ಷಿಸು ನಮ್ಮನನವರತ ॥ ೬೧ ॥

ಓಂನಮಶ್ಶಿವ ವೈಭವೋದಿತ
ಓಂನಮಶ್ಶಿವ ವಪುವಿರಾಜಿತ
ಓಂನಮಶ್ಶಿವ ಗೌರಿಸನ್ನುತ ಅಪರಿಮಿತಮಹಿಮ ॥
ಓಂನಮಶ್ಶಿವ ಷಣ್ಮುಖನಪಿತ
ಓಂನಮಶ್ಶಿವ ವಿಷ್ಣುವಂದಿತ
ಓಂನಮಶ್ಶಿವ ಒಲಿದು ರಕ್ಷಿಸು ನಮ್ಮನನವರತ ॥ ೬೨ ॥

ಶರಣುಶಿವ ಶಂಕರ ಮಹೇಶ್ವರ
ಶರಣು ದೇವೇಶಾನ ಪುರಹರ
ಶರಣು ಹಿಮಗಿರಿಜಾಮನೋಹರ ಧವಳಭಸ್ಮಧರ
ಶರಣು ಸರ್ವೇಶ್ವರ ಕೃಪಾಕರ
ಶರಣುಹರ ಮಂದಾಕಿನೀಧರ
ಶರಣುಜನ ಸುರಧೇನು ರಕ್ಷಿಸು ನಮ್ಮನನವರತ ॥ ೬೩ ॥

ಅರಿದು ಮರೆದಾಗೊಮ್ಮೆ ನೆನೆದರೆ
ಹರಿದು ಬಿಸುಡುವ ಕರ್ಮಬೀಜವ
ಹರನ ಬಿರುದೆಂದರಿದು ನಿನ್ನಯ ಚರಣಸೇವಕನು ॥
ಶರಣ ಬಂಟರ ಬಂಟನಾದೆನು
ಕರುಣಿಸೈ ಅಭಿಮಾನ ನಿನ್ನದು
ಮರೆಯ ಬೇಡೆಲೆಶಂಭು ರಕ್ಷಿಸು ನಮ್ಮನನವರತ ॥ ೬೪ ॥

ಘೋರತರ ಸಂಸಾರಪಾರಾ
ವಾರದೊಳು ಬಿದ್ದಾಳುತೇಳುತ
ಕ್ರೂರ ಕಾಮಕ್ರೋಧಜಲಚರದುಪಟಳಕೆ ಸಿಲುಕಿ ॥
ಪಾರಗಾಣದೆ ತೊಳಲಿ ಬಳಲುವೆ
ಮಾರಹರ ಮಂದಾಕಿನೀಧರ
ಕಾರುಣಿಕ ಮೈದೋರಿ ರಕ್ಷಿಸು ನಮ್ಮನನವರತ ॥ ೬೫ ॥

ಶರಣಜನಸಂಸಾರಿ ಯೆಂಬೀ
ಬಿರುದಿಹುದು ತ್ರಿಪುರಾರಿ ನಿನಗೇ
ನರಿದೆ ಅಭಯವ ತೋರಿ ನಂದಿಯನೇರಿ ಈಸಾರಿ॥
ಕರುಣಿಸೈ ಕಾಮಾರಿ ದುರಿತದ
ತರುಕುಠಾರಿ ಕಪಾಲಿ ಹೃದಯಾಂ
ಬುರುಹದಲಿ ನೆಲಸಿರ್ದು ರಕ್ಷಿಸು ನಮ್ಮನನವರತ ॥ ೬೬ ॥

ಧೀರನಾಮವ ನೊಲಿದು ಪಾಡುವೆ
ಸಾರಪಾದವ ಪೂಜೆಮಾಡುವೆ
ಸಾರಮೂರ್ತಿಯ ನೆನೆವೆ ಮನದೊಳು ನೀನರಿಯದಂತೆ ॥
ಆರುಗತಿ ಮತಿಯಾರು ದಿಕ್ಕಿನ
ಗಾರು ನೀನಲ್ಲದೆ ಸದಾಶಿವ
ಮಾರಹರ ಮೈದೋರಿ ರಕ್ಷಿಸು ನಮ್ಮನನವರತ ॥ ೬೭ ॥

ಒಂದುಚರಣವನಿರಿಸಿಮುಂಡಿಯೊ
ಳೊಂದು ಕರದೊಳಗಿದ್ದ ಕಲ್ಲನು
ಒಂದೆರಡು ಮೂರೆನುತ ಹೊಡಿಯಲು ನಿನಗೆಪರಿಣಾಮು ॥
ಎಂದುಪೂಜಿಸಿ ಪೂರ್ವದುರಿತವ
ಕೊಂದು ಬಿಸುಟಾ ಕನ್ನನೆಂಬುವ
ಗಂದುಪದವಿಯನಿತ್ತೆ ರಕ್ಷಿಸು ನಮ್ಮನನವರತ ॥ ೬೮ ॥

ಧರಣಿಜಲನಭಮರುತಶಿಖಿಹಿಮ
ಕಿರಣಭಾಸ್ಕರ ತಾರೆಗ್ರಹಗಣ
ಸುರಭಿ ಸುರತರು ಸುರಪವಸುಮನುಮುನಿದಿಶಾಧಿಪರು ॥
ಗರುಡ ಪನ್ನಗ ಯಕ್ಷರಾಕ್ಷಸ
ಶರಧಿ ಗಿರಿತರುವೆನಿಪಸಚರಾ
ಚರದೊಳಾಡುವ ಶಿವನೆ ರಕ್ಷಿಸು ನಮ್ಮನನವರತ ॥ ೬೯ ॥

ಆದಿಯಂತ್ಯ ಸ್ಥೂಲಸೂಕ್ಷ್ಮಪ್ರ
ಭೇದವಾದ ಪ್ರಸಾದಕೋಪವಿ
ಷಾದಮುತ್ಸವ ಚಿಂತೆ ಸಂತತ ಪಾರವಶ್ಯತೆಯು ॥
ಕ್ರೋಧಶಾಂತಿ ವಿವೇಕ ಮತಿಭ್ರಮೆ
ವ್ಯಾಧಿಯೌಷಧ ಕಾರ್ಯಕಾರಣ
ಕಾದಿ ಮೃತ್ಯುಂಜಯನೆ ರಕ್ಷಿಸು ನಮ್ಮನನವರತ ॥ ೭೦ ॥

ಅಂತವಿಲ್ಲದನಂತರೂಪನ
ಚಿಂತ್ಯನದ್ವಯನಪ್ರಮೇಯದಿ
ಗಂತಭುಜ ವೇದಾಂತವೇದ್ಯ ಗಿರೀಶ ಪರಮೇಶ ॥
ದಂತಿಚರ್ಮಾಂಬರನೆ ನಿನ್ನನ
ದೆಂತು ಬಣ್ಣಿಪೆನೆಂತುಪೂಜಿಪೆ
ನಂತಕಾಂತಕ ಶಿವನೆ ರಕ್ಷಿಸು ನಮ್ಮನನವರತ ॥ ೭೧ ॥

ಚಂದ್ರಕೋಟಿಪ್ರಭೆಯಲಹರಿಯ
ಬಂಧುರದ ಕೈಲಾಸಪುರದೊಳು
ಸುಂದರದ ಕಮನೀಯಕಲ್ಪದ್ರುಮದ ಮೂಲದಲಿ ॥
ಕುಂದಣದ ನವರತ್ನಸಂಚಯ
ದಿಂದರಂಜಿಪ ಸಿಂಹಪೀಠಕೆ
ಬಂದು ವುಮೆಯೊಡಗೂಡಿ ರಕ್ಷಿಸು ನಮ್ಮನನವರತ ॥ ೬೨ ॥

ಮರಕತದ ನೆಲೆಗಟ್ಟು ಸುಮನೋ
ಹರದ ವಜ್ರದಕಂಬ ಚಾವಿಾ
ಕರದ ತೊಲೆಬೋದಿಗೆಯು ಮುತ್ತಿನಸರದ ಲೋವೆಗಳು ॥
ಸ್ಫುರಿತರತ್ನಪ್ರಭೆಯುಪಳುಕಿನ
ಪರಿಪರಿಯ ಕನ್ನಡಿಯ ಕಲಶದ
ಸಿರಿಯೊಳೊಪ್ಪುವ ಶಿವನೆ ರಕ್ಷಿಸು ನಮ್ಮನನವರತ ॥ ೭೩ ॥

ಯಮುನೆ ಕೃಷ್ಣೆ ಕವೇರಕನ್ಯಕೆ
ವಿಮಲೆ ನರ್ಮದೆ ಸರಯು ತುಂಗಾ
ರಮಣಿಯರು ಸಿಂಗರದಿ ಕರದೊಳು ಕಲಶಗಳ ಪಿಡಿದು ॥
ಅಮಲವೇದೋಕ್ತಪ್ರಕಾರದಿ
ನುಮೆಸಹಿತಲಭಿಷೇಕವನು ಸಂ
ಭ್ರಮದಿ ರಚಿಪರು ದೇವರಕ್ಷಿಸು ನಮ್ಮನನವರತ ॥ ೭೪ ॥

ಥಳಥಳಿಸಿನಳನಳಿಪ ಪಟ್ಟೆನ
ಬಿಳಿಯ ವಸ್ತ್ರಗಳಿಂದಲೊರಸುವೆ
ನೆಲೆಸದಾಶಿವಮೂರ್ತಿ ಶುದ್ಧಾಚಮನ ವಿಧಿಗಳಿಗೆ ॥
ತೊಳಗಿ ಬೆಳಗುವ ಸ್ವಚ್ಛಪರಿಮಳ
ಮಿಳಿತ ನಿರ್ಮಳ ವಾರಿಯನು ಕರ
ತಳಕೆ ನೀಡುವೆನಯ್ಯ ರಕ್ಷಿಸು ನಮ್ಮನನವರತ ॥ ೭೫ ॥

ಎಳೆಯ ರವಿರಶ್ಮಿಗಳ ಕಾಂತಿಯ
ತಳೆದ ದಿವ್ಯಾಂಬರವ ನುಡಿಸುವೆ
ನೆಲೆ ಮಹೇಶ್ವರ ಸ್ವರ್ಣಮಯಯಜ್ಞೋಪವೀತವನು ॥
ಇಳೆಯೊಳುಳ್ಳಸಮಸ್ತಪರಿಮಳ
ಗಳಿಗೆದೊರೆಯೆಂದೆನಿಪಗಂಧವ
ನೊಲಿದು ಧರಿಸು ಮಹೇಶ ರಕ್ಷಿಸು ನಮ್ಮನನವರತ ॥ ೭೬ ॥

ಬಗೆಬಗೆಯ ಪರಿಮಳಗಳೊಪ್ಪುವ
ಅಗರುಚಂದನ ಕತ್ತುರಿಯ ಮಘ
ಮಘಿಪಕುಂಕುಮ ಗಂಧದನುಲೇಪನತಿಲಾಕ್ಷತೆಯ ॥
ಸೊಗಸು ರಂಜಿಸೆಕೋಟಿಸೂರ್ಯರ
ನಗುವಮಣಿಕುಂಡಲದಕಾಂತಿಯ
ನಗೆಮೊಗದ ಕರುಣಾಳು ರಕ್ಷಿಸು ನಮ್ಮನನವರತ ॥ ೭೭ ॥

ಮಾಣಿಕದ ಕೋಟೀರಹಾರದ
ಆಣಿಮುತ್ತಿನ ಸರದ ಪದಕದ
ಶೋಣರತ್ನದ ಕಡಗ ಕಂಕಣ ಕಾಂಚಿನೂಪುರದ ॥
ಸಾಣೆಮಾಡಿದ ವಜ್ರಭಾಪುರಿ
ಸ್ಥಾಣುಮೂರುತಿ ನಿಮ್ಮಲಂಕೃತಿ
ಭಾನುಕೋಟಿಪ್ರಕಾಶ ರಕ್ಷಿಸು ನಮ್ಮನನವರತ ॥ ೭೮ ॥

ಮೊಲ್ಲೆ ಮಲ್ಲಿಗೆ ಜಾಜಿ ಸಂಪಗೆ
ಫುಲ್ಲಪದ್ಮ ಸುಗಂಧ ಕಣಿಗಿಲು
ಪಲ್ಲವಿಸುವಚ್ಛಿದ್ರಬಿಲ್ವ ದ್ರೋಣ ಮಂದಾರ ॥
ಸಲ್ಲಲಿತಪರಿಮಳದಕುಸುಮಗ
ಳಲ್ಲಿ ನಿಮ್ಮನಲಂಕರಿಸಿ ಕರ
ದಲ್ಲಿ ಪೂಜಿಸೆನಯ್ಯ ರಕ್ಷಿಸು ನಮ್ಮನನವರತ ॥ ೭೯ ॥

ಅಗಿಲು ಚಂದನ ದಿವ್ಯಗುಗ್ಗುಲ
ಸೊಗಯಿಸುವ ಸಾಮ್ರಾಣಿ ಧೂಪದ
ಹೊಗೆಯು ಮಘಮಘಿಸುತ್ತಲಿದೆ ದಯಮಾಡಿ ಶಿವನೋಡು ॥
ಬಗೆಬಗೆಯ ಆರತಿಗಳಿಂಧಗ
ಧಗಿಪನೀರಾಜನಸುಮೋಹನ
ಜಗದೊಡೆಯನಲಿದೊಲಿದು ರಕ್ಷಿಸು ನಮ್ಮನನವರತ ॥ ೮೦ ॥

ಬಗೆಬಗೆಯಚಿತ್ರಾನ್ನ ನಯನಕೆ
ಸೊಗಯಿಸುವ ರಾಜಾನ್ನ ಸಕ್ಕರೆ
ಮಗಮಗಿಪ ಪರಮಾನ್ನ ಸಾರುಗಳುಪ್ಪುಗಾಯಿಗಳು ॥
ಒಗುಮಿಗೆಯ ಶಾಕಗಳಪೂಪವು
ಮಿಗಿಲುಸದ್ಯೋಘೃತವು ಸೂಪವು
ತೆಗೆತೆಗೆದು ಭುಜಿಸುವುದು ರಕ್ಷಿಸು ನಮ್ಮನನವರತ ॥ ೮೧ ॥

ಸ್ವಾಪು ಸ್ವಚ್ಛತೆ ಶೈತ್ಯಪರಿಮಳ
ವಾದ ಪಾನೀಯವು ಸಮರ್ಪಣೆ
ಯಾದಿಮೂರುತಿ ನಿತ್ಯತೃಪ್ತಗೆ ಭಕ್ಷ್ಯನೈವೇದ್ಯ ॥
ವೇದವೇದ್ಯ ದಯಾಳು ನಿನಗೆಪ
ಯೋದಧಿಗಳುಪಚಾರವಿನಿಸುವಿ
ನೋದವಲಿಕ್ಕೈಗೊಳುತ ರಕ್ಷಿಸು ನಮ್ಮನನವರತ ॥ ೮೨ ॥

ಪರಿಮಳೋದಕದಿಂದ ಶುಭಕರ
ಚರಣವದನವತೊಳೆವೆನ್ನೈ ವಿ
ಸ್ತರಿಸು ಶುದ್ಧಾಚಮನವನು ತಾಂಬೂಲವಿದೆನೋಡು ॥
ಸುರಭಿಯುತಪೂಗೀಫಲಂಗಳು
ತರುಣಪರ್ಣ ಸುವರ್ಣಚೂರ್ಣದ
ಸಿರಿಯನೀಕ್ಷಿಸಿಶಿವನೆ ರಕ್ಷಿಸು ನಮ್ಮನನವರತ ॥ ೮೩ ॥

ಸಾಸಿರದ ದಳದೊಳು ವಿರಾಜಿಪ
ಕೇಸರದ ಕಾಂಚನದ ಕಮಲದ
ಭಾಸುರದ್ಯುತಿಯಿಂದಲೊಪ್ಪುವ ಪುಷ್ಪವನು ಧರಿಸು ॥
ವಾಸವಾರ್ಚಿತ ದೋಷದೂರ ವು
ಮೇಶಶಂಭು ಗಿರೀಶ ಮೃಡ ಮಾ
ಹೇಶ ಮೃತ್ಯುಂಜಯನೆ ರಕ್ಷಿಸು ನಮ್ಮನನವರತ ॥ ೮೪ ॥

ತೇರಿನಾರತಿ ರತ್ನದಾರತಿ
ಸಾರತರ ಕರ್ಪೂರದಾರತಿ
ಭೂರಿಜ್ಯೋತಿಗಳಿಂದಲೊಪ್ಪುವ ಮಂಗಳಾರತಿಯ ॥
ಭೇರಿಶಂಖ ಮೃದಂಗ ಘಂಟೆಗ
ಳೋರಣದಿ ಭೋರಿಡಲುಶಿವನಿನ
ಗಾರತಿಯ ರಚಿಸುವೆನು ರಕ್ಷಿಸು ನಮ್ಮನನವರತ ॥ ೮೫ ॥

ಸನಕ ನಾರದ ಭೃಗು ಪರಾಶರ
ಮುನಿಯಗಸ್ತ್ಯ ವಸಿಷ್ಠಕಶ್ಯಪ
ರೆನಿಪಮುನಿಗಳ ಕರದಪುಷ್ಪಾಂಜಲಿಯನನುಕರಿಸು ॥
ವನಜಭವ ಮುಖ್ಯಾಮರರು ಸಂ
ದಣಿಸಿ ಜಯಜಯವೆಂದು ಪಾಡುವ
ರನುಪಮಾನಂದಾಬ್ಧಿ ರಕ್ಷಿಸು ನಮ್ಮನನವರತ ॥ ೮೬ ॥

ಕರಿವದನ ಬೀಸಲ್ಕೆ ಚಮರವ
ನಿರುತಶ್ವೇತಛತ್ರವನು ಪಿಡಿ
ದಿರೆ ಕುಮಾರಕ ಕನ್ನಡಿಯ ಬಿನ್ನವಿಸೆನಾರಿಯರು ॥
ಸುರಸತಿಯರಾಡುತ್ತಲಿರೆ ತುಂ
ಬುರನು ನಾರದ ನೊಲಿದು ಪಾಡಲು
ಮೆರೆವ ಪಾರ್ವತಿಯರಸ ರಕ್ಷಿಸು ನಮ್ಮನನವರತ ॥ ೮೭ ॥

ನಾಗಪತಿ ಸುರಪತಿಯು ವಾಕ್ಪತಿ
ಯೋಗಿತತಿ ಮುನಿವಿತತಿ ಭಾರತಿ
ಆಗಮಸ್ಮೃತಿಶ್ರುತಿಪುರಾಣಾಖ್ಯಾಯಿಕೆಗಳಿಲ್ಲ ॥
ಕೂಗಿನುತಿಸಿ ಭವತ್ಪದಾಂಬುಜ
ಭೋಗಭಾಗ್ಯದ ಸಿರಿಯಕಾಣದ
ಮೋಘಮಾಯಾಮಹಿಮ ರಕ್ಷಿಸು ನಮ್ಮನನವರತ ॥ ೮೮ ॥

ಜಯನಮೋಸ್ತು ಉಮಾಮಹೇಶ್ವರ
ಜಯನಮೋಸ್ತು ಭವಾನಿ ಶಂಕರ
ಜಯನಮಃ ಕಾತ್ಯಾಯನೀವರ ಸರ್ವಸಿದ್ಧಿಕರಾ ॥
ಜಯನಮೋಸ್ತು ವೃಷಾಂಕ ವಿಷಧರ
ಜಯನಮೋಸ್ತು ಪಿನಾಕಿ ಶಶಿಧರ
ಜಯನಮಶ್ಶಿವಸಾಂಬ ರಕ್ಷಿಸುನಮ್ಮನನವರತ ॥ ೮೯ ॥

ವರದನಾಗಿಯೆ ರಾಜರಾಜನ
ಪೊರೆದ ಮರಿಯಾದೆಯಲಿ ನರನಿಗೆ
ಶರವನಿತ್ತಂದದಲಿ ಸುರಪನ ಸಲಹಿದೊಲುಮೆಯಲಿ ॥
ತರಳಮಾರ್ಕಂಡೇಯನಿಗೆ ಸ್ಥಿರ
ತರದ ಜೀವವನಿತ್ತಪರಿಯಲಿ
ಹರ ಕಟಾಕ್ಷದಿನೋಡಿ ರಕ್ಷಿಸುನಮ್ಮನನವರತ ॥ ೯೦ ॥

ಧರೆಯೊಳಿರುತಿಹ ತರುಗಳೆಲ್ಲವು
ಸರಿಯೆ ಕಲ್ಪದ್ರುಮಕೆ ಜಗದೊಳ
ಗಿರುವ ಪಶುಗಳು ಕಾಮಧೇನುವಿನೋರಗೆಗೆಬಹುದೆ? ॥
ಉರಗಭೂಷಣ ನಿಮ್ಮಮಹಿಮೆಗೆ
ಸರಿಯುದಾರೈ ಸಕಲದೇವರ
ಪೊರೆವ ಕರುಣಾಸಿಂಧು ರಕ್ಷಿಸುನಮ್ಮನನವರತ ॥ ೯೧ ॥

ನಿನ್ನ ಸಾರಥಿ ಸೃಜಿಸುವಾತನು
ನಿನ್ನ ಬಾಣವು ಸಲಹುವಾತನು
ನಿನ್ನನಯನದಿ ಪುಟ್ಟಿದಗ್ನಿಯೆ ದಹಿಸುವುದು ಜಗವ ॥
ನಿನ್ನ ಮಹಿಮೆಯನಾರುಬಲ್ಲರು ?
ಎನ್ನ ಸಲಹಲು ನೀನೆ ಶಕ್ತನು
ಬಿನ್ನಹವ ಲಾಲಿಸುತ ರಕ್ಷಿಸು ನಮ್ಮನನವರತ ॥ ೯೨ ॥

ವಿಷವಧರಿಸಿದ ಮಹಿಮೆಯನುಸುರ
ವಿಸರವರಿಯದೆ? ಋಷಿಕುಮಾರಕ
ನಸುಗೊಳಲುಬಂದಾಕೃತಾಂತನಕೊಂದೆ ಸಾಹಸದಿ ॥
ಪಶುಪತಿಯೆ ಪರದೈವವೆಂಬುದ
ವಸುಧೆಯೊಳು ಬಲ್ಲವರೆ ಬಲ್ಲರು
ಅಸುರಮರ್ದನ ಶಂಭು ರಕ್ಷಿಸು ನಮ್ಮನನವರತ ॥ ೯೩ ॥

ಅರ್ಥವುಳ್ಳವನತುಲಭಾಗ್ಯಕೆ
ಕರ್ತೃವೆಂದೆಂಬಂತೆ ಲೋಕದ
ಕರ್ತೃ ನಿನ್ನಯ ದಿವ್ಯನಾಮವನುತಿಸಿ ಪಠಿಸಿದರೆ ॥
ಕರ್ತೃಫಲಬಂದಿದಿರು ನಿಲ್ಪುದು
ಕೀರ್ತಿನಿನಗದು ಶಿವನೆಯೆನ್ನಯ
ಆರ್ತತೆಯ ಪರಿಹರಿಸಿ ರಕ್ಷಿಸು ನಮ್ಮನನವರತ ॥ ೯೪ ॥

ಪರಮ ಪುರುಷನೆ ಗಿರಿಜೆಯರಸನೆ
ಸುರವರಾರ್ಚಿತ ಮೃತ್ಯುಭಯಹರ
ಕರುಣವಾರಿಧಿ ಶಿವಕಲಾನಿಧಿಯೆಂದ ಮಾತ್ರದಲಿ ॥
ಹರಿದು ಪೋಪುದು ಪಾಪತಾಪಗ
ಳಿರದೆ ಭಯಗಳು ಬಾರವೆಂಬುದ
ನರಿದುನಂಬಿದೆ ತಂದೆ ರಕ್ಷಿಸು ನಮ್ಮನನವರತ ॥ ೯೫ ॥

ಸರ್ವಮಂಗಳೆ ಗೌರಿ ಶಂಕರಿ
ಪರ್ವತೇಂದ್ರ ಕುಮಾರಿ ಈಶ್ವರಿ
ಪೂರ್ವದೇವಾನ್ವಯ ಭಯಂಕರಿ ಶೋಭನಾಕಾರಿ ॥
ಶರ್ವರೀಶ್ವರ ಸೇವ್ಯಕಚಭರಿ
ಶರ್ವನರ್ಧಶರೀರಿ ಶಂಕರಿ
ಸರ್ವಮಂತ್ರಾಕಾರಿ ರಕ್ಷಿಸು ನಮ್ಮನನವರತ ॥ ೯೬ ॥

ಅಂಬೆ ಜಗದವಲಂಬೆ ಕಮಲಕ
ದಂಬೆ ನಯನವಿಡಂಬೆ ಚಾರುನಿ
ತಂಬೆ ಭರಕುಚಕುಂಭೆ ಮುಖಶಶಿಬಿಂಬೆ ಲೋಲಾಂಬೆ ॥
ಶಂಭುಮಹಿಷಿ ನಿಕುಂಭದಾನವ
ರೆಂಬ ತರುನಿಕುರುಂಬೆ (?) ಹಿಮಕರ
ಬಿಂಬಮುಖಿ ಸರ್ವಾಂಬೆ ರಕ್ಷಿಸು ನಮ್ಮನನವರತ ॥ ೯೭ ॥

ಕಾಳಿ ದನುಜರ ಧಾಳಿಯೆಂಬುದ
ಕೇಳಿ ಕೋಪವತಾಳಿ ವದನಕ
ರಾಳಿ ನಖದಂಷ್ಟ್ರಾಳಿ ದೈತ್ಯರ ಸೀಳಿ ಭಕ್ತರ್ಗೆ ॥
ಕೇಳಿಕೇಳಿದ ವರವನೀವಗು
ಣಾಳಿನಮಿತಸುರಾಳಿ ಹಿಮಕರ
ಮೌಳಿ ದುರ್ಗಿ ಪ್ರಭಾಳಿ ರಕ್ಷಿಸು ನಮ್ಮನನವರತ ॥ ೯೮ ॥

ಹರಮಹಾದೇವೇಶ ಶಂಕರ
ಗಿರಿಜೆ ಗೌರಿ ಭವಾನಿ ಗುಹಪಿತ
ಗರಳಕಂಧರನೀಶೆ ವುಮೆ ರಮೆ ಕಾಳಿ ಹೈಮವತಿ ॥
ಉರಗಭೂಷಣ ಫಾಲಲೋಚನ
ಸಿರಿಸರಸ್ವತಿಸೇವ್ಯೆ ಪಾರ್ವತಿ
ಮೆರೆವದಂಪತಿಗಳಿರ ರಕ್ಷಿಸಿ ನಮ್ಮನನವರತ ॥ ೯೯ ॥

ವೀರಭದ್ರ ಗಣಾಧಿನಾಥ ಮ
ಯೂರವಾಹನ ಭೃಂಗಿಚಂಡಿ ಪು
ರಾರಿಗಳು ವರನಂದಿ ಭೈರವ ಮುಖ್ಯಪ್ರಮಥಗಣ ॥
ವೀರಶಕ್ತಿಗಳಷ್ಟಸಿದ್ಧಿಗ
ಳಾರು ಶಾಸ್ತ್ರಾಮ್ನಾಯವಿತತಿಯು
ಭಾರತೀದೇವಿಯರೆ ರಕ್ಷಿಸಿ ನಮ್ಮನನವರತ ॥ ೧೦೦ ॥

ಇಷ್ಟಸಿದ್ಧಿಪ್ರದ ಫಲಪ್ರದ
ವಷ್ಟಪುತ್ರಪ್ರದ ಸುಖಪ್ರದ
ತುಷ್ಟಿಪುಷ್ಟಿಪ್ರದ ಜಯಪ್ರದಶಿವಕಥಾಸರಣಿ ॥
ತುಷ್ಟಿಯಿಂದಲಿ ಭಜಿಸಿನುತಿಸುವ
ರೆಷ್ಟುಧನ್ಯರೊ? ಪೂರ್ಣಕಾಮರೊ?
ಅಷ್ಟಮೂರ್ತಿ ಪಿನಾಕಿ ರಕ್ಷಿಸು ನಮ್ಮನನವರತ ॥ ೧೦೧ ॥

ಸಕಲ ಲೋಕವ ತುಂಬಿ ತುಳುಕುವ
ಭಕುತಿಸಾರ ಸುಧಾರ್ಣವವ ಬಾ
ಲಕನು ಬಾಯಾರಿವರೆ ಕುಡಿವನೆ ? ಶಿವಮಹಾದೇವ ॥
ಮುಕುತಿದಾಯಕ ನಿನ್ನನುತಿಸುವ
ಶಕುತನಾರ್ರೈ ? ತಂದೆ ಪದಸೇ
ವಕರ ಸೇವೆಯನಿತ್ತು ರಕ್ಷಿಸು ನಮ್ಮನನವರತ ॥ ೧೦೨ ॥

ಧರೆಯೊಳಧಿಕವೆನಿಪ್ಪ ನರ್ತನ
ಪುರದೊಡೆಯ ಸೋಮೇಶಲಿಂಗನ
ಸಿರಿಪದದ್ವಯ ಸೇವಕರ ಸೇವಾನುಸೇವಕನು ॥
ಒರೆದೆ ಬಾಲನ ತೊದಲುನುಡಿಗಳ
ಹರುಷಪುಳಕದಿ ಜನನಿ ಕೇಳುವ
ತೆರದಿ ಲಾಲಿಸಿ ಶಿವನೆ ರಕ್ಷಿಸು ನಮ್ಮನನವರತ ॥ ೧೦೩ ॥

ಸತತ ಸಂಭ್ರಮ ಸೌಖ್ಯಗೋಧನ
ವಿತತಿವರ್ಧನ ಶತ್ರುನಾಶನ
ಸುತಸಹೋದರ ಬಂಧುವರ್ಗದ ಬಹಳ ಪರಿತೋಷ॥
ಚತುರತರ ಬಹುವಿದ್ಯೆ ಬುದ್ಧಿಗ
ಳತಿಶಯದ ಬಲಕಾಂತಿಯಾರೋ
ಗ್ಯತೆಗಳಭಿವರ್ಧಿಪೊಲು ರಕ್ಷಿಸು ನಮ್ಮನನವರತ ॥ ೧೦೪ ॥

ಜ್ಞಾನ ವಿದ್ಯೆಯ ನಿಯಮಯೋಗ
ಧ್ಯಾನ ಜಪತಪಮೌನ ಸರ್ವಸ
ಮಾನಬುದ್ಧಿಸಮಾಧಿ ಶಮೆದಮೆಗಳ ನಿಧಾನಗಳ॥
ನಾನರಿಯೆನೇನುವನು ನಿನ್ನಸ
ಮಾನರಾರಿಲ್ಲೆಂದು ನಂಬಿದೆ
ದೀನಜನಸುರಧೇನು ರಕ್ಷಿಸು ನಮ್ಮನನವರತ ॥ ೧೦೫ ॥

ಈಡಪಿಂಗಳನಾಡಿ ಯೆರಡನು
ಕೂಡಿ ರೇಚಕಪೂರಕಗಳೆಡೆ
ಯಾಡಿಸುತ ಬಂಧಿಸುತ ಕುಂಭಕವನು ಸುಷುಮ್ನೆಯಲಿ॥
ಕೂಡಿಕುಂಡಲಿಯನು ವಿಭಾಡಿಸಿ
ನೋಡಿನಿಮ್ಮನು ಕಂಡುಪೂಜಿಪ
ಗಾಢಭಕುತಿಯನಿತ್ತು ರಕ್ಷಿಸು ನಮ್ಮನನವರತ ॥ ೧೦೬ ॥

ಇದುಶುಭೋದಯ ವಿದುಫಲೋದಯ
ವಿದು ಮುದೋದಯ ವಿದುಮಹೋದಯ
ವಿದು ಸುಖೋದಯ ವಿದುವೆ ಭಕ್ತರ ಭಕ್ತಿಸಾರಫಲ॥
ಸದುಹೃದಯರಿಗೆ ಫಲಿಸುವುದುಪೇ
ಳಿದರೆ ಮುಕ್ತಿಯ ನಿಮಿಷದಲಿ ಶಿವ
ಪದವಿಯನು ಪೊಲಿದಿತ್ತು ರಕ್ಷಿಸು ನಮ್ಮನನವರತ ॥ ೧೦೭ ॥

ನಿಜಲಿಂಗಶತಕ.

ಸೂಚನೆ.—ನಿತ್ಯ ನಿರುಪಮ ವಿಶ್ವಮೂರ್ತಿ ನಿಜಲಿಂಗೇಶ
ನುತ್ತಮೋತ್ತಮವೆನಿಪ ಶತಕವನು ಬಲ್ಲಂತೆ
ವಿಸ್ತರಿಪೆ ವಾರ್ಧಕದ ಷಟ್ಪದಿಗಳಿಂದ ಮನ
ವಿತ್ತು ಜನರಿಂದ ಕೇಳ್ವುದು.

ಗೋಪ ಗೋಪತಿನಮಿತ ಗೋಕರ್ಣಸದ್ಭೂಷ
ಗೋಪುತ್ರಿಯರ್ಧಾಂಗ ಗೋಜಾತಶತ್ರುಧರ
ಗೋಪವಾಹನನಮಿತ ಗೋತನಯಶಿರಪಾತ್ರ ಗೋವಸನ ಪಂಚಾನನ ॥
ಗೋಪುತ್ರಸದ್ಗಮನ ಗೋರಹಿತಖಳಶಿಕ್ಷ
ಗೋಪ್ರೀಯಶಿಶುದಹನ ಗೋತ್ರಿತಯ ಘನಮಹಿಮ
ಗೋಪಂಚಧರನಾಶ ನಿಜಲಿಂಗ ಭವಭಂಗ ಶರಣಜನಭಕ್ತಸಂಗಾ ॥ ೧ ॥

ಹರಿಗರ್ಭಶಿರಪಾಣಿ ಹರಿತನುಜವಪುದಹನ
ಹರಿಮುಖ್ಯಸುರವಿನುತ ಹರಿಕೋಟಿಹರಿರೂಪ
ಹರಿಮಿತ್ರ ಹರಿಗಾತ್ರ ಹರಿಭೂಷ ಹರಿನಾಶ ಹರಿಣಾಂಕಧರ ಶಂಕರಾ ॥
ಹರಿಯಾಪ್ತ ಹರಿಜನಕ ಹರಿನೇತ್ರ ದಯಭರಿತ
ಹರಿಮೌಳಿ ಹರಿವಸನ ಹರಿಗಮನ ಸುಖಕರಣ
ಹರಿಕಾರಿ ಹರಿಧರನೆ ನಿಜಲಿಂಗ ಭವಭಂಗ ಶರಣಜನಭಕ್ತಸಂಗಾ ॥ ೨ ॥

ಅಮೃತೋದ್ಭವಾ ಮುಖ್ಯಮುನಿವಿನುತ ಸಂಪ್ರೀತ
ಅಮೃತೋದ್ಭವಾಶೇಖರ ಭವ ಭವಗಿರಿಶಂಬ
ಅಮೃತೋದ್ಭವಾಂಬಕನಮಿತ್ರ ನಾರದಗೋತ್ರಅಮೃತೋದ್ಭವಾ ಧೂರ್ಜಟಿ
ಅಮೃತಾಖ್ಯ ಪಾರ್ವತೀಪ್ರೀಯ ಸುರನುತಕಾಯ
ಅಮೃತಾಶರೀರ ಭವದೂರ ಸದ್ಗುಣಸಾರ
ಅಮೃತಚಾರಿತ್ರ ಭವ ನಿಜಲಿಂಗ ಭವಭಂಗ ಶರಣಜನಭಕ್ತಸಂಗಾ ॥ ೩ ॥

ಶಿವಚರಿತ ದಯಭರಿತ ಶಿವಗಾತ್ರ ಶಿವಭೂಷ
ಸವನಾಶ ಶಿವಪ್ರೀಯ ಶಿವನಾಮ ಸಲೆಭೀಮ
ಶಿವಧರನೆ ಶಂಕರನೆ ಶಿವರಮಣ ಶಿವಕರಣ ಶಿವಶಿರಸ್ತುತ್ಯಚರಣ ॥
ಶಿವಶಯನಸುತದಹನ ಶಿವಕಥನ ಪುರಮಥನ
ಶಿವಗಳೆಯ ಶಿವನಿಳಯ ಶಿವಶಿಕ್ಷ ಸುರರಕ್ಷ
ಶಿವ ದುರಿತಗಜಸಿಂಗ ನಿಜಲಿಂಗ ಭವಭಂಗ ಶರಣಜನಭಕ್ತಸಂಗಾ ॥ ೪ ॥

ನೋಡುತಿರ್ಪುದರಲ್ಲಿ ಕೇಳುವನದೆಸೆಯಿಂದ
ರೂಢಿಯೊಳು ಮರಣವಾದವನ ತಾತನ ಪಿತನ
ಪಾಡುಗೆಲಿಸಿದನ ತನುಭವನ ಬಾಣಕೆ ಸಿಲ್ಕಿದವನ ಜನಕನ ಪುತ್ರನ ॥
ಕೂಡಿಕಾಳಗವಿತ್ತು ಮೆರೆವನೊಳುಸ್ನೇಹವನು
ಮಾಡಿದವನಯ್ಯನಿಂದರಳ್ವಕುಸುಮಾರಿಯನು
ಸೂಡಿದನೆ ಸುಚರಿತ್ರ ನಿಜಲಿಂಗ ಭವಭಂಗ ಶರಣಜನಭಕ್ತಸಂಗಾ ॥ ೫ ॥

ಧ್ವನಿಗೇಳುವುದರನಾಮದನ ಜನಕನ ಸುತನ
ತನುಜನನುಜನ ಬೊಪ್ಪನಣುಗ ನೊಡೆಯನಸತಿಯ
ಘನಗರ್ವದಿಂದಸೆರೆವಿಡಿದನಗ್ರಜನೆನಿಪ ದಿಗ್ವಸರತಾಳಿದವನ ॥
ಅನುಜೆಯರಸನಭಾವದಾತ್ಮಜನಸತಿಯಕುವ
ರನಪಿತರಪಿತನಜನಕನನಯ್ಯನಯ್ಯನ
ಪ್ಪನ ತಾತಶಿರಪಾಣಿ ನಿಜಲಿಂಗ ಭವಭಂಗ ಶರಣಜನಭಕ್ತಸಂಗಾ ॥ ೬ ॥

ಪ್ರಥಮರಾಶಿಯಪೆಸರ ವಾಹನಗೆ ಶಾಪಿಸಿದ
ಸತಿಯರಮಣನಬಳಿಗೆ ಮಂಕುವೇಷದೊಳೆಯ್ದಿ
ಹತಗೆಯ್ದುಶೂರನಪಿತನಪಡೆದಪೊಡವಿಪನಕಿರಿಯಸೊಸೆಯಳಮಾತೆಯ ॥
ಸತತಧರಿಸಿದನ ಶತ್ರುವಿನಣ್ಣನೊಡೆಯನಿಗೆ
ಸುತನಾದನಗ್ರಜನ ಸರಳಿಂದಕೆಡಪಿದನ
ಅತಿಶಯದಘವಕಳೆದ ನಿಜಲಿಂಗ ಭವಭಂಗ ಶರಣಜನಭಕ್ತಸಂಗಾ ॥ ೭ ॥

ಧರಣಿಯುಮರರಿಗೀವ ಕಾಂಚನದನಾಮುದಲಿ
ಕರೆಸಿಕೊಳುತಿರ್ಪ ದಿಗ್ವಸರ ಸತಿಯುಳ ಪಿತನ
ಶಿರಗಡಿದನಪ್ಪೆಯಣುಗನ ಜಠರವನುಸುತ್ತಿಕೊಂಡಿರ್ಪನಾರಾತಿಯ ॥
ಪರಮಸತ್ವಕೆಸೋತು ಸುಧೆಯನಿತ್ತನಸುತನ
ವರಸುತೆಯುಳಗ್ರಜನ ಪಟ್ಟದರಸಿಯುಸಹೋ
ದರಿಯುಜಾಮಾತಹರ ನಿಜಲಿಂಗ ಭವಭಂಗ ಶರಣಜನಭಕ್ತಸಂಗಾ ॥ ೮ ॥

ಸವಿರುಚಿಯ ತೋರುತಿರ್ಪುವು ಸಪ್ತವಿರುತಿಹನ
ತವೆಸಖನವಾಹನವ ಧರಿಸಿದಾತನ ಪಿತನ
ನವಮಾನವನು ಮಾಡಿದನ ನಾಮವರ್ಣಗರ್ಭಾನುಜನೆನಿಸಿಕೊಂಬನ ॥
ವಿವರವಾಗಿರುತಿರ್ಪ ಧ್ವಜಗಂಧಿನಿಯಪತಿಯ
ಯುವತಿಯುಳತನುಭವನ ಪೌತ್ರಗೊಲಿದೊಲಿದು ಬಾ
ಣವನಿತ್ತು ರಕ್ಷಿಸಿದೆ ನಿಜಲಿಂಗ ಭವಭಂಗ ಶರಣಜನಭಕ್ತಸಂಗಾ ॥ ೯ ॥

ಈಶನಂ ನಮಿಪೆ ಜಗದೀಶನಂ ರಜತಾದ್ರಿ
ವಾಸನಂ ನಿಖಿಳಭೂತೇಶನಂ ಕುಣಿವಗಿರಿ
ಜೇಶನಂ ಆಕಾಶಕೇಶನಂ ದೈತ್ಯಪುರನಾಶನಂ ನಿರ್ದೋಷನಂ ॥
ಶೇಷನಂ ಧರಿಸಿದವಿಲಾಸನಂ ಸ್ಮರಭಸ್ಮ
ಭೂಷನಂ ಭಕ್ತರುಲ್ಲಾಸನಂ ಶಂಭುಸ
ರ್ವೇಶ ವರಧವಳಾಂಗ ನಿಜಲಿಂಗ ಭವಭಂಗ ಶರಣಜನಭಕ್ತಸಂಗಾ ॥೧೦॥

ಅಂಗಜನಮುಂಗೈಯಗಿಣಿಯೆ ಮುತ್ತಿನಮಣಿಯೆ
ತುಂಗಜವ್ವನೆಯೆ ಸದ್ಗುಣಶ್ರೇಣಿ ಫಣಿವೇಣಿ
ಭೃಂಗಕುಂತಳೆ ಚಂದ್ರಮುಖಿಯೆ ಹರಿಣಾಂಬಕಿಯೆ ಶೃಂಗರದಹೊಂತಕಾರಿ॥
ಹೊಂಗಳಸಕುಚದ ಮೋಹನ್ನೆ ಮಾನಿನಿರನ್ನೆ
ಇಂಗಿತವಬಲ್ಲಪ್ರೈಯಾರಿ ಮನೊಹಾರಿಯೆನು
ತಂಗನೆಯುಸಂತಯಿಪನಿಜಲಿಂಗ ಭವಭಂಗ ಶರಣಜನಭಕ್ತಸಂಗಾ ॥೧೧॥

ಚಿತ್ತವಿಸು ಶಂಕರನೆ ಮತ್ತೊರ್ವಸತಿಯಳನು
ಅತ್ಯಂತಪ್ರೀತಿಯಿಂ ಪೊತ್ತೆ ಶಿರದೆಡೆಯಲ್ಲಿ
ಮತ್ತೆನಾನಾಕೆಗಿಂದತ್ತತ್ತಲಾದೆನೆನ್ನುತ್ತೆ ಪಾರ್ವತಿನುಡಿಯಲು ॥
ಗೋತ್ರವೈರಿಗೆಭೋಗವಿತ್ತೆ ನಾಗಜಚರ್ಮ
ವಸ್ತ್ರನಾದೊಡೆಕಿರಿದೆ ಚಿತ್ತವಲ್ಲಭೆ ಕೇಳೆ
ನುತ್ತ ಸಂತೈಸಿದನೆ ನಿಜಲಿಂಗ ಭವಭಂಗ ಶರಣಜನಭಕ್ತಸಂಗಾ ॥ ೧೨ ॥

ಮದನಾರಿಯೆನುತತಿಳಿಯದೆ ವಿಚಾರಿಸದೆ ದಯ
ನಿಧಿಯೆಂದು ಫಣಿರಾಜನಧಿಕ ಹರುಷದೊಳಿರಲು
ಗದಗದಿಪ ಶೀತಳದನದಿಯು ಸನ್ನಿಧಿಯೊಳಿಡಲದಕೆ ಬಲುಸ್ಥೈರ್ಯದೊಳಿ ॥
ಹದಗೆಟ್ಟುಕರ್ಣಕೇಳದವೊಲಾಯಿತು ನಿನ್ನ
ಬದಿಯೊಳಿರ್ದಾನು ಮಧ್ಯದಲಿ ಬಡವಾದೆನೆನೆ
ಸುದತಿಯಳಮುದ್ದಿಸಿದೆ ನಿಜಲಿಂಗ ಭವಭಂಗ ಶರಣಜ[illegible]ಸಂಗಾ ॥೧೩॥

ಶಶಿಯು ಗಗನದಲಿ ಬಲುಬಿಸುನೇತ್ರವನು ತಳೆದ
ನಿಶಿಯುವೈರಿಯು ಶೀತಳವನಾಂತ ಜಗವರಿಯು
ಲೊಸೆದುಹಿಮಗಿರಿರಾಜ ಖೇಚರಕೆಪಾರಿದನು ಹನುಮಂತ ರತಿಯನಾಂತ॥
ಆಸಮಶರ ಭೂಮಿಯನುಕದ್ದ ರಾಕ್ಷಸನಂತೆ
ಬಿಸಗೊರಲ ಚಿತ್ತೈಸೆನಲು ಮೆಚ್ಚಿ ಸತಿಯ ಸಂ
ತಸದಿಂದ ಮುದ್ದಿಸಿದೆ ನಿಜಲಿಂಗ ಭವಭಂಗ ಶರಣಜನಭಕ್ತಸಂಗಾ ॥೧೪॥

ಕನ್ನಡಿಯ ಪೋಲ್ವ ಪಲಗೆಯೊಳು ಪಾರ್ವತಿಯ ಮೊಗ
ಚೆನ್ನಾಗಿ ಪೊಳೆಯೆ ಗಗನದಿಪೊಳೆವ ಪೂರ್ಣಶಶಿ
ಯೆನ್ನುತಲಿಷಣ್ಮುಖಗೆಗಜಮುಖನುತೋರುತಿರಲದನೋಡುತಿರಲದರೊಳು
ತನ್ನರೂಪನುಕಂಡು ಯಿನ್ನುಂಟಿಪ್ರತಿಭಟಿಪ
ನೆನ್ನುತವನನುಸೀಳ್ವೆನೆಂದು ಸುಂಡಿಲನೆಗಪು
ವನ್ನುಯಕೆನೆರೆನಗುವ ನಿಜಲಿಂಗ ಭವಭಂಗ ಶರಣಜನಭಕ್ತಸಂಗಾ॥ ೧೫ ॥

ಕಂಗೊಳಿಪಕುಂತಳಕೆ ನಾಸಿಕಕೆ ವೈರತ್ವ
ಕಂಗಳಿಗೆ ರಾಜಿಸುವಫಣೆಗೆ ಬಲುವೈರತ್ವ
ಪೊಂಗಳಸದಂತೆಸೆವಕುಂಭಕುಂಭೋಪಮಿತಕುಚಕೆ ಮಧ್ಯಕೆವೈರವು ॥
ಇಂಗಿತದಿ ತಿಳಿಯಲಿಂತಪ್ಪಹಗೆ ತನಗಿರಲು
ಸಂಗಡಿಸಿಕೊಂಡು ಸಂತೈಸಿಕೊಂಡಿರುತಿರ್ಪ
ಮಂಗಳಾಂಗಿಯಕಾಂತ ನಿಜಲಿಂಗ ಭವಭಂಗ ಶರಣಜನ ಭಕ್ತಸಂಗಾ॥೧೬॥

ಘುಡುಘುಡಿಸು ತಡಿಗಡಿಗೆ ಖಡ್ಗಮಂ ಝಡಿಝಡಿದು
ನುಡಿನುಡಿವುತಡಿಗಡಿಗೆ ಗಡಗಡನೆ ಬಡಬಡಿಸು
ತಡಿಯಿಡುತಲೊಡೆದೊಡೆದು ನಡೆನಡೆದು ಬಿಡಬಿಡದೆ ಒಡನೆ
ಪಿಡಿಪಿಡಿದು ಗಡಬಡಿಸಿಪಡೆಗಿಡೆಯ ತಡೆಗಡಿದು [ಜಡಜಡಗಡಣವು॥
ಹೊಡೆಹೊಡೆದು ಕಡಿದುಡಿದ ದೃಢವೀರಭದ್ರನಂ
ಪಡೆದೊಡೆಯನಿಡುಜಡೆಯನಿಜಲಿಂಗಭವಭಂಗಶರಣಜನಭಕ್ತಸಂಗಾ॥೧೭॥

ಘುಳುಘುಳಿಪ ಜಳಧಿಯಿಂದೆಳಸೆಳಸಿ ಬಲುವಿಷವು
ಸುಳುಸುಳನೆ ಪೊರಮಟ್ಟು ಛಿಳಿಛಿಳಿಲು ಛಿಳಿಲೆನುತ
ಚಳಕದಿಂದುಗ್ರವೆಗ್ಗಳದಳೆದು ಪ್ರಳಯದಲಿ ದುಳುದುಳನೆ ಸುಡುತಬರಲು
ಕಳವಳಿಸಿ ಸುರರೆಲ್ಲ ಬಳಬಳಲಿ ಬಾಯಾರಿ
ಬೆಳುಗಳೆಯಧರಿಸಿದನೆ ಕಳೆದುಳುಹುಯೆನಲು ಗಳ
ದೊಳುದಳೆದಶಿತಿಕಂಠ ನಿಜಲಿಂಗ ಭವಭಂಗ ಶರಣಜನಭಕ್ತಸಂಗಾ॥ ೧೮ ॥

ಆರ್ಭಟಿಸಿ ಕೆಂಗಿಡಿಯುನೆಗೆದು ಛಿಟಿಛಿಟಿಲೆನುತ
ಕಾರ್ಬೊಗೆಯು ಸೂಸುತಲಿ ಸಿಮಿಸಿಮಿಲು ಸಿಮಿಲೆನುತ
ಪರ್ಬಿತಾಕಾಶಕ್ಕೆ ಪೇರುರಿಯು ಭುಗುಭುಗಿಲು ಭುಗಿಲೆಂಬರವದಿಂದಲಿ॥
ಪೆರ್ಬೆಂಕಿಪಸರಿಸಿತುಛಿಳಿಛಿಳಿಲುಛಿಳಿಲೆನುತ
ಸರ್ಬಜನಬೆದಬೆದರುತನಿತುಪರಿಯಲಿಸುಟ್ಟೆ
ಕೊರ್ಬಿದಸುರರಪುರವ ನಿಜಲಿಂಗ ಭವಭಂಗ ಶರಣಜನಭಕ್ತಸಂಗಾ॥ ೧೯ ॥

ಹೊಳೆಹೊಳೆವಪಾದದಂದುಗೆ ಛಲಿರುಛಲಿರೆನಲು
ತೊಳತೊಳಗಿತೋರ್ಪಕಿರುಜಂಗು ಘಲಿಘಲಿರೆನಲು
ಥಳಥಳಿಸುತಿರ್ಪ ಘಂಟೆಯನಾದ ಘಳಿಘಳಿಲು ಘಳಿಲೆನುತ ನುಡಿಯು
ಝುಳಝುಳಿಪ ಭುಜಕೀರ್ತಿ ಝುಣರುಝುಣಝುಣರೆನಲು [ತಿರಲು ॥
ನಳನಳಿಸುತಂಧಕಾಸುರನ ಯೆದೆಯೊಳುನಿಂದು
ನಲಿನಲಿದುಕುಣಿಕುಣಿದೆನಿಜಲಿಂಗಭವಭಂಗಶರಣಜನಭಕ್ತಸಂಗಾ ॥ ೨೦ ॥

ಕೆಂಡಗಣ್ಣಿನಕೋಪ ದಂಡಲೆಯೊಳತಿ ಕ್ರೋಧ
ಗೊಂಡು ಹುಂಕಾರದಲಿ ಡೆಂಥಣಿಸುತಸಹಾಯ
ಮಂಡಲಕೆಬಿದ್ದು ಬ್ರಹ್ಮಾಂಡಬಿರಿದೊಡೆವಂತೆ ಖಂಡೆಯವಝಳಪಿಸುತಲಿ॥
ಲಂಡಗಜರಾಕ್ಷಸನ ಕಂಡುವೇಗದೊಳೆಯ್ದಿ
ತುಂಡುಗಡಿದಾಶಿರವ ಕೊಂಡೊಯ್ದಿ ಮಲೆತವರ
ಗಂಡನಿನಗಿದಿರುಂಟೆ? ನಿಜಲಿಂಗಭವಭಂಗ ಶರಣಜನಭಕ್ತಸಂಗಾ ॥ ೨೧ ॥

ಕರೆದೊಲಿದು ಸದ್ಗುಣವನೊಲಿದು ಬೋಧಿಸಲು ಮೃಗ
ಧರಧರನೆ ನಿನಗಿಂದ ಪಿರಿಯರಿಲ್ಲದರಿಂದ
ಕೊರಲೊಳಗೆ ಬಗೆಬಗೆಯ ಶಿರಮಾಲೆಯನುತಳೆದು ಕರಿತೊವಲ
ಉರಗನಾಭರಣಮಂಧರಿಸಿಕೊಂಡೈನೀನು [ಪೊದೆದೆಯಭವಾ ॥
ಸಿರಿಯಿರಲು ಮರುಳಂತೆತಿರಿದುಂಡೆ ಸತಿಯನಾ
ದರು ಜೀಡಿದರಿಗಿತ್ತೆ ನಿಜಲಿಂಗ ಭವಭಂಗ ಶರಣಜನಭಕ್ತಸಂಗಾ ॥ ೨೨ ॥

ಕಡುಮೋಹದಿಂದ ಕೈವಿಡಿದು ರಕ್ಷಿಸುವಂತ
ಒಡೆಯರೆಂಬುವರಿಲ್ಲವಡಿಗಡಿಗೆಬಣ್ಣಿಸುವ
ಪಡೆವವರುಮುನ್ನಿಲ್ಲನಡುಸಿರದ ಕುಂತಲವು ತೊಡಕಿನಿಡುಜಡೆಯಾದುದು॥
ಉಡಿಯುಹುಲಿಚರ್ಮ ಮೈಯೊಳಗಿಡಿದಬೂದಿ ಕ
ಪ್ಪಡರಿತದನೇವೇಳ್ವೆ ಕರದೊಳಜಶಿರಮೊಡನೆ
ಬಿಡದೆಪಿಡಿದೈನೀನು ನಿಜಲಿಂಗಭವಭಂಗ ಶರಣಜನಭಕ್ತಸಂಗಾ ॥ ೨೩ ॥

ಸಿರಿವಂತನೆನಲು ಭಿಕ್ಷವನುಬೇಡಿದ ದೇವ
ಸಿರಿಯಿಲ್ಲವೆನಲು ಮೂಲೋಕದೊಡೆಯನು ನೀನು
ಧರಣೀಶನೆನಲು ಬಲಿಸುತನದ್ವಾರವಕಾಯ್ದೆ ಬಡವನೆನಲಪ್ರತಿಮನು ॥
ಹಿರಿಯನೆಂಬೆನೆ ಕಲ್ಲಲಿಡಿಸಿಕೊಂಡ್ಯೆನೀನು
ಕಿರಿಯನೆಂದೆನಲು ದೇವಾಧಿದೇವೇಶನಿಂ
ನಿರವಬಣ್ಣಿಸಲರಿದು ನಿಜಲಿಂಗಭವಭಂಗ ಶರಣಜನಭಕ್ತಸಂಗಾ ॥ ೨೪ ॥

ಪ್ರತಿರಹಿತನೆಂಬುವುದು ಹುಸಿಯಲ್ಲವೈಸದಾ
ಗತಿಯಾಪ್ತಸಾರಂಗ ತುಹಿನಕರನೇತ್ರದು
ಷ್ಕೃತದೂಷಣಾಂಬುಜೋದರಬಾಣ ಮೇರುಪರ್ವತಶರಾಸನಗಳಾಗಿ ॥
ಶತಪತ್ರಸಖಕೋಟಿ ತೇಜವಿಗ್ರಹನೆ ಮ
ನ್ಮಥಮಥನ ನಿನಗಲ್ಲದಿನ್ನೊರ್ವಗಿನಿತುಂಟೆ
ಚತುರಾಸ್ಯನುತಚರಣನಿಜಲಿಂಗಭವಭಂಗ ಶರಣಜನಭಕ್ತಸಂಗಾ ॥ ೨೫ ॥

ಶಿವನಿಮ್ಮನುತಿಸಲುರಗೇಂದ್ರನಂತಿರಬೇಕು
ಶಿವನಿಮ್ಮನೋಡುವರೆ ಸುರಪನಂತಿರಬೇಕು
ಶಿವನಿಮ್ಮಲಿಂಗದರ್ಚನೆಯಮಾಡಲು ಕಾರ್ತವೀರ್ಯನಂತಿರಲುಬೇಕು ॥
ಶಿವನಿಮ್ಮಜಪಿಸುವರೆ ಬಾಣನಂತಿರಬೇಕು
ಶಿವಕಥೆಯಕೇಳುವರೆ ದಶಕಂಠನಂತೆನಗೆ
ಯಿವನೆಲ್ಲ ಕೊಡದಾದೆ ನಿಜಲಿಂಗಭವಭಂಗಶರಣಜನಭಕ್ತಸಂಗಾ ॥ ೨೬ ॥

ಕಾಪುರುಷರಿಗೆ ಸುಜನರಿಂಗಿತದತಿಳಿವುಂಟೆ?
ಕೋಪಿಗಳಮನದೊಳಗೆ ಕರುಣೆಗಳವಿರಲುಂಟೆ?
ಪಾಪಿಮನುಜರುಗಳಲಿ ಧರ್ಮವಾಸನೆಯುಂಟೆ? ನಿಂದಕಗೆನೀತಿಯುಂಟೆ?
ಕೂಪದೊಳಗಿರುತಿರ್ಪ ಜಲವನೋಡಿದರುಂಟೆ?
ಆಪರಮಮೂಢರಿಗೆ ಶಿವನಿಮ್ಮಸ್ಮರಣೆಯಾ
ಳಾಪದೊರೆತಿರಲುಂಟೆ ನಿಜಲಿಂಗಭವಭಂಗ ಶರಣಜನಭಕ್ತಸಂಗಾ ॥ ೨೭ ॥

ಧುರಧೀರನಾದವಗೆ ಮರಣದಂಜಿಕೆಯುಂಟೆ?
ವರಜಿತೇಂದ್ರಿಯಗೆ ತರುಣಿಯಹಂಬಲಿರಲುಂಟೆ?
ಮೆರೆವತ್ಯಾಗಿಗೆ ಹಣದಪರವೆಯೆಂಬುವುದುಂಟೆ? ಬಲ್ಲರ್ಗೆಭಯಗಳುಂಟೆ?॥
ಪರಮಸುಜ್ಞಾನಿಗಳಿಗತಿಗರ್ವವಿರಲುಂಟೆ?
ಧರೆಯೊಳಗೆ ಮೋಕ್ಷವನು ಗಳಿಸುವವ ಶಿವನಿಮ್ಮ
ಸ್ಮರಣೆಯನುಬಿಡಲುಂಟೆ? ನಿಜಲಿಂಗಭವಭಂಗಶರಣಜನಭಕ್ತಸಂಗಾ ॥೨೮॥

ದೃಢವಿಲ್ಲದಗೆಭಜನೆ ಸಿದ್ಧಿಯಾಗುವುದುಂಟೆ?
ಕಡುಮಂದಮತಿಗೆಪೇಳಲು ಜ್ಞಾನಬರಲುಂಟೆ?
ನಡತೆಹೀನನಹೃದಯದೊಳು ಭಕ್ತಿಗುಣವುಂಟೆ? ಖೂಳರಿಗೆ ಸತ್ಯವುಂಟೆ? ॥
ಒಡವನಾದಂಗುದಾರತ್ವಬುದ್ಧಿಗಳುಂಟೆ?
ಪಡೆದುದಲ್ಲದೆ ಬರ್ಪುದುಂಟೆ? ನಿಮ್ಮನುನೆನೆಯ
ದೊಡೆ ಮುಕ್ತಿಪದಮುಂಟೆ? ನಿಜಲಿಂಗಭವಭಂಗ ಶರಣಜನಭಕ್ತಸಂಗಾ ॥

ಜಗದಂಬಕನಕೂಡೆ ತಮವುಸೆಣಸುವುದುಂಟೆ?
ಖಗರಾಜನೊಡನಾದ್ವಿಜಿಹ್ವೆಗೆಲ್ಲುವುದುಂಟೆ?
ಭುಗಿಲೆನಿಪವ್ಯಾಘ್ರನೊಳು ಮೇಷಜಯಿಸುವುದುಂಟೆ? ಕುಲಿಶಗಿರಿಗಂಜ
ಮೃಗರಾಜನೊಳುಕಾದಿ ಕುಂಜರನುಗೆಲಲುಂಟೆ? [ಲುಂಟೆ?
ಜಗದೊಡೆಯನಿಮ್ಮನಾಮುವನುತಿಪಪುಣ್ಯಾತ್ಮ
ರಿಗೆದೋಷವಿರಲುಂಟೆ? ನಿಜಲಿಂಗಭವಭಂಗಶರಣಜನಭಕ್ತಸಂಗಾ ॥೩೦॥

ಸಂಗೀತಸವಿಯುಬಧಿರನಿಗೆ ತೋರುವುದುಂಟೆ?
ಕಂಗುರುಡನಿಗೆ ಕನ್ನಡಿಯ ಹಂಬಲಿರಲುಂಟೆ?
ರಂಗುಮಾಣಿಕವು ಥಳಥಳಿಸುತಿರೆಪ್ಲವಗಕದರಂಗದಪರೀಕ್ಷೆಯುಂಟೆ?
ಕಂಗೊಳಿಸುವಿನಿಗೋಲರುಚಿಯುಬೋಡನಿಗುಂಟೆ?
ಮಂಗಳಾತ್ಮಕನಿಮ್ಮ ದಿವ್ಯನಾಮುವತಿಳಿಯ
ದಂಗೆ ಭವಬಿಡಲುಂಟೆ? ನಿಜಲಿಂಗಭವಭಂಗ ಶರಣಜನಭಕ್ತಸಂಗಾ ॥೩೧॥

ಮರಣಕಾಲಕೆಬರಿದೆ ಅರಸುತನಬರಲೇನು?
ಪರಮರೋಗದೊಳು ಘೃತಪರಮಾನ್ನವಿರಲೇನು?
ಹರಿಣಾಕ್ಷಿವೃದ್ಧನಾಗಿರುವಾಗಬರಲೇನು? ಧರಣಿಯೊಳುಬೆಳೆದಬೆಳೆಯು ॥
ಉರಿದುಹೋಗಲುಬಳಿಕ ಪಿರಿಯುಮಳೆಬರಲೇನು?
ಹರಣವಳಿಯುದಮುನ್ನ ನಿಮ್ಮಸ್ಮರಿಸದಮನುಜ
ನಿರಲೇನು? ಧರೆಯೊಳಗೆ ನಿಜಲಿಂಗಭವಭಂಗ ಶರಣಜನಭಕ್ತಸಂಗಾ ॥೩೨॥

ಪತಿಯನಿಂದಿಸುತಿರ್ಪ ಸತಿಯಿರ್ದುಫಲವೇನು?
ಅತಿಮಂದಮತಿಯಾದ ಸುತನಿರ್ದುಫಲವೇನು?
ಮತಿಯಿಲ್ಲದವನಸಂಗತಿಯಿರ್ದುಫಲವೇನು? ಹಿತವಿಲ್ಲದರಬಳಿಯೊಳು ॥
ಸತತಮನಮುಟ್ಟಿ ಧಾವತಿಯಮಾಡಿದರೇನು?
ಚತುರಾಸ್ಯನಮಿತ ನಿಮ್ಮಯಪುಣ್ಯನಾಮವನು
ಸ್ತುತಿಸದವನಿರ್ದೇನು? ನಿಜಲಿಂಗಭವಭಂಗ ಶರಣಜನಭಕ್ತಸಂಗಾ ॥೩೩॥

ಚೋರನಿಂದಿಸಲಾಗಿ ಚಂದಿರಗೆಕುಂದೇನು?
ಪೋರನಿಂದಿಸಲಾಗಿ ಪ್ರಾಜ್ಞರಿಗೆಕುಂದೇನು?
ದಾರಿದ್ರನಿಂದಿಸಲು ಧನವಂತನಿಗೆ ಬಂದಕುಂದೇನು? ಹುಟ್ಟಂಧಕಂ ॥
ಘೂರಿಕೋಪದಿಪಳಿಯೆ ಭಾಸ್ಕರಗೆಕುಂದೇನು?
ಮಾರಾರಿನಿಮ್ಮನಿಂದಿಸುವವರು ನರಕದೊಳು
ಸೇರುವರು ಸತ್ಯವಿದುನಿಜಲಿಂಗಭವಭಂಗ ಶರಣಜನಭಕ್ತಸಂಗಾ ॥ ೩೪ ॥

ಬಲುಲೋಭಿಗಳಬಳಿಯ ಧನವಿರ್ದುಫಲವೇನು?
ಕಲಿಯಲ್ಲದವಗೆ ಆಯುಧಮಿರ್ದುಫಲವೇನು?
ನೆಲೆಯರಿತು ವೋದಲರಿಯದನಬಳಿಯೊಳು ಕಾವ್ಯಸಾರಂಗಳಿರ್ದರೇನು?
ಹೊಲಬರಿಯದನಬಳಿಯ ಸಂಜೀವನಿರ್ದೇನು?
ಮಲಹರನೆ ನಿಮ್ಮಭಜಿಸದ ಮನುಜ ನರಜನ್ಮ
ದಲಿಬಂದು ಫಲವೇನು? ನಿಜಲಿಂಗಭವಭಂಗ ಶರಣಜನಭಕ್ತಸಂಗಾ ॥೩೫॥

ಸಂಗರಕೆಭೀತಿಗೊಂಬುವ ಬಂಟನಿರ್ದೇನು?
ಮುಂಗಂಡುಮಾತನಾಡದ ಸಚಿವನಿರ್ದೇನು?
ಇಂಗಿತವನರಿದು ನಡೆಯುದಗೆನಿತು ಇರ್ದೇನು? ವಿಮಲಶಾಸ್ತ್ರಾಗಮುವನು ॥
ಅಂಗಯಿಸಿವೋದಿಕೊಳ್ಳದಪಾರ್ವನಿರ್ದೇನು?
ಅಂಗಭವಹರನಿಮ್ಮಸ್ತುತಿಮಾಡದಿರ್ಪಪಾ
ಪಂಗಾತ್ಮನಿರ್ದೇನು? ನಿಜಲಿಂಗಭವಭಂಗ ಶರಣಜನಭಕ್ತಸಂಗಾ ॥ ೩೬ ॥

ಕೊಟ್ಟಬಳಿಕಿನ್ನು ಮನದೊಳಗೆ ಕುದಿವನುಮೂರ್ಖ
ಕೆಟ್ಟುಪಿಸುಣಿಪನೆಂಟರನ್ನು ಸೇರುವ ಮೂರ್ಖ
ನಿಷ್ಠೆವಂತರನೋಡಿನಿಂದಿಸುವನತಿಮೂರ್ಖದಯದೊಳಾಡುವವೊಡೆಯನ॥
ಬಿಟ್ಟೋಡಿದೂರಿಕೊಂಬುವನೀಗ ಕಡುಮೂರ್ಖ
ಸೃಷ್ಟಿಗೀಶ್ವರ ನಿಮ್ಮಧ್ಯಾನವನು ಮನದೊಳಗೆ
ಬಿಟ್ಟೋಡುವನುಮೂರ್ಖ ನಿಜಲಿಂಗಭವಭಂಗ ಶರಣಜನಭಕ್ತಸಂಗಾ ॥ ·

ಸರಿಯಲ್ಲದರಕೂಡೆ ವಾದಿಸುವನತಿಮೂರ್ಖ
ಗುರುಹಿರಿಯರುಸಿರ್ದ ವಾಕ್ಯವಮಿಾರುವನುಮೂರ್ಖ
ಗರುವತನವನುಕಳೆದುಹಮ್ಮನಾಡುವಮೂರ್ಖ ಗಾಡಿಕಾತಿಯರೊಲವನು॥
ನೆರೆನಂಬಿನಿಜವೆಂದು ಮರುಳಗೊಂಬುವ ಮೂರ್ಖ
ಕರುಣನಿಧಿ ಭಕ್ತವತ್ಸಲ ನಿಮ್ಮ ನಾಮವನು
ಸ್ಮರಿಸದವಕಡುಮೂರ್ಖ ನಿಜಲಿಂಗಭವಭಂಗ ಶರಣಜನಭಕ್ತಸಂಗಾ ॥೩೮॥

ಅಂತರಂಗವಕಪಟಮನುಜಗುಸಿರ್ವನು ಮೂರ್ಖ
ಚಿಂತಾತುರನೊಳುತಾಂ ಸರಸವಾಡುವಮೂರ್ಖ
ಸಂತೆಯೊಳುಶಾಸ್ತ್ರವನುಪೇಳಿ ಕೇಳ್ವನುಮೂರ್ಖ ತನಗಿಂದಬಲ್ಲಿದರೊಳು ॥
ಪಂತವನುಕಟ್ಟಿಕೊಂಬುವನೀಗ ಕಡುಮೂರ್ಖ
ಕಂತುಹರ ನಿಮ್ಮ ನಾಮವನುತಿಸದಿರ್ಪನ
ತ್ಯಂತವಾಗಿಹಮೂರ್ಖ ನಿಜಲಿಂಗಭವಭಂಗ ಶರಣಜನಭಕ್ತಸಂಗಾ ॥೩೯॥

ಮನ್ನಣೆಯಕೊಡದರಾವಿಗೆಹೋಗುವವ ಮೂರ್ಖ
ನನ್ಯರನು ಧಿಕ್ಕರಿಸಿಯಾಡಿಕೊಂಬುವ ಮೂರ್ಖ
ಹೊನ್ನುಳ್ಳಮನುಜರನುನೋಡಿ ಮರುಗುವ ಮೂರ್ಖ ತನ್ನೊಳೇನುವನರಿ
ಉನ್ನತೋನ್ನತಪಂಡಿತರನು ಹಳಿವವ ಮೂರ್ಖ [ಯದೆ ॥
ಪನ್ನಂಗಭೂಷಣಾನ್ವಿತ ನಿಮ್ಮಚಾರಿತ್ರ
ವನ್ನು ಜರೆವವಮೂರ್ಖ ನಿಜಲಿಂಗ ಭವಭಂಗ ಶರಣಜನಭಕ್ತಸಂಗಾ॥೪೦॥

ಏಕಾಂತವಾಡುವಲ್ಲಿಗೆ ಹೋಗದವಜಾಣ
ಲೋಕದೊಳಗವರವರತೆರದಿ ನಡೆವವಜಾಣ
ಕಾಕುಮನುಜರನು ಸರಿಕಟ್ಟಿಕೊಳದವಜಾಣ ಭೂಕಾಂತನಾಸ್ಥಾನದಿ ॥
ಜೋಕೆಯೊಳಗೇಕ ಚಿತ್ತದಿನಿರುವವನುಜಾಣ
ಲೋಕೇಶ ನಿಮ್ಮಪಾದವನಂಬಿದವಜಾಣ
ಕಾಕೋದರಾಭರಣ ನಿಜಲಿಂಗ ಭವಭಂಗ ಶರಣಜನಭಕ್ತಸಂಗಾ ॥ ೪೧ ॥

ಮಂದಮತಿನಿಂದಿಸಲು ತಾಳಿಕೊಂಡವಜಾಣ
ನೊಂದೆಮನದಲಿಧರ್ಮವನು ಮಾಡುವವಜಾಣ
ಬಂದಬಹುಚಿಂತೆಯಲಿ ಧೈರ್ಯಪಡುವವಜಾಣ ಹೊಂದಿನಿಂಕಲಹಂಗಳು ॥
ಸಂಧಿಸಲು ಶಾಂತಗುಣವನುತಾಳಿದವಜಾಣ
ನಿಂದುಶೇಖರ ನಿಮ್ಮಪೂಜಿಪನು ಕಡುಜಾಣ
ನಂಧಕಾಸುರಹರನೆ ನಿಜಲಿಂಗ ಭವಭಂಗ ಶರಣಜನಭಕ್ತಸಂಗಾ ॥ ೪೨ ॥

ಸತಿಯಳಿಗೆ ಸಲುಗೆಯನು ಕೊಡದವನುಬಲುಜಾಣ
ಚತುರನುಡಿಬಾರದಿರೆ ಸುಮ್ಮನಿರುವವಜಾಣ
ಗತಿಯಿಲ್ಲದವಗೆ ಹೊಣೆಯಾಗದವ ತಾಜಾಣ ಯೋಗ್ಯವಲ್ಲದ ನುಡಿಗಳ ॥
ಶ್ರುತಿಗೊಟ್ಟುಕೇಳಲೊಲ್ಲದೆ ತೊಲಗುವವಜಾಣ
ಶಿತಿಕಂಠನಿಮ್ಮ ಶ್ರೀಪಾದವನುನಂಬಿದವ
ಕ್ಷಿತಿಯಲ್ಲಿಕಡುಜಾಣ ನಿಜಲಿಂಗ ಭವಭಂಗ ಶರಣಜನಭಕ್ತಸಂಗಾ॥ ೪೩ ॥

ಕೃಷ್ಟಿ ಧೆಯಿಲ್ಲದಾರೋಗಣೆಯ ಮಾಡದವಜಾಣ
ಮಧುರವಾಕ್ಯವನಾಡಿ ಮೆಚ್ಚುವಡೆವವಜಾಣ
ನಧಿಕಕೋಪಿಗಳೊಡನೆ ಸೋತುಬರುವವಜಾಣ ಚೂರ್ಣಕ್ಕೈಸೇರ್ವತನಕ॥
ವದನದಲಿಕ್ರಮುಕವನು ಹಾಕಿಕೊಳದವಜಾಣ
ಹೃದಯದೊಳಗಾವಾಗ ನಿಮ್ಮ ಜಪವನ್ನು ತ
ಪ್ಪದೆಮಾಳ್ಪವನುಜಾಣ ನಿಜಲಿಂಗ ಭವಭಂಗ ಶರಣಜನಭಕ್ತಸಂಗಾ॥೪೪॥

ಮನೆಯಕದನವನು ಪರರೊಳುಪೇಳದವಜಾಣ
ತನುಜರನುಜರೊಳು ಕೋಪವನುತಡೆದವಜಾಣ
ಧನವಿರಲುಧರ್ಮವನುಗಳಿಸಿಕೊಂಬುವಜಾಣ ದುರ್ಜನರುಹಳಿವುತಿರಲು॥
ಮನಕೆತಾರದವ ವ್ರತಗಳನು ಬಿಡದವಜಾಣ
ನನಲಾಕ್ಷ ನಿಮ್ಮಧ್ಯಾನವನು ಮಾಡುತಲಿರ್ಪ
ವನುನೋಡೆಸಲೆಜಾಣ ನಿಜಲಿಂಗಭವಭಂಗ ಶರಣಜನಭಕ್ತಸಂಗಾ ॥೪೫॥

ತೆಂಗಿನೊಳು ವಿಮಲೋದಕವತುಂಬಿದವರಾರು ?
ಭೃಂಗವೈರಿಗೆ ಪರಿಮಳವನಿತ್ತವರದಾರು ?
ಕಂಗೊಳಿಪಮಾಯೂರನಂಗಕ್ಕೆ ನಲವಿಂದೆ ಬಗೆಬಗೆಯ ಬಣ್ಣಂಗಳ॥
ರಂಗುನೇತ್ರೋತ್ಸವಕೆ ಬರೆದುಬಿಟ್ಟವರಾರು ?
ಮಂಗಳಾತ್ಮಕನಿಮ್ಮ ದಿವ್ಯನಾಮವತಿಳಿಯ
ದಂಗೆಭವಬಿಡಲುಂಟೆ? ನಿಜಲಿಂಗ ಭವಭಂಗಶರಣಜನಭಕ್ತಸಂಗಾ ॥ ೪೬ ॥

ಜನನಿಯುದರದೊಳಿರುವ ಶಿಶುವಸಲಹಿದರಾರು ?
ಅನುನಯದೊಳಲ್ಲಿಂದ ಪೊರಮಡಿಸುತಿಹರಾರು ?
ದಿನದಿನಕೆಹೆಚ್ಚಾಗಿ ಬೆಳೆಸುತಿರ್ಪವರಾರು? ಬಳಿಕೊಂದುನೆವದಿಂದಲಿ॥
ತನುವಿನೊಳಗಿರ್ದಪ್ರಾಣವನು ತೊಲಗಿಪರಾರು ?
ಅನಲಾಕ್ಷನೀನಲ್ಲದಿನ್ನುಂಟೆ? ಭಕ್ತಿಗುಣ
ವನುಕೊಟ್ಟು ಸಲಹೆನ್ನ ನಿಜಲಿಂಗಭವಭಂಗ ಶರಣಜನಭಕ್ತಸಂಗಾ ॥೪೭॥

ರತಿಕೇಳಿಯಾನಂದವೆಂದೆಂಬನೆವದಿಂದ
ಪತಿಯುಜಠರವಬಿಟ್ಟು ತನ್ನತಾಪೊರವುಟ್ಟು
ಸತಿಯುಗರ್ಭಕೆಬಂದುಬಂದುಗೂಡುತನಿಂದುದಿನದಿನಕೆಪಿರಿದುಬಲಿದು॥
ಮಿತಿಯಿಂದಲೊಂಭತ್ತುಮಾಸತುಂಬಿದಬಳಿಕ
ಕ್ಷಿತಿಗೆ ಮುಟ್ಟಿಸುವ ದೇವರದೇವ ನಿಮ್ಮ ಸ
ತ್ಕೃತಿಯಬಲ್ಲವರಾರು? ನಿಜಲಿಂಗಭವಭಂಗ ಶರಣಜನಭಕ್ತಸಂಗಾ ॥ ೪೬ ॥

ಹುಟ್ಟಿದಾಕ್ಷಣ ಜನನಿಜನಕರಿಗೆ ಕಡುಮೋಹ
ಪುಟ್ಟಿನಲವಿಂದ ಬಳಿಕೊಂದು ಪೆಸರನುಕೊಟ್ಟು
ತೊಟ್ಟಿಲೊಳಗಿಟ್ಟು ಸಂತಸದಿ ಜೋಜೋ ಎಂದು ಪಾಡುವರು ಸಂಭ್ರಮ
ನಿಟ್ಟಿಸುವರಡಿಗಡಿಗೆ ಮುದ್ದಿಸುತೆ ಮೊಲೆವಾಲ [ದೊಳು ॥
ಕೊಟ್ಟುರಕ್ಷಿಸುವಂತೆ ನೇಮಿಸಿದ ಶಿವನಿಮ್ಮ
ಕಟ್ಟಳೆಗೆಸರಿಯುಂಟೆ? ನಿಜಲಿಂಗಭವಭಂಗಶರಣಜನಭಕ್ತಸಂಗಾ ॥ ೪೯ ॥

ಪುಡಿಹಸುಳೆಯಾಗಿರುವ ಮತ್ತೆಗಾಗೂ ಎಂದು
ಪೊಡೆಮುಗ್ಗುಲಾಗಿ ಬಳಿಕಂಬೆಗಾಲಿಕ್ಕುತಲಿ
ನಡೆಗಲಿತುಬೀಳುತೇಳುತನಗುತಲಳುತತೊದಲ್ನುಡಿಯಿಂದಮಾತಾಡುತಾ॥
ಒಡನೆ ಸರಿಗೆಳೆಯರೊಳು ಬಾಲಕೇಳಿಯನೆಲ್ಲ
ಬೆಡಗಿನಿಂದಾಡುವುದ ನೇಮಿಸಿದೆ ಮೂರುಜಗ
ದೊಡೆಯ ನೀನಹುದಹುದು ನಿಜಲಿಂಗಭವಭಂಗ ಶರಣಜನಭಕ್ತಸಂಗಾ॥

ವಿನಯದಲಿ ಬಾಲಕೇಳಿಯ ನಾಡುತಿರೆ ಬಳಿಕ
ಲನುನಯದೊಳುಪನಯನವನು ಮಾಡಿ ಕುಲವಿದ್ಯೆ
ಯನು ಕಲಿಸಿ ವೈವಾಹವಾದ ಬಳಿಕಿನ್ನು ಯುವ್ವನದೇವಿ ಬಂದೊದಗಲು ॥
ತನಗಾರು ಸರಿಯಿಲ್ಲವೆನುತ ಪಶುಧನಧಾನ್ಯ
ವನುತನ್ನದೆಂದೆನುತಗಳಿಸುವ ಸ್ವಾತಂತ್ರ್ಯ
ವನುಜಗಕೆ ನಿರ್ಮಿಸಿದೆ ನಿಜಲಿಂಗ ಭವಭಂಗ ಶರಣಜನಭಕ್ತಸಂಗಾ॥೫೧॥

ಪ್ರಾಯದಿಂದಿರೆ ಜರಾಂಗನೆಯು ಬಂದೆಡೆಗೊಳ್ಳಲು
ಕಾಯವದು ಕೆಟ್ಟು ಪಂಚೇಂದ್ರಿಯಂ ಸವಿಗೆಡಲು
ಸಾಯಬೇಕಿನ್ನೆನುತ ನುಡಿವುತಿರೆ ಮರಣಕಾಲಕೆ ರೋಗಪ್ರಾಪ್ತವಾಗೆ ॥
ವಾಯುದೇಹವ ಬಿಟ್ಟು ತೊಲಗಿದರೆ ಕಿಚ್ಚಿನೊಳು
ಬೇಯಲಿಡೆರೂಪಳಿದು ಪೋಗುವುದು ಶಿವನಿಮ್ಮ
ಮಾಯೆಬಲ್ಲವರಾರು ? ನಿಜಲಿಂಗಭವಭಂಗ ಶರಣಜನಭಕ್ತಸಂಗಾ ॥ ೫೨ ॥

ಮನುಮಥನ ಸತ್ಕ್ರೀಡೆಯಂತ್ರದಲಿ ಮದನಾಂಬು
ಜನಕನಂಗವ ತೊಲಗಿ ಜನನಿಯುದರದಿನಿಂದು
ಘಣಿಲನೇ ಹೇಸಿಗೆಯ ರಕ್ತಮಾಂಸಕ್ರಿಮಿಯ ಕರ್ಮದೊಳು ಬೆಳೆದುಬೆಳೆದು॥
ಘನಶಿಖೆಯವುಬ್ಬಸದಿ ಮುಡುಗಿಕೊಂಡಿರುವುದನು
ಜನನಕಾಲದ ಕಷ್ಟವನುಯೆನಗೆ ಪರಿಹರಿಸು
ಮನಸಿಜಧ್ವಂಸಿಯಹ ನಿಜಲಿಂಗಭವಭಂಗಶರಣಜನಭಕ್ತಸಂಗಾ ॥ ೫೩ ॥

ದೋಷವಾಸದ ಯೋನಿಯಿಂದ ಪುಟ್ಟಿದ ಬಳಿಕ
ಹಾಸಿಗೆಯೊಳಿಹ ತಗುಣಿ ಕೂರೆ ಚಿಕ್ಕಟ ಕಡಿಯ [ಹರು ॥
ಲಾಸಂಕಟವನುಂಡು ಹೊಟ್ಟೆನೊಂದಳುತಿರಲು ಮೊಲೆಯನೇ ಕುಡಿಸುತಿ
ಹೇಸಿಕೆಯ ಮಲಮೂತ್ರದೊಳು ಹೊರಳಿ ಶಿಶುತಾನು
ಘಾಸಿಯಾಗುವುದ ಪೇಳಲು ನುಡಿಗಳಿಲ್ಲ ಪ್ರ
ಯಾಸವನು ಬಿಡಿಸೆನಗೆ ಶಿವಲಿಂಗ ಭವಭಂಗಶರಣಜನಭಕ್ತಸಂಗಾ ॥೫೪॥

ತರಳತನವದು ಮೀರಿಬಳಿಕ ಯವ್ವನ ಬರಲು
ತರುಣಿಸುತರಾಗಲವರನು ಸಲಹಬೇಕೆನುತ
ಪರಿಪರಿಯಧಾವತಿಯನೆಗಳಿ ಬಳಬಳಲಿ ನಾನಾಯೋಚನೆಯನೆಸಗುತಾ ॥
ಇರಲನಿತರೊಳು ಸತಿಯುಸುತರು ಮೃತರಾಗಲ್ಕೆ
ಪರಮಶೋಕದೊಳು ಚಿಂತಿಸುವ ಕರಕರೆಯನ್ನು
ಪರಿಹರಿಸಿ ಸಲಹೆನ್ನ ನಿಜಲಿಂಗ ಭವಭಂಗಶರಣಜನಭಕ್ತಸಂಗಾ ॥ ೫೫ ॥

ಬದುಕು ಮನೆಯನು ಮಾಡಿಕೊಂಡಿರೆ ಜರಾಂಗನೆಯು
ಒದಗಲಾಕ್ಷಣದಲ್ಲಿ ಇಂದ್ರಿಯಂಗಳು ತಮ್ಮ [ತಿರಲು॥
ಹದಗೆಡಲು ಸತಿಸುತರು ಮುದಿಪಾಪಿ ಸಾಯಲೊಲ್ಲನುಯೆಂದು ಹಳಿವು
ಇದು ಹೊರತು ಮರಣಕಾಲದೊಳೊಂದು ವ್ಯಾಧಿಯೊಳು
ಕುದಿಕುದಿದು ಪ್ರಾಣವನು ಬಿಡಬೇಕು ಸತ್ತು ಹು
ಟ್ಟದ ಬಗೆಯಮಾಡೆನಗೆ ನಿಜಲಿಂಗ ಭವಭಂಗಶರಣಜನಭಕ್ತಸಂಗಾ ॥೫೬॥

ಎಂಭತ್ತುನಾಲ್ಕುಲಕ್ಷದಯೋನಿಯೊಳಗೆಲ್ಲ
ಬೆಂಬಿಡದೆ ತೊಳತೊಳಲಿ ಸಕಲರೊಳು ಅಧಿಕವೆಂ
ದೆಂಬ ಮಾನುಷಜನ್ಮದಲಿ ಪುಟ್ಟಿ ಶಿವನೀನೆ ಕರುಣಿ ರಕ್ಷಕನು ಎಂದು ॥
ಇಂಬಾಗಿ ತಿಳಿತಿಳಿದು ನಂಬಿದೆನು ನಿನ್ನ ಪಾ
ದಾಂಬುಜವ ಬಿಡದಂತೆ ರಕ್ಷಿಪುದು ದುರಿತಾದ್ರಿ
ಶಂಬ ನೀನಹುದಹುದು ನಿಜಲಿಂಗ ಭವಭಂಗಶರಣಜನಭಕ್ತಸಂಗಾ॥ ೫೭ ॥

ಭವಜಲಧಿಯುತ್ತರಿಸಿ ಕಡೆಹಾಯ್ದು ಪೋಗುವಡೆ
ಹವಣಾಗಿಯಿರುತಿರ್ಪ ಕಾಯವೆಂದೆಂಬಹಡ
ಗವಿದು ಕೈಸಾರಿ ಬರ್ಪಸಮಯದಲಿ ನಿಮ್ಮ ಧ್ಯಾನವನು ಮರೆಯದಂತೆ॥
ವಿವರವಾಗಿರುತಿರ್ಪ ಧ್ವಜಗಂಧಿಯುವತಿತನು
ಭವನಪೌತ್ರನಿಗೊಲಿದೊಲಿದು ಬಾಣವನು ಕೊಟ್ಟು
ತವೆ ರಕ್ಷಿಸಿದೆ ನೀನು ನಿಜಲಿಂಗ ಭವಭಂಗಶರಣಜನಭಕ್ತಸಂಗಾ ॥ ೫೮ ॥

ಕನ್ನಡಿಯ ಪಳಿಯುವರಮನೆಯೊಳಗೆ ತಾನಿರ್ದು
ತನ್ನೊಳಗೆ ಮನೆಯನೆಲ್ಲವ ತೋರುವಂದದಲಿ
ಪನ್ನಂಗಭೂಷಣನೆ ನಿಮ್ಮೊಳಗೆ ಜಗವನೆಲ್ಲವ ತಾಳಿಕೊಂಡ ಬಳಿಕ ॥
ಇನ್ನೇನು ಪೇಳ್ವೆ ಜಗದೊಳಗೆಲ್ಲ ನೀನಿರ್ದು
ನನ್ನಿಯಿಂದರಿವ ಜಾಣರ್ಗೆ ರೂಪವತೋರ್ಪ
ವುನ್ನತೋನ್ನತ ಮಹಿಮ ನಿಜಲಿಂಗ ಭವಭಂಗಶರಣಜನಭಕ್ತಸಂಗಾ॥೫೯॥

ದಧಿಯುಮಥನಿಸಲಾಗಿ ನವನೀತ ತೋರ್ಪಂತೆ
ಸುಧೆಗೋಲಮಥನಿಸಲು ಸಕ್ಕರೆಯುದಿಸುವಂತೆ
ಮುದದಿಂದ ಚಂದನವತೇಯಲಾಕ್ಷಣದಲ್ಲಿ ಶ್ರೀಗಂಧಮುಣ್ಮುವಂತೆ ॥
ಅಧಿಕ ಜ್ಞಾನಾರೂಢರಾಗಿ ನಿಟ್ಟಿಸುವಸದು
ಹೃದಯರಿಗೆ ತಾನೆತಾನಾಗಿ ಸವಿಗೊಡುವ ದಯ
ನಿಧಿಯೆ! ನಿತ್ಯಾನಂದ ನಿಜಲಿಂಗ ಭವಭಂಗಶರಣಜನಭಕ್ತಸಂಗಾ ॥೬೦॥

ಮೊಲೆವಾಲಮೇಲೆ ಬಾಲಕರ ಮನವಿರುವಂತೆ
ಜಲಜ ಪರಿಮಳಕೆ ಷಟ್ಪದಿಯ ಮನವಿರುವಂತೆ
ಚೆಲುವಚಂದ್ರಮನಹಂಬಲು ಚಕೋರಕಕಿರುವತೆರನಂತೆ ಭಕ್ತಿಯಿಂದ ॥
ಒಲಿದು ಶಿವ ನಿಮ್ಮ ಧ್ಯಾನವ ಮಾಳ್ಪ ಸಜ್ಜನರು
ಹಲವು ದೋಷಗಳೆಲ್ಲ ಕಳೆದು ಮರಮರಳಿ ಭವ
ದಲಿ ಬಾರಮೊಲುಮಾಡು ನಿಜಲಿಂಗಭವಭಂಗಶರಣಜನಭಕ್ತಸಂಗಾ ॥೬೧॥

ಹಲವು ಜಲಕುಂಭದೊಳು ಭಾನುವಿನ ಪ್ರತಿಬಿಂಬ
ಗೆಲವಾಗಿ ತೋರುತಿರೆ ಗಗನದಲಿ ರಥದಿ ರವಿ
ಸಲೆ ತೇಜದಿಂದೊರ್ವನಿರುವಂತೆ ಪದಿನಾಲ್ಕು ಲೋಕದೊಳಗರ್ಥಿಯಿಂದ ॥
ನೆಲೆಗೊಂಡು ಪಿಂಡಾಂಡ ಬ್ರಹ್ಮಾಂಡದಲಿ ತುಂಬಿ
ನಲಿನಲಿದು ನೀವೆನೀವಾಗಿರ್ದು ಜಗದೊಡೆಯ
ಮಲಹರನೆ ಮಹದೇವ ನಿಜಲಿಂಗಭವಭಂಗ ಶರಣಜನಭಕ್ತಸಂಗಾ ॥೬೨॥

ಆವಮನೆಯೊಳಗಿರ್ದ ಜ್ಯೋತಿಗಳ ಕಳೆಯೊಂದೆ
ಆವ ಪಶುವಿನಲಿ ಬಹಕ್ಷೀರಗಳ ಸವಿಯೊಂದೆ
ಆವ ನೆಲದೊಳು ಬೆಳೆದ ತಿಲದೊಳಗೆ ಬರ್ಪ ತೈಲವ ನೋಡೆ ಗುಣವ
ಆವ ಕುಲದೊಳಗಿರಲದಾವ ನಾಮದೊಳಿರಲು [ದೊಂದೆ ॥
ಆವ ರೂಪಾಗಿರಲು ಒಳಗಿಹಪರಂಜ್ಯೋತಿ
ದೇವ ನೀನಹುದಹುದು ನಿಜಲಿಂಗಭವಭಂಗ ಶರಣಜನಭಕ್ತಸಂಗಾ ॥೬೩॥

ನಿಮ್ಮ ನಾಮಾಮೃತವ ಹಾಯೆಂದು ಸವಿವಂತೆ
ನಿಮ್ಮ ನಾಮವನುತಿಸಿ ಅಡಿಗಡಿಗೆ ಕುಣಿವಂತೆ
ನಿಮ್ಮ ನಾಮವ ನೆನೆದು ಹರುಷಾಬ್ಧಿಯೊಳು ಪೊಕ್ಕು ನಲಿದು ಈಸಾಡುವಂತೆ ॥
ನಿಮ್ಮ ನಾಮಂಗಳನು ನುತಿಸಿ ಮೈಮ್ಮರೆವಂತೆ
ನಿಮ್ಮ ನಾಮವ ಸತತ ಮನಮರೆಯದಿರುವಂತೆ
ನಿಮ್ಮ ನಾಮದೊಳಿರಿಸು ನಿಜಲಿಂಗಭವಭಂಗ ಶರಣಜನಭಕ್ತಸಂಗಾ ॥೬೪॥

ಒಮ್ಮೆ ಸಂಸಾರವನು ತೊರೆಯಬೇಕೆಂದೆಂಬು
ದೊಮ್ಮೆ ಸಂಸಾರವನು ಮಾಡಬೇಕೆಂದೆಂಬು
ದೊಮ್ಮೆ ದೇವರ ಭಜನೆಯನುಮಾಡಿ ಸತ್ಯಪದವಿಯ ಪಡೆಯಬೇಕೆಂಬುವ॥
ಒಮ್ಮೆ ದೇವರ ಭಜನೆಯಿಂದೇನು ಫಲವೆಂದು
ಹಮ್ಮೈಸಿ ಹರಿವುತಿಹ ಮನವನೊಬ್ಬುಳಿಗೊಳಿಸಿ
ನಿಮ್ಮ ಸ್ಮರಣೆಯೊಳಿರಿಸು ನಿಜಲಿಂಗಭವಭಂಗ ಶರಣಜನಭಕ್ತಸಂಗಾ ॥೬೫॥

ಏನರಿಯದ ಜ್ಞಾನಿಯಿವನುಯೆಂದೆನು ತೆನ್ನ
ಜ್ಞಾನನಿಧಿ ದಯದಿಂದಮೆನ್ನ ಬಿಡದಿರು ದೇವ
ನೀನು ಶಶಿಧರ ಶಂಭು ಶಂಕರನು ಸ್ಥಿರಕರನು ನೀನೊಲಿದು ಪಾಲಿಸಭವಾ॥
ನೀನು ಮೊಲಿದೊಡೆ ಶಂಭು ಪರಮಾತ್ಮ ಪರದೈವ
ನೀನೆ ಪರತರವಸ್ತು ಮೂರು ಲೋಕಕ್ಕೊಡೆಯ
ನೀನಲ್ಲದಿನ್ನುಂಟೆ? ನಿಜಲಿಂಗಭವಭಂಗ ಶರಣಜನಭಕ್ತಸಂಗಾ ॥ ೬೬ ॥

ಸ್ಥಿರಪದವು ಬರುತಿರ್ಪ ಚರಿತೆಯನು ನುಡಿವಂತೆ
ಮರಳಿ ಬಲುಭವಕೆ ಬಹ ಚರಿತವನು ತೊರೆವಂತೆ
ನರಲೋಕದಾಟದೊಳಗಿದ್ದುದಕೆ ಮನವ ತೊಡಕಿಸದೆ ಹೊರಗಾಗುವಂತೆ॥
ನಿರುತವೆನ್ನಾತ್ಮದೊಳು ಶಿವನಿಮ್ಮ ನಿಜರೂಪ
ಹರಿವಂತೆ ನಿಮ್ಮ ಶ್ರೀಚರಣಗಳ ಬೆರೆವಂತೆ
ವರವಿತ್ತು ಸಲಹೆನ್ನ ನಿಜಲಿಂಗ ಭವಭಂಗಶರಣಜನಭಕ್ತಸಂಗಾ ॥ ೬೭ ॥

ನೀನಿರ್ದಸಮಯದಲಿ ನಿನ್ನತಿಳಿಯದೆಜ್ಞಾನ
ಹೀನನಾದೊಡೆಬಳಿಕ ನೀತೊಲಗಿದಾಕ್ಷಣವೆ
ಏನಪೇಳುವೆನಿನ್ನ ಬಗೆಬಗೆಯ ಯೋನಿಯೊಳು ತೊಳತೊಳಲಿಬಳ್ಳಲುತ್ತೆ॥
ನಾನೆಂತು ಜೀವಿಸುವೆನೈಯ ಕರುಣಾಕರನೆ
ಸ್ವಾನುಭಾವದೊಳೆನ್ನ ಮನವನಿಲ್ಲಿಸಿ ನಿಮ್ಮ
ಧ್ಯಾನದೊಳಗಿರಿಸೆನ್ನ ನಿಜಲಿಂಗಭವಭಂಗ ಶರಣಜನಭಕ್ತಸಂಗಾ ॥ ೬೮ ॥

ನಿತ್ಯವಾದುದನೆಲ್ಲ ಹಿಡಿಯಲೊಲ್ಲದು ಮನವು
ಸತ್ಯವಾಗಿಹರಡಗಿಕೊಂಡಿಹುದು ಆಮನವು
ಸತ್ಯಕ್ಕೆಕುಣಿಕುಣಿದು ಬರುತಿಹದದೊಮ್ಮೆ ಸತ್ಯವಬಿಟ್ಟುಪುಸಿಯುತಿಹುದು॥
ಮೃತ್ಯುಂಜಯನೆ ನಿಮ್ಮಮರೆಹೊಕ್ಕೆ ದುರ್ಮನವ
ಕತ್ತರಿಸಿ ಸನ್ಮಾರ್ಗದೊಳುಬಿಡದೆ ಮನವಿತ್ತು
ನಿತ್ಯಸಲಹುವುದೆನ್ನ ನಿಜಲಿಂಗಭವಭಂಗ ಶರಣಜನಭಕ್ತಸಂಗಾ ॥ ೬೯ ॥

ಪರಸತಿಯುಬಳಿಗೆಳಸುತಿದೆ ಕಾಮವೆಂಬುವುದು
ಪಿರಿದುಬೈದಾಡುತ್ತಲಿದೆ ಕ್ರೋಧವೆಂಬುವುದು
ಧರುಮವನುಮಾಡಲೀಸದುಲೋಭವೆಂಬುವುದು ಅರಿಯಗೊಡದೀ
ಗುರುಹಿರಿಯರಿಗೆ ನಮಿಸಗೊಡದು ಮದವೆಂಬುವುದು [ಮೋಹವು ॥
ದುರಿತವೈರವಬಿಟ್ಟು ಮರಹಿಯಿವುಗಳನುಪರಿ
ಹರಿಸಿನೀಂಸಲಹಯ್ಯ ನಿಜಲಿಂಗಭವಭಂಗ ಶರಣಜನಭಕ್ತಸಂಗಾ ॥ ೭೦ ॥

ಪರುಸಲೋಹವನು ತನ್ನಂತೆಮಾಡುವತೆರದಿ
ಕುರುಡಿಪನಪುಳುವು ತನ್ನಂತೆಮಾಡುವತೆರದಿ
ಪರಿಮಳಿಪಚಂದನವು ಕಾಮುರವತನ್ನಂತೆಮಾಡಿಕೊಂಬುವ ತೆರದೊಳು ॥
ಪರಶಿವನೆ ನಿನ್ನಭಕ್ತರಿಗೆ ಸ್ಥಿರಪದವೀವ
ಬಿರುದಾಂಕನೆಂದುನಂಬಿದೆ ನೆನ್ನಭವವನ್ನು
ಪರಿಹರಿಸಿ ಸಲಹಯ್ಯ ನಿಜಲಿಂಗಭವಭಂಗ ಶರಣಜನಭಕ್ತಸಂಗಾ ॥ ೭೧ ॥

ಖನ್ನೊಳಪರಾಧವೇನಯ್ಯ ದೇವರದೇವ
ನಿನ್ನಿಂದನಡೆವವನು ನಿನ್ನಿಂದನುಡಿವವನು
ನಿನ್ನಿಂದ ಸಕಲಸುಖದುಃಖಗಳನನುಭವಿಸಿಕೊಂಡಿರ್ಪ ಬಡವನಾನು ॥
ಪನ್ನಗವಿಭೂಷಣನೆ ಪಾವನ್ನವಿಗ್ರಹನೆ
ನಿನ್ನಧ್ಯಾನವಮರೆಯದಂತೆ ಸದ್ಗುಣವಿತ್ತು
ಎನ್ನ ಸಲಹುವುದಯ್ಯ ನಿಜಲಿಂಗಭವಭಂಗ ಶರಣಜನಭಕ್ತಸಂಗಾ ॥ ೭೨ ॥

ಕುಸುಮವನು ಕಿವಿಗೆಸಾರ್ಚಿದರೆ ಪರಿಮಳವಹುದೆ
ರಸದಾಳಿಯುರುಸವಿಯ ನಾಸಿಕವುಸೇವಿಪುದೆ
ಕುಶಲವಿದ್ಯೆಗಳೆಲ್ಲ ಬಾಯಿತಾಂನೋಡುವುದೆ ಹಸಿಹಸಿದುಬಳಲುತಿರಲು ॥
ಎಸೆವನಯನವು ಭೋಜನವಮಾಡಿಕೊಂಬುವುದೆ
ಅಸಮಾಕ್ಷನಿನ್ನುಳಿದು ಗತಿಯಿಲ್ಲದುರಿತಗಳ
ನಶಿಪವೊಲುಮಾಡಯ್ಯ ನಿಜಲಿಂಗಭವಭಂಗ ಶರಣಜನಭಕ್ತಸಂಗಾ ॥ ೭೩ ॥

ಮಾರುತನುಸುಳಿದಾಗ ಧಾನ್ಯದೊಳಗಿಹಜಳ್ಳ
ತೂರಬೇಕೀವಾಕ್ಯ ಪುಸಿಯಲ್ಲ ಶಿವಶಿವ ಶ
ರೀರದೊಳುನೀನಿರಲು ನಿನ್ನಪೂಜಿಸಿಭಜಿಸಿ ಮಂತ್ರಮಾರುತನೆದೆಸೆಯಿಂ ॥
ಭೂರಿಪಾಪವನೆಲ್ಲ ತೂರಬೇಕೆಂದೆನುತ
ಮಾರಾರಿನಿಮ್ಮಮರೆಯನು ಪೊಕ್ಕೆಸಲಹೆನ್ನ
ಮೂರುಕಣ್ಣೀಶ್ವರನೆ ನಿಜಲಿಂಗಭವಭಂಗ ಶರಣಜನಭಕ್ತಸಂಗಾ ॥ ೭೪ ॥

ಭವಭವದ ಚರಿತವನುತಿಳಿದುನೋಡಲು ದೇವ
ನವೆವುತೆನ್ನೆದೆಯುಗದಗದಿಸಿ ನಡುಗುತ್ತಲಿದೆ
ಶಿವನೆನೀಕೇಳೆನ್ನಪುಟ್ಟಿಸಲು ಭೂಮಿಯೊಳು ಬೇಡಿಕೊಂಬೆನು ನಿಮ್ಮನು ॥
ಇವನು ಬಲುಮಂದಮತಿಯೆನುತೆನ್ನ ಬಿಡದೆ ಶಿವ
ಅವಿರಳಾನಂದ ಜ್ಞಾನವನಿತ್ತು ದಯದಿಸಲ
ಹುವುದೆನ್ನ ಕರುಣನಿಧಿ ನಿಜಲಿಂಗಭವಭಂಗ ಶರಣಜನಭಕ್ತಸಂಗಾ ॥ ೭೫ ॥

ರೂಢಿಯೊಳು ನಾನೆಂತುಜೀವಿಸುವೆ ಕೇಳಯ್ಯ
ಚಾಡಿಕಾರರು ಚೋರರುಗಳು ಸಿರಿವಂತರನು
ನೋಡಿ ಬಳಲುವಪಾಪಿಗಳು ದುರಾಚಾರಿಗಳು ದುರ್ಜನರುದಯಹೀನರು ॥
ಕೂಡಿನಡೆವಲ್ಲಿ ಕದನವನಿಕ್ಕುವಪರರ್ಗೆ
ಕೇಡೆನಿಪ ಕುಟಿಲದೊಳಗೆನ್ನ ನಿರಿಸದೆ ಶಶಿಯ
ಸೂಡಿದನೆ ಸಲಹೆನ್ನ ನಿಜಲಿಂಗಭವಭಂಗ ಶರಣಜನಭಕ್ತಸಂಗಾ ॥ ೨೬ ॥

ಒಡವೆಯಾಶೆಗೆ ಬಾಲಕರಕೊರಳ ಛೇದಿಪರು
ಬಿಡದೆಸವತಿಯಶಿಶುವ ಬಾವಿಯೊಳು ಕೆಡಹುವರು
ಕಡೆಗೆಬರಲೆಂದು ಗರ್ಭಿಣಿಯ ಕರುಳುಗಳನ್ನು ಕಡಿಕಡಿದುಕೊಲ್ಲುತಿಹರು ॥
ಕೊಡುವಧರ್ಮಗಳನ್ನು ಮಾಣಿಸುವ ಕರ್ಮಿಗಳು
ನಡೆವುದನುಮಾಣಿಸೈ ಪರಿಪೂರ್ಣ ಪರಬ್ರಹ್ಮ
ನುಡಿವುದನುಮಾಣಿಸೈ ನಿಜಲಿಂಗಭವಭಂಗ ಶರಣಜನಭಕ್ತಸಂಗಾ॥ ೨೭ ॥

ಧನವಿರಲು ಧರ್ಮಮಾರ್ಗವಬಿಟ್ಟು ಮದದಿಂದ
ತನಗಾರುಸರಿಯಿಲ್ಲವೆನುತ ಗರ್ವಿಸುತಿಹರು
ಮನೆಗೆಯಾಚಕರುಬರಲವರಿಗೊಂದರೆ ಕಾಸಕೊಡದೆ ಹೊರಯಿಕೆನೂಕಿಸಿ॥
ಮನಕೆಬಂದಂತೆ ಸುಜ್ಞಾನಿಗಳನಿಂದಿಸುವ
ಘನಮದೋನ್ಮತ್ತ ದುರ್ಜನರಿರವನೀನೆನಗೆ
ಯಿನಿಸುತೋರದೆಸಲಹು ನಿಜಲಿಂಗಭವಭಂಗಶರಣಜನಭಕ್ತಸಂಗಾ ॥೨೮॥

ಸಲೆನಂಬಿದವರೊಳೆರಡೆಣಿಸುವರ ಕೈಹಿಡಿದು
ಸಲಹಿ ದೊಡ್ಡವನ ಮಾಡಿದನಲೆಕ್ಕಿಸದಿಹರು
ಬಲುಸವಿಯಬಾಯಿಂದ ಪೊಣ್ಮಿಸುವರಾತ್ಮದೊಳಗವಗುಣವಸೇರಿಸಿಹರು ॥
ಸಲೆಮನದ ವಿಶ್ವಾಸಘಾತಕರು ಪಾತಕರು
ಕುಲಹೀನರುಗಳು ಖೂಳರೊಳೆನ್ನ ಧರಣಿಯೊಳು
ನಿಲಿಸದಿರು ದಯೆಯಿಂದ ನಿಜಲಿಂಗಭವಭಂಗ ಶರಣಜನಭಕ್ತಸಂಗಾ॥೨೯॥

ನೀತಿಯನು ಹಿಡಿಯಲೊಲ್ಲರು ಗುರುಹಿರಿಯರುಗಳ
ಮಾತಕೇಳರು ಸಜ್ಜನರನು ಪೀಡಿಸುತಿಹರು
ಮಾತೆಪಿತರನು ಬೈದುಬಳಲಿಸುವ ದುರ್ಜನರೊಳೆಂತುಜೀವಿಸಲಿ ದೇವಾ ॥
ಭೂತನಾಥನುನೀನು ಮೋಕ್ಷದಾಯಕನೆಂದು
ನಾತಿಳಿದು ನಿಮ್ಮ ಪದಪದ್ಮವನುನಂಬಿದೆನು
ಪ್ರೀತಿಯಲಿ ಸಲಹೆನ್ನ ನಿಜಲಿಂಗಭವಭಂಗ ಶರಣಜನಭಕ್ತಸಂಗಾ ॥೮೦॥

ಶಿವನಿಮ್ಮ ಪಾದಾರವಿಂದವನು ನೆರೆನಂಬಿ
ಭವಜಲಧಿಯುತ್ತರಿಸಿ ನಿತ್ಯಪದವಿಯ ಸಾಧ
ನವಮಾಡಬೇಕೆಂಬ ಸದ್ಗುಣವು ಪಿರಿಯಸುಕೃತವಮಾಡಿದರಿಗಲ್ಲದೆ ॥
ಕವಲುಗೊಂಡಿಹಮನದ ಕಿರುಕುಳಿಗಳೆಲ್ಲರಿಗೆ
ಧವಳಾಂಗ ನಿಮ್ಮಪೂಜಾಮೃತವು ಬರಲುಂಟೆ?
ರವಿಕೋಟಿಸನ್ನಿಭನೆ ನಿಜಲಿಂಗಭವಭವಂಗ ಶರಣಜನಭಕ್ತಸಂಗಾ ॥೮೧॥

ಮಲಯಜದ ಪರಿಮಳವು ಸೂಕರಗೆಬರಲುಂಟೆ?
ಜಲಜಾತಪರಿಮಳವು ಮಕ್ಷಿಕಗೆ ತಿಳಿಯುವುದೆ?
ಚೆಲುವಮುತ್ತಿನಪರಿಯುಮರ್ಕಟನರಿವುದುಂಟೆ? ಮಧುರಸ್ವರಗೂಗೆಗುಂಟೆ?
ಲಲಿತವೀಣಾಧ್ವನಿಯ ಕೋಣಕೇಳುವುದುಂಟೆ?
ಒಲವಿಲ್ಲದರಿಗೆ ನಿಮ್ಮಯನಿಜವು ಬರಲುಂಟೆ?
ಸುಲಭಗುರುನೀನಲ್ಲೆ ನಿಜಲಿಂಗಭವಭಂಗ ಶರಣಜನಭಕ್ತಸಂಗಾ ॥ ೮೨ ॥

ಕುರಿಗಳಿಗೆ ಕಬ್ಬಿನೊಳಗಿಹ ರಸವುಬರಲುಂಟೆ?
ಕರಿಗಳಿಗೆ ತೆಂಗಿನೊಳಗಿಹ ಹಾಲುಬಹುದುಂಟೆ?
ಖರಗಳಿಗೆ ತಾತುರಗದೇರಾಟಬರಲುಂಟೆ? ಗಜಕೆಮಶಕವು ಸಾಟಿಯೇ?
ಹರನೆ ಭವಹರನೆ ಯಮಹರನೆ ಪುರಸ್ಮರಹರನೆ
ಹರನೆ ನಿಮ್ಮಯ ದಿವ್ಯನಾಮ ಪಾಪಾತ್ಮರಿಗೆ
ಧರೆಯೊಳಗೆ ದೊರಕುವುದೆ? ನಿಜಲಿಂಗಭವಭಂಗ ಶರಣಜನಭಕ್ತಸಂಗಾ ॥

ಅರಗಿಳಿಗಳಂತೆ ಮರಗುಟುಕ ಮಾತಾಡುವುದೆ?
ತುರಗದಂದವಲಿ ಗಾರ್ದಭನು ನಡೆದೋಡುವುದೆ?
ಮೆರೆವಹಂಸೆಯತೆರದಿ ಬಕನುನೀರುಳಿದು ಕ್ಷೀರವನು ಸೇವಿಸಬಲ್ಲುದೆ? ॥
ವರಕೋಕಿಲದತೆರದಿ ಕಾಗೆಧ್ವನಿತೋರುವುದೆ?
ಪರಮಭಕ್ತರು ನಿಮ್ಮ ಧ್ಯಾನವನು ಮಾಳ್ಪಂತೆ
ನರಕಿಗಳಿಗಿರವುಂಟೆ? ನಿಜಲಿಂಗಭವಭಂಗ ಶರಣಜನಭಕ್ತಸಂಗಾ ॥ ೮೪ ॥

ಜಲಜವನಲನಮೇಲೆ ಜನಿಸಿತಾಂಬಾಳುವುದೆ?
ಚೆಲುವಮುಕ್ತಾಫಲವು ಬೆಂಡಿನೊಳಗಿರಲುಂಟೆ?
ಜಲವಮಥಿಸಲ್ಕೆ ನವನೀತಪೊಣ್ಮುವುದುಂಟೆ? ಅಜಗಳದಿನೆಲಸಿರುತಿಹ ॥
ಮೊಲೆಗಳನುಕರೆಯಲ್ಕೆ ತನಿವಾಲುಹೊರಡುವುದೆ?
ಕುಲರಹಿತ, ನಿಮ್ಮ ಧ್ಯಾನವು ಮಂದಮತಿಗಳಿಗೆ
ನೆಲಸಿರುವುದಿನ್ನುಂಟೆ? ನಿಜಲಿಂಗಭವಭಂಗ ಶರಣಜನಭಕ್ತಸಂಗಾ ॥೮೫॥

ನಡುಮಾರ್ಗದೊಳಗೊರ್ವ ನಡೆನಡೆದುಪೋಗುತಿರೆ
ಬಿಡದೆಹೆಬ್ಬುಲಿಕಂಡು ಸಿಡಿಲುಮೊಗ್ಗರದಂತೆ
ಘುಡುಘುಡಿಸುತಡಿಗಡಿಗೆ ಆರ್ಭಟಿಸಿ ಮೊರೆಯುತಲಿ ಅಡವಿಯುಲಿಲಂಘಿ
ಕಡುಭಯಂಕರದಿಂದ ನಡೆತರಲುಭಯಗೊಳದೆ [ಸುತಲಿ ॥
ಮೃಡನಿಮ್ಮನಾಮವನು ಬಿಡದೆ ಕೀರ್ತಿಸುತಿರಲು
ದೃಢಭಕ್ತನವನಹನು ನಿಜಲಿಂಗಭವಭಂಗ ಶರಣಜನಭಕ್ತಸಂಗಾ ॥ ೮೬ ॥

ಪೊದೆಪೊದೆಯ ತೃಣಬೆಳೆದ ಕಾಂತಾರದೊಳಗೊರ್ವ
ನೊದಗೊದಗಿ ನಡೆತರುವಸಮಯದೊಳಗಾತೃಣಕೆ
ಬೆದಬೆದನೆಕಿಚ್ಚಡರಿ ಸುಡುಸುಡುತ ಪೇರುರಿಯುಗದಗದಿಸಿಸಾಲ್ಪೆಸೆಯೊಳು॥
ಪದುಪದುಳದಿಂ ಮುಸುಕಿಕೊಂಡುಬರುತಿರಲದಕೆ
ಹೆದಹೆದರದಾತ್ಮದಲಿ ನಿಮ್ಮ ಧ್ಯಾನವಮಾಳ್ಪ
ಸಮಭಕ್ತನವನಹುದು ನಿಜಲಿಂಗಭವಭಂಗ ಶರಣಜನಭಕ್ತಸಂಗಾ ॥ ೮೭ ॥

ತುರುಗಿರ್ದಕತ್ತಲೆಯೊಳೊರ್ವ ನಡುದಾರಿಯೊಳು
ಇರುತಿರುವಸಮಯದಲಿ ಕಾಳರಕ್ಕಸಿತನ್ನ
ಕರದಿಕೊಳ್ಳಿಯಪಿಡಿದುಕೊಂಡುದಾರಿಯೊಳುಪೆಣಗಳನುತಾಕಚ್ಚಿಕೊಂಡು॥
ಗರಗರನೆ ಕಣ್ಣತಿರುಹುತ ಬಂದುನಿಲಲದರ
ಪರಿಯಕಾಣುತ ಭೀತಿಗೊಳದೆ ಮನದೊಳು ನಿಮ್ಮ
ಸ್ಮರಿಸುವನು ದೃಢಭಕ್ತ ನಿಜಲಿಂಗಭವಭಂಗ ಶರಣಜನಭಕ್ತಸಂಗಾ ॥೮೮॥

ಕಾಳಿಂಗಸರ್ಪತನ್ನೊಳುತಾನೆ ರೋಷವನು
ತಾಳಿಭೋರ್ಗರೆಯುತಲಿ ಅಡಿಗಡಿಗೆನಾಲಗೆಯ
ಸೂಳೈಸಿ ತೆಗೆತೆಗೆದುಬಲುವೇಗದಿಂದ ಪರಿಪರಿದುಬೆನ್ನಟ್ಟಿಬರುವ ॥
ವೇಳೆಯೊಳು ತನ್ನಮನದಲ್ಲಿ ನಿರ್ಭೀತಿಯಿಂ
ಭಾಳಲೋಚನ, ನಿಮ್ಮದಿವ್ಯನಾಮಾಮೃತವ
ಕೇಳುವವಸದ್ಭಕ್ತ ನಿಜಲಿಂಗಭವಭಂಗ ಶರಣಜನಭಕ್ತಸಂಗಾ ॥ ೮೯ ॥

ಕೆಲರುಬಲುಮರುಳೆಂದು ಧಿಕ್ಕರಿಸಿಹಳಿವುತಿರೆ
ಕೆಲರು ಬಲುಸುಜ್ಞಾನಿಯೆಂದು ಪೊಗಳುತ್ತಲಿರೆ
ಕೆಲರು ಪಾಪಾತ್ಮಮತಿಹೀನನೆಂದಾಡುತಿರೆ ಕೆಲರು ಪುಣ್ಯಾತ್ಮನೆಂದು ॥
ಕೆಲರು ಲೆಕ್ಕಿಸದೆನೋಡದೆ ದೂಷಿಸುತ್ತಿರಲು
ಕೆಲರು ಮನ್ನಣೆಯಿಂದ ಕರೆಯೆಕುಂದದೆ ಹಿಗ್ಗ
ದಲೆ ನಡೆಯುವವಜಾಣ ನಿಜಲಿಂಗಭವಭಂಗ ಶರಣಜನಭಕ್ತಸಂಗಾ ॥೯೦॥

ಅರುವತ್ತುನಾಲ್ಕುವಿದ್ಯೆಯಲಿ ಪರಿಣತನಾಗಿ
ಧುರಧೀರ ಪುಣ್ಯಾತ್ಮ ತ್ಯಾಗಿ ಭೋಗಿಯುಮೆನಿಸಿ
ನರಲೋಕದಲಿ ನರರನಡತೆಯಿಂದಲಿ ನಡೆವಜಾಣನಹುದೆನಿಸಿಕೊಂಡು ॥
ಮೆರೆವ ಪಿಂಡಾಂಡದೊಳು ಸೂಕ್ಷ್ಮದಿಂದಡಗಿರ್ಪ
ಪರಮಾತ್ಮನೊಳು ಮನವಮಡಗಿ ಭವಶರಧಿಯು
ತ್ತರಿಸುವವಗೆಣೆಯುಂಟೆ? ನಿಜಲಿಂಗಭವಭಂಗ ಶರಣಜನಭಕ್ತಸಂಗಾ॥೯೧॥

ಬರಹನೀಳಾರತಿಯ (?) ಶಿಲ್ಪಸಾಮುದ್ರಿಕವ
ಭರತಶಾಸ್ತ್ರವ ಸೂಪಶಾಸ್ತ್ರ ಮನ್ಮಥಶಾಸ್ತ್ರ
ಮೆರೆವಜ್ಯೋತಿಷಶಾಸ್ತ್ರವನು ಶಬ್ದತರ್ಕಾದಿ ಸಕಲಶಾಸ್ತ್ರಗಳೆಲ್ಲವ ॥
ನಿರುತದಿಂ ಸಾಧನವಬಿಡದೆ ಮಾಡಿದರೇನು ?
ಪರಜ್ಯೋತಿವಸ್ತುವನು ತನ್ನೊಳಗೆತಿಳಿದು ಸುಖ
ವಿರುವ ವಿದ್ಯಕ್ಕೆಣೆಯೆ? ನಿಜಲಿಂಗಭವಭಂಗ ಶರಣಜನಭಕ್ತಸಂಗಾ॥ ೯೨ ॥

ಸತ್ಯದಿಂದಲಿ ಮತ್ತಗಜವನಿಲಿಸಿದರೇನು?
ಬಿತ್ತರದ ಛಪ್ಪನ್ನಭಾಷೆಗಳ ಕಲಿತೇನು?
ಮೊತ್ತವಾಗಿರ್ಪಸತಿಸುತರ ರಕ್ಷಿಸುವಲ್ಲಿ ಪ್ರೌಢನಾಗಿರ್ದೊಡೇನು?॥
ಸತ್ತುಹುಟ್ಟಿಸುವ ವಿದ್ಯೆಗಳನ್ನು ಕಲಿತೇನು?
ಕರ್ತೃ ನಿಮ್ಮಧ್ಯಾತ್ಮವಿದ್ಯೆಯನು ಸಾಧಿಸದೆ
ಮುಕ್ತಿಯಾಗುವುದುಂಟೆ? ನಿಜಲಿಂಗಭವಭಂಗ ಶರಣಜನಭಕ್ತಸಂಗಾ॥೯೩॥

ಗೋತ್ರರಾಜಾತ್ಮಜೆಯ ಚಿತ್ತಕಂಜಾರ್ಕಸುಚ
ರಿತ್ರ ಚತುರಾಸ್ಯಶಿರಪಾತ್ರ ನಿರ್ಮಲಧವಳ
ಗಾತ್ರವಹವಿರಜೇಂದ್ರ ಸ್ತೋತ್ರಸದ್ಭಕ್ತಜನರಾಧಿಭವಕುಂಜವೀತಿ ॥
ಹೋತ್ರ ಶ್ರವಣರಾಜಸ್ತೋತ್ರ ಸತ್ಪಾತ್ರಾಬ್ಧಿ
ಪುತ್ರಶೇಖರ ಪಂಚವಕ್ತ್ರಮಾಂಪಾಹಿ ಲೋ
ಕತ್ರಯದಿ ಮಹದೇವ ನಿಜಲಿಂಗಭವಭಂಗ ಶರಣಜನಭಕ್ತಸಂಗಾ ॥ ೯೪ ॥

ರುದ್ರಾಣಿಯರಸ ಕನಕಾದ್ರಿಬಾಣಾಸನ ಸ
ಮುದ್ರಾತ್ಮಭವಮೌಳಿ ಭದ್ರನಾಗಿಹವೀರ
ಭದ್ರನಂ ಪಡೆದಬಲು ಭದ್ರರಾರಾಜಿತ ಕ್ಷುದ್ರಾಂಧಕಾಸುರಹರಾ ॥
ರುದ್ರನೀಂ ನಾಕಜೋಪದ್ರಸಂಹಾರ ದುರಿ
ತಾದ್ರಿಕುಲಿಶೋತ್ತುಂಗ ಭದ್ರತೀರದೊಳೆಸೆವ
ಖಾದ್ರಿಭವಪುರವಾಸ ನಿಜಲಿಂಗ ಭವಭಂಗ ಶರಣಜನಭಕ್ತಸಂಗಾ ॥ ೯೫ ॥

ಕರುಣಿ ನೀನಿರಲು ನಾಂಪೆರರ ಭಜಿಸುವುದೇಕೆ?
ತರಣಿ ಮುಂಗಾಣುತಿರೆ ದೀಪವರ್ಧಿಸಲೇಕೆ?
ಪುರಮಥನಕಾರಣ ಸ್ಥೂಲಸೂಕ್ಷ್ಮಗಳೆಂಬ ಪುರಗಳಂಮಥಿಸುತೆನ್ನ ॥
ಕೊರತೆಯಂ ಬೋಧಸುಖದೊಳು ಕಳೆದುಳಿದ ನಿನ್ನ
ವರವೀರಶೈವ ಸಿದ್ಧಾಂತ ಸಿದ್ಧಿಸಲೊಮ್ಮೆ ಶರಣ
ಪೊರೆಪುರಾತನಪೂಜ್ಯ ನಿಜಲಿಂಗ ಭವಭಂಗ ಜನಭಕ್ತಸಂಗಾ ॥ ೯೬ ॥

(ಬಿಟ್ಟುಬಿಟ್ಟಿರುವ ಪದ್ಯಗಳು:—೯೭–೯೮–೯೯.)

ಈಮಹಿಯೊಳೀ ಮಹಾಶತಕದ ಸುನೀತಿಯನು
ಪ್ರೇಮದಲಿಬರೆದೋದಿ ಪೇಳ್ದುಕೇಳ್ವರಿಗೆಲ್ಲ
ಕ್ಷೇಮತರದಾಯುಷ್ಯವಾರೋಗ್ಯಭಾಗ್ಯ ಭಕ್ತಿಜ್ಞಾನವೈರಾಗ್ಯದ ॥
ಸ್ತೋಮವನುಭಕ್ತ ತತಿಗೊಲಿದೀವರಾರೆನಲು
ಈ ಮಹಾಮಹಿಮಶತಕದ ಕರ್ತೃವೀಶ್ವರನೆ
ನಾಮ ನಿಜಲಿಂಗೇಶ ಕವಿಪೇಳ್ದಸತ್ಕರ್ಮ ಪಾಲಿಸುವನಿದು ಪ್ರಸಿದ್ಧಂ ॥೧೦೦॥

ಲಘು ಟಿಪ್ಪಣಿ.

ಶಿವಭಕ್ತಿಸಾರ.

೧. ಶಾಂಭವಿ—ಶಿವನಪತ್ನಿ, ಅಪರ್ಣೆ—ಎಲೆಯನ್ನು ಕೂಡ ತಿನ್ನದೆ ತಪಸ್ಸುಮಾಡಿದವಳು. ೩. ಹೇರಂಬ—ಶಿವನ ಹತ್ತಿರ ಇರುವವನು. ೭. ಹರಿಯಕ್ಷ—ಚಂದ್ರಸೂರ್ಯರೇ ಕಣ್ಣಾಗಿ ಉಳ್ಳವನು. ೮. ಚಾಮೀಕರ—ಚಿನ್ನ. ಶರವಣೋತ್ಥಿತ—ಕಾಚಿಯ ಹುಲ್ಲಿನಲ್ಲಿ ಜನಿಸಿದ. ೯. ನವವಿಧಭಕ್ತಿಗಳು—ಸ್ಮರಣ, ಕೀರ್ತನ, ಕಥಾಶ್ರವಣ, ಪಾದಸೇವೆ, ಅರ್ಚನೆ, ವಂದನೆ, ಸ್ನೇಹ, ಆತ್ಮನಿವೇದನ ಇವು. ೧೨. ಮುಕ್ತಿಗಳು—ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯ. ೧೮. ಪುಷ್ಕರ—ಆಕಾಶ. ೧೯. ಆರಾಧ್ಯ—ಪೂಜಾಯೋಗ್ಯನು. ೨೩. ಸಾಮಜಾಜಿನ—ಗಜಚರ್ಮ. ೩೩. ಅಣೋರಣೀಯನು—ಅಣುವಿಗಿಂತಲೂ ಸೂಕ್ಷ್ಮನು, ಮಹತೋಮಹೀಯನು—ಮಹತ್ತಿಗಿಂತ ಮಹತ್ತಾದವನು, ಮೂರವಸ್ಥೆ—ಜಾಗ್ರತ್ಸ್ವಪ್ನಸುಷುಪ್ತಿಗಳು. ೩೫. ಸುಧೆ—ಅಮೃತ. ೩೬. ಕಡೆಯ—ಕಡಗ. ೩೮. ಆರುವರ್ಣ—ಓಂ ನಮಶ್ಶಿವಾಯ ಎಂಬ ಷಡಕ್ಷರ. ೩೯. ಧೂರ್ಜಟಿ—ಭಾರವಾದ ಜಡೆಯುಳ್ಳವನು. ೪೧. ದಂದಶೂಕಾಭರಣನು—ಸರ್ಪಭೂಷಣನು. ೪೨. ಪ್ರತ್ಯಗಾತ್ಮ—ಪರೋಕ್ಷದಲ್ಲಿರುವ ಆತ್ಮನು. ಕೃತ್ತಿವಾಸ—ಗಜಚರ್ಮ ಧರಿಸಿದವನು, ೪೪. ಸಾಮಜಾಸುರ—ಗಜಾಸುರನು. ೪೫. ವೃಷ್ಟಿವರ್ಧನ—ಮಳೆಯನ್ನು ಹೆಚ್ಚಿಸುವವನು. ೪೮. ಪುರಂದರ—ದೇವೇಂದ್ರನು. ೫೦. ಸುಬ್ರಹ್ಮಣ್ಯ—ಕುಮಾರಸ್ವಾಮಿ. ೫೯. ಚಿನ್ಮುದ್ರೆ—ಜ್ಞಾನಮುದ್ರೆ. ೬೨. ವಪು—ಶರೀರ. ೭೦. ಪಾರವಶ್ಯತೆ—ಅಸ್ವಾತಂತ್ರ್ಯ. ೭೩. ಪಳುಕಿನ—ಸ್ಫಟಿಕಶಿಲೆಯ. ೭೪. ಕವೇರಕನ್ಯಕೆ—ಕಾವೇರಿ. ೭೭. ಕೋಟೀರ—ಕಿರೀಟ. ಶೋಣರತ್ನ—ಕೆಂಪು. ೭೯. ದ್ರೋಣ—ದಾಸಣದ ಹೂವು. ೮೨. ಪಯೋದಧಿಗಳು—ಹಾಲು ಮೊಸರುಗಳು. ೮೩. ಪೂಗೀಫಲ—ಅಡಕೆ, ತರುಣಪರ್ಣ—ಎಳೆಯ ವೀಳೆಯದೆಲೆ. ೮೪. ಮೃಡ—ಭಕ್ತರನ್ನು ಸುಖಪಡಿಸುವವನು. ೮೮. ವಾಕ್ಪತಿ—ಬೃಹಸ್ಪತಿ, ರಾಜರಾಜ—ಕುಬೇರ. ೯೬. ಪೂರ್ವದೇವಾನ್ವಯ—ರಾಕ್ಷಸವಂಶ, ಶರ್ವರೀಶ್ವರ—ಚಂದ್ರನು. ೧೦೩. ನರ್ತನಪುರ—ನಾಟ್ಯದ ಊರು (ಕುಣಿಗಲು?) ೧೦೫. ದಮೆ—ಇಂದ್ರಿಯನಿಗ್ರಹ.

ನಿಜಲಿಂಗ ಶತಕ.

೧. ಗೋಪ—ಇಂದ್ರಿಯಗಳಿಗೆ ಪ್ರಭು, ಗೋಪತಿ—ಬ್ರಹ್ಮನು, ಗೋಪುತ್ರಿ—ಪಾರ್ವತಿ, ಗೋಜಾತ—ನರಕಾಸುರನು, ಗೋಪವಾಹನ—ವೃಷಭಧ್ವಜ, ಗೋತನಯ—ಬ್ರಹ್ಮನು, ಗೋವಸನ—ದಿಗಂಬರನು, ಗೋಪುತ್ರ—ನಂದಿ, ಗೋರಹಿತಖಳ—ಅಂಧಕಾಸುರ, ಗೋಪ್ರಿಯತಿಶು—ಮನ್ಮಥನು, ಗೋತ್ರಿತಯ—ತ್ರಿನೇತ್ರನು, ಗೋಪಂಚಧರ—ಪುಷ್ಪಬಾಣನಾದ ಮನ್ಮಥನು.

೨. ಹರಿಗರ್ಭ—ಬ್ರಹ್ಮ, ಹರಿತನುಜ—ಮನ್ಮಥ, ಹರಿ—ದೇವತೆಗಳು, ಸೂರ್ಯ, ಕಾಂತಿ, ವಿಷ್ಣು, ಸರ್ಪ, ಯಮನು, ಚಂದ್ರನು, ವಾಯು, ಇಂದ್ರ, ಸಿಂಹ, ಕುದುರೆ, ಗಿಳಿ, ಹರಿವಸನ—ದಿಗಂಬರನು, ಹರಿಣಾಂಕ—ಚಂದ್ರನು, ಹರಿವತ್ಮೌಳಿ—ಗಂಗಾಧರನು, ಹರಿಕಾರಿ—ವಿಷ್ಣುವನ್ನುಂಟುಮಾಡಿದವನು, ಹರಿಧರ—ಜಲವನ್ನು ಧರಿಸಿದವನು.

೩. ಅಮೃತೋದ್ಭವ—ಜಲದಲ್ಲಿ ಹುಟ್ಟಿದವನು, ಚಂದ್ರನು, ಭವಗಿರಿಶಂಬ—ಸಂಸಾರವೆಂಬ ಬೆಟ್ಟಕ್ಕೆ ವಜ್ರಪ್ರಾಯನು, ಅಮೃತೋದ್ಭವಾಂಬಕ—ಕಮಲನಯನನು, ಗೋತ್ರ—ವೇದಗಳನ್ನು ರಕ್ಷಿಸಿದವನು, ಅಮೃತೋದ್ಭವ—ಧನ್ವಂತರಿ.

೪. ಶಿವ—ಶುಭ, ಮಂಗಳ, ಸರ್ಪ, ಧರ್ಮ, ಈಶ್ವರ, ವೇದ, ಹಿಮಾಚಲ, ದೈತ್ಯರು, ಶಿವಾ—ಪಾರ್ವತಿ, ಸವನಾಶ—ಯಜ್ಞಧ್ವಂಸನು.

೫. ನೋಡುತಿರ್ಪುದರಲ್ಲಿ ಕೇಳುವನು—ತಕ್ಷಕ, ಅವನಿಂದಸತ್ತವ, ಪರೀಕ್ಷಿತ್ತು, ತಂದೆ ಅಭಿಮನ್ಯು, ತಂದೆ ಅರ್ಜುನನು, ಆವನಿಗೆ ಸಹಾಯಕನು ಕೃಷ್ಣನು, ಮಗನು ಪ್ರದ್ಯುಮ್ನನು, ಅವನ ಬಾಣಕ್ಕೆ ಸಿಕ್ಕಿದವನು ರಾವಣನು, ತಂದೆ—ವಿಶ್ರವಸ್ಸು, ಮಗ ಕುಂಭಕರ್ಣ, ಅವನ ವೈರಿ ಶ್ರೀರಾಮನು, ಮಿತ್ರನು ಸುಗ್ರೀವನು, ತಂದೆ—ಸೂರ್ಯನು, ಅವನಿಂದ ಅರಳುವ ಹೂವು ತಾವರೆ, ಶತ್ರು ಚಂದ್ರನು, ಅವನನ್ನು ಮುಡಿದವನು ಈಶ್ವರನು.

೬. ಕರ್ಣನ ತಂದೆ ಸೂರ್ಯನು, ಮಗನು ಯಮನು, ಮಗನು ಧರ್ಮರಾಯನು, ತಮ್ಮನು ಭೀಮನು, ತಂದೆ ವಾಯು, ಮಗ ಆಂಜನೇಯನು, ಒಡೆಯನು ರಾಮನು, ಹೆಂಡತಿ ಸೀತೆ, ಸೆರೆಯಿಟ್ಟವನು ರಾವಣನು, ಅಣ್ಣ ಕುಬೇರನು, ಅವನ ದಿಕ್ಕಿನ ಹೆಸರಿನವನು ಉತ್ತರ, ತಂಗಿ ಉತ್ತರೆ, ಗುರುವು ಅರ್ಜುನನು, ಮಗನು ಅಭಿಮನ್ಯು, ಹೆಂಡತಿ ಉತ್ತರೆ, ಮಗಪರೀಕ್ಷಿತ್ತು, ತಂದೆಯು

ತಂದೆ ಕರ್ಣನು, ತಂದೆ–ಸೂರ್ಯನು, ತಂದೆ ಕಶ್ಯಪನು, ತಂದೆ ಮರೀಚಿ, ತಂದೆ ಬ್ರಹ್ಮನು, ಅವನ ಕಪಾಲವನ್ನು ಧರಿಸಿದವನು.

೭. ಪ್ರಥಮರಾಶಿ–ಮೇಷ, ವಾಹನ ಅಗ್ನಿ, ಶಾಪಕೊಟ್ಟವಳು ರೇಣುಕೆ, ಗಂಡನು ಜಮದಗ್ನಿ, ಕೊಂದವನು ಕಾರ್ತವೀರ್ಯನು, ಶತ್ರುಪರಶುರಾಮನು, ಅವನ ಹೆಸರಿನವನು ಶ್ರೀರಾಮ, ಅವನ ತಂದೆ ದಶರಥನು, ಹಿರಿಯ ಸೊಸೆ ಸೀತೆ, ತಾಯಿ ಭೂಮಿ, ಹೊತ್ತಿರುವವನು ಆದಿಶೇಷನು, ಶತ್ರು ಗರುಡನು, ಅವನಣ್ಣನು ಅರುಣನು, ಒಡೆಯನು ಸೂರ್ಯನು, ಮಗನು ಸುಗ್ರೀವನು, ಅಣ್ಣನು ವಾಲಿ, ಕೊಂದವನು ರಾಮನು, ಅವನ ಬ್ರಹ್ಮಹತ್ಯ ಪರಿಹರಿಸಿದವನು ಈಶ್ವರನು.

೮. ಭೂದೇವರಿಗೆ ಕೊಡುವ ದ್ರವ್ಯದಕ್ಷಿಣ, ಆ ಹೆಸರಿನ ಸತಿದಾಕ್ಷಾಯಣಿ, ತಂದೆ ದಕ್ಷನು, ಅವನ ತಲೆ ಕಡಿದವನು ವೀರಭದ್ರನು, ಅವನ ತಾಯಿ ಪಾರ್ವತಿ, ಮಗನು ಗಣಪತಿ, ಹೊಟ್ಟೆಯನ್ನು ಸುತ್ತಿದವನು ಸರ್ಪ, ವೈರಿ ಗರುಡನು, ಅವನಿಗೆ ಸೋತವನು ಇಂದ್ರನು, ಅವನ (ಉಪೇಂದ್ರನ) ಮಗನು ಬ್ರಹ್ಮನು, ಮಗಳು ಸರಸ್ವತಿ, ಅಣ್ಣ ದಕ್ಷನು, ಹೆಂಡತಿ ಪ್ರಸೂತಿ, ತಂಗಿ ಆಕೂತಿ, ಅಳಿಯ ಯಜ್ಞದೇವತೆ, ಅದನ್ನು ಧ್ವಂಸಮಾಡಿದವನು ಪರಮೇಶ್ವರನು.

೯. ರುಚಿಯನ್ನು ತೋರಿಸುವುದು ನಾಲಿಗೆ, ಏಳು ನಾಲಿಗೆಯುವನು ಅಗ್ನಿ, ಸ್ನೇಹಿತ ವಾಯು, ಅವನ ವಾಹನ ಹುಲ್ಲೆ, ಅದನ್ನು ಧರಿಸಿದವನು ಚಂದ್ರನು, ತಂದೆ ಅತ್ರಿ, ಅವಮಾನಪಡಿಸಿದವನು ಹಿರಣ್ಯಾಕ್ಷನು, ಆವರ್ಣದ ಗರ್ಭನು ಬ್ರಹ್ಮನು, ಅವನ ತಮ್ಮ ಮನ್ಮಥನು, ಧ್ವಜಮತ್ಸ್ಯ, ಅದರ ಗಂಧವುಳ್ಳವಳು ಮತ್ಸ್ಯಗಂಧಿ, ಗಂಡನು ಶಂತನು, ಹೆಂಡತಿ ಗಂಗೆ, ಮಗನು ಭೀಷ್ಮನು. ಮೊಮ್ಮಗ ಅರ್ಜುನನು, ಅವನಿಗೆ ಅಸ್ತ್ರಕೊಟ್ಟವನು ಈಶ್ವರನು.

೧೪. ಶಶಿಯು ಗಗನದಲಿ ಬಲುಬಿಸುನೇತ್ರವನು ತಳೆದ–ಚಂದ್ರನು ತೀಕ್ಷ್ಣ ಕಿರಣನಾದನು ಎಂಬುದು ಗೌರಿಯ ವಾಕ್ಯವು, ಇದರಲ್ಲಿ ಮೊದಲನೆಯ ಪದವನ್ನು ಬಿಟ್ಟು ಮುಂದಿನ ವಾಕ್ಯದ ಮೊದಲಪದ, ನಿಶಿಯ ವೈರಿಯು–ಸೂರ್ಯನು, ಎಂಬುದನ್ನು ಸೇರಿಸಿಕೊಂಡರೆ ಈಶ್ವರನ ಸಮಾಧಾನ ವಾಕ್ಯವು, ಹೀಗೆಯೇ–

೧೫. ಮುಂಗುರುಳಿಗೂ ಮೂಗಿಗೂ ವೈರ (ಭೃಂಗ ಮತ್ತು ಸಂಪಗೆ) ಕಣ್ಣುಗಳಿಗೂ ಹಣೆಗೂ, (ಕಮಲ–ಚಂದ್ರ) ಸ್ತನಗಳಿಗೂ ಮಧ್ಯಕ್ಕೂ (ಆನೆಯ ಕುಂಭಸ್ಥಳ–ಸಿಂಹ).

೨೨. ನಿನ್ನ ಸತಿಯನ್ನು ಬೇಡಿದವರಿಗೆ ಕೊಟ್ಟೆ. (ರಾವಣನು ಪಾರ್ವತಿಯನ್ನು ತನಗೆ ಕೊಡೆಂದು ಬೇಡಲು ಕೊಟ್ಟುಬಿಟ್ಟೆ.)

೨೫. ಸದಾಗತಿಯಾಪ್ತ–ಅಗ್ನಿ, ಸಾರಂಗ–ಸೂರ್ಯನು.

೨೬. ನಿನ್ನನ್ನು ಹೊಗಳಲಿಕ್ಕೆ ೨ ಸಾವಿರ ನಾಲಿಗೆಯೂ ನೋಡಲಿಕ್ಕೆ ಸಾವಿರ ಕಣ್ಣುಗಳೂ, ಪೂಜಿಸಲಿಕ್ಕೆ ಸಾವಿರ ಕೈಗಳೂ, ಜಪಿಸಲಿಕ್ಕೆ ಸಾವಿರ ಕೈಗಳೂ, ಕಥೆ ಕೇಳಲಿಕ್ಕೆ ಇಪ್ಪತ್ತು ಕಿವಿಗಳೂ ಇರಬೇಕು. ನನಗೆ ಇಷ್ಟನ್ನು ಕೊಡದೆ ಹೋದೆಯಲ್ಲಾ !

೩೦. ಜಗದಂಬಕ—ಸೂರ್ಯನು. ದ್ವಿಜಿಹ್ವೆ—ಹಾವು. ಕುಲಿಶ—ವಜ್ರ. ಕುಂಜರ—ಆನೆ.

೩೧ ಪ್ಲವಗ—ಕಪಿ, ಬೋಡ–ಹಲ್ಲಿಲ್ಲದವನು, ಇನಿಗೋಲು—ಕಬ್ಬು.

೩೮. ಗಾಡಿಕಾತಿಯರ–ಸ್ತ್ರೀಯರ.

೪೧. ಕಾಕೋದರ—ಸರ್ಪವು.

೪೪. ಚೂರ್ಣ— ಸುಣ್ಣ, ಕ್ರಮುಕ–ಅಡಕೆ.

೪೬. ಭೃಂಗವೈರಿ–ಸಂಪಿಗೆ, ಮಾಯೂರ—ನವಿಲು.

೫೮. ಧ್ವಜಗಂಧಿ–ಮತ್ಸ್ಯಗಂಧಿ, ತನುಭವ—ಮಗನಾದ ವ್ಯಾಸನು, ಪೌತ್ರ—ಮೊಮ್ಮಗನಾದ ಅರ್ಜುನನು.

೫೭. ಶಂಬ—ವಜ್ರಾಯುಧ.

೬೦. ಸುಧೆಗೋಲು–ಕಬ್ಬು, ನಿಟ್ಟಿಸುವ–ನೋಡುವ.

೮೫. ಜಲಜ—ಕಮಲ, ಅಜಗಳ–ಮೇಕೆಯ ಕೊರಳು.

೯೪. ಆಧಿ—ಮನೋವ್ಯಥೆ, ಭವ—ಜನ್ಮಗಳೆಂಬ, ಕುಂಜ—ಪೊದರಿಗೆ, ವೀತಿಹೋತ್ರ–ಅಗ್ನಿ.

೯೫. ದುರಿತಾದ್ರಿಕುಲಿಶ–ಪಾಪಗಳೆಂಬ ಬೆಟ್ಟಗಳಿಗೆ ವಜ್ರಾಯುಧಪ್ರಾಯನು.

ನೀತಿಸಾರ.

ಮೂರನೆಯ ಭಾಗ.

ಸರ್ವಜ್ಞಪದಗಳು.

ಧಾರವಾಡಜಿಲ್ಲೆಯ ಮಾಸೂರಿನಲ್ಲಿ ಬಸವರಸನೆಂಬ ಆರಾಧ್ಯ ಬ್ರಾಹ್ಮಣನಿದ್ದನು. ಅವನಹೆಂಡತಿ ಮಲ್ಲಮ್ಮ. ಬಸವರಸನು ಕಾಶಿಗೆ ಹೋಗಿ, ಪುತ್ರನ ವರವನ್ನು ಪಡೆದುಬರುವಾಗ ದಾರಿಯಲ್ಲಿ ಅಂಬಲೂರಿನಲ್ಲಿದ್ದ ಕುಂಬಾರ ಮಾಳಿಯೆಂಬವಳನ್ನು ಮೋಹಿಸಿ, ಅಲ್ಲಿ ನಿಂತನು. ಆಕೆಯ ಗರ್ಭದಲ್ಲಿ ಸರ್ವಜ್ಞನು ಹುಟ್ಟಿದನು. ಇವನು ವೀರಶೈವಕವಿ. ಸುಮಾರು ಕ್ರಿ. ಶ. ೧೭೦೦ (ಕವಿಚರಿತ್ರೆ R. N.)

ವಿಷಯಸೂಚಿಕೆ.

ಸರ್ವಜ್ಞ ಪದಗಳು.

೧. ಪೀಠಿಕಾ ಪ್ರಕರಣ.

ನಂದಿಯನೇರಿದವನ । ಚಂದ್ರನಸೂಡಿದವನ
ಕಂದನಬೇಡಿನಲಿದವನ । ನೆನೆವುತ್ತ
ಮುಂದೆಹೇಳಿದನು ಸರ್ವಜ್ಞ ॥ ೧ ॥

ಮುನ್ನನಾಪೂರ್ವದಲಿ । ಪನ್ನಗಧರನಾಳು ।
ಎನ್ನಯಪೇರುಪುಷ್ಪ । ದತ್ತನೆಂದು
ಮನ್ನಿಪುದುದಯದಿ ಸರ್ವಜ್ಞ ॥ ೨ ॥

ಅಂದಿನಪುಷ್ಪದತ್ತ । ಮುಂದೇಪನುಷಿಯಾಗಿ
ಸಂದೇಹಮುಳಿದುಸರ್ವಜ್ಞ । ನೆಂದೆನಿಸಿ
ನಿಂದವನುನಾನೆ ಸರ್ವಜ್ಞ ॥ ೩ ॥

ಮಕ್ಕಳಿಲ್ಲವೆಂದು । ಅಕ್ಕಮಲ್ಲಪ್ಪ[illegible]ನು
ದುಕ್ಕವ ಬಸವರಸಗರುಹೆ । ಕಾಶಿಯ
ಮುಕ್ಕಣ್ಣನೊಲಿದ ಸರ್ವಜ್ಞ ॥ ೪ ॥

ಮಾಸೂರುಬಸವರಸ । ಕೂಸ[illegible]ಶನಕೇಳಿ
ಕಾಶಿಯಅಭವನೊಳ್‌ಜನಿಸಿ । ವರವನು
ಸೂಸಿದನಂದು ಸರ್ವಜ್ಞ ॥ ೫ ॥

ಗಂಡಾಗಬೇಕೆಂದು । ಪಿಂಡವ[illegible]ಂಗಲಿದು
ಲೆಂಡಮಲ್ಲವ್ವೆಯೊಳ್‌ಜನಿಸಿ । [illegible]
ಕಂಡದ್ದುಪೇಳ್ದೆ ಸರ್ವಜ್ಞ ॥ ೬ ॥

ಗಡಿಗೆಮಡಿಕೆಯಕೊಂಡು । ಅ[illegible]ಪೇಳಿಗೆ
ಹಿಡಿಯೆಮಳೆವೊಡವಾಗ । ಅ[illegible]ಬ್ಬೆಗೆ
ತಡೆಬಿಡಲಾಯ್ತು ಸರ್ವಜ್ಞ ॥ ೭ ॥

ಅಂಬಲೂರೊಳಗಿರ್ಪ । ಕುಂಬಾರಮನೆಯೊಳಗೆ
ಶಂಭುವುಕೊಟ್ಟ ಶಿಶುನಾನು । ಬಸವರಸ
ನಿಂಬಿಟ್ಟನೆನ್ನ ಸರ್ವಜ್ಞ ॥ ೮ ॥
ಬಿಂದಿಟ್ಟುಹೋದಲ್ಲಿ । ಅಂದುಬಸುರಾದವ
ಳೊಂದಾಗಿ ಹೊತ್ತ್ವದಶಮಾಸ । ಉದರದಲಿ
ನಿಂದುಬೆಳೆದೆನು ಸರ್ವಜ್ಞ ॥ ೯ ॥
ಹೆತ್ತವಳುಮಾಳಿಯೆ । ನ್ನೊತ್ತಿತೆಗೆದವಳು ಬೆಂ
ನೆತ್ತಿಹಿಡಿದವಳುಕಾಳಿ । ಮೊರದಲಿನನ್ನ
ನೊತ್ತಲಿರಿಸಿದಳು ಸರ್ವಜ್ಞ ॥ ೧೦ ॥
ಬೆಳೆದೆನ್ನವರುನನ್ನ । ಕಳೆಯುಕಂಡವರೆಂಪ
ರಿಳೆಯೊಳುಮೊಳಕೆಯತೆರದಿ । ತಿಳಿವಂತೆ
ತಿಳಿದುದನರುಹು ಸರ್ವಜ್ಞ ॥ ೧೧ ॥
ಗಂಡುತನ್ನದುಯೆಂಬ । ಲೆಂಡತನ್ನದುಯೆಂಬ
ಖಂಡಪರಶುವಿನವರಪುತ್ರ । ನಾಂನೆರೆ
ಕಂಡದ್ದುಪೇಳ್ವೆ ಸರ್ವಜ್ಞ ॥ ೧೨ ॥
ಮಾಳನುಮಾಳಿಯು । ಕೂಳಿನಹೆಮ್ಮೆಯಲಿ
ಕೇಳರಿನ್ನಾರಮಗನೆಂದು । ನಾಶಿವನ
ಮೇಳದಮಗನು ಸರ್ವಜ್ಞ ॥ ೧೩ ॥
ತಂದೆಹಾರುವಮುಲ್ಲ । ತಾಯಿಕುಂಬರಮಾಳಿ
ಚಂದ್ರಶೇಖರನವರದಿಂದ । ಪುಟ್ಟಿದ
ಕಂದನಾನೆಂದ ಸರ್ವಜ್ಞ ॥ ೧೪ ॥
* * * * * ॥ ೧೫–೧೬ ॥
ತಾಯೆಂದೆನಲ್ಲದೆ । ತಾಯಿನಾನೆಂದೆನೇ
ತಾಯೇನಾನೆಂದುನುಡಿದೆನು । ಪರಸ್ತ್ರೀಯರ
ತಾಯಿಯೆಂದೆಂಬೆ ಸರ್ವಜ್ಞ ॥ ೧೭ ॥
ನೂಕಿಬಿಟ್ಟರುಆಗ । ಕಾಕುತನದೊಳುಬೇಗ
ಲೋಕದೊಳಗೆಲ್ಲಕಂಡದ್ದು । ನುಡಿದುತಾ
ನೇಕವಾಗಿಹನು ಸರ್ವಜ್ಞ ॥ ೧೮ ॥

ನಿಾರಿಬೆಳೆಯಲುತನುವು । ಆರುಬಣ್ಣವನುಡಿಸಿ
ಮೂರು ರುಚಿದೋರಿಮೆರೆಸಿದ । ತನ್ನ ತಾ
ತೋರದೆಹೋದ ಸರ್ವಜ್ಞ ॥ ೧೯ ॥
ಆರುಹುಕೂಡಿತುಪ್ರಾಣ । ಕುರುಹುಬೆರೆಯಿತುಜಾಣ
ಹರುವಾಗಿಹೋಯ್ತುಭವಮಾಲೆ । ಮುಕ್ತಿಯು
ಹರನಂದವಾಯ್ತು ಸರ್ವಜ್ಞ ॥ ೨೦ ॥
ಕಣ್ಣುನಾಲಿಗೆಮನವು । ಪನ್ನಗಧರಕೊಟ್ಟ
ಚೆನ್ನಾಗಿಮನವತೆರೆವುತ್ತಾ । ಬಿಡದೆಶ್ರೀ
ಚೆನ್ನನನೆನಹು ಸರ್ವಜ್ಞ ॥ ೨೧ ॥
ಸಣ್ಣನೆಮನೆಯೊಳಗೆ । ನುಣ್ಣನೆಯಶಿಲೆಯೊಳಗೆ
ಬಣ್ಣಿಸಿಬರೆದಪಠದೊಳಗೆ । ಇರುವಾತ
ತನ್ನೊಳಗಿರನೆ ಸರ್ವಜ್ಞ ॥ ೨೨ ॥
ಕ್ಷೀರದೊಳಿಹ ಘೃತ । ನೀರಿನಕಲ್ಮಷವು
ಆರಿಗೂತೋರದದರಂತೆ । ಯೆನ್ನೊಳಗೆ
ಸಾರಿಹನುಶಿವನು ಸರ್ವಜ್ಞ ॥ ೨೩ ॥
ಪರಮಾತ್ಮಗೆಣೆಯಿಲ್ಲಂ । ಬರಕೆನಿಚ್ಚಣಿಯಿಲ್ಲ
ಪೊರಗಾದಮೇಲೆ ಭಯವಿಲ್ಲ । ಮರ್ತ್ಯದೊಳು
ಇರದವರಿಲ್ಲ ಸರ್ವಜ್ಞ ॥ ೨೪ ॥
ಸರ್ವಜ್ಞನೆಂಬಾತ । ಗರ್ವದಿಂದ್ಯೈದಾನೆ
ಸರ್ವರೊಳೊಂದೊಂದುನುಡಿಕಲ್ತು । ವಿದ್ಯೆಯು
ಪರ್ವತವೆಆದ ಸರ್ವಜ್ಞ ॥ ೨೫ ॥
ಹೊಲಸುಮಾಂಸದಹುತ್ತ । ಯೆಲುವಿನಪಂಜರ
ಹೊಲೆಬಲಿದತನುವಿನೊಳಗಿರ್ದ । ಮತ್ತಾತ
ಕುಲವಬಯಸುವನೆ? ಸರ್ವಜ್ಞ ॥ ೨೬ ॥
ಎಲುವಿನಕಾಯಕ್ಕೆ । ಸಲೆಚರ್ಮದ ಹೊದಿಕೆ ।
ಮಲಮೂತ್ರಕ್ರಿಮಿಗಳೊಳಗಿರ್ದ । ದೇಹಕ್ಕೆ
ಕುಲವಾವುದೈಯ? ಸರ್ವಜ್ಞ ॥ ೨೭ ॥

ಪಂಚಪಾಶದತತ್ವ । ಚಂಚಲದೇಹವನು
ಮಿಂಚೆಂದುಕಾಣಲರಿಯರು । ಭವಮುಂದೆ
ಗೊಂಚಲಾಗಿಹುದು ಸರ್ವಜ್ಞ ॥ ೨೮ ॥
ಆಡಿಂಗೆಆರ್ಕೋಟಿ । ಕೋಡಗಕ್ಕೊಂದುದಿನ
ಕೋಡಗನೂರುಮಡಿದರೇ । ನರಿಹುಬ್ಬ
ನಾಡಿಸುತ್ತಿಹುದು ಸರ್ವಜ್ಞ ॥ ೨೯ ॥
ಆಡಾದನಜನುತಾ । ಕೋಡಗಾದನು ವಿಷ್ಣು
ನೋಡುವಶಿವನು ನರಿಯಾದ । ಈ ಬೆಡಗು
ರೂಢಿಯೊಳುಬಲ್ಲೆ ಸರ್ವಜ್ಞ ॥ ೩೦ ॥
ಹೇಳಲರಿಯೆನುನಾನು । ಹೇಳೆನಲುಹೇಳಿದೆನು
ಭಾಳಲೋಚನನಶರಣರಾ । ಆಳಾಗಿ
ಹೇಳಿದೆನುಕಾಣೊ! ಸರ್ವಜ್ಞ ॥ ೩೧ ॥
ಕೋಳಿಕೂಗದಮುನ್ನ । ಆರುಮೇಳದಮುನ್ನ
ಭಾಳಲೋಚನನನೆನೆವವರ । ಮನೆಗೆ ತಾ
ನಾಳಾಗಿಯಿಹೆನು ಸರ್ವಜ್ಞ ॥ ೩೨ ॥
ತನ್ನಮನಸಿಗೆನೆನಹು । ಪನ್ನಗಧರಕೊಟ್ಟ
ಬಿನ್ನಾಣದಿಂದಸ್ತುತಿಗೆಯ್ವು । ಪೊಗಳ್ವೆನಾ
ಚೆನ್ನಮೂರುತಿಯ ಸರ್ವಜ್ಞ ॥ ೩೩ ॥

೨. ಗುರುಪದ್ಧತಿ.

ಗುರುಪಾದಕೆರಗಿದರೆ । ಶಿರಸುತಾಮಣಿಯಕ್ಕು
ಪರಿಣಾಮವಕ್ಕುಪದವಕ್ಕು । ಕೈಲಾಸ
ನೆರೆಮನೆಯೆಅಕ್ಕು ಸರ್ವಜ್ಞ ॥ ೧ ॥
ಗುರುವೆನಿಮ್ಮನುನೆನೆದು । ಉರಿವಕಿಚ್ಚನುಹೊಗಲು
ಉರಿತಗ್ಗಿ ಉದಕಕೊಂಡಂತೆ । ಗುರುವಿನ
ಕರುಣಮುಳ್ಳರ್ಗೆ ಸರ್ವಜ್ಞ ॥ ೨ ॥

ಬೆಟ್ಟಕರ್ಪೂರಬೆಂದು । ಬೊಟ್ಟಿಡಲುಬೂದಿಲ್ಲ
ನೆಟ್ಟನೆಗುರುವಿಗೆರಗಿದರೆ । ಪಾತಕವು
ಸುಟ್ಟುಹೋಗುವುದು ಸರ್ವಜ್ಞ ॥ ೩ ॥
ಸುರತರುವು ಮರನಲ್ಲ । ಸುರಭಿಯೊಂದಾವಲ್ಲ
ಪರುಸಪಾಷಾಣದೊಳಗಲ್ಲ । ಗುರುರಾಯ
ನರರೊಳಗಲ್ಲ ಸರ್ವಜ್ಞ ॥ ೪ ॥
ತಂದೆಗೂ ಗುರುವಿಗೂ । ಒಂದೆ ಅಂತರವುಂಟು
ತಂದೆಹೇಳುವನು ಬಲುಬುದ್ಧಿ । ಗುರುವಿಂದ
ಬಂಧನವುಬಯಲು ಸರ್ವಜ್ಞ ॥ ೫ ॥
ಗುಡಿಯುಬೋದಿಗೆಕಲ್ಲು । ನಡುವೆರಂಗದಕಲ್ಲು
ಪೊಡಮಡಿಸಿಕೊಂಬುದದುಕಲ್ಲು । ವರಗಳನು
ಕೊಡುವುದೂಕಲ್ಲು ಸರ್ವಜ್ಞ ॥ ೬ ॥
ಕಲ್ಲುಕಲ್ಲೆಂಬುವಿರಿ । ಕಲ್ಲೊಳಿರ್ಪುದೆದೈವ?
ಕಲ್ಲಿಗೆಪ್ರಾಣವಿತ್ತಂಥ । ಗುರುವಿನ
ಸೊಲ್ಲೆತಾದೈವ ಸರ್ವಜ್ಞ ॥ ೭ ॥
ಹರನಿಗ್ಗೈಮೊಗವಿರ್ದು । ನೆರವಾಗಲೊಲ್ಲನು
ನರರೂಪುಧರಿಸಿ ಗುರುವಾಗಿ । ಬೋಧಿಪಗೆ
ಸರಿಯುಹರಕಾಣೆ ಸರ್ವಜ್ಞ ॥ ೮ ॥
ದರುಶನಗಳಾರರಿಂ । ಪುರುಷರುಮೂವರಿಂ
ಪರತತ್ವದಿರವುಬೇರೆಂದು । ತೋರಿದಾ
ಗುರುತಾನೆದೈವ ಸರ್ವಜ್ಞ ॥ ೯ ॥
ಬೊಮ್ಮವೆಂಬುದುತಾನು । ಪೊಮ್ಮಾರುದೂರವೆ?
ಒಮ್ಮೆಸದ್ಗುರುವಿನುಪದೇಶ । ದಿಂ ಮೋಕ್ಷ
ಗಮ್ಮನೆಬರ್ಕು ಸರ್ವಜ್ಞ ॥ ೧೦ ॥
ಹರತನ್ನೊಳಿರ್ದುದನು । ಗುರುತೋರದಿರುತಿರ್ಪ
ಮರದೊಳಗೆ ಅಗ್ನಿಯಿರುತಿರ್ದು । ತನ್ನತಾ
ನರಿಯದೇಕೆಂದ ಸರ್ವಜ್ಞ ॥ ೧೧ ॥

ಗಂಧವನುತೆಗೆವಲ್ಲಿ । ಒಂದುನೊಣವನುಕಾಣೆ
ಸಂಧಿಸಿದಮಲವಬಿಡುವಲ್ಲಿ । ನೊಣಮುತ್ತಿ
ವಂದವನೋಡು ಸರ್ವಜ್ಞ ॥ ೧೨ ॥

ನರಕ ಪಾಪಿಷ್ಠರಿಗೆ । ಸುರಲೋಕ ನಿಷ್ಠರಿಗೆ
ಗುರು ಶರಣರೊಳಗೆ ಜಗಮುಳಿದು । ಅಲ್ಲಿಂದ
ಉರಿದುಹೋಗುವುದು ಸರ್ವಜ್ಞ ॥ ೧೩ ॥

ಮೊಸರಕಡೆಯಲುಬೆಣ್ಣೆ । ಯೊಸೆದುಬರ್ಪಂದದಿ
ಹಸನಾದಗುರುವಿನುಪದೇಶ । ದಿಂ ಮೋಕ್ಷ
ವಶವರ್ತಿಯಕ್ಕು ಸರ್ವಜ್ಞ ॥ ೧೪ ॥

ಮುಂಡೆಬೋಳಾದೊಡಂ । ದಂಡಕೋಲ್ಪಿಡಿದೊಡಂ
ಹೆಂಡತಿಯಬಿಟ್ಟುನಡೆದೊಡಂ । ಗುರುಮುಖವ
ಕಂಡಲ್ಲದಿಲ್ಲ ಸರ್ವಜ್ಞ ॥ ೧೫ ॥

ಊರಿನಾದಾರಿಯನು । ಯಾರುತೋರಿದೊಡೇನು?
ಸ್ವಾರಸ್ಯಪದವನರುಹಿದ । ಸದ್ಗುರುವೆ
ಆರಾಧ್ಯನಕ್ಕು ಸರ್ವಜ್ಞ ॥ ೧೬ ॥

ಮರನುದ್ದಮನುಜರಿಗೆ । ತೆರನಾವುದೆಂದರೆ
ಕರಿಗೊಂಡಬೆಳಲಹಣ್ಣಂತೆ । ಗುರುಬೋಧೆ
ಹಿರಿದಾಗಬೇಕುಸರ್ವಜ್ಞ ॥ ೧೭ ॥

ಮನವುಮುಟ್ಟಲುಗುಂಡು । ತನುವಸೋಂಕಲುಪಾಪ
ಮನವೇಗದಿಂದಗುರುಚರಣ । ಸೋಂಕಿದರೆ
ತನುಶುದ್ಧವೈಯ ಸರ್ವಜ್ಞ ॥ ೧೮ ॥

ತುಪ್ಪವಾದಾಬಳಿಕ । ಹೆಪ್ಪನೆರೆವವರುಂಟೆ?
ನಿಸ್ಪೃಹನಾದ ಗುರುವಿ । ನುಪದೇಶದಿಂ
ತಪ್ಪದುಮುಕ್ತಿ ಸರ್ವಜ್ಞ ॥ ೧೯ ॥

ಪರುಸಲೋಹವಮುಟ್ಟೆ । ವರಸೆಯಿರಬಲ್ಲುದೆ?
ಪರುಷವೆತ್ತಂಥಶಿಷ್ಯರಿಗೆ । ಗುರುವಿನಾ
ದರುಶನವೆ ಪರುಸ ಸರ್ವಜ್ಞ ॥ ೨೦ ॥

ತಾಪದಲಿಸಂಸಾರ । ಕೂಪದಲಿಬಿದ್ದವರು
ಕೂಪವನೊಡೆದುಪೊರಮಡಲು । ಗುರುಪಾದ
ಸೋಪಾನವೈಯ ಸರ್ವಜ್ಞ ॥ ೨೧ ॥
ಗುರುಪಾದಸೇವೆತಾ । ದೊರೆಕೊಂಡಿತಾದೊಡೆ
ಪಿರಿದಾದಪಾಪಪರಿಯುವುದು । ಕರ್ಪುರದ
ಗಿರಿಯುಸುಟ್ಟಂತೆ ಸರ್ವಜ್ಞ ॥ ೨೨ ॥
ದುರ್ಗಿಯಾಚಾಮುಂಡಿ । ಹೆಗ್ಗಳದಶಕ್ತಿಯು ।
ಕಗ್ಗದಾಜಟ್ಟಿಮುಸುಡೀ । ಇವರಾಟ
ಸದ್ಗುರುವಿನಾಜ್ಞೆ ಸರ್ವಜ್ಞ ॥ ೨೩ ॥
ವಿಷಯಕ್ಕೆಕುದಿಯದಿರು । ಅಶನಕ್ಕೆ ಹರಿಯದಿರು
ಅಸಮಾಕ್ಷನಡಿಯಮರೆಯದಿರು । ಗುರುಪಾದ
ವಶವರ್ತಿಯಹುದು ಸರ್ವಜ್ಞ ॥ ೨೪ ॥
ಹಂದಿಯಾಚಂದನದ । ಗಂಧವನುಬಲ್ಲುದೆ?
ವಂದ್ಯವಂದನೆಯುಇಲ್ಲದ । ತನುವಿಂಗೆ
ನಿಂದ್ಯತಪ್ಪುವುದೆ? ಸರ್ವಜ್ಞ ॥ ೨೫ ॥
ಅರಿವನರಿಯದಗುರುವು । ಪರವನರಿಯದಶಿಷ್ಯ
ನೆರೆಯರಿಯದೋದುಇವುಮೂರು । ಅಂಧಕರು
ತಿರುಗಾಡಿದಂತೆ ಸರ್ವಜ್ಞ ॥ ೨೬ ॥
ಬಳ್ಳಿಕುರುಡರುಕೂಡಿ । ಹಳ್ಳದೊಳುಬಿದ್ದಂತೆ
ಒಳ್ಳೆಯಾಗುರುವಿನುಪದೇಶ । ವಿಲ್ಲದಗೆ
ಎಲ್ಲಿಯದುಮುಕ್ತಿ? ಸರ್ವಜ್ಞ ॥ ೨೭ ॥
ಹಸಿಯುಸೌದೆಯತಂದು । ಅಶನಬೇಯಿಸಲಹುದೆ?
ವಿಷಯಗಳಬಿಡದಮನುಜಂಗೆ । ಗುರುಕರುಣ
ವಶವರ್ತಿಯಹುದೆ? ಸರ್ವಜ್ಞ ॥ ೨೮ ॥
ಬಂಧುಬಳಗಗಳೆಲ್ಲ । ಬಂದುಂಡುಹೋಗುವರು
ಬಂಧನವನಳಿಸಲರಿಯರು । ಗುರುವಿಂದ
ಬಂಧುಗಳುಂಟೆ? ಸರ್ವಜ್ಞ ॥ ೨೯ ॥

ಶ್ವಾನವೆಳನೀರಿನಾ । ಪಾನಕವಬಲ್ಲುದೇ?
ಹೀನಮಾನವಗೆವುಪದೇಶ । ವಿತ್ತರ್ಗೆ
ಮಾನಬಂದಪುದೆ? ಸರ್ವಜ್ಞ ॥ ೩೦ ॥
ಭಕ್ತಿಯಿಲ್ಲದಶಿಷ್ಯ । ಗೊತ್ತುಗೆಟ್ಟುಪದೇಶ
ಬತ್ತಿದಕೆರೆಯಬಯಲೊಳಗೆ । ರಾಜಾನ್ನ
ಬಿತ್ತಿಕೆಟ್ಟಂತೆ ಸರ್ವಜ್ಞ ॥ ೩೦ ॥
ಗುರುವನಿಂದಿಸಬೇಡ । ಪರರಪಳಿಯಲುಬೇಡ
ಬರೆವವರಕೂಡಹಗೆಬೇಡ । ಬಂಗಾರ
ಮೆರವುತರಬೇಡಸರ್ವಜ್ಞ । ೩೨ ॥
ಪರತತ್ವತನ್ನೊಳಗೆ । ಯೆರವಿಲ್ಲದಿರುತಿರೆ
ಪರದೇಶಿಯಾಗಿತಿರುಗುವ । ಯೋಗಿಯ
ಪರಮಗುರುವೆಂಬೆಸರ್ವಜ್ಞ ॥ ೩೩ ॥
ಗುರುವನರನೆಂದವಗೆ । ಹರನಶಿಲೆಯೆಂದವಗೆ
ಕರುಣಪ್ರಸಾದವೆಂಜಲು । ಎಂಬುವಗೆ
ನರಕತಪ್ಪುವುದೆ? ಸರ್ವಜ್ಞ ॥ ೩೪ ॥
ಗುರುವಿಂದಬಂಧುಗಳು । ಗುರುವಿಂದದೈವಗಳು
ಗುರುವಿಂದಲಾದುದುಪುಣ್ಯ । ಲೋಕಕ್ಕೆ
ಗುರುವಿಂದಮುಕ್ತಿಸರ್ವಜ್ಞ ॥ ೩೫ ॥
ಹರಭಕ್ತಗಲ್ಲದೆ । ಹರಿದುಹೋಗದುಪಾಪ
ಹರಭಕ್ತಿಯುಳ್ಳಪರದೇಶಿ । ಯೆನ್ನಯಾ
ಪರಮಗುರುವೆಂಬೆಸರ್ವಜ್ಞ ॥ ೩೬ ॥
ಒಂದೂರೊಳಿರಲುಗುರು । ವಂದನೆಯಮಾಡದೆ
ಸಂಧಿಸಿಅನ್ನವುಣುತಿರಲು । ಆಶಿಷ್ಯ
ಹಂದಿಯಂತಕ್ಕುಸರ್ವಜ್ಞ ॥ ೩೭ ॥
ಮೂರಿಟ್ಟೊಡಾರಕ್ಕು । ಆರುಹನ್ನೆರಡಕ್ಕು
ಹೇರುವಗೊಡ್ಡುಹಯನಕ್ಕು । ಗುರುಕರುಣ
ಸೇರುವಕಾಲಕ್ಕೆಸರ್ವಜ್ಞ ॥ ೩೮ ॥

ಜೀಯುಸದ್ಗುರುನಾಥ । ಕಾಯುಪುಸಿಯುನುತೋರಿ
ಮಾಯುಪಾಶವನುಹರಿಸುತ್ತ । ಶಿಷ್ಯಂಗೆ
ತಾಯಿಯುಂತಿರನೆ? ಸರ್ವಜ್ಞ ॥ ೩೯ ॥
ಉತ್ತಮುದಗುರುಮುಖದಿ । ತತ್ವಮುಸಿಯುನೆತಿಳಿದು
ಸತ್ಯವಿದೆಂದು ನಿರ್ಧರಿಸಿ। ದಾಮೇಲೆ
ಸತ್ತುಹುಟ್ಟುವನೆ? ಸರ್ವಜ್ಞ ॥ ೪೦ ॥
ಉರಿಯುುಂಡಕರ್ಪುರದ । ಸರಕುಮಾರುವರುಂಟೆ?
ಗುರುಕರುಣೆಯಿಂದ ನಿಜದೊಳಗೆ। ಬೆರೆದಾತ
ನರಕಕೂಡುವನೆ? ಸರ್ವಜ್ಞ ॥ ೪೧ ॥
ಮೂರುಕಣ್ಣೀಶ್ವರನ । ತೋರಿಕೊಡಬಲ್ಲ ಗುರು
ಜೇರಿರುವದೊಂದುತೆರವಿಲ್ಲ। ಗುರುಕರುಣ
ತೋರುವುದುಶಿವನ ಸರ್ವಜ್ಞ ॥ ೪೨ ॥
ಸಾಣೆಶ್ರೀಗಂಧವನು । ಮಾಣದೆತೇಯ್ದಂತೆ
ಜಾಣಶ್ರೀಗುರುವಿನುಪದೇಶ । ವಾದವಗೆ
ಕಾಣಿಪುದು ಮುಕ್ತಿ ಸರ್ವಜ್ಞ ॥ ೪೩ ॥
ಜೆಳಗುನುಂಗಿದ ಗುರುವಿ । ನೊಳಗುಬಲ್ಲವರಾರು
ಒಳಗಿನಾಬೆಳಗನರಿದವಗೇ। ಕೈಲಾಸ
ಕರತಳಾಮಳಕ ಸರ್ವಜ್ಞ ॥ ೪೪ ॥
ತಿರಿದುಹರಿದೂತೊರೆದು । ಕರೆದುಧರ್ಮವಮಾಡೆ
ಪರಿಣಾಮುವಕ್ಕುಪದವಕ್ಕು । ಗುರುಪಾದ
ನೆರೆಮನೆಯುಕ್ಕು ಸರ್ವಜ್ಞ ॥ ೪೫ ॥
ಹೊಲಬನರಿಯುದಗುರುವು । ತಿಳಿಯುಲರಿಯುದ ಶಿಷ್ಯ ।
ನೆಲೆಯುನಾರಯ್ಯುದುಪದೇಶ । ಅಂಧಕನು
ಕೊಳನಹೊಕ್ಕಂತೆ ಸರ್ವಜ್ಞ ॥ ೪೬ ॥
* * * * * ॥ ೪೭ ॥
ಹೇಳಿದ್ದೆಹೇಳುವರು । ಕೇಳಿದ್ದೆಕೇಳುವರು
ಕೇಳಿದ್ದೆಕೇಳಿ ಸುಖಿಸುವರು । ಗುರುಗಳು
ಹೇಳುವತರಬೇರೆ ಸರ್ವಜ್ಞ ॥ ೪೮ ॥

೩. ಲಿಂಗಾತಿಶಯ ಪದ್ಧತಿ.

ಕಲ್ಲಿನಲಿಖಂಡದಲಿ । ಬಳ್ಳದಲಿಹಿಕ್ಕೆಯಲಿ
ಎಲ್ಲಿಭಾವಿಸಿದೊಡಲ್ಲಿಪ್ಪ । ಕುರುಹುತಾ
ಬಲ್ಲೆನು ಈಗ ಸರ್ವಜ್ಞ ॥ ೧ ॥
ಲಿಂಗದಾನದಿಯಲ್ಲಿ । ಲಿಂಗವಿಟ್ಟೆಡೆಯಲ್ಲಿ
ಲಿಂಗದಲಿಜಗವು ಅಡಗಿಹುದು । ಲಿಂಗವನು
ಹಿಂಗಿಹರುವುಂಟೆ? ಸರ್ವಜ್ಞ ॥ ೨ ॥
ಓಂಕಾರಮುಖದಲ್ಲಿ । ಆಕಾರತಾನಿಲ್ಲ
ಆಕಾಶತಳವಮೀರಿಹುದು । ಹರಿಯಜರು
ತಾಕಾಣರಯ್ಯ ಸರ್ವಜ್ಞ ॥ ೩ ॥
ಒಬ್ಬನಲ್ಲದೆಜಗಕೆ । ಇಬ್ಬರುಂಟೇ? ಮರುಳೆ
ಒಬ್ಬನೇಸರ್ವಜಗಕೆಲ್ಲ । ಕರ್ತಾರ
ನೊಬ್ಬನೇದೈವಸರ್ವಜ್ಞ ॥ ೪ ॥
ಉಣಲಡಿಗೆಘನವಾಗಿ ಕಣುಕತಾನೊಂದಯ್ಯ
ಮಣಿಮಂತ್ರಔಷಧಿಯುಮೂರು । ಲೋಕಕ್ಕೆ
ತ್ರಿಣಯನನೆದೈವಸರ್ವಜ್ಞ ॥ ೫ ॥
ಹರಿಯಜರೆಂಬುವರು । ಹರನಿಂಗೆ ಸರಿಯಹರೆ?
ಅರಸಿಂಗೆಆಳು ಸರಿಯಹನೆ? ಪಶುಪತಿಗೆ
ಸರಿಯಹರಕಾಣೆಸರ್ವಜ್ಞ ॥ ೬ ॥
ಹುಟ್ಟಿಸುವನಜನೆಂಬ । ಕಷ್ಟದನುಡಿಯೇಕೆ?
ಹುಟ್ಟಿಪನಶಿರವಶಿವನರಿದ । ಆಶಿರವ
ಹುಟ್ಟಿಸನದೇಕೆ? ಸರ್ವಜ್ಞ ॥ ೭ ॥
ಷಡುದರುಶನಾದಿಗಳು । ಮೃಡನವೊಡಲಾದುವು
ಪೊಡವಮಡುತನಿಗಮವರಸುವ । ಅಭವನ
ಅಡಿಗೆಣೆಯಾರು? ಸರ್ವಜ್ಞ ॥ ೮ ॥

ದೇಶಕ್ಕೆಸಜ್ಜನನು । ಹಾಸ್ಯಕ್ಕೆಹನುಮಂತ
ಕೇಶವಭಕ್ತರೊಳಗೆಲ್ಲ । ಮೂರುಕ
ಣ್ಣೀಶನೇದೇವಸರ್ವಜ್ಞ ॥ ೯ ॥

ಉಂಬಳಿಯುಯಿರುವಾಗ । ಕಂಬಳಿಯಹೊದಿಯುವರೆ?
ಶಂಭುವಿರಲಾಗಿಮತ್ತೊಂದು । ದೈವವನು
ನಂಬುವನೆಹೆಡ್ಡಸರ್ವಜ್ಞ ॥ ೧೦ ॥

ಎಂಜಲುಆಶೌಚ । ಸಂಜೆಯೆಂದೆನಬೇಡ
ಕುಂಜರವುವನದೆಮೆರೆವಂತೆ । ಬಿಡದೆನಿ
ರಂಜನನುನೀನೆಸರ್ವಜ್ಞ ॥ ೧೧ ॥

ಎಂಜಲದುಹೊಲೆಯಲ್ಲ । ಸಂಜೆಗತ್ತಲೆಯಲ್ಲ
ಅಂಜಿಕೆಯಿಲ್ಲಭಯವಿಲ್ಲ । ಜ್ಞಾನವೆಂ
ಬಂಜನವಿರಲುಸರ್ವಜ್ಞ ॥ ೧೨ ॥

ಭೂತೇಶಗೆರಗುವನು । ಜಾತಿಮಾದಿಗನಲ್ಲ
ಜಾತಿಯಲಿಹುಟ್ಟಿಶಿವನಿಗೆ । ಶರಣೆನ್ನ
ದಾತಮಾದಿಗನುಸರ್ವಜ್ಞ ॥ ೧೩ ॥

ಏತರಾಹೂವಾಗೆ । ನಾತವಿದ್ದರೆಸಾಕು
ಜಾತಿವಿಜಾತಿಯೆನಬೇಡ । ಶಿವನೊಲಿಯ
ಲಾತನೇಜಾತಸರ್ವಜ್ಞ ॥ ೧೪ ॥

ಸಾಲುವೇದಗಳೋದಿ । ಶೀಲದಲಿಶುಚಿಯಾಗಿ
ಶೂಲಿಯಪಾದಮರೆದರೆ । ಗಿಳಿಯೋದಿ
ಹೇಲುಬಿದ್ದಂತೆಸರ್ವಜ್ಞ ॥ ೧೫ ॥

ಹರಿವಲೆಯುಬ್ರಹ್ಮಂಗೆ । ಕುರಿದಲೆಯುದಕ್ಷಂಗೆ
ನೆರಹತ್ತುಜನನಹರಿಗೆ । ಈಮೂವರೂ
ಹರನಿಗೆಣೆಯುಹರೆ? ಸರ್ವಜ್ಞ ॥ ೧೬ ॥

ಕುಲಗೆಟ್ಟವರಚಿಂತೆ । ಯೊಳಗಿಪ್ಪರಂತಲ್ಲ
ಕುಲಗೆಟ್ಟುಶಿವನಸಮರಿಹೊಕ್ಕ । ಋಷಿಗಳಿಗೆ
ಕುಲಗೋತ್ರವುಂಟೆ? ಸರ್ವಜ್ಞ ॥ ೧೭ ॥

* * * * * ॥ ೧೮ ॥

ಜಾತಿಹೀನನಮನೆಯು ಜ್ಯೋತಿತಾಹೀನವೆ?
ಜಾತಂಗೆಜಾತನೆನಲೇಕೆ? ಅರುಹುವಿಡಿ
ದಾತನೇಜಾತ ಸರ್ವಜ್ಞ ॥ ೧೯ ॥

ದೇಹಿಯೆನಬೇಡನಿ। ದೇಹಿ ಜಂಗಮದೇವ
ದೇಹಗುಣದಾಸೆಯಳಿದೊಡೆ। ಆತನಿ
ದೇಹಿಕಾಣಯ್ಯಸರ್ವಜ್ಞ ॥ ೨೦ ॥

ಗಂಗೆಗೋದಾವರಿ। ತುಂಗಭದ್ರೆಯಜಲದೆ
ಹಿಂಗದೆಮುಳುಗಿ ಫಲವೇನು? ನಿನ್ನಲ್ಲಿ
ಲಿಂಗದರಿವಿಲ್ಲಸರ್ವಜ್ಞ ॥ ೨೧ ॥

ಮಾಯೆಮೋಹವನೆಚ್ಚಿ। ಕಾಯವನುಕರಗಿಸುತ
ಆಯಾಸಗೊಳುತಲಿರಬೇಡ। ಓಂನಮಶ್ಶಿ
ವಾಯಎಂದೆನ್ನುಸರ್ವಜ್ಞ ॥ ೨೨ ॥

ಅಕ್ಷರವುತರ್ಕಕ್ಕೆ। ಲೆಕ್ಕವದುಗಣಿತಕ್ಕೆ
ಮಿಕ್ಕವೋದುಗಳುತಿರುಪಕ್ಕೆ। ಮೋಕ್ಷಕಾ
ರಕ್ಕರವೆಸಾಕುಸರ್ವಜ್ಞ ॥ ೨೩ ॥

ಮುನಿವಂಗೆಮುನಿಯದಿರು। ಕನಿವಂಗೆಕನಿಯದಿರು
ಮನಸಿಜಾರಿಯನು ಮರೆಯದಿರು। ಶಿವನಕೃಪೆ
ಮನದಿಘನವಕ್ಕು ಸರ್ವಜ್ಞ ॥ ೨೪ ॥

ಎಲ್ಲರನುನೆರೆಬೇಡಿ। ಹಲ್ಲುಬಾಯ್ದೆರೆಯುವರೆ?
ಬಲ್ಲದಶಿವನ ಭಜಿಸಿದರೆ। ಶಿವತಾನು
ಇಲ್ಲೆನ್ನಲರಿಯ ಸರ್ವಜ್ಞ ॥ ೨೫ ॥

ನರರಬೇಡುವದೈವ। ವರವೀಯಬಲ್ಲುದೆ?
ತಿರಿವರನುತಿರಿದರೇನು? ಅದರಿಂದ
ಹರನಬೇಡುವುದುಸರ್ವಜ್ಞ ॥ ೨೬ ॥

ಭ್ರಷ್ಟದೈವಕೆಬಾಯ। ಬಿಟ್ಟಲ್ಲಿಫಲವಿಲ್ಲ
ಸೃಷ್ಟಿಗೀಶ್ವರನ ಭಜಿಸಲ್ಕೆ। ಮುಂದಕ್ಕೆ
ಇಷ್ಟಾರ್ಥವೀವ ಸರ್ವಜ್ಞ ॥ ೨೭ ॥

ಇಂದ್ರನಾನೆಯನೇರಿ । ಪೊಂದನೂಕೊಡಲರಿಯ
ಚಂದ್ರಶೇಖರನು ಮುದಿಯೆತ್ತ । ನೇರಿಬೇ
ಕೆಂದುದನು ಕೊಡುವಸರ್ವಜ್ಞ ॥ ೨೮ ॥

ಸಾರವನುಬಯುಸುವೊಡೆ । ಕಾರವನುಧರಿಸುವರೆ?
ಮಾರಸಂಹರನನೆನೆದರೆ । ಮೃತ್ಯುವು
ದೂರಕ್ಕೆದೂರಸರ್ವಜ್ಞ ॥ ೨೯ ॥

ಕಾಯಿಕವುಲವೆಸಂಜ್ಞೆ । ಜೀವರತ್ನವೆಲಿಂಗ
ಭಾವಪುಷ್ಪದಲಿಶಿವಪೂಜೆ । ಮಾಡುವರ
ದೇವರೆಂದೆಂಬೆ ಸರ್ವಜ್ಞ ॥ ೩೦ ॥

ಓದುವಾದಗಳೇಕೆ? ಗಾದೆಯಾಮಾತೇಕೆ?
ವೇದಪೌರಾಣತತಿಯೇಕೆ? ಲಿಂಗದ
ಹಾದಿಯರಿದವಗೆಸರ್ವಜ್ಞ ॥ ೩೧ ॥

ಒಪ್ಪದನುಡಿಯೇಕೆ? ಪುಷ್ಪವೇರಿಸಲೇಕೆ?
ಅರ್ಪಿತದಗೊಡವೆತನಗೇಕೆ? ಲಿಂಗದ
ಒಪ್ಪನರಿದವಗೆಸರ್ವಜ್ಞ ॥ ೩೨ ॥

ಮೆಟ್ಟಿದಕಲ್ಲಿಂಗೆ । ಪೊಟ್ಟಿಪತ್ರೆಯಹಾಕಿ
ಕಟ್ಟಿದಾಲಿಂಗವಡಿಮಾಡಿ । ಶರಣೆಂಬ
ಭ್ರಷ್ಟರನು ಕಂಡ್ಯಸರ್ವಜ್ಞ ॥ ೩೩ ॥

+ ೪೧ =

೪. ಇಷ್ಟಲಿಂಗಪದ...

ಸೃಷ್ಟಿಯೆಲ್ಲವಮನವು । ಮುಟ್ಟಿಹುದುನಿರ್ಮ...
ಮುಟ್ಟಿಅಭಯವನು ಇಟ್ಟು । ಮೂರೊಂದು...
ನಿಟ್ಟಿಪ್ಪನೈಸೆ ಸರ್ವಜ್ಞ ॥ ೧ ॥

ಶಿವಪೂಜೆಮಾಡುವುದು । ಶಿವನಕೊಂಡಾಡ...
ಶಿವನಸೆನಹುಗಳ ಬಿಡದಿಹುದು । ಮರ್ತ್ಯದಿ...
ಶಿವಲೋಕದಿರವು ಸರ್ವಜ್ಞ ॥ ೨ ॥

ಒಮ್ಮನದಿಶಿವಪೂಜೆ । ಗಮ್ಮನೇಮಾಡುವುದು
ಇಮ್ಮನವನಿಡಿದು ಕೆಡಬೇಡ । ವಿಧಿವಶವು
ಗಮ್ಮನೇಬಕ್ಕು ಸರ್ವಜ್ಞ ॥ ೩ ॥
ಅಂಗವನು ಲಿಂಗವನು । ಸಂಗಯಿಸಲೇತಕ್ಕೆ?
ಲಿಂಗದೊಳುನೆನಹುಘನವಾಗೆ । ಆಲಿಂಗ
ಅಂಗವಾಗಿಹುದು ಸರ್ವಜ್ಞ ॥ ೪ ॥
ಲಿಂಗದಾಗುಡಿಲೇಸು । ಗಂಗೆಯಾತಡಿಲೇಸು
ಲಿಂಗಸಂಗಿಗಳನಡೆಲೇಸು । ಅವರೊಳು
ಸಂಗವೇಲೇಸು ಸರ್ವಜ್ಞ ॥ ೫ ॥
ಲಿಂಗದಲಿನಡೆಯಾಗಿ । ಲಿಂಗದಲಿ ನುಡಿಯಾಗಿ ।
ಲಿಂಗದಲಿನೋಟನಡೆಕೂಟ । ವಾದವನು
ಲಿಂಗವೇಅಕ್ಕು ಸರ್ವಜ್ಞ ॥ ೬ ॥
ಕಂಗಳಿಚ್ಛೆಗೆಹರಿದು । ಭಂಗಗೊಳದಿರು ಮನವೆ।
ಲಿಂಗದಲಿಮನವನಿಲಿಸಿ । ಸತ್ಯಮಿರೆ
ಲಿಂಗವದುತಾನೆ ಸರ್ವಜ್ಞ ॥ ೭ ॥
ಇಷ್ಟಲಿಂಗದಿಮನವ। ನೆಟ್ಟನೇನಿಲಿಸಿದರೆ
ಕೆಟ್ಟಭ್ರಮೆಯೊಳಗೆ ಮುಳುಗನು । ಕರ್ಮದ
ಬಟ್ಟೆಗೆಹೋಗ ಸರ್ವಜ್ಞ ॥ ೮ ॥
ನಿಷ್ಠೆಯಿದ್ದೊಡೆಶಿವನು । ಕಟ್ಟಿಕೊಂಡೊಳಗಿರ್ಪ ।
ನಿಷ್ಠೆಯಿಲ್ಲದವನು ಭಜಿಸಿದರೆ । ಆ ಶಿವನು
ಬಟ್ಟಬಯಲಂತೆ ಸರ್ವಜ್ಞ ॥ ೯ ॥
ಅಷ್ಟವಿಧದರ್ಚನೆಯ । ನೆಷ್ಟುಮಾಡಿದೊಡೇನು?
ನಿಷ್ಠೆಯಿಲ್ಲದವಮಾಡಿದರೆ । ಆಪೂಜೆ
ನಷ್ಟಕಾಣಯ್ಯ ಸರ್ವಜ್ಞ ॥ ೧೦ ॥
ಎಷ್ಟುಬಗೆ ಯಾರತಿಯ । ಮುಟ್ಟಿಸಿಯೆಫಲವೇನು?
ನಿಷ್ಠೆಯಿಲ್ಲದನ ಶಿವಪೂಜೆ । ಹಾಳೂರು
ಕೊಟ್ಟಿಗುರಿದಂತೆ ಸರ್ವಜ್ಞ ॥ ೧೧ ॥

ದೆಸೆಯೆಂಟುದಿಕ್ಕಿನಲಿ । ಯೆಸೆವಗಿಣ್ಣೆಲುಗಿಂಡಿ
ಹುಸಿದುಮಾಡುವನ ಶಿವಪೂಜೆ । ಕಂಚುಗರು
ಪಸರವಿಟ್ಟಂತೆ ಸರ್ವಜ್ಞ ॥ ೧೨ ॥
ಎಣಿಸುತಿರ್ಪುದು ಬೆರಳು । ಗಣಿಸುತಿರ್ಪುದುಜಿಹ್ವೆ
ಮನಹೋಗಿ ಹಲವುನೆನೆದರೆ । ಹಾಳೂರ
ಶುನಕನಂತಕ್ಕು ಸರ್ವಜ್ಞ ॥ ೧೩ ॥
ಆಳುತೇಳುವಬೆರಳು । ಜಾಳುವಿಡುಕುವಬಾಯಿ
ಮೇಳದೊಳು ತೊಡಚಿಬಿಡದೆ । ಎಸಗುವಜಪವು
ಹಾಳುಮನೆಯಂತೆ ಸರ್ವಜ್ಞ ॥ ೧೪ ॥
ಬತ್ತೀಸಬತ್ತಿಯನು । ಹತ್ತಿಸಿಯೆಫಲವೇನು?
ನಿತ್ಯನೆಲೆಗೊಳದೆ ಭಜಿಸುತಿರೆ । ಆಪೂಜೆ
ಬತ್ತಿಕೇಡೆಂದ ಸರ್ವಜ್ಞ ॥ ೧೫ ॥
ಹಲವನೋದಿದೊಡೇನು? ಚೆಲುವನಾದೊಡದೇನು?
ಕುಲಚಲವು ಇದ್ದು ಫಲವೇನು? ಶಿವಲಿಂಗ
ನೊಲುಮೆಯಿಲ್ಲದಗೆ ಸರ್ವಜ್ಞ ॥ ೧೬ ॥
ಕೊಲುವಕೈಯೊಳುಪೂಜೆ । ಮೆಲುವಬಾಯೊಳು ಮಂತ್ರ
ಸಲೆಪಾಪವೆರಡು ತನುವಿನಲಿ । ಪೂಜಿಪನು
ಹೊಲೆಯಕಾಣಯ್ಯ ಸರ್ವಜ್ಞ ॥ ೧೭ ॥
ಕಂಡವರಕಂಡುತಾ । ತುಂಡುಲಿಂಗವಕಟ್ಟಿ
ಕೊಂಡಾಡಲರಿಯದಧಮಂಗೆ । ಆಲಿಂಗ
ಕೆಂಡದಂತಕ್ಕು ಸರ್ವಜ್ಞ ॥ ೧೮ ॥
ಕಟ್ಟಲುಂಬಿಡಲುಶಿವ । ಬಟ್ಟಲಸು ಕದ್ದನೆ?
ಕಟ್ಟಲೂಬೇಡ ಬಿಡಬೇಡ । ಕಣ್ಣುಮನ
ಕಟ್ಟಿದರೆಸಾಕು ಸರ್ವಜ್ಞ ॥ ೧೯ ॥
ತನ್ನಲ್ಲಿಶಿವನಿರಲು । ಮನ್ನಿಸಲ್ಕರಿಯದೆ
ಬಿನ್ನಣದಿಕಡೆದ ಪ್ರತಿಮೆಗೆ । ಕೈಮುಗಿವ
ಕುನ್ನಿನೋಡೆಂದ ಸರ್ವಜ್ಞ ॥ ೨೦ ॥

ಕಲ್ಲುಕಾಷ್ಠದಲಿಹನು । ಎಲ್ಲೆಲ್ಲಿಶಿವನಿಹನು
ಎಲ್ಲಿಯುಮಾತು ಯೆನಬೇಡ । ನಿಷ್ಠೆಯಿ
ದ್ದಲ್ಲಿ ಇಹನೆಂದ ಸರ್ವಜ್ಞ ॥ ೨೧ ॥

ಲಿಂಗಪೂಜಿಸುವಾತ । ಜಂಗಮಕೆನೀಡಿದರೆ
ಲಿಂಗದಾಕ್ಷೇಮಘನವಕ್ಕು । ಆಲಿಂಗ
ಹಿಂಗದೇಇಹುದು ಸರ್ವಜ್ಞ ॥ ೨೨ ॥

ಆದಿಯಾಲಿಂಗವನು । ಭೇದಿಸಲ್ಕರಿಯದೆ
ಹಾದಿಯಡಿಮಾಡಿನಮಿಸುವ । ಮನುಜರೇ
ಮಾದಿಗರುನೋಡುಸರ್ವಜ್ಞ ॥ ೨೩ ॥

ಉಣಬಂದಜಂಗಮಕೆ । ವುಣಲಿಸದೆಅಂತಿರಿಸಿ
ಉಣದಿರ್ಪಕಲ್ಲಿಗೆಡೆಯೂಡಿ । ನಮಿಸುವಾ
ಬಣಗುಗಳನೋಡುಸರ್ವಜ್ಞ ॥ ೨೪ ॥

ಹುಸಿವವನದೇಹವು । ಮಸಿಮಣ್ಣದೆಂತೆನಲು
ಮುಸುಕಿರ್ದಮಲವನೊಳಗಿರಿಸಿ । ಪುಷ್ಪವನು
ಹಸಮಾಡಿದಂತೆಸರ್ವಜ್ಞ ॥ ೨೫ ॥

ಲಿಂಗಕ್ಕೆತೋರದೆಯೆ । ಅಂಗಕ್ಕೆಕೊಂಡರೆ
ತಿಂಗಳಲಿಸತ್ತಹಳೆನಾಯಿ । ಮಾಂಸವನು
ನುಂಗಿದಂತಕ್ಕುಸರ್ವಜ್ಞ ॥ ೨೬ ॥

ಲಿಂಗಪ್ರಸಾದವನು । ಅಂಗಕ್ಕೆಕೊಂಬುವರು
ಗಂಗಾಳದೊಳಗೆಕೈತೊಳೆದು । ಚೆಲ್ಲುವಾ
ಮಂಗಗಳನೋಡುಸರ್ವಜ್ಞ ॥ ೨೭ ॥

ಲಿಂಗಕ್ಕೆತೋರಿಸಿಯೆ । ನುಂಗುವಾತನೆಕೇಳು
ಲಿಂಗವೇಉಂಡುಹೊರೆಗೆಡಹಿ । ತೆಲೊಪಾಪಿ
ಜಂಗಮಕೆನೀಡುಸರ್ವಜ್ಞ ॥ ೨೮ ॥

ಲಿಂಗಕ್ಕೆತೋರಿಸದೆ । ನುಂಗಿದೊಡೆಏನಹುದು?
ಭಂಗಬಂಧನವು ಘನವಹುದು । ಆಲಿಂಗ
ಹಿಂಗದಲೆಯಹುದುಸರ್ವಜ್ಞ ॥ ೨೯ ॥

ಈಶಪ್ರಸಾದವನು । ಸೂಸದಲೆತಾಕೊಳ್ಳೆ
ಶಾಶ್ವತದಪದವಿತಾನಕ್ಕು । ಜಗಕೆಲ್ಲ
ಈಶ್ವರನೆಅಕ್ಕುಸರ್ವಜ್ಞ ॥ ೩೦ ॥

ಹರಹರಾಎನ್ನದೇ । ಪರಶಿವನನೆನೆಯದೆ
ಸ್ಮರಹರನಕರುಣೆತನಗಹುದೆ? ಜಗದೊಳಗೆ
ಇರುತಿಹುದೆ? ಕಷ್ಟಸರ್ವಜ್ಞ ॥ ೩೧ ॥

ಅಂಗದಿಚಿಗೆಹರಿದು । ಭಂಗಗೊಳದಿರುಮನುಜ
ಲಿಂಗದಲಿನೆನಹುನಿಲಿಸೆ । ಸತ್ಯದಿನೀನು
ಲಿಂಗವೇಅಪ್ಪೆಸರ್ವಜ್ಞ ॥ ೩೨ ॥

ಲಿಂಗದಾದರುಶನವು । ಲಿಂಗದಾಸ್ಪರ್ಶನವು
ಲಿಂಗಸಹಸರ್ವಭೋಗ । ವಾದಾತ
ಲಿಂಗವೇಅಕ್ಕುಸರ್ವಜ್ಞ ॥ ೩೩ ॥

ಲಿಂಗದಲಿನೆನಹಾಗಿ । ಲಿಂಗದಲಿಮನವಾಗಿ
ಲಿಂಗದಲಿನೆಟ್ಟನುಡಿಯಾಗಿ । ಆದವನು
ಲಿಂಗವೇಅಕ್ಕುಸರ್ವಜ್ಞ ॥ ೩೪ ॥

+೧೧೪=೧೪

೫. ಭಕ್ತಪದ್ಧತಿ.

ನೋಟಲಿಂಗಗಳಲ್ಲಿ । ಕೂಟಜಂಗಮದಲ್ಲಿ
ಸಾಟಕಪ್ರಸದ್ಗುರುವಿನಲ್ಲಿ । ಇಹಭಕ್ತನಾ
ಆಟವಾಶ್ಚರ್ಯಸರ್ವಜ್ಞ ॥ ೧ ॥

ಭಕ್ತರೊಡನಾಡುವುದು । ಭಕ್ತರೊಡಗೂಡುವುದು
ಭಕ್ತರೊಳುಭಕ್ತಿಚಿರಸಿರ್ಪ । ಭಕ್ತತಾಂ
ಮುಕ್ತನೆನಿಸುವನುಸರ್ವಜ್ಞ ॥ ೨ ॥

ಅಲಸದಿರುಗುರುಭಕ್ತಿ । ಹುಲುಸುಂಟೆ? ಕೇಳಯ್ಯ
ಬಲುಕವೆಗಳೊಡೆದುಬುಡದಿಂದ । ತುದಿತನಕ
ಹಲಸುಕಾತಂತೆಸರ್ವಜ್ಞ ॥ ೩ ॥

ಜಂಗಮುಕೆವಂಚಿಸನು । ಹಿಂಗದಿರ ಲಿಂಗವನು
ಸಂಗಸಜ್ಜನರ ಪರಸತಿಯು । ನೋಡದಗೆ
ಭಂಗವೇಇಲ್ಲಸರ್ವಜ್ಞ ॥ ೪ ॥

ಕಾಚುನೀಳೆಯಕಿಂಪು । ಲೋಚನಕ್ಕಂಜನಪ್ರ
ಲಾಂಛನದಕಳೆಯುಜಗಕಿಂಪು । ಭಕ್ತಂಗೆ
ಆಚಾರವಿಂಪುಸರ್ವಜ್ಞ ॥ ೫ ॥

ಪರುಸಕಬ್ಬಿಣಕರಗಿ । ಕರಡಿಗೆಯೊಳಿರುವುದೇ?
ಹರಭಕ್ತಿಯುಳ್ಳಮಹಿಮ । ಸಂಸಾರದಲಿ
ಎರಕವಾಗಿಹನೆ? ಸರ್ವಜ್ಞ ॥ ೬ ॥

ಕರ್ಮಿಗಾಶಿವಭಕ್ತಿ । ವರ್ಮದೊರೆಕೊಂಬುವುದೆ?
ಚರ್ಮವನುತಿಂಬಶುನಕಂಗೆ । ಪಾಯಸದ
ಕೂರ್ಮೆಯೇಕೈಯ? ಸರ್ವಜ್ಞ ॥ ೭ ॥

ಗುರಿಯತಾಗದಕೋಲ । ನರೆನೂರನೆಚ್ಚೇನು?
ಬರಡಿಗೆ ಭಕ್ತಭಜಿಸಿದರೆ । ಅದುತಾನು
ಇರಲರಿಯುದಯ್ಯ ಸರ್ವಜ್ಞ ॥ ೮ ॥

ಜ್ವರಬಂದಮನುಜಂಗೆ । ನೊರೆವಾಲುವಿಷಮುಕ್ಕು
ನರಕದಲಿಬೀಳ್ವ ಮನುಜಂಗೆ । ಶಿವಭಕ್ತಿ
ಹಿರಿದಾಗದೆಂದ ಸರ್ವಜ್ಞ ॥ ೯ ॥

ಸತಿಯರಾದೊಡೆಯೇನು? ಸುತರುಹುಟ್ಟಿದರೇನು?
ಶತನೂರುಧನಗಳಿಸಲೇನು? । ಭಕ್ತಿಯಾ
ಗತಿಯಿಲ್ಲದವಗೆ ಸರ್ವಜ್ಞ ॥ ೧೦ ॥

ಆಹಾರವುಳ್ಳಲ್ಲಿ । ಆಹಾರಘನವಕ್ಕು
ಆಹಾರಬೆಳಗನರಿದಿರ್ದ । ಶೆಟ್ಟಿಯಾ
ಬೇಹಾರವಕ್ಕು ಸರ್ವಜ್ಞ ॥ ೧೧ ॥

ಕಾಯಿಕದಭಕ್ತನಾ । ಆಯತವನೋಡಿದರೆ
ಕಾಯಕವುಬಂದಿಜೆಳಗಾಗಿ । ಕರ್ಪೂರಧ
ಕಾಯಕವೆಬರ್ಕು ಸರ್ವಜ್ಞ ॥ ೧೨ ॥

ಕಡುಭಕ್ತನಾಗಲಿ। ಜಡದೇಹಿಯಾಗಲಿ
ನಡೆವವೃತ್ತಿಯುಲಿಲ್ಲದಿರಲು। ಆಭಕ್ತಿ
ಹುಡಿಯುಪ್ಪುದೈಯು ಸರ್ವಜ್ಞ ॥ ೧೩ ॥
ಕಾಯಕಮಲವೆಸೆಜ್ಜೆ। ಜೀವಆತ್ಮದಲಿಂಗ
ಭಾವಪುಷ್ಪದಲಿಶಿವಪೂಜೆ। ಮಾಡುವರ
ದೇವರೆಂದರಿಯೊ ಸರ್ವಜ್ಞ ॥ ೧೪ ॥
ರುದ್ರಾಕ್ಷಿಮಾಲೆಯನು। ಹೊದ್ದುಧರಿಸಿದವರ್ಗೆ
ಹೊದ್ದದುರುಪಾಪವಾಮೇಲೆ। ಸಾಕ್ಷಾತು
ರುದ್ರನೇಯಕ್ಕು ಸರ್ವಜ್ಞ ॥ ೧೫ ॥
ನವನಾಳವನುಕಟ್ಟಿ। ಶಿವಧ್ಯಾನದೊಳಗಿರಲು
ನವಖಂಡಪೃಥ್ವಿಯೊಳಗಣ। ಮಾತೆಲ್ಲ
ಕಿವಿಯೊಳಗಿಹುದು ಸರ್ವಜ್ಞ ॥ ೧೬ ॥
ಹರಕೊಟ್ಟಕಾಲಕ್ಕೆ। ಹರನಸರೂಪಿಗೆನೀಡು
ಹರದೆಯುರುಸುತರು ನೆರೆಸವಿದು। ತಾ ಸವಿದು
ಹರನಭಜಿಸುವುದು ಸರ್ವಜ್ಞ ॥ ೧೭ ॥
ಬಾಲಯುವ್ವನಪ್ರೌಢ। ಲೋಲನಹಭಕುತನು
ಏಳುತಲಿನುಡಿವುತಿರಬೇಡ। ಅನುದಿನವು
ಶೂಲಿಯುನೆನೆವ ಸರ್ವಜ್ಞ ॥ ೧೮ ॥
ದೇವನನುನೆನೆದರೆ। ಯಾವುದೂತನಗುಂಟು।
ದೇವನನುನೆನೆಯುದಧಮಂಗೆ। ಮುಂದಿನ್ನು
ಯಾವುದೂಯಿಲ್ಲ ಸರ್ವಜ್ಞ ॥ ೧೯ ॥
ಕರಿಗೆಕೇಸರಿವೈರಿ। ದುರಿತಕ್ಕೆಹರವೈರಿ
ಉರವಣಿಸಿಬರುವಸಂಸಾರ। ದುಃಖಕ್ಕೆ
ಹರನಾಮುವೈರಿ ಸರ್ವಜ್ಞ ॥ ೨೦ ॥
ಲಜ್ಜೆನಾಚಿಕೆತೊರೆದು। ಹೆಜ್ಜೆಯನುಸಾಧಿಪನೆ?
ಸಜ್ಜೆಶಿವದಾರಧರಿಸಿರ್ಪ। ಶರಣರ
ಹೆಜ್ಜೆಯೊಳಗಿರಿಸು ಸರ್ವಜ್ಞ ॥ ೨೧ ॥

ಕಲ್ಲುಕಲ್ಲಲಿಕಟ್ಟಿ । ಕಲ್ಲಲ್ಲಿಮನೆಮಾಡಿ
ಕಲ್ಲಮೇಲ್ಕಲ್ಲಕೊಳ್ಳುವರು । ಮನುಜರು
ಕಲ್ಲಿಗೆರಗುವರು ಸರ್ವಜ್ಞ ॥ ೨೨ ॥
ನಂಬುವರು ನಂಬುವರು । ಯೆಂಬುವುದುನಾಡೆಲ್ಲ
ಸಂಬಾರವರೆವಬಲುಕಲ್ಲು । ಹರನೆಂದು
ನಂಬುವರುಯಾರು? ಸರ್ವಜ್ಞ ॥ ೨೩ ॥
ಕಲ್ಲುಗುಂಡಿನಮೇಲೆ । ಮಲ್ಲಿಗೆಯಅರಳಿಕ್ಕಿ
ನಿಲ್ಲದಲೆಹಣೆಯ ಬಡಿವರ್ಗೆ । ಬಗುಟು
ಅಲ್ಲದಿನ್ನಿಲ್ಲ ಸರ್ವಜ್ಞ ॥ ೨೪ ॥
ಸತ್ಯವಂತರನೀನು । ಸತ್ತರೆಂದೆನಬೇಡ
ಹೆತ್ತಮ್ಮಮಗನಕರೆದಂತೆ । ಕೈಲಾಸ
ಕೆತ್ತಿಕೊಳ್ಳುವರು ಸರ್ವಜ್ಞ ॥ ೨೫ ॥
ಒಡೆಯರೆಂದೆನಲೇಕೆ? ತಡೆವುತ್ತಸಿಲಲೇಕೆ?
ಮೃಡರೂಪನೆನಿಸಿಕೊಳಲೇಕೆ ? ಜಂಗಮಕೆ
ಕಡೆಯಿಲ್ಲವೇಕೆ? ಸರ್ವಜ್ಞ ॥ ೨೬ ॥
ಮುಂಡೆಬೋಳಾದವರ । ಕಂಡುನಂಬಲುಬೇಡ
ಖಂಡಿತವಪ್ಪ ಪರತತ್ವ । ವುಳ್ಳವರ
ಕಂಡರೇನಂಬು ಸರ್ವಜ್ಞ ॥ ೨೭ ॥
ಕಾಶಿಕಂಚಡಿಯೇಕೆ ? ಆಸುರದಜಡೆಯೇಕೆ?
ಕೇಶಗಳಕಿತ್ತುಕೊಳಲೇಕೆ? ಮನಸಿನ
ಆಶೆಬಿಡುವನಕ ಸರ್ವಜ್ಞ ॥ ೨೮ ॥
ನಿತ್ಯನೇಮಗಳೇಕೆ ? ಮತ್ತೆಪೂಜೆಗಳೇಕೆ ?
ನೆತ್ತಿಬೋಳೇಕೆ ? ಜಡೆಯೇಕೆ ? ವದನದಲಿ
ಸತ್ಯಮುಳ್ಳವಗೆ ಸರ್ವಜ್ಞ ॥ ೨೯ ॥
ಜಡೆಯಕಟ್ಟಲುಬಹುದು । ಕಡವಸವನುಡಬಹುದು
ಬಿಡದೆದೇಗುಲದಿಯಿರಬಹುದು । ಕರಣಗಳ
ತಡೆಯುವುದುಕಷ್ಟ ಸರ್ವಜ್ಞ ॥ ೩೦ ॥

೬. ಮಾಹೇಶ್ವರಪದ್ಧತಿ.

ಆರರಟ್ಟುಳಿಯನ್ನು । ಮೂರುಕಂಟಕವನ್ನು
ಏರಿದಾಜವ್ವನವತಡೆದರೆ । ಶಿವತಾನು
ಬೇರೆಯಿಲ್ಲೆಂದ ಸರ್ವಜ್ಞ ॥ ೧ ॥
ವಂಶವನುಕೂಡನು । ಹಿಂಸಿಸನುಪರರನ್ನು
ಸಂಶಯವನಳಿದನಿಜಸುಖಿ । ಮಹಾತ್ಮನು
ಹಿಂಸೆಗೊಡಬಡನು ಸರ್ವಜ್ಞ ॥ ೨ ॥
ಭೋಗಿಸುವವಸ್ತ್ರವನು । ಭೋಗಿಸುವವರ್ಗಿತ್ತು
ರಾಗದಿಂಸತ್ಯವೆರಸಿಪ್ಪ । ಪ್ರೀತಿಯನು
ಶ್ರೀಗುರುವೆಬಲ್ಲ ಸರ್ವಜ್ಞ ॥ ೩ ॥
ಆಣವಾದಿಯೊಳಿಹನು । ಹೂಣೆಲಿಂಗದಿಮನವ
ಕೇಣವಿಡದಿಹನುವಿರತಿ । ಯಾಗಿರುವ
ತಾಣದೊಳಗಿಹನು ಸರ್ವಜ್ಞ ॥ ೪ ॥
ಸೋಕಿದಾಸುಖಗಳನು । ಏಕದಿಂಶಿವಗೀಯೆ
ತಾಕುಯಿಲ್ಲದೆಯೆಕೈಕೊಂಡ । ಲಾಂಛನವ
ಲೋಕೇಶನೀವ ಸರ್ವಜ್ಞ ॥ ೫ ॥
ಮಲಯಜಪಮಧ್ಯದೊಳು । ಸಲೆಗಂಧವಿರ್ಪಂತೆ
ಸುಲಲಿತವಾದಶರಣನ । ದೇಹದಲಿ
ನೆಲಸಿಹನು ಶಿವನು ಸರ್ವಜ್ಞ ॥ ೬ ॥
ಗಂಗೆಯಾತಡಿಲೇಸು । ಮಂಗಳನಬಲಲೇಸು
ಜಂಗಮಭಕ್ತನನಡೆಲೇಸು । ಶರಣನ
ಸಂಗವೇಲೇಸು ಸರ್ವಜ್ಞ ॥ ೭ ॥
ಕಿಚ್ಚಿನಸಂಗಾತ । ವಚ್ಚೊತ್ತೆಕರ್ಪುರವು
ಅಚ್ಚಳಿದುನಿಂದುನಿಜವಾದ । ಪದವಿಯನು
ಮೆಚ್ಚುವನುಶರಣ ಸರ್ವಜ್ಞ ॥ ೮ ॥

ಕಿಚ್ಚಿನೊಳಗಣಕೋಲ । ಬಚ್ಚಿಟ್ಟೊಲಿರಬೇಕು
ಅಚ್ಚಳಿಯದೇಕಪದವಾದ । ಶರಣಂಗೆ
ನಿಚ್ಚವದಕ್ಕು ಸರ್ವಜ್ಞ ॥ ೯ ॥
ಜ್ಞಾನಿಗೆಮದವಿಲ್ಲ । ಹೀನಗುಚಿತವದಿಲ್ಲ
ಏನಿಲ್ಲದವಗೆಭಯವಿಲ್ಲ । ಐಕ್ಯಂಗೆ
ತಾನೆಂಬುದಿಲ್ಲ ಸರ್ವಜ್ಞ ॥ ೧೦ ॥
ಆಕಾಶಪಥವಿಡಿದು । ಏಕವಸ್ತುವತಿಳಿದು
ಸಾಕಾರವಾಗಿನಿಜವಾದ । ಐಕ್ಯಂಗೆ
ತಾಕೆಂಬುದಿಲ್ಲ ಸರ್ವಜ್ಞ ॥ ೧೧ ॥
ಹರಿವಹಾವನುನುಂಗಿ । ನೊರೆವಾಲಕುಡಿದಾತ
ಹರಿವಿಧಿಯನುನುಂಗಿದವನಕ್ಕು । ಲೋಕಕ್ಕೆ
ಅರುಹುತಾನಕ್ಕು ಸರ್ವಜ್ಞ ॥ ೧೨ ॥
ಜಾತಿಸೂತಕನಳಿದು । ಭ್ರಾಂತಿಯಾಗುಣವಳಿದು
ಆತ್ಮನಾನೆಲೆಯತಾನರಿದು । ನಿಂದಾತ
ಗೇತರಚಿಂತೆ? ಸರ್ವಜ್ಞ ॥ ೧೩ ॥
ಯವ್ವನದಹಿಂಡುಗಳ । ನೈವರಟ್ಟುಳಿಗಳಾ
ಐವರನುವಶಕೆತಂದಾತ । ಲೋಕಕ್ಕೆ
ದೈವತಾನಕ್ಕು ಸರ್ವಜ್ಞ ॥ ೧೪ ॥

೭. ಜ್ಞಾನಪದ್ಧತಿ.

ಆಗಿಲ್ಲಹೋಗಿಲ್ಲ । ಮೇಗಿಲ್ಲಕೆಳಗಿಲ್ಲ
ತಾಗಿಲ್ಲತಪ್ಪುತಡೆಯಿಲ್ಲ । ಲಿಂಗಕ್ಕೆ
ದೇಗುಲವೆಇಲ್ಲ ಸರ್ವಜ್ಞ ॥ ೧ ॥
ಆತ್ಮಜ್ಯೋತಿಯಬೆಳಗ । ಪ್ರೀತಿಯಿಂದರಿದೊಡೆ
ಸೂತಕವುಇಲ್ಲಭಯವಿಲ್ಲ । ಪಂಚಮಹ
ಪಾತಕವುಇಲ್ಲ ಸರ್ವಜ್ಞ ॥ ೨ ॥

ಜ್ಞಾನವುಳ್ಳವನೊಡಲು । ಭಾನುವಿನತೆರನಕ್ಕು
ಜ್ಞಾನವಿಲ್ಲದರಬರಿಯೊಡಲು । ಹಾಳೂರ
ಶ್ವಾನದಂತಕ್ಕು ಸರ್ವಜ್ಞ ॥ ೩ ॥
ಒಳಗಣಜ್ಯೋತಿಯಾ । ಬೆಳಕುಬಲ್ಲಾತಂಗೆ
ಅಳಿವುಳಿವುಕಷ್ಟಕಳವಿಲ್ಲ । ಯೆಂದಿಗೂ
ಅಳಿವಿಲ್ಲನೈಯ ಸರ್ವಜ್ಞ ॥ ೪ ॥
ಅರಿದೆನೆಂಬುವಗೊಂದು । ಕುರುಹುಂಟುಬೊಮ್ಮಕ್ಕೆ
ಅರಿದೆನೆಂದೆಂಬಅರುಹು । ತಾನರಿದೊಡೆ
ಕುರುಹಿನಬೊಮ್ಮಸರ್ವಜ್ಞ ॥ ೫ ॥
ತತ್ವಮಸಿಯೆಂಬುದರ । ಅರ್ಥವನುತಿಳಿಯದೆ
ತುತ್ತುಸವಿಯುವುದನುಣಕಲಿತ । ಯೋಗಿಗಿ
ನ್ನೆತ್ತಣತತ್ವ? ಸರ್ವಜ್ಞ ॥ ೬ ॥
ಅರಿವನರಿದೊಡೆಜೀವ । ನೆರೆಸದಾಶಿವನಕ್ಕು
ಅರುಹಿನಾಕುರುಹಮರೆದೊಡೆ । ಹರಿಬ್ರಹ್ಮ
ರಿರವಿನಂತಕ್ಕು ಸರ್ವಜ್ಞ ॥ ೭ ॥
ಕಾಯವಿಂದ್ರಿಯದಡಿಯು । ಜೀಯವಾಯದರಿಂದ
ಕಾಯವೇಬ್ರಹ್ಮಸೃಷ್ಟಿ । ಯೆಂಬುವನಾಯ
ಬಾಯಿನೋಡೆಂದ ಸರ್ವಜ್ಞ ॥ ೮ ॥
ತನ್ನತಾನರಿತವನ । ಮುನ್ನಹೊದ್ದಳುವಮಾಯೆ
ಉನ್ನತವಾದಗಜವೇರಿ । ಬಪ್ಪಾತ
ಕುನ್ನಿಗಂಜುವನೆ? ಸರ್ವಜ್ಞ ॥ ೯ ॥
ಬಿಂದೊಂದುಹಸಿಬಿದ್ದು । ಸಿಂದುಹೆಮ್ಮಡುವಕ್ಕು
ಸಂದಜ್ಞಾನಿಗಳಪೊಡಸಾಡೆ । ಪರಬ್ರಹ್ಮ
ಮುಂದೆಬಂದಕ್ಕುಸರ್ವಜ್ಞ ॥ ೧೦ ॥
ಇಲ್ಲದಾಮಾಯೆಯನು । ಯಿಲ್ಲೆನ್ನಲರಿಯದೆ
ಬಲ್ಲಿದನಾಯೆಯೆನಬೇಡ । ತಿಳಿಯಲ್ಕೆ
ಎಲ್ಲಿಯಮಾಯೆ? ಸರ್ವಜ್ಞ ॥ ೧೧ ॥

ಅದ್ವೈತತಾನಾಗಿ । ಯುದ್ಧವಿನ್ನಾರೊಡನೆ
ಬುದ್ಧಿಯಿಂ ತನ್ನತಾನರಿದವಗೆ । ಲೋಕದ
ಗುದ್ದಾಟವೇಕೆ? ಸರ್ವಜ್ಞ ॥ ೧೨ ॥
ಬೊಮ್ಮವನು ತಿಳಿದೊಡೆ । ಸುಮ್ಮನೇ ಇರಬೇಕು
ಬೊಮ್ಮವನರಿದುವುಸುರಿದರೆ । ಕಳಹೋಗಿ
ಕೆಮ್ಮಿದಂತಕ್ಕು ಸರ್ವಜ್ಞ ॥ ೧೩ ॥
ಅಂತಿರ್ದಯಿಂತಿರ್ದ । ಎಂತಿರ್ದನೆನಬೇಡ
ಕಂತೆಯನುಹೊದ್ದು ತಿರಿದುಂಬ । ಯೋಗಿತಾ
ನೆಂತಿರ್ದೊಡೇನು? ಸರ್ವಜ್ಞ ॥ ೧೪ ॥
ಬಲ್ಲೆನೆಂಬನನಾತು । ಎಲ್ಲವೂಹುಸಿನೋಡು
ಬಲ್ಲೊಡಂಬಲ್ಲೆ ನೆನಬೇಡ । ಸುಮ್ಮನಿರ
ಬಲ್ಲಾತಬಲ್ಲ ಸರ್ವಜ್ಞ ॥ ೧೫ ॥
ಸತ್ತುಹುಟ್ಟುವರೆಂಬ । ಮಿಥ್ಯದಾನುಡಿಯೇಕೆ?
ಬಿತ್ತಿದಬೀಜಬೆಳೆವಂತೆ । ವೃಕ್ಷತಾ
ಸತ್ತುಹುಟ್ಟುವುದೆ? ಸರ್ವಜ್ಞ ॥ ೧೬ ॥
ಬೇಡನಿಕ್ಕಿದರುಂಬ । ಕೂಡನಾ ಜಾತಿಯನು
ರೂಢಿಗೀಶ್ವರನಬೆರೆದಾತ । ಸಂಸಾರ
ಕೂಡಿಹೊಂದುವನೆ? ಸರ್ವಜ್ಞ ॥ ೧೭ ॥
ಮುತ್ತುನೀರೊಳು ಹುಟ್ಟಿ । ಮತ್ತೆನೀರಪ್ಪುದೆ ?
ತತ್ವವನರಿದ ಶಿವಯೋಗಿ । ಸಂಸಾರ
ದತ್ತಲೊಂದುವನೆ? ಸರ್ವಜ್ಞ ॥ ೧೮ ॥
ತಿಳಿಯಕಾಸಿದ ತುಪ್ಪ । ಮರಳಿಹಾಲಪ್ಪುದೇ?
ಕಳಿಬೆಳಗನರಿತಶಿವಯೋಗಿ । ಸಂಸಾರ
ದೊಳಗೆ ಸಿಲ್ಕುವನೆ? ಸರ್ವಜ್ಞ ॥ ೧೯ ॥
ಓಡುಮಣ್ಣಲಿಹುಟ್ಟಿ । ಕೂಡುವುದೆ? ಜಾತಿಯನು
ರೂಢಿಗೀಶ್ವರನಬೆರೆದಾತ । ಸಂಸಾರ
ಕೂಡಹೊಂದುವನೆ? ಸರ್ವಜ್ಞ ॥ ೨೦ ॥

ಆನೆಮುಕುರದೊಳಡಗೆ। ಭಾನುವೊಳುಶಶಿಯಡಗ
ಲೇನುವೂಣೆಯುವು ಜಗದೊಳಗೆ? ಶಿವಯೋಗಿ
ಮೌನದಿಂದಿರುವ ಸರ್ವಜ್ಞ ॥ ೨೧ ॥
ಆನೆಕನ್ನಡಿಯಲ್ಲಿ। ತಾನಡಗಿಯಿರ್ಪಂತೆ
ಜ್ಞಾನವುಳ್ಳವರಹೃದಯದೊಳು। ಪರಶಿವನು
ತಾನಡಗಿ ಯಿರ್ಪಸರ್ವಜ್ಞ ॥ ೨೨ ॥
ಆನೆನೀರಾಟದೊಳು। ಮೀನಕಂಡಂಜುವುದೆ?
ಹೀನಮನದವರಬಿರುನುಡಿಗೆ। ತತ್ವದ
ಜ್ಞಾನಿಯಂಜುವನೆ? ಸರ್ವಜ್ಞ ॥ ೨೩ ॥
ಆನೆಬರೆಬೀದಿಯೊಳು। ಶ್ವಾನತಾಂಬಗುಳುವುದು
ಶ್ವಾನದಂತಾನೆಬಗುಳಿದರೆ। ಆನೆಯ
ಮಾನಕೇಹಾನಿ ಸರ್ವಜ್ಞ ॥ ೨೪ ॥
ಸತ್ತಹಾಗಿರುಯೆಂದೊ। ಡೆತ್ತಣದುಭಯವಯ್ಯ
ಕತ್ತೆಮಾನವರುತಿಳಿಯರು। ಇದುಮಹಾ
ತತ್ವದನುಡಿಯು ಸರ್ವಜ್ಞ ॥ ೨೫ ॥
ಎಲ್ಲಶಿವಶಿವಯೆಂದ। ರೆಲ್ಲಿಯುಭಯವಯ್ಯ
ಎಲ್ಲರೂಶಿವನನೆನೆದರೆ। ಕೈಲಾಸ
ವಿಲ್ಲಿಯೇ ಇಹುದು ಸರ್ವಜ್ಞ ॥ ೨೬ ॥
ಬಲ್ಲೆನೆಂದೆಂಬುವನು। ಎಲ್ಲರಿಂ ಹಿರಿಯನೇ?
ಸೊಲ್ಲಿನಭೇದವರಿದೊಡೇ। ಕಿರಿಯತಾ
ನೆಲ್ಲರಿಂ ಹಿರಿಯ ಸರ್ವಜ್ಞ ॥ ೨೭ ॥
ನೆತ್ತವನುಹಾಕಿದರೆ। ಯೆತ್ತಬಿದ್ದರುದಾಯ
ತತ್ವವನು ತಿಳಿವಶಿವಯೋಗಿ। ತಾನಿನ್ನು
ಯೆತ್ತಲಾಡಿದರೇನು? ಸರ್ವಜ್ಞ ॥ ೨೮ ॥
ಆನೆಮೇಲಿದ್ದವರು। ಶ್ವಾನಕಂಡಂಜುವರೆ?
ಜ್ಞಾನಸ್ವರೂಪದಲಿನೆಲಸಿರ್ಪ। ಯೋಗಿತಾ
ಹೀನಗಂಜುವನೆ? ಸರ್ವಜ್ಞ ॥ ೨೯ ॥

ಜ್ಞಾನಿಗಜ್ಞಾನಿಗೂ । ತಾನೊಂದುಕುರುಹುಂಟು
ಏನೇನನವನುನುಡಿದರೂ । ಜ್ಞಾನಿತಾ
ಮೌನದಿಂದಿರುವಸರ್ವಜ್ಞ ॥ ೩೦ ॥

ಜಾತಿಜಾತಿಗೆವೈರ । ನೀತಿಮೂರ್ಖಗೆವೈರ
ಪಾತಕವುವೈರಸುಜನರ್ಗೆ । ಅರಿದವನಿ
ಗೇತರವೈರ? ಸರ್ವಜ್ಞ ॥ ೩೧ ॥

ತನ್ನತಾನರಿದಾತ । ತನ್ನಜ್ಞಾನದೊಳಡಗಿ
ತನ್ನಬಂಧುಗಳಸಲೆಬಿಟ್ಟು । ಪರಬ್ರಹ್ಮ
ದುನ್ನತಿಯೊಳಿರ್ಪಸರ್ವಜ್ಞ ॥ ೩೨ ॥

ಆದಿಗೇಬೆಲೆಯಿಲ್ಲ । ಭೇದಕ್ಕೆಹೊಲಬಿಲ್ಲ ।
ಸಾಧಕಗೆಆವಭಯವಿಲ್ಲ । ಜ್ಞಾನಿಗೆ
ವಾದಗಳೆಯಿಲ್ಲಸರ್ವಜ್ಞ ॥ ೩೩ ॥

ತನ್ನತಾನರಿತರೇ । ಭಿನ್ನಭೇದಗಳಿಲ್ಲ
ತನ್ನವರಿಲ್ಲಪರರಿಲ್ಲ । ತ್ರೈಭುವನ
ತನ್ನೊಳಗಿಹುದುಸರ್ವಜ್ಞ ॥ ೩೪ ॥

ತನ್ನತಾನರಿಯುವುದು । ತನ್ನಬಿಟ್ಟಿರುವುದು
ತನ್ನೊಲ್ಲದವರತೊರೆಯುವುದು । ಜ್ಞಾನಿಗೆ
ಬಿನ್ನಣವಲ್ಲಸರ್ವಜ್ಞ ॥ ೩೫ ॥

ಆತ್ಮಗಂಗೆಯವಿಂದು । ಜ್ಯೋತಿಯನುತಿಳಿಯಲ್ಕೆ
ಪಾತಕವಕೋಟಿಪರಿಯುವುದು । ಶುದ್ಧಪರ
ಮಾತ್ಮನೇಆತಸರ್ವಜ್ಞ ॥ ೩೬ ॥

ತತ್ವವೆಂಬುದುತನ್ನ । ಹಿತ್ತಲಿನಗಿಡನೋಡು
ಮತ್ತೊಬ್ಬಮುರಿದುಕೊಳಲರಿಯ । ಜ್ಞಾನದ
ಬಿತ್ತುವದಬಿತ್ತುಸರ್ವಜ್ಞ ॥ ೩೭ ॥

ದೊರಕಿದುದನುಂಡುಂಡು । ದೊರಕಿದುದನುಟ್ಟುಟ್ಟು ।
ದೊರಕಿವಲಿಶಯನಗೈವಾತ । ಲೋಕಕ್ಕೆ
ನಿರಕಾರನಕ್ಕುಸರ್ವಜ್ಞ ॥ ೩೮ ॥

ಒಲ್ಲೆನೆಂಬುವನಾತು । ಬಲ್ಲಿತಾಗಿಯೆಇರಲು
ತಲ್ಲಣವದಿಲ್ಲಶಿವನೀವ । ಪದವಿಯಿ
ದ್ದಲ್ಲಿಗೇಬಹುದುಸರ್ವಜ್ಞ ॥ ೩೯ ॥
ಮುಂದೆಬಂದೀತೆಂದು । ಸಂದೇಹಗೊಳಬೇಡ
ಬಂದದ್ದನುಂಡುಸುಖಿಯಾಗು । ರೋಗಬಂ
ದಂದಿಗೇನರಳುಸರ್ವಜ್ಞ ॥ ೪೦ ॥
ಒಂದುಮನಜಿತವಕ್ಕು । ಒಂದುಮನಜಡವಕ್ಕು
ಒಂದುಮನಮೋಕ್ಷಪದವಕ್ಕು । ಮಾನವಗೆ
ದ್ವಂದ್ವಮನಕೇಡುಸರ್ವಜ್ಞ ॥ ೪೧ ॥
ಪಂಚವಿಷಯದತತ್ವ । ಚಂಚಲವನರಿಯದೇ
ಹಂಚನೇಹಿಡಿದುತಿರಿದುಂಬ । ಯೋಗಿತಾ
ಪಂಚಮುಖನಹನುಸರ್ವಜ್ಞ ॥ ೪೨ ॥
ಅದ್ವೈತವನುಹಾಡಿ । ಯಿದ್ದುದನುಹೋಗಾಡಿ
ಹೊದ್ದಹೆಮ್ಮರನತುದಿಗೇರಿ । ಅಣಿತಪ್ಪಿ
ಬಿದ್ದುಸತ್ತಂತೆಸರ್ವಜ್ಞ ॥ ೪೩ ॥
ಅಡವಿಯುಲಿಗುಹೆಯಲ್ಲಿ । ಪೃಥತನದೊಳಿದ್ದೊಡಂ
ಮುಡಿವಲ್ಲಿಶಿವನಮರೆದರೆ । ಭವಬೆನ್ನ
ಬಿಡದೆತಾಬಹುದುಸರ್ವಜ್ಞ ॥ ೪೪ ॥
ಆವಾವಜೀವವನು । ಹೇವವಿಲ್ಲದೆಕೊಂದು
ಸಾವಾಗಶಿವನನೆನೆದರೆ । ಅವಬಂದು
ಕಾವನೇ?ನೋಡುಸರ್ವಜ್ಞ ॥ ೪೫ ॥
ಕಾಣಿಸುವಆತ್ಮನನು । ಕಾಣದೇಜರೆಯುವಿರಿ
ಕಾಣಲುಬಿಡಲುಕರ್ಮಗಳ । ತನ್ನ
ಆಣೆಯಿಟ್ಟಂತೆಸರ್ವಜ್ಞ ॥ ೪೬ ॥
ಧ್ಯಾನಹೊಸಬತ್ತಿಯನು । ಮೌನತೀಳಿದೊಪ್ಪಿಸು
ಹೀನಭಾವಗಳನರಿದು । ಬೆಳಗುನೀ
ಜ್ಞಾನದಪ್ರಭೆಯಸರ್ವಜ್ಞ ॥ ೪೭ ॥

ಅರಿವೆಂಬುದಾತ್ಮಂಗೆ। ನೆರೆನಿಜದವನುನೆಯೆನಲು
ಅರಿತರಿತುಅರುಹುವುರಿದಡೆ। ನಯನವ
ನಿರಿದುಕೊಂಡಂತೆಸರ್ವಜ್ಞ ॥ ೪೮ ॥
ಹೇಲುವ್ಯೆಹತ್ತಿದಾ। ಬಾಲನಂತಿರಬೇಕು
ಜಾಲದಭ್ರಮೆಯನೊಡಗೂಡ। ದಿದ್ದವನು
ಶೂಲಿಯಂತಕ್ಕುಸರ್ವಜ್ಞ ॥ ೪೯ ॥
ಸಂಗವನುತೊರೆದವಗೆ। ಅಂಗನೆಯರೂಬೇಡ
ಭಂಗಾರಧಾನ್ಯಗಳುಬೇಡ। ಲೋಕದ
ಸಂಗವೇಬೇಡಸರ್ವಜ್ಞ ॥ ೫೦ ॥
ಕುಂಡಲಿಯಸವಿದವಗೆ। ಹೆಂಡಿರಗೊಡವೆಯೇಕೆ?
ಖಂಡಸಕ್ಕರೆಯಮೆಲುವಂಗೆ। ಗಾಣದ
ಹಿಂಡಿಮತ್ತೇಕೆ? ಸರ್ವಜ್ಞ ॥ ೫೧ ॥
ಕಂಬಳಿಯಹೊದ್ದುತ। ನ್ನಿಂಬಿನೊಳಗಿರಬೇಕು
ಹಂಬಲನುಕೊಂಡುಯೆರಡಾಗೆ। ನರಕದ
ಕುಂಭಿಯಂತಕ್ಕುಸರ್ವಜ್ಞ ॥ ೫೨ ॥
ಮಾತಿನಾಬೊಮ್ಮವದು। ತೂತಾದಮಡಿಕೆಯು
ಪಾತಕದನೆರವಿಯಿವುಮೂರು। ಲೋಕದೊಳ
ಗೀತಕ್ಕುಬೇಡಸರ್ವಜ್ಞ ॥ ೫೩ ॥
ಸನ್ಯಾಸತನಗೆಂಬ। ಅನ್ಯಾಯನುಡಿಯುತ್ತ
ಉನ್ನತದದೇಹದಿರವರಿಯ। ತನ್ನೊಡಲ
ನನ್ನಿಯದಿಹೊರೆವಸರ್ವಜ್ಞ ॥ ೫೪ ॥
ಅಟ್ಟಅಡಿಗೆಯರುಚಿಯು। ಹಿಟ್ಟುತಾಬಲ್ಲುದೆ?
ಶ್ರೇಷ್ಠರೆಂತೆಂದುಯೆನಬೇಡ। ಅರುಹಿನ
ದೃಷ್ಟಿಬೇಕೆಂದಸರ್ವಜ್ಞ ॥ ೫೫ ॥
ಹೇಳಲೂಕೇಳಲೂ। ಭಾಳಲೋಚನಗಳವೆ?
ತಾಳದಂಡಿಗೆಯುಹೊರಗಾದ। ಕೇಳುವೆಯ
ಕೇಳುವನುಹೆಡ್ಡಸರ್ವಜ್ಞ ॥ ೫೬ ॥

ತತ್ವಹುಸಿಯಾದೊಡೆ । ಮುತ್ತೊಡೆಯೆಬೆಸೆವುದೆ?
ಉತ್ತಮರು ಹುಸಿಯಕಲಿತರೆ । ಲೋಕತಾ
ನೆತ್ತಸೇರುವುದು ? ಸರ್ವಜ್ಞ ॥ ೫೭ ॥

ಚಂದನವಕರಗಿಸಲು । ಬೆಂದುಪರಿಮಳವಕ್ಕು
ಸಂದರಿವನರಿದ ಸಜ್ಜನರು । ತಾವು
ನೊಂದುಸೈರಿಪುದು ಸರ್ವಜ್ಞ ॥ ೫೮ ॥

ಸಾವಿಂಗೆಸಮತೆಗಂ । ಯಾವುದಂತರವೈಯು?
ಸಾವುತಾಸಮತೆಯೊಳಗಿಲ್ಲ । ಕೋಪವ
ಕಾವುದೇಸಮತೆಸರ್ವಜ್ಞ ॥ ೫೯ ॥

ಕೋಪವೆಂಬುದುಕೇಳು । ಪಾಪದಾನೆಲೆಕಟ್ಟು
ಕೂಪಮೊಳುನೇಣುಹರಿದಂತೆ । ನರಕಕ್ಕೆ
ಕೋಪಿತಾನಿಳಿವ ಸರ್ವಜ್ಞ ॥ ೬೦ ॥

ಕೋಪವೆಂಬುದು ತಾನು । ಪಾಪದಾನೆಲೆಕಟ್ಟು
ಆಪತ್ತುಸುಖವು ಸಮವೆಂದು । ಪೋಪರಿಗೆ
ಪಾಪನೆಲ್ಲಿಯದು? ಸರ್ವಜ್ಞ ॥ ೬೧ ॥

ಕೋಟಿಯು ಕೊಟ್ಟರೆ । ಕೂಟ ಕರ್ಮಿಯುಹೊಲ್ಲ
ನೋಟದ ನಿಜವನರಿದಾ । ಯೋಗಿಯ
ಕೂಟವೇ ಲೇಸು ಸರ್ವಜ್ಞ ॥ ೬೨ ॥

ಬಂಧನವಮಾಡಿವರೆ । ಸಂದಜ್ಞಾನಿಯೆಲೇಸು
ಹೊಂದಿಸಾಸಿರವಕೊಡುತಿರಲು । ಗರ್ವಿಯ
ಸಂಧಾನಬೇಡ ಸರ್ವಜ್ಞ ॥ ೬೩ ॥

ರಾತ್ರಿಯೊಳು ಶಿವರಾತ್ರಿ । ಜಾತ್ರೆಯೊಳು ಶ್ರೀಶೈಲ
ಕ್ಷೇತ್ರದೊಳು ಚೆಲ್ವಶ್ರೀ ಕಾಶಿ । ಶಿವತತ್ವ
ಸ್ತೋತ್ರದೊಳಧಿಕ ಸರ್ವಜ್ಞ ॥ ೬೪ ॥

ಒಡಲು ತಾನಳಿವಲ್ಲಿ । ಮಡದಿಯುರಗಡಣದಲಿ
ಎಡರುಸಿಂದೆಗಳುಬರುವಲ್ಲಿ । ಸಮತೆಯನು
ಬಿಡದಿಹನೆ ಯೋಗಿಸರ್ವಜ್ಞ ॥ ೬೫ ॥

ಹೇಳಬಲ್ಲೊಡೆ ಬೋಳು । ಕೇಳಬಲ್ಲಡೆ ಬೋಳು ।
ಹೇಳಿಕೇಳುವುದನರಿಯದೊಡೆ । ಆ ಬೋಳು
ಕ್ಹಾಳುಬೋಳೆಂದ ಸರ್ವಜ್ಞ ॥ ೬೬ ॥

ಹೇಳಿದರೆ ಕೇಳುವನ । ಕೀಳಿಲಿರುವುದುಲೇಸು
ಹೇಳಿದರೆ ಕೇಳದಿರಲು । ಮನೆಯುಪ್ಪರಿಗೆ
ಮೇಲಿರಲೊಲ್ಲ ಸರ್ವಜ್ಞ ॥ ೬೭ ॥

ತಿರಿದೊಡನೆ ಕೂಳಕ್ಕು । ತೆರೆದೊಡನೆ ಬೋಳಕ್ಕು
ಕರೆದೊಡೆ ದೊಡ್ಡ ಹೆಸರಕ್ಕು । ಬಾರದೊಡೆ
ಸಿರಿ ಗೋಳೆಅಕ್ಕು ಸರ್ವಜ್ಞ ॥ ೬೮ ॥

ಆಜ್ಞೆಗೈಯಲುಬೇಡ । ಯೋಗಿನಿಂದಿಸಬೇಡ
ನಾಗಭೂಷಣನು ಅರಿದಾ । ದಕ್ಷನಶಿರವ
ಹೋಗಿತಿಳಿಯದನು ಸರ್ವಜ್ಞ ॥ ೬೯ ॥

ಸತ್ಯವಂತರಚಿತ್ತ । ಉತ್ತಮುವುಎನಬೇಕು
ಮತ್ತೆಶಿವಧ್ಯಾನಮಾಡಿದರೆ । ಶಿವನಿಗಿಂ
ದತ್ತಣವರಕ್ಕು ಸರ್ವಜ್ಞ ॥ ೭೦ ॥

ದೇವನವಸೀದೇವ । ಮೂದೇವರೆನಬೇಡ
ದೇವದೇವರದೇವಜಗದೇವ । ಪ್ರಾಣಿಗಳ
ಕಾವವನೆದೇವ ಸರ್ವಜ್ಞ ॥ ೭೧ ॥

ತೆಂಗಿಗೂ ಹಿರಿಯರಿಗು । ಹಂಗುಮಾಡಲುಬೇಕು
ತೆಂಗಿಗೆಬುಡದೆ ನೀರೆರೆಯೆ । ತಲೆಯಲ್ಲಿ
ಹಂಗತೀರ್ಚುವುದು ಸರ್ವಜ್ಞ ॥ ೭೨ ॥

ಪರ್ವತಕೆತಾಹೋದ । ಗರ್ವತನವೇನೈಯ?
ಒರ್ವಶಿವತನ್ನೊಳಿರಲು । ತಾಹೋದ
ನಿರ್ವ್ಯಾಜವೇನು? ಸರ್ವಜ್ಞ ॥ ೭೩ ॥

ಕಪ್ಪೆಮೀನುಗಳೆಲ್ಲ । ಇಪ್ಪುದದು ತೀರ್ಥವೇ?
ತುಪ್ಪೋಗರಿಕ್ಕಿಸಲಹುವ । ಸತ್ಪುರುಷ
ರಿಪ್ಪುದೇತೀರ್ಥ ಸರ್ವಜ್ಞ ॥ ೭೪ ॥

ಸತ್ಯರಾನುಡಿತೀರ್ಥ । ನಿತ್ಯರಾನಡೆತೀರ್ಥ
ಉತ್ತಮರಸಂಗವದುತೀರ್ಥ । ಹರಿವನೀ
ರೆತ್ತಣತೀರ್ಥ? ಸರ್ವಜ್ಞ ॥ ೭೫ ॥
ಕಣ್ಣುಮಾಡುವಕೃತ್ಯ । ಹಣ್ಣಿದಿಹುದೊಂದಿಲ್ಲ
ತಣ್ಣಗಿಹಮನವನುರಿಸುವುದು । ಲೋಕಕ್ಕೆ
ಕಣ್ಣೆಕಾರಣವು ಸರ್ವಜ್ಞ ॥ ೭೬ ॥
ಕಣ್ಣಿಂದಪಾಪವೂ । ಕಣ್ಣಿಂದಪುಣ್ಯವು
ಕಣ್ಣಿಂದಲಾದುದಿಹಪರವು । ಲೋಕಕ್ಕೆ
ಕಣ್ಣೆಕಾರಣವು ಸರ್ವಜ್ಞ ॥ ೭೭ ॥
ವೇದಶಾಸ್ತ್ರಾಗಮವ । ನೋದಿದರೆಫಲವೇನು?
ವಾದಿಸುವಸಮರ್ಥರಿಲ್ಲದೊಡೆ । ಆಓದು
ಬೂದಿಯಹೋಮ ಸರ್ವಜ್ಞ ॥ ೭೮ ॥
ಒಡಲಹಿಡಿದಾಡದಿರು । ನುಡಿಯುಹೋಗಾಡದಿರು ।
ನಡೆಯೊಳ್ಳೆವರನುಬಿಡದಿರು । ಶಿವನಲ್ಲಿ
ಧೃಡವಂತನಾಗು ಸರ್ವಜ್ಞ ॥ ೭೯ ॥
ಎಲ್ಲಆಸೆಗಳಬಿ । ಟ್ಟಲ್ಲಿಯೇಕೈಲಾಸ
ಎಲ್ಲವನುಬಿಡದೆಭ್ರಮಿಸಿದೊಡೆ । ನರಕತಾ
ನಿಲ್ಲಿಯಿಹುದೆಂದ ಸರ್ವಜ್ಞ ॥ ೮೦ ॥
ಬಿಂದುನಾದಗಳೆಂಬ । ನಂದನವನವುಂಟು
ಇಂದುಧರನೆಂಬ ಕೊಳನುಂಟು । ತಿಳಿನೀರ
ಮಿಂದುಂಬರಿಲ್ಲ ಸರ್ವಜ್ಞ ॥ ೮೧ ॥
ಮನದಲ್ಲಿನೆನೆದವಗೆ । ಮನೆಯೇನು? ಮಠವೇನು?
ಮನದಲ್ಲಿ ಶಿವನನೆನೆಯದವ । ಪರ್ವತದ
ಕೊನೆಯಲಿದ್ದೇನು? ಸರ್ವಜ್ಞ ॥ ೮೨ ॥
ನೆನಹುಇದ್ದರೆಸಾಕು । ಮನೆಯೇನು? ಮಠವೇನು?
ನೆನೆಯದೆಯೆ ಶಿವನಮರೆವವರು । ದೇಗುಲದ
ಕೊನೆಯಲಿದ್ದೇನು? ಸರ್ವಜ್ಞ ॥ ೮೩ ॥

ಕರದಿಕಪ್ಪರಮುಂಟು । ತಿರಿದುಣಲುನಾಡುಂಟು
ಹರನೆಂಬದೈವನಮಗುಂಟು । ನಮಗಿಂತ
ಸಿರಿವಂತರಾರು? ಸರ್ವಜ್ಞ ॥ ೮೪ ॥
ವ್ಯಾಪಾರವಳಿದಲ್ಲ । ದಾಪರವುಕಾಣಿಸದು
ಪಾಪಕರ್ಮಗಳತಾತಿಳಿದು । ನಿಂದವಗೆ
ಕೋಪವೆಲ್ಲಿಯದು? ಸರ್ವಜ್ಞ ॥ ೮೫ ॥
ವಿಷಯದಪುಡಿಗಳನು । ಬಿಸಿಮಾಡಿಕೊಳ್ಳಲು
ಪಶುಪತಿಯಕ್ಕು ಪದವಕ್ಕು ವೈಬಣ್ಣ
ವಿಸುನಿಯಂತಕ್ಕು ಸರ್ವಜ್ಞ ॥ ೮೬ ॥
ಬಿಂದುವೂಮೂತ್ರವೂ । ಒಂದೆನಾಳದಿಬರ್ಕು
ಒಂದುಬಿಟ್ಟೊಂದುತಡೆದರೆ । ಪರಬ್ರಹ್ಮ
ಮುಂದೆಬಂದಕ್ಕು ಸರ್ವಜ್ಞ ॥ ೮೭ ॥
ಕುರಿಕಬ್ಬಿನೊಳಹೊಕ್ಕು । ಅರಿಯದೇತನಿರಸವ ।
ಹೊರಗಣಸೋಗೆಮೆಲುವಂತೆ । ತತ್ವದ
ಇರವರಿಯದವಗೆ ಸರ್ವಜ್ಞ ॥ ೮೮ ॥
ಸತ್ಯರೂ ಹುಸಿದರೆ । ವೃತ್ತಿಹರಿದರೆಶರಧಿ
ಉತ್ತಮರುತಪ್ಪಿನಡೆದರೆ । ಲೋಕವಿ
ನ್ನೆತ್ತಸೇರುವುದು ಸರ್ವಜ್ಞ ॥ ೮೯ ॥
ವಾರಣಾಸಿಗೆಹೋದ । ಕಾರಣವದೇನಯ್ಯ?
ಕಾರಣಾತ್ಮಕ ತನ್ನೊಳಿರಲು । ತಾಹೋದ
ಕಾರಣವದೇನು? ಸರ್ವಜ್ಞ ॥ ೯೦ ॥
ಸತ್ತುಹೋದರೆನಿನಗ । ದೆತ್ತಣದುಮೋಕ್ಷವೈ
ಸತ್ತುಹೋಗುವುದರಿಂಮುನ್ನ । ಮೋಕ್ಷದ
ಗೊತ್ತುತಿಳಿಯೆಂದ ಸರ್ವಜ್ಞ ॥ ೯೧ ॥
ಒಸೆದುಪಂಚಾಕ್ಷರಿಯ । ನುಸಿರಕೊನೆಯೊಳುನಿಲಿಸಿ
ಸಸಿನೆಕುಳ್ಳಿರ್ದುತಾಜಪಿಪ । ಯೋಗಿತಾ
ಕಿಸುವಾಯನಕ್ಕು ಸರ್ವಜ್ಞ ॥ ೯೨ ॥

ತನ್ನನೋಡಲಿಯೆಂದು । ಕನ್ನಡಿಯುಕರೆವುದೆ?
ತನ್ನಲ್ಲಿಜ್ಞಾನಮುದಯಿಸಿದ । ಯೋಗಿತಾ
ಕನ್ನಡಿಯವೋಲು ಸರ್ವಜ್ಞ ॥ ೯೩ ॥
ಸತ್ಯವನ್ನರಿವರೆ । ಸತ್ತುಹಾಗಿರಬೇಕು
ಸತ್ಯವನ್ನರಿದುವುಸುರಿದರೆ । ಸತ್ತವರಿ
ಗತ್ತುಹಾಗಕ್ಕು ಸರ್ವಜ್ಞ ॥ ೯೪ ॥
ಆತುಮನಬಣ್ಣವನು । ಮಾತಿನಾರೋಹವನು
ಜಾತಿಯಾನೆಲೆಯನರಿದ । ಸಚ್ಚಿದ
ನಾತನೇಯೋಗಿ ಸರ್ವಜ್ಞ ॥ ೯೫ ॥
ಕೋಡಗವುತಾನೊಂದು । ನಾಡಿಸುವುದೇಸಹಜ
ಮೂಢಾತ್ಮರೇನನುಡಿದರೆಯು । ಜ್ಞಾನಿತಾ
ನಾಡದೇಹೋಹ ಸರ್ವಜ್ಞ ॥ ೯೬ ॥
ಎಂಜಲುಹೊಲೆಯಲ್ಲ । ಸಂಜೆಗತ್ತಲುಅಲ್ಲ
ಅಂಜಿಕೆಯಿಲ್ಲಭಯವಿಲ್ಲ । ಶಿವನಕೃಪೆ
ಸಂಜಾತನಿರಲು ಸರ್ವಜ್ಞ ॥ ೯೭ ॥
ಇಲ್ಲಿಲ್ಲವೆಂಬುವರ । ನಿಲ್ಲಿಯೇಅರಸಿದೊಡೆ
ಇಲ್ಲದಿಲ್ಲೆಂದುಅರಸುವುದು । ಜಗವೆಲ್ಲ
ಇಲ್ಲಿಗಳವಕ್ಕು ಸರ್ವಜ್ಞ ॥ ೯೮ ॥
ಮನೆಯೇನುಮಠವೇನು? ನೆನಹುಇದ್ದರೆಸಾಕು
ನೆನೆಯಡೆಯೆಶಿವನಮರೆದವರು । ದೇಗುಲದ
ಕೊನೆಯಲಿರಲೇನು? ಸರ್ವಜ್ಞ ॥ ೯೯ ॥

* * * * * ॥ ೧೦೦-೧೦೨ ॥

೮. ಶಿವಯೋಗಿಪದ್ಧತಿ.

ಮಾಯೆಮೋಹವನೆಚ್ಚಿ । ಕಾಯವನುಕರಗಿಸುತ
ಸಾಯಾಸಗೊಳುತಲಿರಬೇಡ । ಅಡಿಗಡಿಗೆ
ಕಾಯೊ ಶಿವ ಯೆನ್ನು ಸರ್ವಜ್ಞ ॥ ೧ ॥

ಜಳ್ಳುಮನುಜರುತಾವು । ಸುಳ್ಳುಸಂಸಾರದೊಳು
ಮಳ್ಳಿಡಿದುಮಾಯೆಯೆಂಬವಳ । ಬಲೆಯಲ್ಲಿ
ಹೊರಳಾಡುತಿಹರು ಸರ್ವಜ್ಞ ॥ ೨ ॥

ಎಣ್ಣೆಬೆಣ್ಣೆಯ ಋಣವು । ಅನ್ನವಸ್ತ್ರದ ಋಣವು
ಹೊನ್ನೆಣ್ಣ ಋಣವು ತೀರಿದ । ಆಕ್ಷಣವೆ
ಮಣ್ಣುಪಾಲೆಂದ ಸರ್ವಜ್ಞ ॥ ೩ ॥

ಕ್ಷಣಮಾತ್ರವಾದರೂ । ಗುಣವುಳ್ಳವರೊಳಾಡು
ಗುಣಹೀನರಾದವರೊಳಾಡೆ । ದುಃಖದಲಿ
ಹೆಣಕೆ ಅತ್ತಂತೆ ಸರ್ವಜ್ಞ ॥ ೪ ॥

ಉರಿವ ಕೆಂಡವ ಮೆಟ್ಟಿ । ಮರುಗುವಾನರನಂತೆ
ಅರುಹಿಲ್ಲದವರವೊಡನಾಟ । ತನ್ನತಾ
ನಿರಿದುಕೊಂಡಂತೆ ಸರ್ವಜ್ಞ ॥ ೫ ॥

ಬಲ್ಲವರವೊಡನಾಟ । ಬೆಲ್ಲವನು ಮೆದ್ದಂತೆ
ಅಲ್ಲದಹುದೆಂಬ ಅಜ್ಞಾನಿ । ಯೊಡನಾಟ
ಕಲ್ಲುಹಾಯ್ದಂತೆ ಸರ್ವಜ್ಞ ॥ ೬ ॥

ಸಜ್ಜನರ ಸಂಗವದು । ಹೆಜ್ಜೇನು ಸವಿದಂತೆ
ದುರ್ಜನರ ಸಂಗಡೊಡನಾಟ । ಬಚ್ಚಲಿನ
ರೊಚ್ಚಿನಂತಿಹುದು ಸರ್ವಜ್ಞ ॥ ೭ ॥

ಬರೆಕಂಡು ಕರೆಯುತಾ । ನಿರುಕುಳ್ಳಿರೆನ್ನನು
ಸರಸ ಸಹಜದಲಿ ನಡೆಯದೆ । ಇರುತಿಹನ
ಹಿರಿಯತನವೇನು? ಸರ್ವಜ್ಞ ॥ ೮ ॥

ಒಳ್ಳೆಯವನೊಡನಿರಲು । ಕಳ್ಳನೊಳ್ಳಿದನಕ್ಕು
ಒಳ್ಳಿದನು ಕಳ್ಳನೊಡನಾಡೆ । ಅವಶುದ್ಧ
ಕಳ್ಳನೇ ಅಕ್ಕು ಸರ್ವಜ್ಞ ॥ ೯ ॥

ಜಾಣಜಂಗಮಲಿಂಗ । ಕೋಣೆಯಲಿ ತಾನುಂಬ
ಜಾಣನಕ್ರಮವು ತನಗೆಂಬ । ಮರುಳಂಗೆ
ಕಾಣಿಸುವನೇನು? ಸರ್ವಜ್ಞ ॥ ೧೦ ॥

ಬಲ್ಲವರು ಹಿರಿಯರು । ಯೆಲ್ಲಗರುವರುಗಳು ।
ನಲ್ಲಳು ಮುಂದೆ ಸುಳಿಯುತಿರೆ । ಲೋಕದೊಳು
ಒಲ್ಲದವರಿಲ್ಲ ಸರ್ವಜ್ಞ ॥ ೧೧ ॥
ಹೆಣ್ಣುಹೊನ್ನುಗಳನ್ನು । ಹಣ್ಣಾದ ಮರಗಳನು ।
ಕಣ್ಣಿನಿಂನೋಡಿ ಮನದಲ್ಲಿ । ಬಯಸದಿಹ
ಅಣ್ಣಗಳದಾರು? ಸರ್ವಜ್ಞ ॥ ೧೨ ॥
ವಚನದೊಳಗೆಲ್ಲರೂ । ಶುಚಿವೀರ ಧೀರರು ।
ಕುಚಹೇಮ ಶಸ್ತ್ರಸೋಂಕಿದೊಡೆ । ಲೋಕದೊಳ
ಗಚಲರಾರೈಯು? ಸರ್ವಜ್ಞ ॥ ೧೩ ॥
ಜಡೆಯುಕಟ್ಟಲುಬಹುದು । ಉಡಿಗೆಯುನ್ನುಡಬಹುದು
ಬಿಡದೇ ವಿರಕ್ತಿಯಿರಬಹುದು । ಪರಶಿವನ
ಹಿಡಿವುದಳವಲ್ಲ ಸರ್ವಜ್ಞ ॥ ೧೪ ॥
ಮುಂಡೆಬೋಳಿಸಿಕೊಂಡು । ತುಂಡುಗಂಬಳಿ ಪೊದೆದು
ಹಿಂಡನಗಲಿರ್ಪ ಗಜದಂತೆ । ಇರುವವರ
ಕಂಡುನಂಬುವುದು ಸರ್ವಜ್ಞ ॥ ೧೫ ॥
ಬೆಣ್ಣೆಬೆಂಕಿಯು ನಡುವೆ । ತಣ್ಣಗಿರಬಲ್ಲುದೇ?
ಹೆಣ್ಣಿದ್ದಮನೆಗೆ ಯೆಡೆಯಾಡಿ । ಶಿವಯೋಗಿ
ಮಣ್ಣುಮುಸಿಯಾದ ಸರ್ವಜ್ಞ ॥ ೧೬ ॥
ಒಂದುಅಡಿಗೆಯುಭಾಂಡ । ಮೊಂದೊಂದು ಭೋಗವನು
ಅಂದದಿಂದುಂಡು ಹಂಚಾದ । ಪರಿಯಂತೆ
ಬಿಂದುವಿನದೇಹ ಸರ್ವಜ್ಞ ॥ ೧೭ ॥
ಭಂಡುಗಳನುಡಿಯುತಿಹ । ದಿಂಡೆಯನಹಿಡಿತಂದು
ಖಂಡಿಸಿರಿ ಅವನನೆನ್ನುತಲಿ । ಮಾಹಾತ್ಮೆ
ಕೆಂಡವಾಗುವುದು ಸರ್ವಜ್ಞ ॥ ೧೮ ॥
ಕಂಡದ್ದುನುಡಿದರೆ । ಕೆಂಡವಾಗುವರೆಲ್ಲ
ಮಂಡಲದೊಳಗೆ ಯೆನಿತು । ತಪ್ಪದರ
ಕಂಡದ್ದೆ ಯಿಲ್ಲ ಸರ್ವಜ್ಞ ॥ ೧೯ ॥

ಜಡೆಯಕಟ್ಟಿದ ಮುನ್ನ । ಒಡನೆಬಂದುದುಮಾರಿ
ಗಡಗಡಿಸಿಹೇನುಹರಿವಾಗ । ಬೋಳಯ್ಯ
ಬಿಡದೆತಾ ನಗುವ ಸರ್ವಜ್ಞ ॥ ೨೦ ॥
ಪರತತ್ವತನ್ನೊಳಗೆ । ಯೆರವಿಲ್ಲದಿರುತಿರಲು
ಪರದೇಶಿಯಾಗಿ ತಿರುಗುತ್ತ । ತಾನೆ
ಪರಮಗುರುವೆಂಬ ಸರ್ವಜ್ಞ ॥ ೨೧ ॥
ವೈರಾಗ್ಯವೆಂದೆಂಬ । ಕ್ಷೀರಸಾಗರದೊಳಗೆ
ಆರಾರು ಯಿಹರೊ ಅವರೆಲ್ಲಾ । ಸಂಸಾರ
ಘೋರಕ್ಕೆ ಹೊರಗು ಸರ್ವಜ್ಞ ॥ ೨೨ ॥
ನಿಶ್ಚಯವಬಿಡದೊಬ್ಬ । ರಿಚ್ಚೆಗೇನುಡಿಯದಿರು
ಮೆಚ್ಚಿದೊಂದೂರೊಳಿರದಿರು । ಶಿವತನ್ನ
ಇಚ್ಚೆಯೊಳಿಹನು ಸರ್ವಜ್ಞ ॥ ೨೩ ॥
ಹುತ್ತುಹಾವಿಗೆಚಂದ । ಮುತ್ತುಕೊರಳಿಗೆಚಂದ
ನಕ್ಷತ್ರಚಂದಗಗನಕ್ಕೆ । ಯೋಗಿಗೆ
ಭಿಕ್ಷವೇಚಂದ ಸರ್ವಜ್ಞ ॥ ೨೪ ॥
ಬೇಡುವುದು ಭಿಕ್ಷವನು । ಮಾಡುವುದುತಪವನ್ನು
ನಾಡುಮಾತುಗಳಬಿಡುವುದು । ಶಿವನಿಗೆ
ಕೂಡಬಹುದೆಂದ ಸರ್ವಜ್ಞ ॥ ೨೫ ॥
ಭಿಕ್ಷವೆತ್ತಿದಅನ್ನ । ಮೋಕ್ಷಕ್ಕೆ ಸಾಧನವು
ಕುಕ್ಷಿಗೇ ನರರಕಾಡಿ । ತಂದುಂಬವನು
ಮೋಕ್ಷಕ್ಕೆದೂರ ಸರ್ವಜ್ಞ ॥ ೨೬ ॥
ತುರುಕರಿಲ್ಲದವೂರು । ನರಕಭಾಜನಮುಕ್ಕು
ತುರುಕರುಂಟಾದರುಣಲುಂಟು । ಲೋಕಕ್ಕೆ
ತುರುಕರುವೆ ದೈವ ಸರ್ವಜ್ಞ ॥ ೨೭ ॥
ಅಕ್ಕರವಕಲಿತವನು । ಠಕ್ಕುಗಳಕಲಿತಾನು
ಇಕ್ಕಾಡಿಕಲಿತು ಯಮಲೋಕ । ತಾನು
ಹೊಕ್ಕಾಡಕಲಿತ ಸರ್ವಜ್ಞ ॥ ೨೮ ॥

ಒಡೆಯನೆಂದೆನಲೇಕೆ? ತಡೆಯೆ ಬಾಗಿಲದೇಕೆ?
ಮೃಡರೂಪನೆನಿಸಿಕೊಳಲೇಕೆ? ಸತ್ಯದಾ
ನಡೆಯಿಲ್ಲದವಗೆ ಸರ್ವಜ್ಞ ॥ ೨೯ ॥

ಇಲ್ಲದಾಮಾಯೆಯನು । ಯಿಲ್ಲೆನ್ನಲರಿಯದೆ
ಬಲ್ಲಿತ್ತುಮಾಯೆ ಯೆನಬೇಡ । ತಿಳಿಯಲ್ಕೆ
ಎಲ್ಲಿಹುದುಮಾಯೆ? ಸರ್ವಜ್ಞ ॥ ೩೦ ॥

ಕಲ್ಲುಪ್ಪುಕಪ್ಪುರವು ಸೊಲ್ಲೆರಡು । ಧಾತೊಂದು
ಕಳ್ಳನೊಳ್ಳಿದನು ರೂಪೊಂದು । ಶಿವಯೋಗಿ
ಕಳ್ಳನಂತಿಹನು ಸರ್ವಜ್ಞ ॥ ೩೧ ॥

ಕಣ್ಣೀರದೊಪ್ಪುವುದು । ಹೆಣ್ಣಿದ್ದಮನೆಯಲ್ಲಿ
ತಣ್ಣನೆಧ್ಯಾನವಿರುತಿರೆ । ಕಾಮವು
ಮಣ್ಣಾಗಿಪೋಕು ಸರ್ವಜ್ಞ ॥ ೩೨ ॥

ಎಲ್ಲರೂತನಗಾಗ । ಬಲ್ಲರೇ? ಆಮಯೋಗ
ಅಲ್ಲಲ್ಲಿಗಲ್ಲಿಕೃತಕ । ವಾದರೆತನ
ಗೆಲ್ಲಿಯದುಯೋಗ? ಸರ್ವಜ್ಞ ॥ ೩೩ ॥

ಚಿತ್ತವೆರಡಾಗದೇ ಉತ್ತಮರಿಗಿರಬೇಕು
ಚಿತ್ತವದನೆಯರುಸುಳಿಯಲು । ಮಹತ್ತಿನ
ಚಿತ್ತವೆತ್ತಣದು? ಸರ್ವಜ್ಞ ॥ ೩೪ ॥

ಎಲ್ಲವನುಬಲ್ಲಾತ ಬಲ್ಲವನುಬಲ್ಲಡೆ
ಬಲ್ಲೆನೆಂದನ್ನಲರಿವವನ । ಬಲುಮೆಯಲಿ
ಕಲ್ಲುಹೊತ್ತಂತೆ ಸರ್ವಜ್ಞ ॥ ೩೫ ॥

* * * * * ॥ ೩೬ ॥

+ ೧೯೪
೨೨೦

೯. ಯೋಗಪದ್ಧತಿ.

ಯೋಗಿಗೆಹೊಲೆಯಿಲ್ಲ । ಸಾಗರಕೆನೆಲೆಯಿಲ್ಲ
ಯೋಗವಟ್ಟಗೆಗೆಹೊಳಪಿಲ್ಲ । ಜ್ಞಾನಿಗೆ
ರಾಗದ್ವೇಷಿಲ್ಲ ಸರ್ವಜ್ಞ ॥ ೧ ॥
ದೂಸಿಯಾಕೊಡದಂತೆ । ಸೂಸುತಿಪ್ಪುದುಯೋಗ
ದಾಸಿಪರರೊಡನೆನಗಲೇನು? ಕೊಡದನೀ
ಲಾಸೆಯಿದ್ದಂತೆ ಸರ್ವಜ್ಞ ॥ ೨ ॥
ಓದಿಬೂದಿಯಪೂಸಿ । ತೋದಕಾವಿಯಪೊದೆದು
ಮೇದಿನಿಯಮೇಲೆವಿಷಯಕ್ಕೆ । ತಿರುಗುವಾ
ಮಾದಿಗರನೋಡು ಸರ್ವಜ್ಞ ॥ ೩ ॥
ಮನವಘನದಲಿಕಟ್ಟಿ । ನೆನಹಮನದಲಿಕಟ್ಟಿ
ಮನವವಿಷಯಕ್ಕೆ ಎಳಸದಾ । ಯೋಗಿಗೆ
ವನವಾಸವೇಕೆ? ಸರ್ವಜ್ಞ ॥ ೪ ॥
ಆಯದಲಿನಿಜದಿನಿಂ । ದಾಯವನುಅರಿಯದೆ
ಆಯಾಸಜಪವಜಪಿಸುವ । ಯೋಗಿಯ
ಬಾಯನೋಡೆಂದ ಸರ್ವಜ್ಞ ॥ ೫ ॥
ಹರಿವಹಕ್ಕಿಯನುಂಗಿ । ನೊರೆವಾಲಕುಡಿದಾತ
ಹರಿಯುಜನಕ್ಕುಹರನಕ್ಕು । ಲೋಕಕ್ಕೆ
ಅರುಹುತಾನಕ್ಕು ಸರ್ವಜ್ಞ ॥ ೬ ॥
ಅಷ್ಟದಳಕಮಲವನು । ಮುಟ್ಟತಿರುಗುವಹಂಸ
ಮೆಟ್ಟುವೆದಳದಮಧ್ಯದಲಿ । ಇರುವುದನು
ಮುಟ್ಟುವನೆಯೋಗಿಸರ್ವಜ್ಞ ॥ ೭ ॥
ಕೊಟ್ಟಜಾಡನವೂಂಕೆ । ಮುಟ್ಟುವುದುಮೂರೂರ
ಬಟ್ಟೆಗಳುನಾಲ್ಕುಪಥಮೂರು । ಅವನೂರು
ಬೆಟ್ಟದಮೇಲೆಸರ್ವಜ್ಞ ॥ ೮ ॥

ಕತ್ತಲೆಯಕಾಳಿಂಗೆ। ಉತ್ತಮದಜ್ಯೋತಿಯನು
ಎತ್ತಿಪ್ರಜ್ವಲಿಸಲಾಆಟ। ಬೆಳಗಾಗೆ
ಉತ್ತಮದಜ್ಯೋತಿಸರ್ವಜ್ಞ ॥ ೯ ॥
ರುದ್ರಾಕ್ಷಿಭಸಿತವನು। ಹೊದ್ದಿರಿಸಿದೇಹದಲಿ
ಇದ್ದಪಾಪಗಳಹುದುಗಿಸಿ। ಶಿವತಾನು
ಇದ್ದಲ್ಲೆ ಇಹನು ಸರ್ವಜ್ಞ ॥ ೧೦ ॥
ಒಂದುಕಂಬದೊಳೈದು। ಗಂಧಹಂಸನಕಟ್ಟಿ
ಒಂದಾಗಿ ಮನವಬಲಿದರೆ। ಪರಬ್ರಹ್ಮ
ಮುಂದೆಬಂದಕ್ಕು ಸರ್ವಜ್ಞ ॥ ೧೧ ॥
ಹಸಿವಕೊಂದಾತನೇ। ದೆಸೆಗೆ ಕೀರ್ತಿತನಕ್ಕು
ಪಶುಪತಿಯಕ್ಕು ಪದವಕ್ಕು। ಕೈಲಾಸ
ವಶವರ್ತಿಯಕ್ಕು ಸರ್ವಜ್ಞ ॥ ೧೩ ॥
ಬಿಂದುನಾದವನುಂಗಿ। ಇಂದುರವಿಯನುನುಂಗಿ
ಸಂದಿರ್ದಮನವನಿಜನುಂಗಿ। ದಾಯೋಗಿ
ಇಂದುಧರನಕ್ಕುಸರ್ವಜ್ಞ ॥ ೧೪ ॥
ವೇದವೇ ಮೊಲೆನಾಲ್ಕು। ನಾದವೇ ನೊರೆವಾಲು
ಆದರಿಸಿ ಪಶುವಕರೆದುಂಬ। ಯೋಗಿಯ
ಪಾದಕ್ಕೆ ಶರಣು ಸರ್ವಜ್ಞ ॥ ೧೫ ॥
ಬ್ರಹ್ಮನಾಳವಕಿಚ್ಚು। ಒಮ್ಮೆಯೇ ನಂದದು
ಹಮ್ಮಿನ ಹೊಲೆಯಕಳಕೊಂಡ। ಯೋಗಿತಾ
ಬ್ರಹ್ಮವೇ ಅಕ್ಕು ಸರ್ವಜ್ಞ ॥ ೧೬ ॥
ಮೂರುಖಂಡುಗ ಹೊಟ್ಟು। ತೂರಿದರೆ ಫಲವೇನು?
ಹೇರಿಮಾರುವ ಭತ್ತವನು। ಪರಬ್ರಹ್ಮ
ಮಿಾರಿತ್ತು ನೋಡು ಸರ್ವಜ್ಞ ॥ ೧೭ ॥
ಕುಂಡಲಿಯ ಸವಿದಾತ। ಹೆಂಡತಿಯ ನೊಲಿವನೆ?
ಖಂಡಿತವಮಿಾರ್ದ ಶಿವಯೋಗಿ। ಮಾಂಸದಾ
ಪಿಂಡಕೊಲಿಯುವನೆ? ಸರ್ವಜ್ಞ ॥ ೧೮ ॥

ಇಂದ್ರಿಯ ಯಮಾದಿಗಳ । ಸಂಧಿಸಿ ಕೊಂದೊಡೆ
ಚಂದ್ರಧರನಹುದು ಹರನಹುದು । ಲೋಕಕ್ಕೆ
ಕಂದರ್ಪನಹುದು ಸರ್ವಜ್ಞ ॥ ೧೯ ॥
ಖೇಚರದಮುದ್ರೆಯನು । ಆಚರಿಸಬಲ್ಲೊಡೆ
ಲೋಚನವುಮೂರುತನಗಕ್ಕು । ಭೂಚರರು
ಖೇಚರರೆ ಅಕ್ಕುಸರ್ವಜ್ಞ ॥ ೨೦ ॥
ಅರುಹುಸತ್ತೊಡೆಜೀವ । ನೆರೆಸದಾಶಿವನಕ್ಕು
ಅರುಹಿನಾಕಡೆಯಲಿಹಬ್ರಹ್ಮ । ಇಂದ್ರಾದ್ಯ
ರರಿಯರೇಕೈಯ? ಸರ್ವಜ್ಞ ॥ ೨೧ ॥
ಒಂದರಾಮೊದಲೊಳಗೆ । ಬಂದಿಹುದು ಜಗವೆಲ್ಲ
ಒಂದರಾಮೊದಲನರಿದೊಡೆ । ಜಗತನ್ನ
ಮುಂದೆಬಂದಕ್ಕು ಸರ್ವಜ್ಞ ॥ ೨೨ ॥
ಉತ್ತುಂಗ ಮಾಣಿಕವ । ಬಿತ್ತಿ ಮಂಟಪದೊಳಗೆ
ನಿತ್ಯನಿರ್ಮಲದ ನಿಜಕಂಡ ! ಯೋಗಿಗಿಂ
ನೆತ್ತಣದು? ಸಾವು ಸರ್ವಜ್ಞ ॥ ೨೩ ॥
ಹಂಸನಾದಳದವರ । ವಂಶವನು ತಿಳಿಯದೆ
ಹಂಸತಾನೆಂದು ತಿರುಗುವ । ಯೋಗಿಯ
ವಂಶವೇ ಮರುಳು ಸರ್ವಜ್ಞ ॥ ೨೪ ॥
ಹಾಲುಂಬ ಹಂಸನ । ಹೊಲಬನರಿಯದ ಯೋಗಿ
ಮೇಲಣ ಪದವನರಿಯದೆಯೆ । ಗಿಳಿಯೋದಿ
ಹೇಲುತಿಂದಂತೆ ಸರ್ವಜ್ಞ ॥ ೨೫ ॥
ಇಪ್ಪತ್ತರೈದನೆಯ । ತತ್ವವನು ಗುಣಿಸಿದರೆ
ಬಪ್ಪಕರ್ಮಗಳು ಕುಲಕೋಟಿ । ಸ್ವರ್ಗದೊಳ
ಗಿರ್ಪನೇ ಯೋಗಿ ಸರ್ವಜ್ಞ ॥ ೨೬ ॥
ಚಿನ್ನಕಳೆಯೊಳಗಿರಲು । ಮನ್ನಣೆಯು ಹಿರಿದಕ್ಕು
ಉನ್ನತದ ಪುಷ್ಪಗಿರಿಯಕ್ಕು । ಶಂಕರನ
ಸನ್ನಿಧಿಯುಮಕ್ಕುಸರ್ವಜ್ಞ ॥ ೨೭ ॥

ತೋರುವಾಕುಲಗಿರಿಯು । ಮೇಲೆತಪದೊಳಗಿರ್ದು
ಜೇರೊಂದುಮನದೊಳೆಣಿಸಲು । ಬೆಳೆದಹೊಲ
ಸೂರೆಹೋದಂತೆಸರ್ವಜ್ಞ ॥ ೨೮ ॥

ಯತಿಗೇಕೆಕೋಪ? ದು । ರ್ಮತಿಗೇಕೆ? ಪರತತ್ವ?
ಪತಿವ್ರತೆಗೇಕೆಪರನೋಟ? ಯೋಗಿಗೆ
ಸ್ತುತಿನಿಂದೆಯೇಕೆ? ಸರ್ವಜ್ಞ ॥ ೨೯ ॥

ದಂಡಕೋಲಿನತುದಿಗೆ । ಹಿಂಡಿಕೈಪವಕಟ್ಟಿ
ಮುಂಡೆಯರಕಂಡುಭ್ರಮಿಸುವ । ಯೋಗಿಗೆ
ಮಂಡೆಬೋಳೇಕೆ ? ಸರ್ವಜ್ಞ ॥ ೩೦ ॥

ಆಲದಾಬಿಳಲಂತೆ । ಜೋಲುಜಡೆಗಳಬಿಟ್ಟು
ನಾಲಿಗೆಯುಕೌಪೀನಶುದ್ಧಿ । ಯಿಲ್ಲದೆನಾಯಿ
ಬಾಲದಂತಕ್ಕು ಸರ್ವಜ್ಞ ॥ ೩೧ ॥

ಕತ್ತೆಬೂದಿಯಹೊರಳೆ । ಭಕ್ತನಂತಾಗುವುದೆ?
ತತ್ವವನರಿಯದೇಭಸಿತ । ವಿಟ್ಟರೆಶುದ್ಧ
ಕತ್ತೆಯಂತಕ್ಕು ಸರ್ವಜ್ಞ ॥ ೩೨ ॥

ಹತ್ತಿಯಹಾಮರಕಾಯಿ । ಹೊತ್ತಿರ್ದತೆರನಂತೆ
ತತ್ವಭೇದಗಳನರಿಯದೆಯೆ । ರುದ್ರಾಕ್ಷಿ
ಹೊತ್ತುಫಲವೇನು ? ಸರ್ವಜ್ಞ ॥ ೩೩ ॥

ಕಾದಬೂದಿಯಪೂಸಿ । ಕೋದಕಾವಿಯಹೊದ್ದು
ಹೋದಾತಯೋಗಿಯೆನಬೇಡ । ಇಂದ್ರಿಯವ
ಕಾದಾತಯೋಗಿ ಸರ್ವಜ್ಞ ॥ ೩೪ ॥

ಪ್ರಾರಬ್ಧಕರ್ಮಕ್ಕೆ । ಆರಯ್ಕೆಯಂತಿರ್ಪ
ಹಾರೈಸಿಭ್ರಮಿಸಿಬಂದುದಕೆ । ತಾನಳುವ
ಆರೂಢಯೋಗಿ ಸರ್ವಜ್ಞ ॥ ೩೫ ॥

ಅಂದಂದಿಗೇನೂರು । ಸಂದಿತೆಂದೆನಬೇಕು
ಬಂದಷಡ್ರಸವಸವಿದುಂಡು । ನಿಜದಲ್ಲಿ
ನಿಂದವನೆಯೋಗಿ ಸರ್ವಜ್ಞ ॥ ೩೬ ॥

ಜಡೆಯುಳ್ಳಹಿರಿಯರಿಗೆ । ಹೆಡೆಯುಳ್ಳಸರ್ಪನಿಗೆ
ನಡುಗುತ್ತನಮಿಸಿನಯದಿಂದೆ । ಎಚ್ಚರನು
ಬಿಡದೆಯಿರೆಭಕ್ತ ಸರ್ವಜ್ಞ ॥ ೩೭ ॥
ಕಪ್ಪರದಲುಂಬುವರು । ಒಪ್ಪರಸಿನಡೆಯುವರು
ತಪ್ಪಿದರೆಹಲ್ಲುಕಳೆವರು । ಮಹಾತುಮರ
ಒಪ್ಪವನುನೋಡು ಸರ್ವಜ್ಞ ॥ ೩೮ ॥
ತಪವಮಾಡುವೆನೆಂದು । ಗುಹೆಯಹೊಕ್ಕಿರಬೇಡ
ತಪದಲ್ಲಿಕೋಪಬಿಡದಿರಲು । ಆತಪವೆ
ತಪತಾಪ ಕಂಡ್ಯ ಸರ್ವಜ್ಞ ॥ ೩೯ ॥
ಖಂಡಿಸಿದಮನವಿಲ್ಲ । ದಂಡಿಸಿದತನುವಿಲ್ಲ
ಕಂಡಕಂಡವರುಹಾರಿದರೆ । ಕೈಲಾಸ
ರಂಡೆಯಹೊರಸೆ ? ಸರ್ವಜ್ಞ ॥ ೪೦ ॥
ಕೋಳಿಕೂಗದಮುನ್ನ । ಮೇಳುವುದುಭಕ್ತಿಯಿಂ
ಭಾಳಲೋಚನನಮತಿಯಿಂದ । ನೆನೆದರವ
ರಾಳಿನಾಳಯ್ಯ ಸರ್ವಜ್ಞ ॥ ೪೧ ॥
ತೆಪ್ಪವನುನಂಬಿದರೆ । ತಪ್ಪದೆತಡಿಗೆತಹುದು
ಸರ್ಪಭೂಷಣನನಂಬಿದರೆ । ಭವವಾಲೆ
ತಪ್ಪಿಬದುಕುವನು ಸರ್ವಜ್ಞ ॥ ೪೨ ॥
ಅರ್ಥಿಗೆಬೆಲೆಯಿಲ್ಲ । ಚಿತ್ತಕ್ಕೆಹೊಲೆಯಿಲ್ಲ
ಬತ್ತಲಿದ್ದವಗೆಭಯವಿಲ್ಲ । ಯೋಗಿಗೆ
ಕತ್ತಲೆಯೆಇಲ್ಲ ಸರ್ವಜ್ಞ ॥ ೪೩ ॥
ಹರನಿಷ್ಠೆಯಿಲ್ಲದವ । ಪರಮುರುಷಿಯಪ್ಪನೇ ?
ಹರನಿಷ್ಠೆಯುಳ್ಳಶ್ವಪಚ । ನಾದರೆಯು
ಪರಮಋಷಿ ಕಾಣೊ ಸರ್ವಜ್ಞ ॥ ೪೪ ॥
ಜಾತಿಹೀನರಮನೆಯ । ಜ್ಯೋತಿತಾಹೀನವೇ
ಜಾತಿವಿಜಾತಿಯೆನಬೇಡ । ಶಿವನುಬಲಿ
ದಾತನೇಜಾತ ಸರ್ವಜ್ಞ ॥ ೪೫ ॥

ಎಂಜಲೆಂಜಲು ಎಂದು । ಅಂಜುವರು ವಿಪ್ರರು
ಎಂಜಲಿಂದಾದ ತನುವಿರಲು । ಅದನರಿಯ
ದಂಜುವರುನೋಡು ಸರ್ವಜ್ಞ ॥ ೪೬ ॥

ಪಣ್ಣಲಾದಿಗಳೊಳಗೆ । ಡೊಂಕುಬಾಳೆಯಹಣ್ಣು
ಡೊಂಕುಂಟು ಪೊಳಗೆರುಚಿಯುಂಟು । ಸಜ್ಜನರ
ಡೊಂಕುಲೇಸೆಂದ ಸರ್ವಜ್ಞ ॥ ೪೭ ॥

ಪಣ್ಣಲಾದಿಗಳೊಳಗೆ । ನುಣ್ಪುಯಿಟ್ಟೆಯಹಣ್ಣು (?)
ನುಣ್ಪಂಟು ಒಳಗೆವಿಷವುಂಟು । ದುರ್ಜನರ
ಸೊಂಪು ಸಲದೆಂದ ಸರ್ವಜ್ಞ ॥ ೪೮ ॥

ದಂತಪಙ್ತಿಯನಡುವೆ । ಯೆಂತಿಹುದುನಾಲಿಗೆಯು
ಅಂತು ದುರ್ಜನರನಡುವೆ । ಸುಜನರದ
ರಂತೆಯಿರಬೇಕು ಸರ್ವಜ್ಞ ॥ ೪೯ ॥

ಮೊಲೆಯಿಲ್ಲದಆವು । ತಲೆಯಲ್ಲಿಕರೆವುದು
ಸಲೆನೇಮವರಿದು ಕರೆದುಂಬ । ಯೋಗಿಯ
ಕುಲನಾಶವೆಂದಸರ್ವಜ್ಞ ॥ ೫೦ ॥

ಎಲ್ಲಹಿರಿಯರುಗಳು । ಬಲ್ಲಗರುವರುಯೆಲ್ಲ
ನಲ್ಲೆಯರುಬಂದುಪಿಡಿವರೆ । ಲೋಕದೊಳ
ಗೊಲ್ಲದವರಾರು ? ಸರ್ವಜ್ಞ ॥ ೫೧ ॥

ಮೂಲಮಂತ್ರವನರಿದು । ಲೀಲೆಯಿಂದಾಡುತಿಹ
ಶೂಲಿಯಾಶರಣಸತಿಯರಸು । ತಾಬಿಟ್ಟ
ಹೇಲೆಂದು ತಿಳಿವ ಸರ್ವಜ್ಞ ॥ ೫೨ ॥

ಮುಟ್ಟಾದವರನೋಡಿ । ಮುಟ್ಟಲಮ್ಮರು ಜನರು
ಮುಟ್ಟುತಾತಡೆದುಸರಸಾದ । ದೇಹವನು
ಮುಟ್ಟರೇಕೈಯು ? ಸರ್ವಜ್ಞ ॥ ೫೩ ॥

ಮುಟ್ಟಾದಹೊಲೆಯೊಳಗೆ । ಹುಟ್ಟುವರುಜನರೆಲ್ಲ
ಮುಟ್ಟಬೇಡೆಂದುತೊಳಲುವರು । ಹಾರುವರು
ಹುಟ್ಟಿದರುಎಲ್ಲಿ ? ಸರ್ವಜ್ಞ ॥ ೫೪ ॥

+ 220

* * * * * ॥ ೫೫ ॥

೧೦. ಧರ್ಮ ಪದ್ಧತಿ.

ಅನ್ನವನುನೀಡುವುದು । ನನ್ನಿಯನುನುಡಿಯುವುದು
ತನ್ನಂತೆಪರರತಿಳಿಯುವುದು । ಸ್ವರ್ಗತಾ
ಬಿನ್ನಾಣವಲ್ಲ ಸರ್ವಜ್ಞ ॥ ೧ ॥

ಗಾನವಿದ್ಯೆಯೆಲೇಸು । ಮಾನಪತಿಹಿತಲೇಸು
ಸ್ವಾನುಭಾವಿಗಳಪದಲೇಸು । ಎಲ್ಲಕ್ಕು
ದಾನಿಯೇ ಲೇಸು-ಸರ್ವಜ್ಞ ॥ ೨ ॥

ಬೆಂದುದನೆತಾಬಿತ್ತಿ । ತಿಂದವರನಾಕಾಣೆ
ಬೆಂದುದನೆಬಿತ್ತಿಬೆಳೆದು । ಉಂಬವನೋಡೆ
ಇಂದುಧರತಾನೆ ಸರ್ವಜ್ಞ ॥ ೩ ॥

ಅರಿತಕರ್ಮವಬಿಟ್ಟು । ನೆರೆಮಾಡೆಧರ್ಮವನು
ಸಿರಿಬಂದುಸೇರ್ಗು ಶಿವನೊಲಿವ । ಧರೆಯೆಲ್ಲ
ವೆರಗುವುದುಅವಗೆ ಸರ್ವಜ್ಞ ॥ ೪ ॥

ಪರರಿಗುಪಕಾರಗಳ । ನೆರೆಮಾಳ್ಪಮಾನವನ
ಪರಶಿವನುಕಳುಹಲವಬಂದು । ಧರೆಯೊಳಗೆ
ವರವೀವುತಿಹನು ಸರ್ವಜ್ಞ ॥ ೫ ॥

ಇಕ್ಕುವವನೂರಿಗೆ । ಒಕ್ಕಲೆಂದೆನಬೇಡ
ಅಕ್ಷಯದಪದವಪಡೆದು । ಕೈಲಾಸದಿಂ
ದೊಕ್ಕಲುಬಂದ ಸರ್ವಜ್ಞ ॥ ೬ ॥

ಹುಟ್ಟಿದಾಗಲೆ ಧನವ । ಮೊಟ್ಟೆಕಟ್ಟೆಳಿದನೆ?
ಕಟ್ಟೊಯ್ಯಲರಿಯನದನರಿತು । ಕಡೆಯಲ್ಲಿ
ಕೊಟ್ಟುಂಬ ದಾನಿ ಸರ್ವಜ್ಞ ॥ ೭ ॥

ಕೊಟ್ಟದು ತನಗೆ ಬೈ । ತಿಟ್ಟದ್ದು ಪರರಿಂಗೆ ।
ಕೊಟ್ಟನ್ರೆಕೆಟ್ಟನೆನಬೇಡ । ಅದುಮುಂದೆ
ಕಟ್ಟಿಹುದು ಬುತ್ತಿ ಸರ್ವಜ್ಞ ॥ ೮ ॥

ಹೆಂಡಿರಣುಗರಿಗೆಂದು । ದಂಡಿಸಿಯೆ ದೇಹವನು
ಕಂಡವಸ್ತುಗಳಕೊಡದೆ । ಬೈಚಿಟ್ಟರೆ
ಕಂಡವರಿಗಹುದು ಸರ್ವಜ್ಞ ‖ ೯ ‖

ಮರಣವಹುದೇ ಸತ್ಯ । ಹರನಾಣೆ ಹುಸಿಯಲ್ಲ
ತರುಣಿಯರಿಗಿರಿಸೆ ಪರರುಂಬ । ರಿದನರಿತು
ವರದನಾಗೈಯ ಸರ್ವಜ್ಞ ‖ ೧೦ ‖

ಈವನಿಗೆದೇವನಿಗೆ । ಯಾವುದಂತರವಯ್ಯ?
ದೇವನುದ್ಯೋಗದಿಂ ಕೊಡುವ । ಬಿಡದೆ ಕೈ
ಗೀವನೇ ದೇವಸರ್ವಜ್ಞ ‖ ೧೧ ‖

ದಾನದುರುಫಲದಿಂದ । ಶ್ರೀನಾಥನಾಗುವನು
ಭಾನುಮಂಡಲವನುಗಿದು । ತ್ರೈಲೋಕಕ್ಕೆ
ತಾನೊಡೆಯನಹನು ಸರ್ವಜ್ಞ ‖ ೧೨ ‖

ಬಿವರೆ ಅಂದಳವಕ್ಕು । ಬಿವರೆ ಸತ್ತಿಗೆಯಕ್ಕು
ಬಿದಿರಿದರೆ ಸಕಲಫಲವಕ್ಕು । ಲೋಕದೊಳು
ಬಿದರದವಕೆಟ್ಟ ಸರ್ವಜ್ಞ ‖ ೧೩ ‖

ಕಾಣಿಯನುಗಳಿಸಲು । ಕಾಣಿಯಾಗಿಯೆ ಇಹುದು
ಕೇಣದಿಂ ಗಳಿಸಿ ಕಡೆಯಲ್ಲಿ । ತಪವೆಸಗು
ಪ್ರಾಣಶಾಶ್ವತವೆ? ಸರ್ವಜ್ಞ ‖ ೧೪ ‖

ಆನೆಯನು ಏರುವಗೆ । ದಾನವನು ಮಾಡುವಗೆ
ಭಾನುಮಂಡಲದ ಪದವಿ । ಧರಿಸಿದಗೆ
ತಾನೊಲಿವ ಹರನು ಸರ್ವಜ್ಞ ‖ ೧೫ ‖

ಶ್ರೀಗೌರಿಯ ಛಾಯೆ । ಮೇಗಿರ್ಪಜೆಳುಗೊಡೆಯು
ಭೋಗಹಡಪಿಗರ ಪಡೆಯುವೊಡೆ । ದಾನಗಳ
ಬೇಗಮಾಡುವುದು ಸರ್ವಜ್ಞ ‖ ೧೬ ‖

ಇಕ್ಕಿದವನೂರಿಗೆ । ಒಕ್ಕಲೆಂದೆನಬೇಡ
ಇಕ್ಕಿಯೆರೆವವನೆ ತಾನು । ಕೈಲಾಸಕ್ಕೆ
ಒಕ್ಕಲುಹೋದ ಸರ್ವಜ್ಞ ‖ ೧೭ ‖

ಇಕ್ಕಿದಾತನುಉಂಡು । ನಕ್ಕುಸ್ವರ್ಗಕೆಹೋದ
ಇಕ್ಕದಾತನು ಹೋದ ನರಕಕ್ಕೆ । ಲೋಕದೊಳು
ಇಕ್ಕಲೇಬೇಕು ಸರ್ವಜ್ಞ ॥ ೧೮ ॥
ಉತ್ತಮದದೇವಾಂಗ । ವಸ್ತ್ರವನ್ನುಡುವೊಡೆ
ಮುತ್ತುಮಾಣಿಕವ ಪಡೆಯುವಡೆ । ಮಾಡುನೀಂ
ನಿತ್ಯದಾನವನು ಸರ್ವಜ್ಞ ॥ ೧೯ ॥
ನಲ್ಲಳನು ಬಯಸುವೊಡೆ । ಬಲ್ಲಿದನುಯೆನಿಸುವೊಡೆ
ನಿಲ್ಲದೇಶಿವನ ಭಜಿಸುವೊಡೆ । ಹಸಿದರ್ಗೆ
ಇಲ್ಲೆನ್ನದಿಕ್ಕು ಸರ್ವಜ್ಞ ॥ ೨೦ ॥
ಹಸನಾಗಿಬದುಕುವೊಡೆ । ಕುಶಲನೆಂದೆನಿಸುವೊಡೆ
ಪಶುಪತಿಯಪದವಪಡೆಯುವೊಡೆ । ಹಸಿದರ್ಗೆ
ಅಶನವಿಕ್ಕುವುದುಸರ್ವಜ್ಞ ॥ ೨೧ ॥
ಮಂದಿಯನುಆಳುವೊಡೆ । ಅಂದಣವನೇರುವೊಡೆ
ಸಂಧಿಸಿದಭೋಗಪಡೆಯುವೊಡೆ । ಧರ್ಮವನು
ಕುಂದದೇಮಾಡು ಸರ್ವಜ್ಞ ॥ ೨೨ ॥
ದೇಶವನ್ನಾಳುವೊಡೆ । ಹಾಸಿಗೆಯಲೊರಗುವೊಡೆ
ಈಶಸನ್ನಿಧಿಯಸೇರುವೊಡೆ । ಧರ್ಮವನು
ಮೂಸದೇಮಾಡು ಸರ್ವಜ್ಞ ॥ ೨೩ ॥
ಸಿರಿಬಂದಕಾಲದಲಿ । ಕರೆದುಧರ್ಮವಮಾಡು
ಪರಿಣಾಮವಕ್ಕುಪದವಕ್ಕು । ಕೈಲಾಸ
ನೆರೆಮನೆಯೆಅಕ್ಕು ಸರ್ವಜ್ಞ ॥ ೨೪ ॥
ಸೂಕ್ಷ್ಮಾನ್ನಾದರುವೊಂದು । ಭಿಕ್ಷವಿಕ್ಕಲುಬೇಕು
ಅಕ್ಷಯವಪದವಿತನಗಕ್ಕು । ಯಿಕ್ಕದೊಡೆ
ಭಿಕ್ಷುಕನೆಅಕ್ಕುಸರ್ವಜ್ಞ ॥ ೨೫ ॥
ತಿರಿದುತಂದೊಬ್ಬನನು । ಕರೆದುಕೊಂಡುಣಬೇಕು
ಕರೆಯದೆಯೆತಾನೆಉಣುತಿರಲು । ಅಊಟ
ನರಕದಾಊಟಸರ್ವಜ್ಞ ॥ ೨೬ ॥

ಎತ್ತಣಾಹನಿಬಿದ್ದು । ಮುತ್ತಾದತೆರನಂತೆ
ಉತ್ತಮದಗತಿಯಪಡೆಯುವೊಡೆ । ಯತಿಗೊಂದು
ತುತ್ತುನೀಡೆಂದಸರ್ವಜ್ಞ ॥ ೨೭ ॥

ಸ್ವಾತಿಯಾಮಳೆಬಿದ್ದು । ಜಾತಿಮುತ್ತಾದಂತೆ
ಸಾತ್ವಿಕನಪ್ಪಯತಿಗಿಕ್ಕೆ । ಸುಖವೀವ
ಜಾತಿರತ್ನವುತಾನುಸರ್ವಜ್ಞ ॥ ೨೮ ॥

ಅನ್ನವನುಇಕ್ಕುವ । ಚೆನ್ನಜಾತಿಯುತಾನೆ
ಅನ್ನವನುಇಕ್ಕದುಣುತಿರ್ಪ । ನಾಯಿ
ಕುನ್ನಿಗಿಂಕಡೆಯುಸರ್ವಜ್ಞ ॥ ೨೯ ॥

ಆಡುವರೇಮಡಿಕೆಯನು । ಕುಡಿಯುವರೆನೀರನ್ನು
ಪಡುವರೇಶಾವಕೊಡುವುದು । ಇವುಮೂರು
ಬಡವರದಾನಸರ್ವಜ್ಞ ॥ ೩೦ ॥

ಪಾತಕವನೂಕುವೊಡೆ । ಭೂತವನುಕಳೆಯುವೊಡೆ
ಭೂತೇಶನೊಲಿಮೆಪಡೆಯುವೊಡೆ । ಹಸಿದರ್ಗೆ
ಕಾತರಿಸದಿಕ್ಕು ಸರ್ವಜ್ಞ ॥ ೩೧ ॥

ಬಿಟ್ಟಡಂಭರಿಗಿತ್ತು । ಕೆಟ್ಟುಹೋಗಲುಬೇಡ
ಸೃಷ್ಟಿಗೀಶ್ವರನಶರಣರ್ಗೆ । ಈಯಲು
ಶ್ರೇಷ್ಠಪದವಹುದು ಸರ್ವಜ್ಞ ॥ ೩೨ ॥

ಕೊಡುವಾತನೇಶಿವನು । ಪಡೆವಾತನೇನರನು
ಒಡಲಭೂತಗಳುಕೆಡೆದು । ಹೋಗದಮುನ್ನ
ಕೊಡುಪಾತ್ರವರಿತು ಸರ್ವಜ್ಞ ॥ ೩೩ ॥

ಕೈಯಲುಂಬುದುಲೇಸು । ಜೈಯದಾಸೊಸೆಲೇಸು
ಅಯ್ಯಬಾರೆಂಬಮುಗಲೇಸು । ಧರ್ಮವನು
ಕೈಯಾರೆನೀಡುಸರ್ವಜ್ಞ ॥ ೩೪ ॥

ಕೈಯಾರೆನೀಡದೇ । ಮೈಯಾರೆಬಳಲದೇ
ಅಯ್ಯಶಿವನೆಂದು ನೆನೆಯದೆ । ಕೈಲಾಸ
ಕೈಯಮುಂಚಿಗೆಯೆ ? ಸರ್ವಜ್ಞ ॥ ೩೫ ॥

ಲೇಸಿನಾನುಡಿಯಿಲ್ಲ। ವಿಶಾಸಲಿನತನುವಿಲ್ಲ
ಈಶನಪೂಜೆತನಗಿಲ್ಲ। ಕೈಲಾಸ
ವೇಶಿಯುವುನೆಯೆ ? ಸರ್ವಜ್ಞ ॥ ३೬ ॥
ಏನುಬೇಡಿದೊಡೊಬ್ಬ। ದಾನಿಯುನೆಬೇಡುವುನು
ದೀನನಂಬೇಡಿಬಳಲಿದರೆ। ಆದೀನ
ನೇನುತಾಕೊಡುವ ? ಸರ್ವಜ್ಞ ॥ ३೭ ॥
ಬೇಡಿದರೆಬೇಡುವುದು। ಮಾಡುವಾಧರ್ಮಿಯನು
ಮೂಢಮೂರ್ಖರನು ಪೀಡಿಸಿ। ಪಿಸುಣಿಗಳ
ಬೇಡಲೇಬೇಡ ಸರ್ವಜ್ಞ ॥ ३೮ ॥
ಕೊಡುವರೇಗಂಟಿದ್ದು। ಯೆಡೆನೂರುಗಾವುದವೆ ?
ತಡೆಯದಿನ್ನೊವ್ಮೆಬಾರೆಂಬ। ಧರ್ಮಿಯು
ಕೊಡುವುದೇ ಹುಸಿಯು ಸರ್ವಜ್ಞ ॥ ३೯ ॥
ದಾನವೆಂವರೆ ತಲೆಯ। ಚಾಣದಲಿಕಡಿವಂತೆ
ತಾನೊಂದು ತಪ್ಪುಮಾಡಿದರೆ। ನೂರಾರು
ಮೌನದಿಂಕೊಡುವ ಸರ್ವಜ್ಞ ॥ ४೦ ॥
ಕಟ್ಟಿಯನುಕಟ್ಟಿದರೆ। ಬಿಟ್ಟುಕಳೆ ಕೋಡಿಯನು
ಕೆಟ್ಟುಕಕ್ಕುಲಿತೆಮಾಡಿದರೆ। ಆ ಕಟ್ಟಿ
ಕೆಟ್ಟುಹೋಗುವುದು ಸರ್ವಜ್ಞ ॥ ४೧ ॥
ಕೋಡಿಯನುಕಡಿದರೆ। ಕೇಡಿಲ್ಲವಾಕೆರೆಗೆ
ಮಾಡುವಾಧರ್ಮುಮನಮುಟ್ಟಿ। ಮಾಡಿದರೆ
ಈಡೇರುತಿಹನು ಸರ್ವಜ್ಞ ॥ ४೨ ॥
ಧರ್ಮಕರ್ಮದಮಾರ್ಗ। ವರ್ಮನೋಡೆಂದವನು
ಕರ್ಮಮಾಡಿದನಹೆಗಲೇರಿ। ಮತ್ತೊಬ್ಬ
ಧರ್ಮಿಬರುತಿರುವ ಸರ್ವಜ್ಞ ॥ ४३ ॥
ಪಾಪಪುಣ್ಯಗಳೆರಡು। ವ್ಯಾಪಿಸುತ್ತಂವಳವ
ಪಾಪಮಾಡುವನಹೆಗಲೇರಿ। ಮತ್ತೆಕುಲ
ದೀಪಬರುತಿರ್ಪ ಸರ್ವಜ್ಞ ॥ ४४ ॥

ಕೊಡುವವನಧರ್ಮಕ್ಕೆ। ಕಡೆಯೇನು? ಮೊದಲೇನು?
ಎಡತಾಕಿಕೊಂಡು ಕೊಡುವವನ। ಧರ್ಮವು
ಕೊಡಲಿಯಗಾಯ ಸರ್ವಜ್ಞ ॥ ೪೫ ॥
ಆಗಬಾ ಈಗಬಾ। ಹೋಗಿಬಾ ಯೆನ್ನದೇ
ಆಗಲೇಕರೆದು ಕೊಡುವವನ। ಧರ್ಮಹೊ
ನ್ನಾಗದೇಇರದು ಸರ್ವಜ್ಞ ॥ ೪೬ ॥
ಸೊಡರೆಣ್ಣೆತೀರಿದರೆ। ಕೊಡನೆತ್ತಿಯೆರೆವರೇ?
ಕೊಡಬೇಡ ಕೊಡದೆಇರಬೇಡ। ಧರ್ಮವನು
ಬಿಡಬೇಡವೆಂದ ಸರ್ವಜ್ಞ ॥ ೪೭ ॥
ಕೊಟ್ಟು ಕುದಿಯಲುಬೇಡ। ಇಟ್ಟಾಡಿಕೊಳಬೇಡ
ಕೊಟ್ಟು ನಾ ಕೆಟ್ಟೆನೆನಬೇಡ। ಶಿವನಲ್ಲಿ
ಕಟ್ಟಿದಾಬುತ್ತಿ ಸರ್ವಜ್ಞ ॥ ೪೮ ॥
ಕೊಟ್ಟುಹುಟ್ಟಿದನಿಲ್ಲ। ಹುಟ್ಟಿಪಡೆಯಲಿಲ್ಲ
ಸಿಟ್ಟಿನಲಿಶಿವನಜೈದರೆ। ಶಿವತನ್ನ
ಬಿಟ್ಟುಕೊಟ್ಟಾನೆ? ಸರ್ವಜ್ಞ ॥ ೪೯ ॥
ಛತ್ರದಾನೆಳಲಡಿಯ। ಸುತ್ತಿಬರುವನನೋಡಿ
ಎತ್ತಣಧರ್ಮವೆನಬೇಡ। ಅದುಕೊಟ್ಟ
ಉತ್ತಮದಫಲವು ಸರ್ವಜ್ಞ ॥ ೫೦ ॥
ಅನ್ನದಾನಕ್ಕಿಂತ। ಇನ್ನುದಾನಗಳಿಲ್ಲ
ಅನ್ನಕ್ಕೆಮೇಲು ಯಿನ್ನಿಲ್ಲ। ಲೋಕಕ್ಕೆ
ಅನ್ನವೇಪ್ರಾಣ ಸರ್ವಜ್ಞ ॥ ೫೧ ॥
ಉಳ್ಳಾಗವುಣಲೊಲ್ಲ। ವುಳ್ಳಾಗವುಡಲೊಲ್ಲ
ಉಳ್ಳಾಗದಾನಕೊಡಲಿಲ್ಲ। ದವಸೊಡವೆ
ಕಳ್ಳಂಗೆನೃಪಗೆ ಸರ್ವಜ್ಞ ॥ ೫೨ ॥
ಉಣ್ಣದೊಡವೆಯಗಳಿಸಿ। ಮಣ್ಣೊಳಗೆಜೈಚಿಟ್ಟು
ಚೆನ್ನಾಗಿನೆಲಸಾರಿಸಿವನ। ಬಾಯೊಳಗೆ
ಮಣ್ಣುಕಾಣಯ್ಯ ಸರ್ವಜ್ಞ ॥ ೫೩ ॥

ಹೊದ್ದು ದನುಬೈತುಹೊರ । ಗಿದ್ದು ದನುಬಯಸುವನು
ಇದ್ದುಉಣದವನಬಾಯೊಳಗೆ । ಕತ್ತೆಯಾ
ಲದ್ದಿಬಿದ್ದಂತೆ ಸರ್ವಜ್ಞ ॥ ೫೪ ॥

ಉಣ್ಣೆಕೆಚ್ಚಲೊಳಿರ್ದು । ಉಣಲರಿಯದಮೃತವನು
ಪುಣ್ಯಕ್ಕೆಲಕ್ಷ್ಮಿಬಯಸಿದೊಡೆ । ಮರ್ತ್ಯದಲಿ
ಉಣ್ಣದವರುಂಟೆ ? ಸರ್ವಜ್ಞ ॥ ೫೫ ॥

ಕೊಟ್ಟಿರ್ದಕಾಲಕ್ಕೆ । ಅಟ್ಟುಣ್ಣಲರಿಯದೆ
ಹುಟ್ಟಿಕ್ಕಿಜೇನುಅಣಿಮಾಡಿ । ಪರರಿಂಗೆ
ಬಿಟ್ಟುಹೋದಂತೆ ಸರ್ವಜ್ಞ ॥ ೫೬ ॥

ಒಡಲಕಟ್ಟಿಯೆತಾನು । ಒಡವೆಯನುಗಳಿಸುವನು
ಒಡವೆತಾನುಣ್ಣಲರಿಯದೆ । ಸತ್ತೊಡಾ
ಒಡವೆಸುಡಬೇಕೆ ? ಸರ್ವಜ್ಞ ॥ ೫೭ ॥

ಕಂಡವರಒಡವೆಯನು । ದಂಡಿಸೀತೆಕೊಂಡು
ಉಂಡುಂಡುತಾನುಮಡಿದರೆ । ಅವಗೆಯಮ
ದಂಡತಪ್ಪುವುದೆ ? ಸರ್ವಜ್ಞ ॥ ೫೮ ॥

ಬೇಡಿಕಷ್ಟವಮಾಡಿ । ಕೂಡಿಸಿದಅರ್ಥವನು
ರೂಢಿಗೀಶ್ವರನಶರಣರ್ಗೆ । ನೀಡಿದರೆ
ಮಾಡಿದಾಪುಣ್ಯ ಸರ್ವಜ್ಞ ॥ ೫೯ ॥

ಇದ್ದಾಗಲುಣ್ಣದೇ । ಎದ್ದಾಗಲುಂಡಾನೆ ?
ಬಿದ್ದದೇಹವನುಗುದ್ದಿ । ಗೋಳಿಡುವಾಗ
ಬುದ್ಧಿಬಂದುಪುದೆ ? ಸರ್ವಜ್ಞ ॥ ೬೦ ॥

ಆಡದೆಯೆಮಾಡುವನು । ರೂಢಿಯೊಳಗುತ್ತಮನು
ಆಡಿಮಾಡುವನುಮಧ್ಯಮನು । ಅಧಮತಾ
ನಾಡಿಮಾಡದವ ಸರ್ವಜ್ಞ ॥ ೬೧ ॥

ಕಂಡವರುಸೇರರು । ಹೆಂಡಿರೂಹೋರುವರು
ಖಂಡಿತದಿಲಕ್ಷ್ಮಿತೊಲಗುವಳು । ಇದುಸತ್ಯ
ಖಂಡಪರಶುವಿನಾಣೆ ಸರ್ವಜ್ಞ ॥ ೬೨ ॥

ಹೊನ್ನನ್ನುಹೆಣ್ಣನ್ನು । ಮಣ್ಣಿನಾಬಿಲ್ಲೆಯನು
ಹಣ್ಣಿಸಿಯೆಜಗಕೆ ನೆರೆಯಾಡಿ । ಕೆಡಹುವನು
ಕೃಣ್ಣನನೋಡು ಸರ್ವಜ್ಞ ॥ ೬೩ ॥
ಕೊಟ್ಟಲ್ಲಿ ಬಾರದದು । ಇಟ್ಟಲ್ಲಿಹೋಹುದು
ಮುಟ್ಟಲೂಕೈಯಲ್ಲಿನಿಲದು । ಜಗದೀಶ
ಕೊಟ್ಟಲ್ಲದಿಲ್ಲ ಸರ್ವಜ್ಞ ॥ ೬೪ ॥
ಹರಕೊಟ್ಟಕಾಲಕ್ಕೆ । ಹರನರೂಪಿಗೆನೀಡು ।
ಹರಪೆಯರುಸುತರುನೆರೆಸವಿದು । ತಾಸವಿದು
ಹರನಬೇಡುವುದು ಸರ್ವಜ್ಞ ॥ ೬೫ ॥
ಕರದಿಕಪ್ಪರವುಂಟು । ತಿರಿದುಂಬನಾಡುಂಟು
ಹರನೆಂಬ ದೈವನಮಗುಂಟು । ನಮಗಿಂತ
ಸಿರಿವಂತರಾರು ಸರ್ವಜ್ಞ ॥ ೬೬ ॥

* * * * * ॥ ೬೭ ॥

+ ೩೮೪
೪೫೧

೧೧. ರಾಜನೀತಿ ಪದ್ಧತಿ.

ಅರಸನೋಲಗದೊಳಗೆ । ಸರಸವನ್ನಾಡದಿರು
ವಿರಸನಿಂದೆಯಲಿ ನಿಲ್ಲದಿರು । ಒಬ್ಬನಕೂಡೆ
ಭರವಸವುಬೇಡ ಸರ್ವಜ್ಞ ॥ ೧ ॥
ಎದ್ದುಮಾತಾಡದಿರು । ಎಡ್ಡೆಡ್ಡುನಿಲ್ಲದಿರು
ಇದ್ದಮಾನವರಜರೆಯದಿರು । ಓಲಗದೊ
ಳಿದ್ದುಮಿಲ್ಲೆನಿಸು ಸರ್ವಜ್ಞ ॥ ೨ ॥
ಮೆಚ್ಚಿದಂತರಸನಾ । ಇಚ್ಚೆಯಂತಿರಬೇಕು
ಎಚ್ಚರಿಕೆತಪ್ಪಿನಡೆದರೆ । ಆ ಮೆಚ್ಚು
ಕಿಚ್ಚಿನಂತಕ್ಕು ಸರ್ವಜ್ಞ ॥ ೩ ॥
ಚಿತ್ತರೀತಿಯನರಿದು । ಹತ್ತಿರಿದ್ದೋಲಗಿಸು
ಚಿತ್ತವನುಪಡೆದುಸಿರಿಬರಲು । ನೊಲಸಾಯಿ
ಹತ್ತಿದಂತಕ್ಕು ಸರ್ವಜ ॥ ೪ ॥

ಅರಸೊಲಿದು ನಡಿಸಿದರೆ । ಸಿರಿಯುಕ್ಕಧನವಕ್ಕು
ಕರಿತುರಗಬಲವುಪಿರಿದಕ್ಕು । ದೊರೆಮುನಿಯೆ
ಕಿರಿಯನಾಯಕ್ಕು ಸರ್ವಜ್ಞ ॥ ೫ ॥

ಹೊನ್ನುಮುನ್ನವೆಯಿಲ್ಲ । ಮನ್ನಣೆಯು ಮೊದಲಿಲ್ಲ
ಬಿನ್ನಣವಕೇಳದರಸ । ನೋಲಗಕಿಂತ
ಸನ್ಯಾಸಲೇಸು ಸರ್ವಜ್ಞ ॥ ೬ ॥

ಬಂದವರನೋಡನು । ನಿಂದವರನುಡಿಸನು
ಹಂದಿಯೂಗಜವುಸರಿಯೆಂಬ । ನೋಲಗವು
ಎಂದಿಗೂಬೇಡ ಸರ್ವಜ್ಞ ॥ ೭ ॥

ನುಡಿಯನಾಲಿಸಿನಡೆಯೆ । ನಡುಗುವುದುಜಗವೆಲ್ಲ
ನುಡಿದರೇಕೇಳಿ ಕಿಡಿಯುಪ್ಪ । ನೃಪನ
ನುಡಿಸುವವರಿಲ್ಲ ಸರ್ವಜ್ಞ ॥ ೮ ॥

ಮಾಳಿಗೆಯುಸಡಲಿದರೆ । ಸೂಳೆಹಲ್ಲುದುರಿದರೆ
ಆಳುವಾಒಡೆಯಮುನಿದರೇ । ಅಲ್ಲಿಂದ
ಹೇಳದೆಯೆಹೋಗು ಸರ್ವಜ್ಞ ॥ ೯ ॥

ತಪ್ಪುಸಾಧಿಸುವವನೊ । ಳಿಪ್ಪವನುಕಡುಹೆಡ್ಡ
ಸರ್ಪನಹೆಡೆಯುನೆಳಲೆಂದು । ಸೇರಿದಾ
ಕಪ್ಪೆಯಂತಕ್ಕು ಸರ್ವಜ್ಞ ॥ ೧೦ ॥

ಬಲ್ಲವರುಹಾವಸೆಯ । ಕಲ್ಲತಾಂಮೆಟ್ಟುವರೆ?
ಬಲ್ಲಿದವರೊಡನೆಸೆಣಸಿದರೆ । ಬಾಯೊಳಿಹ
ಹಲ್ಲುಹೋದಂತೆಸರ್ವಜ್ಞ ॥ ೧೧ ॥

ಎಂತರಸನೊಲಿದರೂ । ಮಂತ್ರಿಯಾಹಗೆಹೊಲ್ಲ
ಅಂತರಸುತಾನಾಗಮುನಿದರೆ । ಆಮಂತ್ರಿ
ಅಂತಸ್ಥನಕ್ಕುಸರ್ವಜ್ಞ ॥ ೧೨ ॥

ಗೆಲ್ಲಲರಿಯದಜೂಜು । ಒಲ್ಲದಾ ಚೆಲುವೆಣ್ಣು
ಹೊಲ್ಲದಾಗುಣದಅರಸನ । ಅತಿಕೂಟ
ಸಲ್ಲದುತನಗೆ ಸರ್ವಜ್ಞ ॥ ೧೩ ॥

ಮಂತ್ರಿಯಾಪಗೆನೃಪನ । ಕಾಂತೆಯರಸಮಗೋಷ್ಠಿ
ಮಂತ್ರವಿಲ್ಲದನಜಡನಾಟ । ಇವುಮೂರು
ಅಂತ್ಯಕಾಲಕ್ಕೆ ಸರ್ವಜ್ಞ ॥ ೧೪ ॥
ಮಂತ್ರಿಯುಳ್ಳಾರಾಜ । ಸಂತಸದಲಿರುತಿಹನು
ಮಂತ್ರಿಯಿಲ್ಲದನರಾಜ್ಯ । ಕೀಲುಗಿದ
ಯಂತ್ರದಂತಕ್ಕು ಸರ್ವಜ್ಞ ॥ ೧೫ ॥
ತಂತ್ರಿವಾದ್ಯವುಲೇಸು । ಮಂತ್ರಿಯಾಕೆಳೆಲೇಸು
ಯಂತ್ರವಾಹಕನ ಕೃಪೆಲೇಸು । ಲೋಕದೆಸ್ವ
ತಂತ್ರವೇಲೇಸು ಸರ್ವಜ್ಞ ॥ ೧೬ ॥
ಕನಡಿಗನಗೆಣೆತನವು । ಮನ್ನಿಯನವಿಶ್ವಾಸ
ತನ್ನಕೈಯಲಗುಪರರಿಗೆ । ಕೊಟ್ಟರೆ
ಜಿನ್ನಕೊಟ್ಟಂತೆ ಸರ್ವಜ್ಞ ॥ ೧೭ ॥
ಅಪಮಾನದೂಟಕಿಂ । ತುಪವಾಸವದುಲೇಸು
ಕೃಪೆಯುಳಿದುಬಡಿವಅರಸನ । ಓಲಗಕಿಂತ
ತಪವಿರಲುಲೇಸು ಸರ್ವಜ್ಞ ॥ ೧೮ ॥
ಬಲ್ಲಿದನುನುಡಿದರೆ । ಬೆಲ್ಲವನು ಮೆದ್ದಂತೆ
ಇಲ್ಲದಬಡವನುಡಿದರೆ । ಬಾಯೊಳಿಹ
ಹಲ್ಲುಬಿದ್ದಂತೆ ಸರ್ವಜ್ಞ ॥ ೧೯ ॥
ಸರಿವಸೀರೆಳವಳ್ಳಿ । ತುರಗಬೈತ್ರವುಬಂಡಿ
ಅರಸನಾಮನವು ಬೆಲೆವೆಣ್ಣು । ಇವುಯೇಳು
ತಿರುಹುವವರಿಚ್ಛೆ ಸರ್ವಜ್ಞ ॥ ೨೦ ॥
ಕಂಡಪ್ಪನುಡಿಯೆಭೂ । ಮಂಡಲವುಮುನಿವುದು
ಕೊಂಡಾಡುತಿಚ್ಚಕವನುಡಿಯೆ । ಜಗವೆಲ್ಲ
ಮುಂಡಾಡುತಿಹುದು ಸರ್ವಜ್ಞ ॥ ೨೧ ॥
ಒಡಲೆಂಬಹುತ್ತಕ್ಕೆ । ನುಡಿವನಾಲಿಗೆಸರ್ಪ
ಕೆಡುರೋಷವೆಂಬವಿಷತೋರೆ । ತಾನುಗಾ
ರುಡಿಗನಂತಕ್ಕು ಸರ್ವಜ್ಞ ॥ ೨೨ ॥

ಕೆಟ್ಟಿತೆಂದೆಂಬುದನು । ನೆಟ್ಟನೇಅರಿತುಕೋ
ಪಟ್ಟಣದರಸನನ್ಯಾಯ । ನಡೆದರೆ
ಸೃಷ್ಟಿಗೇಕೇಡು ಸರ್ವಜ್ಞ ॥ ೨೩ ॥
ನಾಡೆಂಬದೇಹಕ್ಕೆ । ರೂಢಿಪತಿಯೇಪ್ರಾಣ
ನಾಡಳಿಯೆರೂಢಿಪತಿಕೆಡುಗು । ಅರಸಳಿಯೆ
ನಾಡೆಲ್ಲಕೆಡುಗು ಸರ್ವಜ್ಞ ॥ ೨೪ ॥
ಒಡವನೊಳ್ಳೆಯವನಾತ । ನುಡಿವರಲ್ಲೆಂಬುವರು
ಪೊಡವೀಶ ಬಾಳುಗೆಡೆದರೆ । ಹೊಗಳುತ್ತ .
ಕಡುಜಾಣನೆಂಬುವರು ಸರ್ವಜ್ಞ ॥ ೨೫ ॥
ಕುದುರೆಯನು ಏರದೇ । ಕದನವನು ಜಯಿಸದೆ
ಸುದತಿಯರೊಲುಮೆಯರಿಯದ । ಅರಸುತಾ
ಸಿದಿಗೆಯ ಹೆಣನು ಸರ್ವಜ್ಞ ॥ ೨೬ ॥
ಸುಡುವರೇ ಪಂಜುಂಟು । ಬಡಿವಶಬ್ದಗಳುಂಟು
ಪೊಡವಿಯಾಳುವರನುದುನೆ । ವೆಚ್ಚಕ್ಕೊಂದು
ದುಡ್ಡೆತ್ತಲಿಲ್ಲ ಸರ್ವಜ್ಞ ॥ ೨೭ ॥
ಕುದುರೆಯಿಲ್ಲದ ಅರಸು । ಉದಕವಿಲ್ಲದ ವೂಟ
ಸುದತಿಯರು ಇರದಮನೆವಾರ್ತೆ । ಕ್ಷಯರೋಗಿ
ಬದುಕುವುದೆ ಕಷ್ಟ ಸರ್ವಜ್ಞ ॥ ೨೮ ॥
ಮೇಲರಿಯದಧಮರೊಳು । ಕಾಳಗವ ತೊಡಗಿದರೆ
ಬಾಳುವೆಗೆಟ್ಟು ಒಡವಾಗಿ । ಬೆಸಲಾದ
ಜೇಳಿನಂತಕ್ಕು ಸರ್ವಜ್ಞ ॥ ೨೯ ॥
ಬಾಗದಾ ಬಿಲುಕಷ್ಟ । ಹೋಗಿ ಬೇಡಲು ಕಷ್ಟ
ರಾಗವಿಲ್ಲದಿಹನೃಪಕಷ್ಟ । ರಣದೊಳಗೆ
ಹೋಗುವುದು ಕಷ್ಟ ಸರ್ವಜ್ಞ ॥ ೩೦ ॥
ಅಡಿಯ ಮುಂದಿಡೆ ಸ್ವರ್ಗ । ವಡಿಯ ಹಿಂದಿಡೆ ನರಕ
ಅಡಿಗಶ್ವಮೇಧ ಫಲವಕ್ಕು । ಸ್ವಾಮಿ ಕಾರ್ಯಕ್ಕೆ
ಮಡಿಯಲೇ ಬೇಕು ಸರ್ವಜ್ಞ ॥ ೩೧ ॥

ಕರವೆತ್ತಿಮಸೆಯುವನು । ಹಿರಿದೊತ್ತಿಕಟ್ಟುವನು
ಅರಿಯುಬಂದಲ್ಲಿ ಹಿರಿಯದ । ಕತ್ತಿಯನು
ಅರೆದು ಕುಡಿಯುವನೆ? ಸರ್ವಜ್ಞ ॥ ೩೨ ॥
ಇರಿಯದಾಸುರಗಿಯನು । ಶರಿರಮುರಿಯಲು ಹೊತ್ತು
ಅರಿಯು ಬಂದಾಗ ಕಡಿಯದ । ಖಡ್ಗವನು
ಅರೆದು ಮುಕ್ಕುವನೆ? ಸರ್ವಜ್ಞ ॥ ೩೩ ॥
ಹಸಿದರೇ ಉಂಬುದು । ಬ್ಬಸಬಂದರೋಡುವುದು
ಪಸರಿಸಿ ಸಿರಿಯಮೆರೆವರೇ । ಕುದುರೆಯನು
ಒಸೆದು ಕಟ್ಟೆಂದ ಸರ್ವಜ್ಞ ॥ ೩೪ ॥
ಕತ್ತಿಖಂಡೆಯವೆಲ್ಲ । ಹೊತ್ತಿರ್ದ ಫಲವೇನು ?
ಒತ್ತಿಬಂದಾಗ ಹಿರಿಯದಾ । ಕತ್ತಿಯನು
ಹೊತ್ತುಮಾರೆಂದ ಸರ್ವಜ್ಞ ॥ ೩೫ ॥
ಕತ್ತಿಯನು ಪಿಡಿವರೆ । ಶಕ್ತಿಯಲ್ಲಿರಬೇಕು
ಶತ್ರುಗಳು ಬಂದೊದಗೆ ನಿಸ್ಸ । ಕತ್ತಿಯನು
ಎತ್ತಿಹೊಯ್ಯೆಂದ ಸರ್ವಜ್ಞ ॥ ೩೬ ॥
ಚೂರಿಯನು ಬಾಕನ್ನು । ಶೂರತ್ವದಿಂಪಿಡಿದು
ಸಾರಿ ರಣದೊಳಗೆ ಸುಳಿದು । ಚೂರಿಯನು
ಸೂರೆನೋಡೆಂದ ಸರ್ವಜ್ಞ ॥ ೩೭ ॥
ಮಂದಿಯಿಲ್ಲದ ಅರಸು । ಕಂದರಿಲ್ಲದ ಭಾಗ್ಯ
ಬಂಧುಗಳುಯಿಲ್ಲದಿಹಬಾಳು । ಲೋಕದೊಳು
ಚಂದತಾನಲ್ಲ ಸರ್ವಜ್ಞ ॥ ೩೮ ॥
ಗುರುಗಳಿಲ್ಲದ ಮಠವು । ಹಿರಿಯರಿಲ್ಲದ ಮನೆಯು
ಅರಸಿಲ್ಲದೂರು ಇವು ಮೂರು । ನುಲಿಬೆಂದ
ಹೊರಸಿನಂತಕ್ಕು ಸರ್ವಜ್ಞ ॥ ೩೯ ॥
ಅಟ್ಟಿಯಿಲ್ಲದ ಪಾದ । ಆಟ್ಟಿಯಾಡದ ತೇಜಿ
ಹೊಟ್ಟೆಗೆಯರಿಲ್ಲದರಮನೆಯು । ಚಂಪನಪ
ಕುಟ್ಟಿಕುಡಿದಂತೆ ಸರ್ವಜ್ಞ ॥ ೪೦ ॥

ಮಧುವು ಇಲ್ಲವ ವೂಟ। ಮುದವ ಬೆಳಸದ ಸತಿಯು
ವಿಧವರಿತು ಕೊಡದ ಅರಸುಗಳು। ಹುಲಿಹೊಕ್ಕ
ಸದನದಂತಕ್ಕು ಸರ್ವಜ್ಞ ॥ ೪೧ ॥

ರಾಗವಿಲ್ಲದ ಹಾಡು। ಭೋಗವಿಲ್ಲದ ನಿದ್ರೆ
ತ್ಯಾಗವಿಲ್ಲದನ ದೊರೆತನವು। ಹಾಳೂರು
ಗೂಗೆಯಿರ್ಪಂತೆ ಸರ್ವಜ್ಞ ॥ ೪೨ ॥

ಅಜ್ಜಿಯಿಲ್ಲದ ಮನೆಯು। ಮಜ್ಜಿಗೆಯನುಳಿದೂಟ
ಕೊಜ್ಜೆಯರು ಇಲ್ಲದರಮನೆಯು। ಇವುಮೂರು
ಲಜ್ಜೆಗೆಟ್ಟಂತೆ ಸರ್ವಜ್ಞ ॥ ೪೩ ॥

ಹಾಡೆಬಲ್ಲವನೋದು। ಕೂಡಿತಪ್ಪದನಂಟು
ಬೇಡಿದ್ದುಕೊಡುವ ದೊರೆಸೇವೆ। ಇವು ಮುನ್ನ
ಮಾಡಿದ ಫಲವು ಸರ್ವಜ್ಞ ॥ ೪೪ ॥

ಅನುವರಿತು ಅಗಲದೇ। ಜನಪತಿಯನೋಲೈಸು
ಧನವಕ್ಕು ತೇಜಸಿರಿದಕ್ಕು। ವೈರಿಗಳು
ತನಗೆ ವಶವಕ್ಕು ಸರ್ವಜ್ಞ ॥ ೪೫ ॥

ಅನ್ನವನು ನೀಡದೇ। ಸನ್ನೆಯನು ನೋಡದೇ
ಮನ್ನಣೆಯ ಮೊದಲನರಿಯದೆ। ಇರ್ಪರಸು
ಕುನ್ನಿಗಿಂಕಡೆಯು ಸರ್ವಜ್ಞ ॥ ೪೬ ॥

ಪರಸತಿಗೆ ಸೋದರನು। ನೆರೆಶತ್ರುದಲ್ಲಣನು
ಕರಪಾಪ ಭೀತಿಇರುತಿರ್ಪ। ನೃಪಗೆತಾಂ
ಸ್ಥಿರವಿಹಳು ಲಕ್ಷ್ಮಿ ಸರ್ವಜ್ಞ ॥ ೪೭ ॥

ದೊರೆತನವ ಮಾಡುವುದು। ಕರೆದನ್ನನೀಡುವುದು
ಉರಗಭೂಷಣನ ನೆನೆವುದು। ಲೋಕದೊಳು
ನರರಲ್ಲವವರು ಸರ್ವಜ್ಞ ॥ ೪೮ ॥

ಪರಸವೆಗ್ಗಳಹೊಲ್ಲ। ಹೊರಸುಜೋಗೆಗೆಹೊಲ್ಲ
ಅರಸುತಿಳಿದರಮನೆಗೆಬರಹೊಲ್ಲ। ಪರಸತಿಯು
ಸರಸತಾನ್ಹೊಲ್ಲಸರ್ವಜ್ಞ ॥ ೪೯ ॥

ಎರೆಇಲ್ಲದಾರಂಬ । ದೊರೆಯಿಲ್ಲದಾವೂರು
ತರುಣಿಯಿಲ್ಲವನಆಶ್ರಯವು । ನಾಯಿಹಳೆ
ಕೆರವ ಕಡಿದಂತೆ ಸರ್ವಜ್ಞ ॥ ೫೦ ॥
ಅರಸು ಮಡಿದೊಡೆ ಕೇಡು । ವರುಷವಳಿದೊಡೆ ಕೇಡು
ಅರಸುಧಾನ್ಯಕ್ಕೆ ತಾಕೇಡು । ಅವಿಚಾರ
ಅರಸಿಂಗೆ ಕೇಡು ಸರ್ವಜ್ಞ ॥ ೫೧ ॥
ಆರಾರ ನಂಬಿದರು । ಆರಯ್ದು ನಂಬುವುದು
ನಾರಾಯಣನಿಂದ ಬಲಿಕೆಟ್ಟ । ಮಿಕ್ಕವರ
ನಾರುನಂಬುವರು? ಸರ್ವಜ್ಞ ॥ ೫೨ ॥
ಹಮ್ಮನಾಡಿರಿಯುವುದು । ಬ್ರಹ್ಮನಾದೊಡೆಯೇನು?
ಹಮ್ಮನಾಡಿರಿದು ಕೆಡಬೇಡ । ಇದು ಕಲಿಯು
ಹಮ್ಮನುಳಿಯೆಂದ ಸರ್ವಜ್ಞ ॥ ೫೩ ॥
ಜಾತಿಜಾತಿಯು ಕೂಡಿ । ಘಾತಿಸಿಯೆಮುನಿವವಗೆ
ಜಾತಸ್ಯ ಮರಣ ಧ್ರುವವೆಂಬ । ಶ್ರುತಿಯಿರಲು
ಏತಕಂಜುವರೊ? ಸರ್ವಜ್ಞ ॥ ೫೪ ॥

* * * * ॥ ೫೫ ॥

+೪೫೧

೧೨. ವಿಟಗಾತಿಯರಪದ್ಧತಿ.

* * * * ॥ ೧—೩೩ ॥

೪೮೪

೧೩. ಸ್ತ್ರೀಯರಪದ್ಧತಿ

ಮಗಳಕ್ಕತಂಗಿಯು । ಮಿಗೆಸೊಸೆಯುನಾದಿನಿಯು
ಜಗದವನಿತೆಯರು ಜನನಿಯು । ಮುಂತಾಗಿ
ಜಗಕೊಬ್ಬಳೈಸೆ ಸರ್ವಜ್ಞ ॥ ೧ ॥
ರುದ್ರನುಕರ್ತೃತಾ । ನಿರ್ದ್ದ ನಾರಿಯೆಅದ
ಇದ್ದವರಾರು? ಸತಿಯರ । ಹೃದಯವನು
ಗೆದ್ದವರದಾರು? ಸರ್ವಜ್ಞ ॥ ೨ ॥

ಹರಿಯುಪುರವನುಸುಟ್ಟ । ಹರನನೆತ್ತಿಯನೇರಿ
ಸರಸಿಜೋದ್ಭವನನೆರೆಕೆಡಿಸಿ । ನಿಂದವರು
ಹಿರಿಯರಿನ್ನಾರು? ಸರ್ವಜ್ಞ ॥ ೩ ॥
ಅಂದುಕಾಮನ ಹರನು । ಕೊಂದನೆಂಬುದುಹುಸಿಯು
ಇಂದುವದನೆಯರಕಡೆಗಣ್ಣ । ನೋಟದಲಿ
ನಿಂದಿಹನುಸ್ಮರನು ಸರ್ವಜ್ಞ ॥ ೪ ॥
ಕಟ್ಟಾಸೆಬುತ್ತಿಗೆ । ಮೆಟ್ಟಾಸೆಕಾಲಿಂಗೆ
ಪಟ್ಟಣದಾಸೆಹರದಂಗೆ । ನಾಯ್ಗಳಿಗೆ
ಕೆಟ್ಟಮನೆಯಾಸೆ ಸರ್ವಜ್ಞ ॥ ೫ ॥
ಅಳಿಯಾಸೆಹೆಪ್ಪಿಂಗೆ । ಮಳೆಯಾಸೆ ಜಗಕೆಲ್ಲ
ಬಲೆಯಾಸೆವಿಾನುಹಿಡಿವಂಗೆ । ನೀಚಂಗೆ
ಕಳುವುದೇಆಸೆ ಸರ್ವಜ್ಞ ॥ ೬ ॥
ಉಟ್ಟುಳಿದುವುಡುವಳು । ಕಟ್ಟುಳಿದು ಮುಡಿವಳು
ಕಟ್ಟಿಯನೇರಿನಗುವಳು । ದುರುಳೆಯರ
ಕಟ್ಟಾಣಿಕಾಣೊ! ಸರ್ವಜ್ಞ ॥ ೭ ॥
ಗಂಡಗಂಬಲಿಯಿಕ್ಕಿ । ಮೆಂಡಾಗಿತಾನುಂಡು
ಗಂಡಬಂದಾಗನರಳುವ । ಹೆಂಣಿಗೆ
ಗುಂಡಿಗಿಕ್ಕೆಂದ ಸರ್ವಜ್ಞ ॥ ೮ ॥
ಆಕೆಯನುಕಂಡುಮನೆ । ಯಾಕೆಯನುಮರೆದರೆ
ವೂಕೆಯನೇಣುಹರಿದಂತೆ । ಮನೆಯೊಳಿ
ರ್ದಾಕೆತಾಕೆಡುಗುಸರ್ವಜ್ಞ ॥ ೯ ॥
ಸತ್ತವರಬಾಯೊಳಗೆ । ಬತ್ತನೀರೆರೆದಂತೆ
ಚಿತ್ತವಿಲ್ಲದಳ ಒಡನಾಟ । ಶುನಿಹೆಣನ
ಹತ್ತಿತಿಂದಂತೆ ಸರ್ವಜ್ಞ ॥ ೧೦ ॥
ಜೇರೂರಸ್ನೇಹಕ್ಕೆ । ಹಾರಿಹೋಗುವಹೆಡ್ಡೆ
ವಿಾರಿದಾಶೂಲದಾಹೆಣಕೆ । ನರಿಯುಬಾ
ಯಾರಿಸತ್ತಂತೆ ಸರ್ವಜ್ಞ ॥ ೧೧ ॥

ಹುಳಿಯಿಲ್ಲದೂಟವೂ । ಮಳೆಯಿಲ್ಲದಾರಂಬ
ಬಳೆಯಿಲ್ಲದವಳನಳಿತೋಳು । ಡೊಂಬರದ
ಗಳೆಯುಮುರಿದಂತೆ ಸರ್ವಜ್ಞ ॥ ೧೨ ॥
ನೋಡಿನಾಹೊಲವಾಗಿ । ಕಾಡುವೆರಡೆತ್ತಾಗಿ
ಕಾಡುಗಣ್ಣವಳುಸೊಸೆಯಾಗೆ । ಆಮನೆಗೆ
ಕೇಡುತಪ್ಪುವುದೆ? ಸರ್ವಜ್ಞ ॥ ೧೩ ॥
ಕಾರಿನೆರಡೆತ್ತಾಗಿ । ಹೇರುವಮಗನಾಗಿ
ನೀರುಗಣ್ಣವಳುಸೊಸೆಯಾಗೆ । ಆಮನೆಗೆ
ತೂರಿದಾಬೂದಿ ಸರ್ವಜ್ಞ ॥ ೧೪ ॥
ಕೆಂದಸಾಪೆತ್ತಾಗಿ । ಮುಂದರಿವಮಗನಾಗಿ
ಒಂದನೂಕಾಣದಾಸೊಸೆಯಾಗೆ । ಆಮನೆಗೆ
ಬಿಂದಿಗೆಯಹೊನ್ನು ಸರ್ವಜ್ಞ ॥ ೧೫ ॥
ಚಿಂಚವೆರಡೆತ್ತಾಗಿ । ಚೀಮಾರಿಸೊಸೆಯಾಗಿ
ಮಿಂಚಾಗಿಮೆರೆವಮಗನಾಗೆ । ಆಮನೆಗೆ
ಲಂಚತಪ್ಪುವುದೆ? ಸರ್ವಜ್ಞ ॥ ೧೬ ॥
ಅಂಡವೆರಡೆತ್ತಾಗಿ । ತುಂಡೊಬ್ಬಸೊಸೆಯಾಗಿ
ಕಂಡದ್ದುಬೇಡುವಮಗನಾಗೆ । ಅಮನೆಗೆ
ದಂಡತಪ್ಪುವುದೆ? ಸರ್ವಜ್ಞ ॥ ೧೭ ॥
ಛಾಯಮಾಯವನುಂಗಿ । ಮಾಯೆಪಾಶವನುಂಗಿ
ಛಾಯಮಾಯವನುಯಮನುಂಗಿ । ಹೆಣ್ಣೆಂಬ
ನಾಯನೆಚ್ಚುವರೆ? ಸರ್ವಜ್ಞ ॥ ೧೮ ॥
ಒಲೆಯಮೇಲಣಹಾಲು । ಚಲಮಲನೆಕಾದಂತೆ
ಲಲನೆಯರೊಲುಮೆಹೊಳಹುನಡೆಯು । ಇವುಮೂರ
ಕೊಲಿಯದವರಿಲ್ಲ ಸರ್ವಜ್ಞ ॥ ೧೯ ॥
ಇಪ್ಪವಳಬಿಟ್ಟುತನ । ಗೊಪ್ಪುವಳನೆಚ್ಚಿದರೆ
ಇಪ್ಪುರಿಹರಿದನುಲಿಯಂತೆ । ಮನೆಯೊಳ
ಗಿಪ್ಪವಳುಕೆಡುಗು ಸರ್ವಜ್ಞ ॥ ೨೦ ॥

ಕಂಕಣವಕಟ್ಟಿಸುತ । ಕೊಂಕಿದಾಕುರುಳವಳ
ಪಂಕಜಗಂಧಿಯೆನಬೇಡ । ತಾನೊಲಿದ
ಮಂಕೆಮಾಣಿಕವು ಸರ್ವಜ್ಞ ॥ ೨೧ ॥

ನಂಬಿದಂತಿರಬೇಕು । ನಂಬದೇಇರಬೇಕು
ಇಂಬರಿದು ಯೆಚ್ಚರಿರಬೇಕು । ಹೆಣ್ಣನ್ನು
ನಂಬಿದವಕೆಡುವ ಸರ್ವಜ್ಞ ॥ ೨೨ ॥

ಜಲದಲಿಬಿಸುಟಕಲ್ಲು । ಸಲೆತೇಲಬಲ್ಲುದೇ?
ಲಲನೆಯೊಲಿದಿಹಳುತನಗೆಂಬ । ಮರುಳಂಗೆ
ಮಲೆನಾಗರುಂಟು ಸರ್ವಜ್ಞ ॥ ೨೩ ॥

ಹಳ್ಳದಾಹೊಲವಾಗಿ । ಒಳ್ಳೆವೆರಡೆತ್ತಾಗಿ
ಮೆಳ್ಳೆಗಣ್ಣವಳುಸೊಸೆಯಾಗೆ । ಆಮನೆಗೆ
ಬಳ್ಳದಲಿಹೊನ್ನು ಸರ್ವಜ್ಞ ॥ ೨೪ ॥

* * * * ॥ ೨೫—೩೪ ॥

೧೪. ಪ್ರಿಯೆಯರ ಪದ್ಧತಿ.

ಅಂಗನೆಯು ವೊಲಿಯುವುದು । ಬಂಗಾರ ದೊರೆವುದು
ಸಂಗ್ರಾಮದೊಳಗೆ ಗೆಲ್ಲುವುದು । ಇವು ಮೂರು
ಸಂಗೈಯನೊಲುಮೆ ಸರ್ವಜ್ಞ ॥ ೧ ॥

ತಾಳದೋಲೆಯನಿಟ್ಟು । ಬೇಳೆ ಮಣಿಯನುಕಟ್ಟಿ
ವೇಳೆಯನರಿತು ನಡೆವವಳು । ದೊರಕುವುದು
ಶೂಲಿಯಾ ಕರುಣ ಸರ್ವಜ್ಞ ॥ ೨ ॥

ಉರಿಯದೇ ಮೆರೆಯದೇ । ಶಿರವೆತ್ತಿನೋಡದೇ
ಸರಿಬಂದ ಕಡೆಯೊಳಿರುವವಳು । ದೊರಕುವುದು
ಗುರುಕರುಣವೆಂದ ಸರ್ವಜ್ಞ ॥ ೩ ॥

ನಾರಿ ಪರರುಪಕಾರಿ । ನಾರಿ ಸ್ವರ್ಗಕೆದಾರಿ
ನಾರಿ ಸಕಲರಿಗೆ ಹಿತಕಾರಿ । ಮುನಿದರೆ
ನಾರಿಯೇ ಮಾರಿ ಸರ್ವಜ್ಞ ॥ ೪ ॥

ಮನೆಗೆಬಂದಾ ಹೆಣ್ಣು । ವಿನಯದಿಂದೊಲಿಸುತ್ತ
ಮನಮುಟ್ಟಿ ತಾನು ಇರುತಿರಲು । ಅಮೃತದ
ಕೆನೆಯ ಸವಿದಂತೆ ಸರ್ವಜ್ಞ ॥ ೫ ॥
ಅಂದವಿಲ್ಲದ ಊಟ । ಚಂದವಿಲ್ಲದ ಮದುವೆ
ಕಂದನಿಲ್ಲದಳ ಮನೆವಾರ್ತೆ । ಇವು ಮೂರು
ಚಂದವಿಲ್ಲೆಂದ ಸರ್ವಜ್ಞ ॥ ೬ ॥
ಮೊಗೆಯನೀರೊಳಗೊಂದು । ನೆಗಳಾಡಿದಂದಿಗೆ
ತಗುಣಿ ಹೆಬ್ಬುಲಿಯ ನಿರಿದಂದು । ಹೆಣ್ಣಿನಾ
ಬಗೆಯ ನಂಬುವುದು ಸರ್ವಜ್ಞ ॥ ೭ ॥
ಏತದಾಗಣಿ ಚಿಗುತು । ಪೂತುಫಲವಾದಂದು
ಹೋತ ಮದಕರಿಯ ನಿರಿದಂದು । ಹೆಣ್ಣಿನ
ಮಾತನಂಬುವುದು ಸರ್ವಜ್ಞ ॥ ೮ ॥
ಅಡವಿಯಲಿಮಳೆ ಹೊಯ್ದು । ಗಿಡಸೆಡರುಗೊಂಡಂದು
ಹುಡಿಯೊಳು ತಾವರೆ ಬೆಳೆದಂದು । ಹೆಣ್ಣಿನ
ನುಡಿಯನಂಬುವುದು ಸರ್ವಜ್ಞ ॥ ೯ ॥
ಎತ್ತುಗಳು ಎರಡಾಗಿ । ಪುತ್ರರೈವರು ಆಗಿ
ಉತ್ತಮದ ಸತಿಯೊಬ್ಬಳಾಗೆ । ತನಗೆ
ನಿತ್ಯವೂ ಸುಖವು ಸರ್ವಜ್ಞ ॥ ೧೦ ॥
ಅಂಗನೆ ಸುಗುಣಿಯಾಗೆ । ಅಂಗಳದಿ ಹೊರಸಾಗೆ
ತಂಗಾಳಿ ಜೊನ್ನದಿರುಳಾಗೆ । ಬೇಸಗೆಯು
ಹಿಂಗದೇ ಇರಲಿ ಸರ್ವಜ್ಞ ॥ ೧೧ ॥
ಭಂಡಿ ಅಚ್ಚಿಗೆಭಾರ । ಮಿಂಡಿ ಮುದುಕಗೆ ಭಾರ
ಗುಂಡುಗಳು ಭಾರ ಜೈತ್ರಕ್ಕೆ । ಲೋಕಕ್ಕೆ
ಕೊಂಡೆಯನೆ ಭಾರ ಸರ್ವಜ್ಞ ॥ ೧೨ ॥
ಮುಟ್ಟಿದಂತಿರಬೇಕು । ಮುಟ್ಟದೇ ಇರಬೇಕು
ಮುಟ್ಟಿದರೆ ಮುಟ್ಟು ಸತಿಯನ್ನು । ಪರಸತಿಯ
ಮುಟ್ಟಲೇ ಬೇಡ ಸರ್ವಜ್ಞ ॥ ೧೩ ॥

ಊರಿಗೇ ದೊರೆರೂಪು । ನಾರಿಗೇ ಗುಣರೂಪು
ಚಾರುಕೋಗಿಲೆಗೆ ಸ್ವರರೂಪು । ಮನುಜಂಗೆ
ಧೀರತ್ವರೂಪು ಸರ್ವಜ್ಞ ॥ ೧೪ ॥

ಯತಿಯು ತಪಗಳು ಕೆಡುಗು। ಸತಿಯು ಸದ್ಗುಣ ಕೆಡುಗು
ಮತಿವಂತರೆಲ್ಲ ಮರುಳಕ್ಕು । ಹೆಣ್ಣಿನ
ಶ್ರುತಿಯು ಕೇಳಿದರೆ ಸರ್ವಜ್ಞ ॥ ೧೫ ॥

ಹಾದರದ ಮನೆ ಹೊಲ್ಲ। ಬೀದಿಯಾ ಸಸಿಹೊಲ್ಲ
ಹಾದರದ ಹೆಣ್ಣು ಯಿರಸಲ್ಲ। ಹಳ್ಳಿಗೆ
ಮಾದಿಗನೆ ಹೊಲ್ಲ ಸರ್ವಜ್ಞ ॥ ೧೬ ॥

ಸುರಪನೂ ಶಶಿಯು ತಾ । ಕರಕರೇ ರಾವಣನು
ವರಕೀಚಕಾದಿ ಪಟುಭಟರು । ಕೆಟ್ಟರೈ
ಪರಸತಿಗೆ ಅಳುಪಿ ಸರ್ವಜ್ಞ ॥ ೧೭ ॥

ಹಣಗುಣ ಬಲಗಳುಳ್ಳ । ರಣಧೀರ ರಾವಣನ
ತೃಣವೆಂದು ಸೀತೆಬಗೆಯಳೇ । ಪರಸತಿಯು
ಗೆಣೆಯೆ ಹೊಲ್ಲೆಹವು ಸರ್ವಜ್ಞ ॥ ೧೮ ॥

ಹೆಣ್ಣಿಂದೆ ಇಹವುಂಟು । ಹೆಣ್ಣಿಂದ ಪರವುಂಟು
ಹೆಣ್ಣಿನಿಂ ಸಕಲಪದಮುಂಟು । ಮುನಿದರೆ
ಹೆಣ್ಣಿಂದ ಮರಣ ಸರ್ವಜ್ಞ ॥ ೧೯ ॥

ಹೇರುವಾ ಎತ್ತನ್ನು । ಏರುವಾ ಕುದುರೆಯನು
ಚಾರುರೂಪುಳ್ಳ ಹೆಣ್ಣನ್ನು । ಪರರಿಗೆ
ಬೀರುವನೆ ಹೆಡ್ಡ ಸರ್ವಜ್ಞ ॥ ೨೦ ॥

ಏರಿಮೇಲಣ ಪಂಜು । ನೀರೊಳ್ಗುರಿ ತೋರ್ಪಂತೆ
ನಾರಿಯುರೊಲುಮೆ ತನಗೆಂಬ । ಮರುಳಂಗೆ
ಮೋರೆ ಹೊಯ್ದಂತೆ ಸರ್ವಜ್ಞ ॥ ೨೧ ॥

ದಾರಿಯಾ ಮರಬೆಂದು । ನೀರೊಳಗೆ ವುರಿವಂದು
ನಾರಿಯು ರೊಲುಮೆ ತನಗೆಂಬ । ಮರುಳಂಗೆ
ಮಾರಿಹಿಡಿದಿಹುದು ಸರ್ವಜ್ಞ ॥ ೨೨ ॥

ನುಡಿಯಿಲ್ಲದಾ ಮಂತ್ರ । ಗಿಡವಿಲ್ಲದಾ ಮದ್ದು
ಒಡಲರಿಯುವಂತೆ ನುಂಗಿದರೆ । ಕಡೆಗೆ
ತಡೆಯ ಹೋಗುವುದೆ? ಸರ್ವಜ್ಞ ‖ ೨೩ ‖

* * * * ‖ ೨೪—೩೦ ‖

೧೫. ವೇಶ್ಯಾಪದ್ಧತಿ.

ಹಸ್ತಿಗಿಂ ಬಲ್ಮೆ ತಾಂ । ಕಸ್ತಿಯಲಿ ಸಿಂಹಬಲ
ನಸ್ಥಿಯುಮುರಿದು ಮಡುಹಿದನು । ಪರಸತಿಯ
ಪ್ರಸ್ತವೇ ಬೇಡ ಸರ್ವಜ್ಞ ‖ ೧ ‖
ಪುರುಷ ಕಂಡರೆಕೊಲ್ಲ । ಅರಸು ದಂಡವಕೊಂಬ
ಸುರನರರುಯೆಲ್ಲ ಮುಳಿವರು । ಅಳಿದರೆ
ನರಕ ಪರಸತಿಯು ಸರ್ವಜ್ಞ ‖ ೨ ‖
ಆಳುಸೂಳೆಯು ನಾಯಿ । ಕೋಳಿವ್ಯಾಧನುಗೂಳಿ
ಆಳುವ ತಗರು ಪ್ರತಿರೂಹು । ಕಂಡರೆ
ಕಾಳೆಗವಕ್ಕು ಸರ್ವಜ್ಞ ‖ ೩ ‖
ನೆಗ್ಗಿಲಿನಹೊಲಹೊಲ್ಲ । ಸಿಗ್ಗುವೇಶ್ಯೆಗೆಹೊಲ್ಲ
ಸುಗ್ಗಿಯುದಿನಕೆಮಳೆಹೊಲ್ಲ । ಕೊಂಡೆಯನ
ಕಿಗ್ಗಾಳಿಹೊಲ್ಲಸರ್ವಜ್ಞ ‖ ೪ ‖
ಒಂದೆಲಗಮೆಲಹೊಲ್ಲ । ಸಿಂದಕನನೆರೆಹೊಲ್ಲ
ತಂದೆಯುನುಬ್ಬೈವಮಗಹೊಲ್ಲ । ಸೂಳೆಗೆ
ಬಂದುಗವುಹೊಲ್ಲಸರ್ವಜ್ಞ ‖ ೫ ‖
ದಾನಿಯುನು ಯಾಚಕನು । ಶ್ವಾನತನ್ನೊಡೆಯುನನು
ಆನೆಮಾವಟಿಗನರಿವಂತೆ । ಬೋಧಕನು
ಜ್ಞಾನವನುಅರಿವ ಸರ್ವಜ್ಞ ‖ ೬ ‖
ಸೂಳೆಯುನುಹೋದಣ್ಣ । ಸೇನಾದನೆಂತಾದ
ಹಾಳಾದಕೈಯುಹಣಹೋದ । ಮರುದಿವಸ
ಮೂಳನಾಯಾದ ಸರ್ವಜ್ಞ ‖ ೭ ‖

ಕೊಟ್ಟಾತಬರಡಾದ । ಬಿಟ್ಟಾತಹಯನಾದ
ಕೊಟ್ಟವಳಪದವನೆನೆವಾತ । ಲೋಕದೊಳು
ಬಟ್ಟಬಯಲಾದ ಸರ್ವಜ್ಞ ॥ ೮ ॥

ಕಕ್ಕೆಯಾಕಸುಗಾಯಿ । ಬಿಕ್ಕೆಯಾಹುಳಿಗಾಯಿ
ಸೊಕ್ಕಿದಾದಣಿಯ ಬಳಿಸೇವೆ । ಗೆಯ್ವುದಕಿಂತ
ಕಕ್ಕುಲಿತೆಯಿಲ್ಲಸರ್ವಜ್ಞ ॥ ೯ ॥

ಅಲ್ಲಸಿಹಿಯಾದಂದು । ನೆಲ್ಲಿಹಣ್ಣಾದಂದು
ಕಲ್ಲುಪ್ರತಿಮೆಗಳುಕುಣಿದಂದು । ಸೂಳೆಯಾ
ಸೊಲ್ಲುನಂಬುವುದು ಸರ್ವಜ್ಞ ॥ ೧೦ ॥

ಬೆಚ್ಚನೆಯ ಮನೆಯಾಗಿ । ವೆಚ್ಚಕ್ಕೆ ಹೊನ್ನಾಗಿ
ಇಚ್ಚೆಯನರಿವಸತಿಯಾಗೆ । ಆತನಿಗೆ
ಮೆಚ್ಚುಕಾಣಯ್ಯ ಸರ್ವಜ್ಞ ॥ ೧೧ ॥

॥ ೧೨—೪೮ ॥

೧೬. ಕಾಲಜ್ಞಾನಪದ್ಧತಿ.

ಆಗಮುಗಳಳಿದಾವು । ಗೂಗೆಮರಕಿಳಿದಾವು
ಕಾಗೆಕಾಳೆದ್ದುಬಡಿದಾವು । ಧೊರೆಗಳು
ಮೂಗರಾದಾರು ಸರ್ವಜ್ಞ ॥ ೧ ॥

ಝುಲ್ಲಿಯಾಬಿಲ್ಲವರು । ಅಲ್ಲಿಗೆಎಲ್ಲರೂ
ಕಲ್ಯಾಣದರಸುಬಸವಣ್ಣ । ಬರುವಾಗ
ಅಲ್ಲಿಚೆಲ್ಲಾಟ ಸರ್ವಜ್ಞ ॥ ೨ ॥

ಸಣ್ಣನೆಯಮೂಗಿನಾ । ಮಣ್ಣಾದತುರುಬಿನಾ
ಅಣ್ಣಗಳೆಲ್ಲಮಡಿವರು । ಚನ್ನಬಸ
ವಣ್ಣಬರುವಾಗ ಸರ್ವಜ್ಞ ॥ ೩ ॥

ಸೂಳೆಯಮಗಹುಟ್ಟಿ । ಆಳುವನುಮುನಿಪುರವ
ಕಾಳಗವಿಲ್ಲದೇಮಡಿಯುವನು । ಆಪುರವು
ಕೋಳುಹೋದೀತು ಸರ್ವಜ್ಞ ॥ ೪ ॥

ಉತ್ತರದದಿಕ್ಕಿನಲಿ। ಹತ್ತೀತುಬಲುಬೇಗೆ
ಸುತ್ತವರಕೊಂದುಬರುವಾಗ। ಜಗವೆಲ್ಲ
ಕತ್ತಲಾದೀತು ಸರ್ವಜ್ಞ ॥ ೫ ॥
ಚಂದ್ರಸೂರ್ಯರಗ್ರಹಣ। ಒಂದೆಮಾಸದಿಬಂದು
ತಂದೆಯನುಕಂದನಿರಿದಂದು। ಲೋಕಕ್ಕೆ
ಬಂದೀತುಪ್ರಳಯ ಸರ್ವಜ್ಞ ॥ ೬ ॥
ಇರುವೆದ್ದುಮಡಿವಲ್ಲಿ। ಕೆರೆಕಟ್ಟೆಯೊಡೆದೀತು
ಬರನಟ್ಟಬಡಿಯೆಜಗಮಡಿಯೆ। ಶರಣರು
ಬರುವುದೇಕುರುಹು ಸರ್ವಜ್ಞ ॥ ೭ ॥
ಪಾತಾಳಗಂಗೆಯನು। ಓತುಚಿಪ್ಪಿಲಿಮೊಗೆದು
ಭೂತಳವೆಲ್ಲಉರಿದೆದ್ದು। ಮುಂದೊಬ್ಬ
ದಾತಹುಟ್ಟುವನು ಸರ್ವಜ್ಞ ॥ ೮ ॥
ಚಿಣ್ಣಾನಪಟ್ಟಣವು। ತಣ್ಣಗೆಂದೆನಬೇಡಿ
ಚಿಣ್ಣಿಯಕೋಲುಮಿಡಿದಂತೆ। ಆಪಟ್ಣ
ನುಣ್ಣಗಾಗುವುದು ಸರ್ವಜ್ಞ ॥ ೯ ॥
ಧಾರಿಣಿಯುನಡಗುವುದು। ಮೇರುವಲ್ಲಾಡುವುದು
ವಾರಿಧಿಯುಬತ್ತಿಒಣಗುವುದು। ಶಿವಭಕ್ತಿ
ಯಾರಯ್ಯದಂದು ಸರ್ವಜ್ಞ ॥ ೧೦ ॥
ಒತ್ತಿದಾಜಗಳಕ್ಕೆ। ಸುತ್ತಮುತ್ತಿಗೆಯಾಗಿ
ತೊತ್ತಳದುಳಿದುಕೊಲುವಾಗ। ಉಳುವೆಯ
ಕರ್ತಬಂದಾನು ಸರ್ವಜ್ಞ ॥ ೧೧ ॥
ತಾರಣದವತ್ಸರದಿ। ಕಾರಣವುನಡೆದಾವು
ವಾರಣಾಶಿಯಲಿಗುಡಿಗಟ್ಟಿ। ಬೇಲೂರೊಳ್
ತೋರಣವುಕಟ್ಟ್ಯಾವು ಸರ್ವಜ್ಞ ॥ ೧೨ ॥
ಪಟ್ಟವಿಲ್ಲದಕೂಸು। ಸೃಷ್ಟಿಯನಾಳೀತು
ಪಟ್ಟದರಾಣಿಮಡಿದಮರುದಿನ। ಶರಣರ
ಪಟ್ಟಕಾಣಯ್ಯ ಸರ್ವಜ್ಞ ॥ ೧೩ ॥

ನಂದಿಯಾದುರ್ಗವನು। ಅಂದದಲಿತೆಗೆದಾರು
ಚಂದದಲಿತೆಗೆದಆರನೆಯ। ವರುಷಕ್ಕೆ
ಬಂದಾನುಶರಣ ಸರ್ವಜ್ಞ ॥ ೧೪ ॥

ಸುತ್ತುಕೋಟೆಯಮೇಲೆ। ಮತ್ತೆಕೋಟೆಯಹಾಕಿ
ಮುತ್ತೈದೆಮಗನುಅಳಿದರೆ। ಬಿದರೂರು
ಎತ್ತಿಹೋದೀತು ಸರ್ವಜ್ಞ ॥ ೧೫ ॥

ಎತ್ತನೇರುವನೊಬ್ಬ। ತೊತ್ತಿನಾಮಗನೊಬ್ಬ
ಮುತ್ತುಮಾರುವನದೆಸೆಯಿಂದ। ರಾಜ್ಯಕ್ಕೆ
ಮೃತ್ಯುಕಾಣಯ್ಯ ಸರ್ವಜ್ಞ ॥ ೧೬ ॥

ಮಾದನಾಪುರದಲ್ಲಿ। ಕಾದಿಲಗ್ಗೆಯಮಾಡಿ
ಮಾಧವನಪಡೆಯಸದೆಬಡಿದು। ಕಲ್ಯಾಣ
ಹಾದಿಹಿಡಿದಾನು ಸರ್ವಜ್ಞ ॥ ೧೭ ॥

ಬ್ರಹ್ಮನಾಗಿರಿಯಲ್ಲಿ। ಹೆಮ್ಮಗನುತಂದೆಯಾ
ಹಮ್ಮಿನಿಂತಾನುಮುರಿದಾನು। ಮಲೆನಾಡು
ನಿರ್ಮಲವಕ್ಕು ಸರ್ವಜ್ಞ ॥ ೧೮ ॥

ಬ್ರಹ್ಮನಾಳದಕಿಚ್ಚು। ಒಮ್ಮೆತಾತೀರದು
ಬ್ರಹ್ಮಾಂಡಬೆಂದುಧರೆಬೆಂದು। ಈಕಿಚ್ಚ
ನೆಮ್ಮುವನೆ ಯೋಗಿ ಸರ್ವಜ್ಞ ॥ ೧೯ ॥

ಇಕ್ಕೇರಿಸೀಮೆಯಾ। ಲೆಕ್ಕವನು ಕೇಳಿರೋ
ಇಕ್ಕೇರಿಯದು ಅಳಿದು ಹತ್ತು। ವರುಷಕ್ಕೆ
ಮುಕ್ಕಣ್ಣಬರುವ ಸರ್ವಜ್ಞ ॥ ೨೦ ॥

ತನ್ನನಾಭಿಯ ಕೆಳಗೆ। ವಹ್ನಿಮಂಡಲವುಂಟು।
ವಹ್ನಿಮಂಡಲದ ಕೆಳಗಣ। ನಾಡಿಯಲಿ
ತನ್ನನೋಡೆಂದ ಸರ್ವಜ್ಞ ॥ ೨೧ ॥

ಬಿಂದುಕಳೆಯೆಂದೆಂಬ। ನಂದನಾವನವುಂಟು
ಇಂದುಧರನೆಂಬ ಕೊಳನುಂಟು। ತಿಳಿನೀರು
ಮಿಂದುಂಬರಿಲ್ಲ ಸರ್ವಜ್ಞ ॥ ೨೨ ॥

ನರಸಿಂಹನವತಾರ । ಹೊರಸೆದ್ದು ಹೋದೀತು
ಅರಸುಗಳೆಲ್ಲ ಮತಿಗೆಟ್ಟು । ಈ ರಾಜ್ಯ
ಸೆರೆಸೂರೆ ಕಾಣೊ ಸರ್ವಜ್ಞ ॥ ೨೩ ॥
ಸಿಡಿಲುಬಳಗದಕೋಟೆ । ಘುಡಿಘುಡಿಸಿರಚ್ಚೆದ್ದು
ಕಡೆಗಡಿಯುಮುರಿದ ಮರುದಿವಸ । ಕರ್ಣಾಟ
ಹುಡಿಹುಡಿಯುಕ್ಕು ಸರ್ವಜ್ಞ ॥ ೨೪ ॥
ಆನೆಘನವಳ್ಳಿಯಲಿ ! ವಾನರನು ಊರುವನು
ಖಾನಖಾನರನು ಮಡುಹುತಲಿ । ಪಟ್ಟಣಕೆ
ತಾನೆಬಂದಾನು ಸರ್ವಜ್ಞ ॥ ೨೫ ॥
ಚೋಳದೇಶದಿಂದ । ಚೋಳರುಬಂದಾರು
ಮೇಳೈಸಿ ಅರಸಿನೊಡಗೂಡಿ । ಬಸ್ತಿಯನು
ಹಾಳುಮಾಡ್ಯಾರು ಸರ್ವಜ್ಞ ॥ ೨೬ ॥
ಭಾಟಿಯಾ ಬಸದಿಯನು । ಆಟದಲಿಒಡೆದಾರು
ಆಟದಾರನೆಯ ವರುಷಕ್ಕೆ । ಶರಣತಾ
ನೀಟಾಗಿ ಬರುವ ಸರ್ವಜ್ಞ ॥ ೨೭ ॥
ಎಂದು ಬಂದಾರೆಂದು ಸಂದೇಹಗೊಳಬೇಡ
ತಂದೆಯಾ ಮಗನುಕೊಂದಂದು । ಬೇಸಗೆಯ
ಮುಂದೆಬಂದಾರು ಸರ್ವಜ್ಞ ॥ ೨೮ ॥
ಬಂಟನಾತಮ್ಮನಾ । ಅಳಿಯಮಾವಂದಿರಿಗೆ
ಗಂಟಿಕ್ಕಿ ಜಗಳಹಣ್ಣಾವು । ಲೋಕಕ್ಕೆ
ಕಂಟಕವಾದಾವು ಸರ್ವಜ್ಞ ॥ ೨೯ ॥
ಕಂದನಾ ಕೈಪಿಡಿದು । ಬಂದಾನುಪಟ್ಟಣಕೆ
ನಿಂದುರಾಜ್ಯವನು ಆಳ್ಯಾನು । ಯಾಗದಾ
ನಂದದೊಳಗಿಹನು ಸರ್ವಜ್ಞ ॥ ೩೦ ॥
ವೀರಶರಭನಹೊಡೆದ । ಈರೈದು ವರುಷಕ್ಕೆ
ಧೀರನರಸಿಂಹನೆಲಸ್ಯಾನು । ಶರಭನು
ಸಾರಿಬರುತಾನೆ ಸರ್ವಜ್ಞ ॥ ೩೧ ॥

ಬಾಟಿಬಸದಿಯುವಮಾಡಿ । ಗೂಟತಂತಿಯು ಹಾಕಿ
ನೀಟಾದ ಬಂಡಿಬರುವಾಗ । ಲೋಕದಾ
ಆಟನೋಡೆಂದ ಸರ್ವಜ್ಞ ॥ ೩೨ ॥

ಪಂಚಲೋಹದ ತಗಡು । ಮುಂಚೆಭೂಮಿಗೆ ಹಾಸಿ
ಕಂಚಿನರಥವನಡಿಸ್ಯಾರು । ಆ ರಥವು
ಮಿಂಚು ಹೊಡೆದೀತು ಸರ್ವಜ್ಞ ॥ ೩೩ ॥

ಎತ್ತುಇಲ್ಲದೆಬಂಡಿ । ಯೊತ್ತೊತ್ತಿನಡಿಸುವರು
ಸುತ್ತಲಾರಾಜ್ಯವಾಳುವರು । ಆ ಮೇಲೆ
ಮೃತ್ಯು ಹೊಂದುವರು ಸರ್ವಜ್ಞ ॥ ೩೪ ॥

ನಂದನಾಹೆಸರಿಂದ । ಬಂದುರಾಜ್ಯವನಾಳಿ
ಬಂಧನಬಿದ್ದುಭಯಗೊಂಡು । ನೀರಿನಲಿ
ಸಂದುಹೋಗುವನು ಸರ್ವಜ್ಞ ॥ ೩೫ ॥

* * * * * ॥ ೩೬–೩೭ ॥

೧೭. ವಿಧಿವಾಸನಾಪದ್ಧತಿ.

ಹರಿಹಂದಿಯಾದಂದು । ಹರನುತಿರಿದುಂಡಂದು
ಶಿರವರಿದುಬ್ರಹ್ಮನಿರುವಂದು । ಫಣೆಯಲ್ಲಿ
ಬರೆದವರುಯಾರು? ಸರ್ವಜ್ಞ ॥ ೧ ॥

ಕರ್ಮದಾದೆಸೆಯಿಂದ । ಚರ್ಮವನು ಹರನುಟ್ಟ
ಬ್ರಹ್ಮಕಚ್ಚುಟವಕಟ್ಟಿದನು । ಗೋವಿಂದ
ಎಮ್ಮೆಗಳಕಾಯ್ದು ಸರ್ವಜ್ಞ ॥ ೨ ॥

ಹತ್ತುಭವದಲಿ ಬಂದು । ಎತ್ತುತುರುಗಳ ಕಾಯ್ದು
ಮತ್ತೆಪಾಂಡವರಿಗಾಳಾದ । ಹರಿಮುನ್ನ
ಎತ್ತಿದಾಕರ್ಮ ಸರ್ವಜ್ಞ ॥ ೩ ॥

ಅಂಕದೊಳಗರ್ಜುನಗೆ । ಶಂಕರನು ಓಡಿದನು
ಲಂಕೆಯಲಿ ಹನುಮನಿಡಿಹೊಡೆದ । ಮಾನವರ
ಬಿಂಕವಿನ್ನೇನು ? ಸರ್ವಜ್ಞ ॥ ೪ ॥

ಅಕ್ಕರವ ತೊಡೆಯುವರೆ । ಮುಕ್ಕಣ್ಣಗಳವಲ್ಲ
ರಕ್ಕಸನು ಸೀತೆಯನೊಯ್ವಾಗ । ಮತ್ತಾರು
ದಿಕ್ಕಾಗಲಿಲ್ಲ ಸರ್ವಜ್ಞ ॥ ೫ ॥

ಕೇಡುಗಳು ಬರುವಾಗ । ಕೂಡುವುವೆ ಬುದ್ಧಿಗಳು?
ಕೋಡಗನು ಲಂಕೆಸುಡುವಾಗ । ರಾವಣನು
ಆಡುಕಾಯ್ದಿಹನೆ ? ಸರ್ವಜ್ಞ ॥ ೬ ॥

ಒಂದು ಪೊಂಭತ್ತು ತಲೆ । ಅಂದ ತೋಳಿಪ್ಪತ್ತು
ಚಂದದಿಂದುಂಡು ಸವಿಮಾಡೆ । ಪ್ರಾರಬ್ಧ
ಬಂದುದೇ ಕಾಲ ಸರ್ವಜ್ಞ ॥ ೭ ॥

ಈರೈದು ತಲೆಯುವನ । ಉರೊಪ್ಪುತಿಹಲಂಕೆ
ವಾರಿಧಿಯ ಕಟ್ಟುಹೊಡೆಯಿತು । ಬಂಧನವ
ಮೀರಿದವರಾರು ? ಸರ್ವಜ್ಞ ॥ ೮ ॥

ಕಡಲೇಳು ಸುತ್ತಲೂ । ನಡುವೆ ಲೋಹದ ಕೋಟೆ
ಕಡಲುತಾ ಕಟ್ಟುವಡೆಯಿತು । ಬಂಧನವ
ಬಿಡಿಸುವವರಿಲ್ಲ ಸರ್ವಜ್ಞ ॥ ೯ ॥

ಎತ್ತಣಾ ಲಂಕೆತಾ । ನೆತ್ತಣಅಯೋಧ್ಯೆಯು
ಹತ್ತಿರದ ನಾಡಿನೊಳಗಲ್ಲ । ರಾವಣಗೆ
ಎತ್ತಣಮಾರಿ ? ಸರ್ವಜ್ಞ ॥ ೧೦ ॥

ಆಡಾದನಜಮುನಿಯು । ಕೋಡಗನು ಹನುಮಂತ
ನೋಡು ರಾವಣನ ಬಾಳುವೆಯ । ಕಲ್ಪಿತವ
ಮಾಡಿದವರಾರು ? ಸರ್ವಜ್ಞ ॥ ೧೧ ॥

ಅಡಗಿದ್ದ ಶೂದ್ರಕನ । ಹಿಡಿತಂದು ಕೊಲ್ಲಿಸಿತು
ಪೊಡವಿಯೊಳಗಧಿಕ ಬಲವಂತ । ರಾವಣನ
ಮಡುಹಿತಾ ವಿಧಿಯು ಸರ್ವಜ್ಞ ॥ ೧೨ ॥

ಈ ದೇಶವಲ್ಲೆಂದು । ಆ ದೇಶ ವೈದಿದರೆ
ಹೋದ ಶೂದ್ರಕನ ಶಿರ ಕಂಚಿ । ಯಾಲದಲಿ
ಛೇದಿಸಿತು ವಿಧಿಯು ಸರ್ವಜ್ಞ ॥ ೧೩ ॥

ಗಟ್ಟದಾ ಬೆಟ್ಟದಾ । ಇಟ್ಟೆಡೆಯ ಕಿರುಬಿನೊಳು
ಕೆಟ್ಟೋಡಿ ಬಂದುದೆನಬೇಡ । ವಿಧಿಕಾಣ
ದಷ್ಟದಿಕ್ಕುಂಟೆ? ಸರ್ವಜ್ಞ ॥ ೧೪ ॥
ಕೆಡಕುಬಂದೀತೆಂದು । ಅಡವಿಗೋಡಲುಬೇಡ
ಬಿಡದೋಡಿಭಂಗಪಡಬೇಡ । ವಿಧಿಕಾಣ
ದಡವಿಗಳುಂಟೆ? ಸರ್ವಜ್ಞ ॥ ೧೫ ॥
ಅಲ್ಲಿಯಿರಲೊಲ್ಲದೇ । ಬಲ್ಲಿದರವೊರೆಬಿದ್ದು
ಕಲ್ಲುವಾಳಿಗೆಯ ವೊಳಗಿರಲು । ವಿಧಿತಾನು
ಕೊಲ್ಲದೆಬಿಡದು ಸರ್ವಜ್ಞ ॥ ೧೬ ॥
ಸೀತೆಹೋದುದುಭಂಗ । ಸೇತುಕಟ್ಟಿದಭಂಗ
ಮಾತಿನಭಂಗರಾಮುಂಗೆ । ರಾವಣಗೆ
ಯೇತರಭಂಗ? ಸರ್ವಜ್ಞ ॥ ೧೭ ॥
ಹಾಗಿದ್ದೆಹೀಗಿದ್ದೆ । ಹೋಗಿದ್ದೆನೆನಬೇಡ
ಹೋಗಳೇಸೀತೆಸೆರೆವನೆಗೆ । ಮಿಕ್ಕವರು
ಹೇಗಿದ್ದರೇನು? ಸರ್ವಜ್ಞ ॥ ೧೮ ॥
ಹೆತ್ತಯ್ಯನರ್ಜುನನು । ಮುತ್ತಯ್ಯದೇವೇಂದ್ರ
ಮತ್ತೆಮಾತುಳನುಶ್ರೀಹರಿಯು । ಅಭಿಮನ್ಯು
ಗೆತ್ತಣವಿಧಿಯು? ಸರ್ವಜ್ಞ ॥ ೧೯ ॥
ಮಂದರಧರನಿಗಾ । ನಂದವಾಗಿಹಪಾಂಡು
ನಂದನರುತಿರಿದುಂಡರಂದು । ವಿಧಿಮಾಡಿ
ದಂದವನುನೋಡು ಸರ್ವಜ್ಞ ॥ ೨೦ ॥
ಆಡಿದಾನಳಕೆಟ್ಟ । ಆಡಿಧರ್ಮಜಕೆಟ್ಟ
ಕೂಡಿನಾಲ್ವರೊಳಾಡಿತಿರಿದರು । ನೆತ್ತಗಳ
ನಾಡಿದರುಕೆಡರೆ? ಸರ್ವಜ್ಞ ॥ ೨೧ ॥
ಆಡುತಿಹಮಕ್ಕಳಿಗೆ । ಊಡುವಾತಾಯಂತೆ
ಮಾಡಿದಕರ್ಮಬಳಿವಿಡಿದು । ಹಿಡಿತಂದು
ಊಡುತ್ತಲಿಹುದು ಸರ್ವಜ್ಞ ॥ ೨೨ ॥

ಬಂದದ್ದು ನೆರೆಹಾಸಿ । ಬಾರದ್ದು ನೆರೆಹೊದ್ದು
ಬಂದುದರೊಳಗೆಅಡಿಯಿಡಲು । ಪ್ರಾರಬ್ಧ
ವೆಂದಿಗೂ ಯಿಲ್ಲ ಸರ್ವಜ್ಞ ॥ ೨೩ ॥
ಕಂಡದ್ದುಅಡಿಯಾಗಿ । ಕಾಣದ್ದುಮೇಲಾಗಿ
ಕಂಡದ್ದರಿಂದನಡೆವಾತ । ಮೃತ್ಯುವಿನ
ಗಂಡನೆಂದರಿಯೊ! ಸರ್ವಜ್ಞ ॥ ೨೪ ॥
ನಡೆಯುವುದನೇಹಾಸಿ । ನಡೆಯದುದನೇಹೊದ್ದು
ನಡೆಯುವುದರೊಳಗೆಅಡಿಯಿಡಲು । ಆಕಾರ್ಯ
ತಡೆಯದೇಬರ್ಕು ಸರ್ವಜ್ಞ ॥ ೨೫ ॥
ಅಡಿಯೊಡೆದನಂಗಜನು । ಹಿಡಿವಡೆದಹನುಮಂತ
ಪೊಡವಿಗೀಶ್ವರನುತಿರಿದುಂಡ । ಲೋಕವು
ನಡೆದಪಾಡೇನು? ಸರ್ವಜ್ಞ ॥ ೨೬ ॥
ಮಣ್ಣಿಂದಹೆಣ್ಣಿಂದ । ಅಣ್ಣಗಳುಕೆಟ್ಟರು
ಹೆಣ್ಣಿಂದಕೆಟ್ಟದಶಕಂಠ । ಪಾಂಡವರು
ಮಣ್ಣಿಂದಕೆಡರೆ? ಸರ್ವಜ್ಞ ॥ ೨೭ ॥
ಬಲವಂತರಾದರೂ । ಕಲಹದಲಿಕೆಡುವರು
ಚಲವುಳ್ಳದುರ್ಯೋಧನಾದಿ । ಕೌರವರು
ಕಲಹದಿಂಕೆಡರೆ ? ಸರ್ವಜ್ಞ ॥ ೨೮ ॥
ಭಂಗವಿಲ್ಲದೊಡೊಂದು । ತಿಂಗಳೇಬಾಳುವರು
ಅಂಗಜನುಸತ್ತಕಪಿಯಿಂದ । ಲಂಕೆಯು
ಭಂಗಪಟ್ಟಂತೆ ಸರ್ವಜ್ಞ ॥ ೨೯ ॥

* * * * ॥ ೩೦–೩೬ ॥

೧೮. ಜೈನಪದ್ಧತಿ.

ಕೊಲುವಧರ್ಮವನೊಯ್ದು । ಒಲೆಯೊಳಗೆಇಕ್ಕುವರು
ಕೊಲಲಾಗದೆಂಬಜೈನರ । ಮತವೆನ್ನ
ತಲೆಯಮೇಲಿರಲಿ ಸರ್ವಜ್ಞ ॥ ೧ ॥

ಉಪ್ಪುಸಪ್ಪನೆಯಕ್ಕು । ಕರ್ಪುರವುಕರಿದಕ್ಕು
ಸರ್ಪಂಗೆಬಾಲವೆರಡಕ್ಕು । ಶ್ರವಣರು
ತಪ್ಪಾಡಿದಂದು ಸರ್ವಜ್ಞ । ೧ ॥
ಸೃಷ್ಟಿಗೆಜಿನನಪಟ್ಟ । ಕಟ್ಟಿದರೇತಕ್ಕೊ? ರಡೇತ
ಕೆಟ್ಟರೇಕೆಡುಗುಜಗವೆಲ್ಲ । ತಲೆಹೋದ
ಅಟ್ಟೆಯಂತಕ್ಕು ಸರ್ವಜ್ಞ ॥ ೨ ॥
ಹೆರೆಹೋದಲುರಗನಾ । ಗರಳತಾತಪ್ಪುವುದೆ?
ಪರತತ್ವಬೋಧೆಯರಿಯದ । ಗುರುಗಳು
ಸಿರಿಯತೊರೆದೇನು? ಸರ್ವಜ್ಞ ॥ ೪ ॥
ಆಚಾರವಹುದೆಂದು । ಲೋಚಗಿಂಡಿಯಪಿಡಿದು
ಭೂಚರದಿಸತ್ತನವಿಲುಗರಿ । ಗುರುಗಳಿಗೆ
ನೀಚವೆನಿಸುವುದು ಸರ್ವಜ್ಞ ॥ ೫ ॥
ಮುತ್ತುಮೂಗುತಿಗೇಕೆ? । ತೊತ್ತೇಕೆಗುರುಗಳಿಗೆ?
ಬತ್ತಿದಾಕೆರೆಗೆತೂಬೇಕೆ? ಶ್ರವಣರಿಗೆ
ಮಿಥ್ಯೆತಾನೇಕೆ? ಸರ್ವಜ್ಞ ॥ ೬ ॥
ಬಟ್ಟೆತಾವಾಗಿಯೇ । ಬಟ್ಟನಿಟ್ಟೊಪ್ಪುವರು
ನೆಟ್ಟನೇಸ್ವರ್ಗಪಡೆಯುವರೆ । ಸಾಣೆಕಲ್
ಕೆಟ್ಟಕೇಡೇನು? ಸರ್ವಜ್ಞ ॥ ೭ ॥
ಕೊಲ್ಲದಿಪ್ಪುದೆಧರ್ಮ । ಬಲ್ಲರಿಗೆಸನ್ಮಂತ್ರ
ಅಲ್ಲದೇಮಿರಿಕೊಲುವವನು । ನರಕದೊಳು
ನಿಲ್ಲದೇಮಾಣ ಸರ್ವಜ್ಞ ॥ ೮ ॥
ಹೇನುಕೂರೆಗಳನ್ನು । ನೀನಾಗಿಕೊಲಬೇಡ
ಸ್ಥಾನಪಲ್ಲಟವಮಾಡಿದರೆ । ಆಮೇಲೆ
ಏನಾದರೇನು? ಸರ್ವಜ್ಞ ॥ ೯ ॥
ಆವಾವಜೀವವನು । ನೋವನರಿಯದೆಕೊಂದು
ಸಾವಾಗಶಿವನನೆನಸಿದರೆ । ಶಿವಬಂದು
ಕಾವನೇನಯ್ಯ? ಸರ್ವಜ್ಞ ॥ ೧೦ ॥

ಎಂತುಪ್ರಾಣಿಯಕೊಲ್ಲ । ದಂತುಟೀಜಿನಧರ್ಮ
ಜಂತುಬಸುರಲ್ಲಿಸತ್ತರೆ । ಆಜೀವಿ
ಯೆಂತಾದಶ್ರವಣ ಸರ್ವಜ್ಞ ॥ ೧೧ ॥
ಆದಿಯಲಿಜಿನನಿಲ್ಲ । ವೇದದಲಿಹುಸಿಯಿಲ್ಲ
ಆದಹೊನ್ನುಗಳುತನಗಿಲ್ಲ । ಸ್ವರ್ಗದಲಿ
ಮಾದಿಗರೆಇಲ್ಲ ಸರ್ವಜ್ಞ ॥ ೧೨ ॥
ಮೊಸರುಯಿಲ್ಲದವೂಟ । ಪಸುರುಇಲ್ಲದತೋಟ
ಹಸನಿಲ್ಲದವಳಒಡಗೂಟ । ಶ್ರವಣನಬಾಯಿ
ಕಿಸುಕೂಳಿನಂತೆ ಸರ್ವಜ್ಞ ॥ ೧೩ ॥

+ ೬೬೯
೬೮೨

೧೯. ದೇಶಪದ್ಧತಿ.

ಅಗ್ಗಸುಗ್ಗಿಗಳುಂಟು । ದೊಗ್ಗಮಜ್ಜಿಗೆಯುಂಟು
ಹೆಗ್ಗುಳದಕಾಯಿಬಹಳುಂಟು । ಮೂಡನಾ
ಡೆಗ್ಗೆನ್ನಬಹುದೆ? ಸರ್ವಜ್ಞ ॥ ೧ ॥
ಬಟ್ಟೆಬಟ್ಟೆಯೊಳೆಲ್ಲ । ಹೊಟ್ಟೆಜಾಲಿಯಮುಳ್ಳು
ಹುಟ್ಟಿದವರೆಲ್ಲಬಿಳಿಹಲ್ಲು । ಮೂಡಣ
ಬಟ್ಟೆಯೇಬೇಡ ಸರ್ವಜ್ಞ ॥ ೨ ॥
ಎಲ್ಲೆಲ್ಲಿನೋಡಿದರು । ।ಟೊಳ್ಳುಜಾಲಿಯಮುಳ್ಳು
ಉಳ್ಳವರೆಲ್ಲಕಿಸುವಾಯಿ । ಬಡಗಲಾ
ತಳ್ಳಿಬೇಡೆಂದ ಸರ್ವಜ್ಞ ॥ ೩ ॥
ಜೋಳದಾಬೋನಕ್ಕೆ । ಬೇಳೆಯತೊಗೆಯಾಗಿ
ಕಾಳೆಮ್ಮೆಕರೆವಹಯನಾಗೆ । ಬಡಗಲಿನ
ಮೇಳನೋಡೆಂದ ಸರ್ವಜ್ಞ ॥ ೪ ॥
ನವಣೆಯಾಬೋನಕ್ಕೆ । ಹವಣುಳ್ಳತೊಗೆಯಾಗಿ
ಕವಣೆಗಲ್ಲಷ್ಟುಬೆಣ್ಣೆ । ಯಿದ್ದೂಟ
ಹವಣನೋಡೆಂದ ಸರ್ವಜ್ಞ ॥ ೫ ॥

ಕಣುಕಟಾಕಡುಬಾಗಿ । ಮಣಕೆನ್ಮ್ರಹಯನಾಗಿ
ಕುಣಿಕುಣಿದುಕಡೆವಸತಿಯಾಗೆ। ಬಡಗಲಾ
ಅಣಕನೋಡೆಂದ ಸರ್ವಜ್ಞ ॥ ೬ ॥
ಊರುಸನಿಹದೊಳಿಲ್ಲ । ನೀರೊಂದುಗಾವುದವು
ಸೇರಲೆಂದರೆನೆಳಲಿಲ್ಲ । ಬಡಗಲಾ
ದಾರಿಬೇಡೆಂದ ಸರ್ವಜ್ಞ ॥ ೭ ॥
ಕಡಲೆಯನುಗೋಧಿಯನು । ಮಡಿಕಬ್ಬುಬೆಳೆಯುವರು
ಸುಡಬೇಕುನಾಡನೆಂದವನ । ಬಾಯೊಳಗೆ
ಮಡಿಕಬ್ಬುಬೀಳ್ಗೆ ಸರ್ವಜ್ಞ ॥ ೮ ॥
ಕಾಡೆಲ್ಲ ಕಸುಗಾಯಿ । ನಾಡೆಲ್ಲ ಹೆಗ್ಗಾಡು
ಆಡಿದಮಾತು ನಿಜವಿಲ್ಲ । ಮಲೆನಾಡ
ಕಾಡಿಗಿಕ್ಕೆಂದ ಸರ್ವಜ್ಞ ॥ ೯ ॥
ಅಲ್ಲವರಿಸಿನವುಂಟು । ಬೆಲ್ಲವೇಲಕಿಯುಂಟು
ಒಳ್ಳೆಯಾಹಲಸುಮೆಲಲುಂಟು । ಮಲೆನಾಡ
ನಲ್ಲವೆನಬಹುದೆ? ಸರ್ವಜ್ಞ ॥ ೧೦ ॥
ಕಿಚ್ಚುಂಟು ಕೆಸರುಂಟು । ಬೆಚ್ಚನೆಯ ಮನೆಯುಂಟು
ಇಚ್ಚೆಗೆ ಬರ್ಪ ಸತಿಯುಂಟು । ಮಲೆನಾಡೆ
ಮೆಚ್ಚುನೋಡೆಂದ ಸರ್ವಜ್ಞ ॥ ೧೧ ॥
ಅಂಡೆಯಲಿ ಕರೆಯುವರು । ಕುಂಡದಲಿ ಹೊರುತಿಹರು
ಗಂಡನುಳ್ಳವಳ ಅವಳೆಂಬ । ತಿಗುಳರನು
ಕೆಂಡಕಿಕ್ಕೆಂದ ಸರ್ವಜ್ಞ ॥ ೧೨ ॥
ಅಸುರಸ್ತ್ರೀ ಕಪಿಗೆಮಾ । ನುಷರಾಗಿಹುಟ್ಟಿದರು
ದಶಶಿರನೊಯ್ದು ಹೆಸರಿಟ್ಟ । ತೆಲುಗರಾ
ಹೆಸರೆಲ್ಲರರಿಯೆ ಸರ್ವಜ್ಞ ॥ ೧೩ ॥
ಕಾಲಕೂಟದ ವಿಷವು । ಚೇಳುತುಂಬಿದ ಹಗೆಯು
ಹಾಳೂರ ತುರುಚಿ ನಸುಗುನ್ನಿ । ತಿಗುಳರಾ
ಗಾಳಿಬೇಡೆಂದ ಸರ್ವಜ್ಞ ॥ ೧೪ ॥

ಶಂಖಹುಟ್ಟಿದನಾದ । ಬಿಂಕವನದೇನೆಂಬೆ
ಶಂಕರನ ಪೂಜೆ ಮನೆಮನೆಗೆ । ಮಿಗಿಲಾಸೆ
ತೆಂಕಲುಂಟೆಂದ ಸರ್ವಜ್ಞ ॥ ೧೫ ॥
ರಾಗವೇ ಮೂಡಲೂ । ಯೋಗವೇ ಬಡಗಲೂ
ರೋಗವೇ ಶುದ್ಧ ಪಡುವಲು । ತೆಂಕಲು
ಭೋಗದಬೀಡು ಸರ್ವಜ್ಞ ॥ ೧೬ ॥
ಅಟ್ಟುಂಬ ಮೂಡಲು । ಸುಟ್ಟುಂಬ ಬಡಗಲು
ಚಿಟ್ಟೆಯಲ್ಲುಂಬ ಪಡುವಲು । ತೆಂಕಲು
ಮುಷ್ಟಿಲುಂಬುವುದು ಸರ್ವಜ್ಞ ॥ ೧೭ ॥
ಅರೆದಲೆಯು ಮೂಡಲು । ನೆರೆದಲೆಯು ಬಡಗಲು
ಸರಿದಲೆಯು ಉದ್ದಪಡುವಲು । ತೆಂಕಲು
ಬರಿದಲೆಯವರು ಸರ್ವಜ್ಞ ॥ ೧೮ ॥
ಉಡಹೀನಮೂಡಲು । ನುಡಿಹೀನ ಬಡಗಲು
ಕಡುಕೋಪದವರು ಪಡುವಲು । ತೆಂಕಲು
ನುಡಿನಯದವರು ಸರ್ವಜ್ಞ ॥ ೧೯ ॥
ಶೀತವಾತಗಳುಂಟು । ಬಾತಿಹುದು ಕುಕ್ಷಿಯು
ಪಾತಕರು ಮರೆದು ತಿರಿದುಂಬ । ನಾಡಿಗೆ
ಏತಕ್ಕೆ ಬಹರೊ ? ಸರ್ವಜ್ಞ ॥ ೨೦ ॥
ಅಲ್ಲಬೆಲ್ಲವನೊಲ್ಲೆ । ನೆಲ್ಲಿನೋಗರವೊಲ್ಲೆ
ಯೆಲ್ಲವನೊಲ್ಲೆವೊಸರೊಲ್ಲೆ । ಏಕೊಲ್ಲೆ
ಇಲ್ಲದೆಯೆ ವೊಲ್ಲೆ ಸರ್ವಜ್ಞ ॥ ೨೧ ॥

* * * * ॥ ೨೨–೪೧ ॥

೨೦. ಮೂರ್ಖಪದ್ಧತಿ.

ಮೂರ್ಖರಿಗೆ ಬುದ್ಧಿಯನು । ನೂರ್ಕಾಲ ಹೇಳಿದರೆ
ಗೋರ್ಕಲ್ಲಮೇಲೆ ಮಳೆಗರೆಯೆ । ಆಕಲ್ಲು
ನೀರ್ಕೊಂಬುದೇನು? ಸರ್ವಜ್ಞ ॥ ೧ ॥

ಒಂದನೆರಡೆಂಬತಾ। ಹಂದಿಯುಸು ಮೊಲನೆಂಬ
ಗಂಧಪರಿಮಳವಕೊರಡೆಂಬ। ಮೂರ್ಖತಾ
ನೆಂದುದನೆನ್ನಿ ಸರ್ವಜ್ಞ ॥ ೨ ॥
ಒಲೆಗುಂಡನೊಬ್ಬನೇ। ಮೆಲಬಹುದೆ ಎಂದರೇ
ಮೆಲಬಹುದೆಂಬ ನವಜಾಣ। ಮೂರ್ಖನ
ಗೆಲಲಾಗದೈಯು ಸರ್ವಜ್ಞ ॥ ೩ ॥
ಆರುಬೆಟ್ಟವನೊಬ್ಬ। ಹಾರ್‍ಯಾನೆ ಎಂದರೇ
ಧೀರನೀನಹುದುಯೆನಬೇಕು। ಮೂರ್ಖರೊಳು
ಹೋರಾಟಸಲ್ಲ। ಸರ್ವಜ್ಞ ॥ ೪ ॥
ಹೊಳೆಯ ನೀರೊಬ್ಬನೇ। ಅಳೆಯುಬಹುದೆಂದರೇ
ಅಳೆಯುಬಹುದೆಂದು ಎನಬೇಕು। ಮೂರ್ಖನ
ತಿಳಿಸಲಳವಲ್ಲ ಸರ್ವಜ್ಞ ॥ ೫ ॥
ಅಳೆಹೊಲ್ಲಹಾಡಿಗೇ। ಮಳೆಹೊಲ್ಲಕೋಡಗಕೆ
ಕಳವಳವು ಕೋಪರೊಳು ಹೊಲ್ಲ। ಮೂರ್ಖರಾ
ಕೆಳೆತನವುಹೊಲ್ಲ ಸರ್ವಜ್ಞ ॥ ೬ ॥
ಸಾಲವನುಕೊಂಬಾಗ। ಹಾಲೋಗರುಂಡಂತೆ
ಸಾಲಿಗನು ಬಂದು ಎಳೆವಾಗ। ಕಿಬ್ಬದಿಯ
ಕೀಲುಮುರಿದಂತೆ ಸರ್ವಜ್ಞ ॥ ೭ ॥
ಇತ್ತುದೀಯದವನ। ಮೃತ್ಯುವೊಲ್ಲದೆ ಬಿಡದು
ಹತ್ತಿರ್ದ ಲಕ್ಷ್ಮಿತೊಲಗುವಳು। ಇತ್ತವನ
ತೊತ್ತಿನಮಗನು ಸರ್ವಜ್ಞ ॥ ೮ ॥
ಬೆಂಡುತಾ ಮುಳುಗಿದರು। ಗುಂಡೆದ್ದು ತೇಲಿದರು
ಬಂಡಿಯಾನೊಗವು ಚಿಗುತರೂ। ಸಾಲಿಗನು
ಕೊಂಡದ್ದು ಕೊಡನು ಸರ್ವಜ್ಞ ॥ ೯ ॥
ಕಡಗೊಂಡನಲ್ಲದೇ। ಹಿಡಿಗಳವಕದ್ದಾನೆ?
ತೊಡಕಿದರೆ ಬೈದು ನುಡಿದಾನು। ಸಾಲಿಗನ
ಬಿಡಿಸುವವರಿಲ್ಲ ಸರ್ವಜ್ಞ ॥ ೧೦ ॥

ನಂಬಿಕೆಯುವುಳ್ಳನಕ । ಕೊಂಬುವುದು ಸಾಲವನು
ನಂಬಿಕೆಯು ಕೆಟ್ಟಬಳಿಕ । ಬೆಂದಾವೆ
ಕುಂಭದಂತಿಹನು ಸರ್ವಜ್ಞ ॥ ೧೧ ॥

ಉದ್ಧರಿಯ ಕೊಟ್ಟಣ್ಣ । ಹದ್ದಾದಕಾಗ್ಯಾದ
ಎದ್ದೆದ್ದುಬಗುಳ್ವ ನಾಯಾದ । ಮೈಲಾರ
ಗೊಗ್ಗಯ್ಯನಾದ ಸರ್ವಜ್ಞ ॥ ೧೨ ॥

ಅಟ್ಟುಂಬಕಾಲಕ್ಕೆ । ಕೊಟ್ಟುಂಬುದೊಬ್ಬರಿಗೆ
ಅಟ್ಟುಂಬುದರಿಯದಧಮರಿಗೆ । ಫಲಪ್ರಾಪ್ತಿ
ಮುಟ್ಟದೇ ಬಕ್ಕು ಸರ್ವಜ್ಞ ॥ ೧೩ ॥

ಇಲ್ಲವೆಂದರೆ ಆತ । ಬಲ್ಲತಾವಿಗೆ ಹೋಹ
ಇಲ್ಲೆನ್ನಲೊಲ್ಲ ಕೊಡಲೊಲ್ಲ । ದಾ ಪಾಪಿ
ಕೊಲ್ಲದೇ ಕೊಂದ ಸರ್ವಜ್ಞ ॥ ೧೪ ॥

ಆಡದೇ ಮಾಡುವನು । ರೂಢಿಯೊಳಗುತ್ತಮನು
ಆಡಿಮಾಡುವವ ಮಧ್ಯಮನು । ಅಧಮತಾ
ನಾಡಿಮಾಡದವ ಸರ್ವಜ್ಞ ॥ ೧೫ ॥

ಬೇಡದೆಯೆಕೊಡುವಾತ । ರೂಢಿಯೊಳಗುತ್ತಮನು
ಬೇಡಿದರೆಕೊಡುವಮಧ್ಯಮನು । ಅಧಮತಾ
ಬೇಡಿದರೆಕೊಡನು ಸರ್ವಜ್ಞ ॥ ೧೬ ॥

ಇಚ್ಛೆಯರಿದಿತ್ತರೆ । ನುಚ್ಚಂಬಲಿಮಾಣಿಕವು
ಇಚ್ಛೆತೀರಿದಬಳಿಕಇತ್ತರಾ । ಮಾಣಿಕವು
ನುಚ್ಚಿಗಿಂ ಕಡೆಯು ಸರ್ವಜ್ಞ ॥ ೧೭ ॥

ಆಸೆಯರಿದಿತ್ತರೆ । ವೀಸವೆ ಸವಾಲಕ್ಷ
ಆಸೆತೀರಿದಬಳಿಕಇತ್ತರೆ । ಸವಲಕ್ಷ
ವೀಸಕಿಂಕಡೆಯು ಸರ್ವಜ್ಞ ॥ ೧೮ ॥

ಇಲ್ಲದಕಾಲಕ್ಕೆ । ಹೊಲ್ಲೆಹವುಜನರಿಗೆ
ಅಲ್ಲದಗುಣದಅರಸನ । ಸಾಲಕ್ಕೆ
ಕಲ್ಲಾಗಬೇಕು ಸರ್ವಜ್ಞ ॥ ೧೯ ॥

ಬೇರವನುಕೊಟ್ಟಣ್ಣ । ಹೋರ್‍ಯಾನುಚೀರ್‍ಯಾನು
ವಿಾರಿದರೆಕಲ್ಲಹೊರಿಸಾನು । ಸುಮ್ಮನೆ
ಗೀರಿಕೊಂಡಾನೆ? ಸರ್ವಜ್ಞ ॥ ೨೦ ॥
ಅಕ್ಕಸಾಲೆಯ ನೂರಿ । ಗೊಕ್ಕಲೆಂದೆನಬೇಡ
ಬೆಕ್ಕುಬಂದಿಲಿಯ ಹಿಡಿದಂತೆ । ಊರಿಗೆ
ರಕ್ಕಸನಹನು ಸರ್ವಜ್ಞ ॥ ೨೧ ॥
ಹಣವಿಂಗೆ ವೀಸವಿ । ಪ್ರಣಕೊಂದು ಬೇಳೆಯನು
ತ್ರಿಣಯನನು ಎದುರಾಗಿ ಇರಲು । ಅಗಸಾಲೆ
ಟೊಣೆಯದೆ ಬಿಡನು ಸರ್ವಜ್ಞ ॥ ೨೨ ॥
ಕಡೆಕಾಸಿ ವಿಾಂಚಿಕ್ಕಿ । ಕಡಿಮಾಡಿಕತ್ತರಿಸಿ
ಪೊಡೆವೆಡೆಯೊಳಗೆ ಸಿಡಿಸುವ । ಅಪ್ಪಳಿಸಿ
ಬಡಿವ ಪ್ರತಿವೆರಸಿ ಸರ್ವಜ್ಞ ॥ ೨೩ ॥
ನೆವದೊಳೆವೆಯಾಡಿಸುತ । ಅವಸರವನಡಿಸುತ್ತ
ಕವಿದಿರಲು ಕಡಿದು ಪ್ರತಿವೆರಸಿ । ಚಿನ್ನವನು
ಸವೆಸದೇಬಿಡನು ಸರ್ವಜ್ಞ ॥ ೨೪ ॥
ವಂಚಕರವನಿತೆಯರ । ಪಿಂಛಕರಹೊಗಿಸುತ್ತ
ಅಂಚಿತವನೊದರಿಕಳುಹಿದರೆ । ಅಕ್ಕಸಾಲೆ
ವಂಚಿಸಲರಿಯ ಸರ್ವಜ್ಞ ॥ ೨೫ ॥
ರಸವಂಗಡಿಯೊಳುಂಟು । ಕಿಸ(?)ವುಂಟುಸಾಲೆಯಲಿ
ವಸವಟ್ಟನೆಂಬಗಿಡವುಂಟು ।ವಾದಿಗಳು
ಹಸಿದೇತಕಿಹರು ? ಸರ್ವಜ್ಞ ॥ ೨೬ ॥
ಶಶಕನಾಕಿವಿಯಂತೆ । ಯೆಸಗಿಪ್ಪದಾಪತ್ರ
ಋಷಿಯರಾಕುಂಭದಂತಿರ್ಪ । ದೊಡಗೂಡೆ
ಹುಸಿಯಲ್ಲಕನಕ ಸರ್ವಜ್ಞ ॥ ೨೭ ॥
ಇಂಗಳದ ತೈಲವನು । ಹಿಂಗದಲೆತೆಗೆದರೆ
ಸಂಗಾತಿಗುಂಟುಸತಿಗುಂಟು । ಮಿಕ್ಕದ್ದು
ಭಂಗಾರಕುಂಟು ಸರ್ವಜ್ಞ ॥ ೨೮ ॥

ತಾಳಕದಸತ್ವವನು । ಮೇಳೈಸು ರಸದೊಡನೆ
ಬಾಳುವಾಶುಲ್ಬವೊಡಗೂಡು । ತಾರೆತಾ
ಪೇಳಿದಂತಹುದು ಸರ್ವಜ್ಞ ॥ ೨೯ ॥
ಗಂಧಕದತೈಲವನು । ಕುಂದದೇರಸಕಿತ್ತು
ಕಂದಿಸಿದತಾರೆಯೊಳುಕೂಡೆ । ಹೇಮತಾ
ಮುಂದೆಬಂದಕ್ಕು ಸರ್ವಜ್ಞ ॥ ೩೦ ॥
ತುತ್ತುನಾಗವುನಾಗ । ಮತ್ತೆನಾಗವುನಾಗ
ಉತ್ತಮದನಾಗದೊಡಗೂಡೆ । ಅದುಮುಂದೆ
ಸತ್ಯವುಹೇಮ ಸರ್ವಜ್ಞ ॥ ೩೧ ॥
ಹೆಮ್ಮುಟಲಿಹೇರಿಕ್ಕೆ । ಉಮ್ಮಗೇರಸದಾಳಿ
ಒಮ್ಮನಳಿಯಃದಲುದಕವು । ಕಾಯದಲಿ
ಕೆಮ್ಮೆಲ್ಲಕೆಡುಗು ಸರ್ವಜ್ಞ ॥ ೩೨ ॥
ಉತ್ತರಣೆಉಪ್ಪಲಿಕೆ । ಮತ್ತೆಶಿಂಶುಮಾರಿ
ಕತ್ತೆಯಮೂತ್ರವೆರಸಿದರೆ । ರಸಭಸ್ಮ
ಉತ್ತಮವಕ್ಕು ಸರ್ವಜ್ಞ ॥ ೩೩ ॥
ಹುಸಿವುವಕ್ಕಿಂತನೂ । ಪಶುವಕೊಲ್ವುದುಲೇಸು
ಶಿಶುಹತ್ಯಮಾಡಿದೊಡೆಲೇಸು । ಮರೆಯಲ್ಲಿ
ದೇಶಾಂತ್ರಲೇಸು ಸರ್ವಜ್ಞ ॥ ೩೪ ॥
ನೋಡೆ ಈ ಧರೆಯಲ್ಲಿ । ಬೇಡುವುದುಕಡುಕಷ್ಟ ।
ಬೇಡಿದಡೆಈಯದವಕಷ್ಟ । ಮಾಡುವರ
ಬೇಡೆನಲುಕಷ್ಟ ಸರ್ವಜ್ಞ ॥ ೩೫ ॥
ಕೊಟ್ಟದ್ದುತನಗಿಲ್ಲ । ಮುಟ್ಟಿದರೆವುಳಿವಿಲ್ಲ .
ಕೆಟ್ಟವಿಷಯದೊಳುಸಿಲ್ಕಿದರೆ । ಆನರಗೆ
ಕೆಟ್ಟೇತುತಪವು ಸರ್ವಜ್ಞ ॥ ೩೬ ॥
ಕಂಡುಕೊಟ್ಟುದುಇಲ್ಲ । ದಂಡನೆಯುತನಗಿಲ್ಲ
ಖಂಡಿತದಪುಣ್ಯಮೊದಲಿಲ್ಲ । ಸ್ವರ್ಗವನು
ರಂಡೆಯಾಳುವಳೆ ? ಸರ್ವಜ್ಞ ॥ ೩೭ ॥

ಹಲ್ಲುಯೆಲುಬೆಂಬುದನು । ಎಲ್ಲರೂಬಲ್ಲರು
ಅಲ್ಲಲ್ಲಿಅಗಿತಿಂದಬಳಿಕ । ನೋಡುವರೆ
ಎಲ್ಲಿಯಶೀಲ? ಸರ್ವಜ್ಞ ॥ ೩೮ ॥
ತುಂಬೆಯಾಸೊಪ್ಪಿಗೆ । ಇಂಗೇಕೆಮೆಣಸೇಕೆ?
ಶೃಂಗಾರವೇಕೆ? ಬಡವಂಗೆ । ಸೂಳೆಗೆ
ನಂಬುಗೆಯೇಕೆ? ಸರ್ವಜ್ಞ ॥ ೩೯ ॥

* * * * ॥ ೪೦ ॥

+222
262

೨೧. ಜ್ಯೋತಿಷ್ಯಪದ್ಧತಿ.

ರಂಧ್ರಗತಿಯಾದಿತ್ಯ। ರೊಂದಾಗಿಯರ್ಧಿಸುತ
ಅಂದಿನತಿಥಿಯನೊಡಗೂಡೆ । ನಕ್ಷತ್ರ
ಮುಂದೆಬಂದಹುದು ಸರ್ವಜ್ಞ ॥ ೧ ॥
ಗತವಾದಮಾಸವನು । ಗತಿಯಿಂದದ್ವಿಗುಣಿಸುತ
ಪ್ರತಿಪದದತಿಥಿಯನೊಡಗೂಡೆ । ಕರಣತಾ
ನತಿಶಯದಿಬರ್ಕು ಸರ್ವಜ್ಞ ॥ ೨ ॥
ಸಂದಿರ್ದಮಾಸವನು । ಕುಂದದಿಮ್ಮಡಿಮಾಡಿ
ಅಂದಿನತಿಥಿಯನೊಡಗೂಡೆ । ತಾರೆತಾ
ಮುಂದೆ ಬಂದಪುದು ಸರ್ವಜ್ಞ ॥ ೩ ॥
ಪಂಚತಾರೆಯು ಮುನಿಯ । ಲಾಂಛನವು ಸೋತರೆ
ಕಂಚಿಯಿಂದತ್ತ ಮಳೆಯಿಲ್ಲ । ಬತ್ತವನು
ಸಂಚಿಸುವುದೊಳಿತು ಸರ್ವಜ್ಞ ॥ ೪ ॥
ತಾರೆಸಪ್ತಮಿಯದಿನ । ತಾರೆಸಮರಾಜಂಗೆ
ಹೋರದಲೆ ಹೋರದಲ್ಲಿರಲು (?) ಜಗಕೆಹೆ
ಮ್ಮಾರಿಕಾಣಯ್ಯ ಸರ್ವಜ್ಞ ॥ ೫ ॥
ಹಗೆಯಹುಣ್ಣಿಮೆಹೋದ । ಮಿಗೆಮೂರುದಿವಸಕ್ಕೆ
ಮೃಗಧರನಕೂಡೆಮಘೆಯಿರಲು । ಮಳೆಗಾಲ
ಜಗವದಣಿಸುವುದು ಸರ್ವಜ್ಞ ॥ ೬ ॥

ಆದಿಯಾವಾಸವನು । ವೇದದಿಂದಲಿಗುಣಿಸಿ
ಆದಿನದತಿಥಿಯನೊಡಗೂಡೆ । ಯೋಗವು
ಆದಿಯಲಿಬಕ್ಕು ಸರ್ವಜ್ಞ ॥ ೭ ॥
ನಂದೆಯನುಭದ್ರೆಯನು । ಪೊಂದಾಗಿಯರ್ಥಿಸುತ
ಅಂದಿನತಿಥಿಗೆಸರಿಯಾಗೆ । ಗ್ರಹಣತಾ
ಮುಂದೆಬಂದಪುದು ಸರ್ವಜ್ಞ ॥ ೮ ॥
ಅಡಿಯನಿಮ್ಮಡಿಮಾಡಿ । ಒಡಗೂಡಿಹನ್ನೊಂದ
ತಡೆಯದಿನ್ನೂರಹತ್ತರಲಿ । ಭಾಗಿಸಲು
ಪಡೆದದ್ದೆ ಗಳಿಗೆ ಸರ್ವಜ್ಞ ॥ ೯ ॥
ಚಂದ್ರಮಾರ್ತಾಂಡರು । ಸಂಧಿಸಲುಪರಿವೇಷ
ಕುಂದದೇನಿಚ್ಚ ಬರುತಿರಲು । ಜಗವೆಲ್ಲ
ಕಂದಿದಂತಿಹುದು ಸರ್ವಜ್ಞ ॥ ೧೦ ॥
ಹೊತ್ತಾರೆನೆರೆಯುವುದು । ಹೊತ್ತೇರೆಪರಿಯುವುದು
ಕತ್ತಲೆಯಲಳಿವಮುಗಿಲಾಗೆ । ಮಳೆಗಾಲ
ಪೆತ್ತಣದಯ್ಯ? ಸರ್ವಜ್ಞ ॥ ೧೧ ॥
ವಾಯುವಾಯುವಕೂಡೆ । ವಾಯುಹೆಮ್ಮಳೆಯಕ್ಕು
ವಾಯುನೈರುತ್ಯನೊಡಗೂಡೆ । ಮಳೆತಾನು
ವಾಯುವೇಅಕ್ಕು ಸರ್ವಜ್ಞ ॥ ೧೨ ॥
ಅಳಿವಣ್ಣದಾಕಾಶ । ಗಿಳಿವಣ್ಣದಾಮುಗಿಲು
ಅಳಿದಳಿದುಅರ್ಕನುದಯಿಸಲು । ಮಳೆತಾನು
ಘಳಿಲನೇಬರ್ಕು ಸರ್ವಜ್ಞ ॥ ೧೩ ॥
ಅಡರಿಪೂರ್ವದಮಿಂಚು । ಪಡುವಲಲಿಧನುವೇಳೆ
ಬಡಗಣಾಗಾಳಿನಡೆಯಲು । ಮಳೆತಾನು
ತಡೆಯದೇಬರ್ಕು ಸರ್ವಜ್ಞ ॥ ೧೪ ॥
ಮರೆದೊಮ್ಮೆನಡೆವುತ್ತ । ಸರಕನೇಸೀತರೆ
ಅರಿದರೆಚ್ಚತ್ತುನಿಲ್ಲುವುದು । ನಿಲ್ಲದಿರೆ
ಇರಿಮುಕೊಂಡಂತೆ ಸರ್ವಜ್ಞ ॥ ೧೫ ॥

ಕಟ್ಟಿದರೆಸೀತರೇ । ನೆಟ್ಟನೆಯೆನಿಲಬೇಕು
ಒಟ್ಟೈಸಿವಿಾರಿನಡೆದರೆ । ಗುರಿಯೊಡ್ಡಿ
ತಟ್ಟನೆಸೆದಂತೆ ಸರ್ವಜ್ಞ ॥ ೧೬ ॥

ಏನುಮನ್ನಿಸದಿರಲು । ಸೀನುಮನ್ನಿಸಬೇಕು
ಸೀನುಮನ್ನಿಸದೆಹೋದರೆ । ಆತಂಗೆ
ಮಾನವೇಹಾನಿ ಸರ್ವಜ್ಞ ॥ ೧೭ ॥

ಎಡನುಬಲನೆನಬೇಡ । ಒಡನೆಬಹೆನೆನಬೇಡ
ಕಡುದೂರಸಾರೆನೆನಬೇಡ । ಸೀತರೇ
ಅಡಿಯನಿಡಬೇಡ ಸರ್ವಜ್ಞ ॥ ೧೮ ॥

ತಾನಕ್ಕೆಪರರಕ್ಕೆ । ಶ್ವಾನಗಾರ್ದಭವಕ್ಕೆ
ತಾನುಪಯಣವನುಪೋಪಲ್ಲಿ । ಪಶುವಕ್ಕೆ
ಸೀನೆಭಯವಕ್ಕು ಸರ್ವಜ್ಞ ॥ ೧೯ ॥

ಒಮ್ಮೆಸೀತರೆಹೊಲ್ಲ । ಇಮ್ಮೆಸೀತರೆಲೇಸು
ಕೆಮ್ಮಿಕೇಕರಿಸಿಉಗುಳಿದರೆ । ಆಲೇಸು
ಬ್ರಹ್ಮಂಗವಿಲ್ಲ ಸರ್ವಜ್ಞ ॥ ೨೦ ॥

ಒಕ್ಕಗೆ ಬಲನಾದ । ಡೊಕ್ಕಪ್ಪುಕರಲೇಸು
ಒಕ್ಕನಾಮೇಲೆ ಪೊಕ್ಕಂಗೆ । ನಾಯಿನರ
ನೆಕ್ಕಿದಂತಕ್ಕು ಸರ್ವಜ್ಞ ॥ ೨೧ ॥

ಹಿಡಿಯುವುದುಹೆಬ್ಬಾವು । ಪಡೆಯುವುದುಪಡಿಬತ್ತ
ತುಡುಕಿನೋಡುವುದುಪರಬ್ರಹ್ಮ । ಜೋಯಿಸಗೆ
ಕೊಡುವುದೊಂದಡಕೆ ಸರ್ವಜ್ಞ ॥ ೨೨ ॥

ಹಸಿದರೇಉಣಲಿಲ್ಲ । ಒಸೆದೇಳೆಹೊತ್ತಿಲ್ಲ
ಬಿಸಗೊಂಬುದಕ್ಕೆಕಡೆಯಿಲ್ಲ । ಜೋಯಿಸದ
ಗಸಣಿಯೇಬೇಡ ಸರ್ವಜ್ಞ ॥ ೨೩ ॥

ಕುರಿಯನೇರಲುಗುರುವು । ಧರೆಗೆಹೆಮ್ಮಳೆಯಕ್ಕು
ಪರಿಪರಿಯಧಾನ್ಯಬೆಳೆಯಕ್ಕು । ಪ್ರಜೆಗಳ್ಗೆ
ಕರಿವಹಯನಕ್ಕು ಸರ್ವಜ್ಞ ॥ ೨೪ ॥

ವೃಷಭವೇರಲುಗುರುವು । ವಸುಧೆಯೊಳುಮಳೆಯಕ್ಕು
ಶಿಶುಪಶುಸ್ತ್ರೀಗೆಜಯವಕ್ಕು । ಜನರೆಲ್ಲ
ವಿಷಮನಿಯಂತಕ್ಕು ಸರ್ವಜ್ಞ ॥ ೨೫ ॥
ಮಿಥುನಕ್ಕೆಗುರುಬರಲು । ಮಥನಲೋಕದೊಳಕ್ಕು
ಪೃಥಿವಿಯೊಳಗೆಲ್ಲಕೆಡುಕಕ್ಕು । ನರರುಗಳು
ಹತವಾಗಲಕ್ಕು ಸರ್ವಜ್ಞ ॥ ೨೬ ॥
ಏಡಿಯೇರಲುಗುರುವು । ನೋಡೆಕಡೆಮಳೆಯಕ್ಕು
ನಾಡೊಳಗೆಲ್ಲಬೆಳೆಯಕ್ಕು । ಪ್ರಜೆಗಳು
ಈಡೇರಲಕ್ಕು ಸರ್ವಜ್ಞ ॥ ೨೭ ॥
ಸಿಂಗಕ್ಕೆಗುರುಬರಲು । ಸಂಗರವುಘನವಕ್ಕು
ಅಂಗನಾಬಾಧೆಪಿರಿದಕ್ಕು । ಕಡೆಯುಮಳೆ
ಹಿಂಗಾರುಮಕ್ಕು ಸರ್ವಜ್ಞ ॥ ೨೮ ॥
ಕನ್ನೆಗೇಗುರುಬರಲು । ಚೆನ್ನಾಗಿಮಳೆಯಕ್ಕು
ಹೊನ್ನಾಗಿಪಶುವಹಯನಕ್ಕು । ಮಂಡನದ
ಕನ್ನೆಯರುಮಕ್ಕು ಸರ್ವಜ್ಞ ॥ ೨೯ ॥
ತುಲೆಯನೇರಲು ಗುರುವು । ನೆಲೆಯಾಗಿ ಮಳೆಯಕ್ಕು
ಪಲವು ಧಾನ್ಯಗಳು ಬೆಳೆಯಕ್ಕು । ಪ್ರಜೆಗಳಿಗೆ
ನಿಲೆಕಾಲಮಕ್ಕು ಸರ್ವಜ್ಞ ॥ ೩೦ ॥
ಚೇಳನೇರಲು ಗುರುವು । ಕಾಳಗವು ಹಿರಿದಕ್ಕು
ಗಾಳಿಯಿಂ ಮಳೆಯು ಕಿರಿದಕ್ಕು । ಬೆಳೆಯೆಲ್ಲ
ಕೋಳಾಗಲಕ್ಕು ಸರ್ವಜ್ಞ ॥ ೩೧ ॥
ಬಿಲ್ಲನೇರಲು ಗುರುವು । ತಲ್ಲಣವು ಜಗಕೆಲ್ಲ
ಕಲ್ಲಮೇಲೆಲ್ಲ ಬೆಳೆಯಕ್ಕು । ನೃಪರಿಗೆ
ತಲ್ಲಣವಕ್ಕು ಸರ್ವಜ್ಞ ॥ ೩೨ ॥
ಮಕರಕ್ಕೆ ಗುರುಬರಲು । ಮಕರತೋರಣವಕ್ಕು
ಸಕಲಧಾನ್ಯಗಳು ಬೆಳೆಯಕ್ಕು । ಪ್ರಜೆಗಳು
ಸುಖವಿರಲಕ್ಕು ಸರ್ವಜ್ಞ ॥ ೩೩ ॥

ಕುಂಭಕ್ಕೆ ಗುರುಬರಲು । ತುಂಬುವುವು ಕೆರೆಬಾವಿ
ಅಂಬಾರವೆಲ್ಲ ಬೆಳೆಯಕ್ಕು । ಲೋಕಕ್ಕೆ
ಸಂಭ್ರಮವಕ್ಕು ಸರ್ವಜ್ಞ ॥ ೩೪ ॥
ಮೀನಕ್ಕೆ ಗುರುಬರಲು । ಮಾನಖಂಡುಗವಕ್ಕು
ಕಾನನವೆಲ್ಲ ಬೆಳೆಯಕ್ಕು । ಪ್ರಜೆಗಳಿಗೆ
ಆನಂಧವಕ್ಕು ಸರ್ವಜ್ಞ ॥ ೩೫ ॥
ಮೀನಕ್ಕೆ ಶನಿಬರಲು । ಆನೆಕಾಳಗವುಕ್ಕು
ಹಾನಿತಾನಕ್ಕು ಬರನಕ್ಕು । ಲೋಕಕ್ಕೆ
ಹೀನತೆಯುಬರ್ಕು । ಸರ್ವಜ್ಞ ॥ ೩೬ ॥
ಮೃಗಶಿರಾದಿಯಾದ । ಭಗಣದಲಿರವಿಯಿರಲು
ಮಗೆಯ ಪಕ್ಷದಲಿಶಶಿತೊಲಗೆ । ಮಳೆಗಾಲ
ಜಗದಣಿಯಲಕ್ಕು ಸರ್ವಜ್ಞ ॥ ೩೭ ॥
ತೆಂಕಲಿಗೆ ಮುಗಿಲಿಡಿದು । ಶಂಕರನಡೆಸೆಮಿಂಚೆ
ಪಂಕಜಾರಾತಿಗುಡಿಗಟ್ಟಿ । ಮಳೆಯುತಾ
ಭೋಂಕನೆಬಕ್ಕು ಸರ್ವಜ್ಞ ॥ ೩೮ ॥
ತಳಿಗೆಗೇ ತಲೆಯಿಲ್ಲ । ಮಳೆಗೆ ಜೋಯಿಸರಿಲ್ಲ
ಬೆಳಗಾಗೆ ಕನ್ನಗಳವಿಲ್ಲ । ಲೋಕದೊಳು
ಪುಳಿದಾಳ್ಗಳಿಲ್ಲ ಸರ್ವಜ್ಞ ॥ ೩೯ ॥
ಮುಗ್ಗಿಯನು ಗುಣಿಸುವರೆ । ವರ್ಗದ ಜೋಯಿಸನು
ಎಗ್ಗನು ಮಳೆಯನರಿಯನು । ದೇವರಾ
ಹೆಗ್ಗಡೆಯೆಬಲ್ಲ ಸರ್ವಜ್ಞ ॥ ೪೦ ॥

+ ೨೬೨
೮೦೨

೨೨. ಬ್ರಾಹ್ಮಣ ಪದ್ಧತಿ.

ಸಂಜೆಯಾ ವಂದನೆಯ । ಅಂಜದೇಒಸೆದೊಸೆದು
ಸಂಜೆಯಂಜಿಕೆಯನೊಡಗೂಡೆ । ಸಂಜೆಯು
ನಂಜಿನಂತಕ್ಕು ಸರ್ವಜ್ಞ ॥ ೧ ॥

ಕಾಲವಲಿ ಕಾಲದಲಿ। ಏಳೆಂಟುಮಾಡುವುದು
ಕಾಲತಪ್ಪಿದವೇಳೆನೂರೆಂಟು। ಮಾಡುವುದು
ಕಾಳುಕಾಣಯ್ಯ ಸರ್ವಜ್ಞ ॥ ೨ ॥
ದಾರವಿದ್ದರೆ ಮುತ್ತು। ಹಾರವೆಂದೆನಿಸುವುದು
ಆರೈದುನಡೆವ ದ್ವಿಜರುಗಳ್ಗೆ। ಸಂಸಾರ
ದಾರದಿಂದಧಿಕ ಸರ್ವಜ್ಞ ॥ ೩ ॥
ಬೇಡಂಗೆಕೊಡೆಹೊಲ್ಲ। ಆಡಿಂಗೆ ಮಳೆಹೊಲ್ಲ
ಬೇಡಿಕೊಂಬಂಗೆ ಬರ ಹೊಲ್ಲ। ದ್ವಿಜನಿಗೆ
ನಾಡನುಡಿಹೊಲ್ಲ ಸರ್ವಜ್ಞ ॥ ೪ ॥
ಪಕ್ಷಕೊಂದುಪವಾಸ। ಪುಕ್ಕಟೆಯಶ್ರೀತುಲಸಿ
ರಕ್ಕಸರವೈರಿ ಹರಿನಾಮ। ಯಮನಿಗೆ
ಸಿಕ್ಕಲೇಕೆಂದ ಸರ್ವಜ್ಞ ॥ ೫ ॥
ತೋರಿದಾದ್ವಾದಶಿಯು। ಮಾರಿಮಾಡುವ ಫಲವು
ಸಾರಿದ ಪುರುಷಕಿರಿದೆಂದು। ಪರರನ್ನು
ಸಾರುವವಳಂತೆ ಸರ್ವಜ್ಞ ॥ ೬ ॥
ತೊರೆಯುಬಲ್ಲರ ಧರ್ಮ। ವರದೆಯಾನದಿಯಂತೆ
ತೊರೆಯುದೇ ತೊಯ್ಯು ಪರಿಯದೆ। ತೊರೆಬತ್ತಿ
ದೊರತೆ ಕಾಣಯ್ಯ ಸರ್ವಜ್ಞ ॥ ೭ ॥
ಮಾಪರೇಪೋಪರೇ। ಪಾಪವೆನ್ನದು ಕೆರೆಯು
ಮಾಪರೇ ಮೈಯೊರೆಯುಪ್ರೋಕ್ಷ। ಆ ಪಾಪ
ಲೇಪದಂತಕ್ಕು ಸರ್ವಜ್ಞ ॥ ೮ ॥
ಮುನ್ನಮಾಡಿದ ಪಾಪ। ಹೊನ್ನಿಂದಹೋಹುದೇ?
ಹೊನ್ನಿನಾಪುಣ್ಯವದು ಬೇರೆ। ಪಾಪತಾ
ಮುನ್ನಿನಂತಿಹುದು ಸರ್ವಜ್ಞ ॥ ೯ ॥
ಹಿರಿದು ಕರ್ಮವಮಾಡಿ। ಹರಿವಗಂಗೆಯು ಮಿಂದು
ಹರಿಯಿತುಪಾಪವೆನಬೇಡ। ಆಪಾಪ
ಎರೆಯುಮಣ್ಣಲ್ಲ ಸರ್ವಜ್ಞ ॥ ೧೦ ॥

ಪಾಪಹೋಯಿತು ಯೆಂದು । ಸೋಪಾನಗಳನಿಳಿದು
ಪಾಪವನು ಕಳೆದೆನೆನಬೇಡ । ಆಪಾಪ
ಲೇಪದಂತಿಹುದು ಸರ್ವಜ್ಞ ॥ ೧೧ ॥
ಗಾಯತ್ರಿವೇದಕ್ಕೆ । ತಾಯಿಯೆಂದೆನಿಸಿತ್ತು
ವಾಯಕ್ಕೆದ್ವಿಜರು ಹಲವು । ಕೊಂಬಿಂಗೆ
ಹಾಯುತಿಹರೇಕೊ? ಸರ್ವಜ್ಞ ॥ ೧೨ ॥
ಮಟ್ಟಿಯನು ಮಣ್ಣನ್ನು । ಇಟ್ಟುತಾನೊಸಲೊಳಗೆ
ನೆಟ್ಟನೇಸ್ವರ್ಗಪಡೆಯುವರೇ । ಸಾಣೆಕಲ್
ಕೆಟ್ಟಕೇಡೇನು? ಸರ್ವಜ್ಞ ॥ ೧೩ ॥
ನೀರುಮುಳುಗಿದ ನಿಟ್ಟೆ । ಹಾರುವನೆ ಸ್ವರ್ಗಕ್ಕೆ
ಓರಂತೆ ನೀರು ಮುಳುಗಿರ್ದಾ । ಕಪ್ಪೆಗಿಂ
ನಾರು ಸರಿಯುಹರು? ಸರ್ವಜ್ಞ ॥ ೧೪ ॥
ಮೂರೆಳೆಯಹಾಕಿದವ । ಹಾರುವೊಡೆ ಸ್ವರ್ಗಕ್ಕೆ
ನೂರೆಂಟು ಯೆಳೆಯ ಕೌದಿಯನು । ಹೊಲಿದವನು
ಹಾರನೇಕೆಂದ ಸರ್ವಜ್ಞ ॥ ೧೫ ॥
ಎಂಜಲೆಂಜಲು ಯೆನುತ । ಅಂಜುವರು ವಿಪ್ರರು
ಎಂಜಲಿಂದಾದ ತನುವಿರಲು । ಅದಕಂಡು
ಅಂಜರೇಕೆಂದ ಸರ್ವಜ್ಞ ॥ ೧೬ ॥
ಉತ್ತಮರು ಎಂಬುವರು । ಸತ್ಯದಿಂ ಬಾಳುವರು
ಉತ್ತಮರನೇನನೆನಬೇಡ । ಜಗಕೆಲ್ಲ
ಮುತ್ತಿನಂತವರು ಸರ್ವಜ್ಞ ॥ ೧೭ ॥
ಬೆಂದಮನೆಬಾಗಿಲಿನ । ಮುಂದೆ ತೋರಣವೇಕೆ?
ಕುಂದುಕುಲದವಳ ಕೂಡುಂಡ । ಬ್ರಾಹ್ಮಣಗೆ
ಮಿಂದೂಟವೇಕೆ? ಸರ್ವಜ್ಞ ॥ ೧೮ ॥
ಮಿಂದುಂಬ ಬ್ರಾಹ್ಮಣಗೆ । ಬಂಧಸೂತ್ರಗಳೇಕೆ?
ಮಿಂದುವೈಲಿಗೆಯನುಡಲೇಕೆ? ಜಳಕದ
ಸಂದೇಹವೇಕೆ? ಸರ್ವಜ್ಞ ॥ ೧೯ ॥

ನಡೆವುದೊಂದೇ ಭೂಮಿ । ಕುಡಿವುದೊಂದೇ ನೀರು
ಸುಡುವರೇ ಕಿಚ್ಚುಯೆರಡಿಲ್ಲ । ಲೋಕದಾ
ಒಡನುಣ್ಣರೇಕೆ? ಸರ್ವಜ್ಞ ॥ ೨೦ ॥

ನಿತ್ಯನೀರಲಿ ಮುಳುಗಿ । ಹತ್ತುವನೆ ಸ್ವರ್ಗಕ್ಕೆ
ಹತ್ತೆಂಟುಕಾಲ ಜಲದೊಳಗೆ । ಇಹ ಕಪ್ಪೆ
ಹತ್ತದೇಕೆಂದ ಸರ್ವಜ್ಞ ॥ ೨೧ ॥

ಮುಟ್ಟಾದ ಹೆಂಗಸನು । ಮುಟ್ಟಲೊಲ್ಲನು ನೋಡೆ
ಮುಟ್ಟತಾತಡೆದು ತನುವಾದ । ದೇಹವನು
ಮುಟ್ಟುವನೇಕೊ? ಸರ್ವಜ್ಞ ॥ ೨೨ ॥

ಮುಟ್ಟಾದ ಹೊಲೆಯೊಳಗೆ ಹುಟ್ಟುವುದು ಜಗವೆಲ್ಲ
ಮುಟ್ಟಬೇಡೆಂದು ತೊಲಗುವ । ಹಾರುವನು
ಹುಟ್ಟಿದನೆಲ್ಲಿ? ಸರ್ವಜ್ಞ ॥ ೨೩ ॥

ಹಾರುವರು ಸ್ವರ್ಗದಾ । ದಾರಿಯನು ಬಲ್ಲರೇ?
ನಾರಿ ಪತಿಹಿತದಿನಡೆದರೆ । ಸ್ವರ್ಗದ
ದಾರಿತೋರುವುದು ಸರ್ವಜ್ಞ ॥ ೨೪ ॥

ಎಳ್ಳನ್ನು ಮುಳ್ಳನ್ನು । ಕುಳ್ಳಿತ್ತುಸುಟ್ಟಾತ
ನಿಲ್ಲದೆ ಸ್ವರ್ಗ ಪಡೆಯುವರೆ । ಊರನು ಸುಟ್ಟ
ಕಳ್ಳನೇ ಕುಳಿದ? ಸರ್ವಜ್ಞ ॥ ೨೫ ॥

ಹೊಲೆಗೇರಿಯಲಿ ಹುಟ್ಟ । ಎಲುವಿನಾ ಮನೆಮಾಡಿ
ಸಲೆಕರ್ಮದಾನಿಯೆನಿಸಿದ । ಮನುಜರು
ಕುಲಕೆ ಹಾರುವರು ಸರ್ವಜ್ಞ ॥ ೨೬ ॥

ಮಾದಿಗನುಕರ್ಮಿಯೂ । ಭೇದವಿಲ್ಲವುಒಂದೆ
ಮಾದಿಗೊಂಡೆಡೆಯುಲಪಕಾರಿ । ಕರ್ಮಿ ತನ
ಗಾದವರಕೊಲ್ವ ಸರ್ವಜ್ಞ ॥ ೨೭ ॥

ಸಕ್ಕರೆಯಪೊಳಗಾಗಿ । ಯಿಕ್ಕಿದಾನೀರನ್ನು
ಚೊಕ್ಕಟವೆನುತಕುಡಿಯುವರು । ಹೊಲೆಯರು
ಚಿಕ್ಕವರಂತೆ ಸರ್ವಜ್ಞ ॥ ೨೮ ॥

ಹೊಲೆಯುಮಾದಿಗರುಂಡು। ಸಲೆಬಿಟ್ಟತೊಗಲೊಳು
ಕುಲಜರೆಂಬರಿಗೆ ಉಣಲಾಯ್ತು। ಹೊಲೆಯನ
ಕುಲವಾವುದೆಂದ ಸರ್ವಜ್ಞ ॥ ೩೯ ॥

ಸತ್ತಾಡತಿಂಬಾತ। ನೆತ್ತಣಾಹೊಲೆಯನು?
ಒತ್ತಿಜೀವವನು ಕೊರೆಕೊರೆದು। ತಿಂಬಾತ
ನುತ್ತಮದಹೊಲೆಯ ಸರ್ವಜ್ಞ ॥ ೩೦ ॥

ಕೊಂದುತಿನ್ನುವಭಾಷೆ। ಸಂದೀತುಹೊಲೆಯಂಗೆ
ಸಂಧಿಸಿದ ಧರ್ಮಗಳಬಿಡದೆ। ಬಂದುದನು
ಕೊಂದುತಿನುತಿಹನು ಸರ್ವಜ್ಞ ॥ ೩೧ ॥

ಇಂಗುತಿಂಬಾತಂಗೆ। ಕೊಂಗೇನುಕೊಳಗೇನು?
ಸಿಂಗಳಿಕನೇನು? ಕಪಿಯೇನು? ಬೇಲಿಯಾ
ಮುಂಗಲಿಯೇನು? ಸರ್ವಜ್ಞ ॥ ೩೨ ॥

ಆಡತಿಂಬಾತಂಗೆ। ಕಾಡುಮಿಕವೇನಯ್ಯ?
ಕೋಡಗನೇನು? ಶುನಿಯೇನು? ಮಾಂಸದಾ
ಬಾಡೆಲ್ಲವೊಂದೆಸರ್ವಜ್ಞ ॥ ೩೩ ॥

ಆಡತಿಂಬುವಪಾಪ। ಕಾಡದೇಕಿಪ್ಪುದದು
ನೋಡಿದರೆಪಕ್ಷನುರುಮುಂಡೆ। ತಲೆಯಲ್ಲಿ
ಆಡುತ್ತಲಿಹುದು ಸರ್ವಜ್ಞ ॥ ೩೪ ॥

ಆಡುಂಬಅರ್ಥಿಯಲಿ। ಮಾಡುವರುಜನ್ನವನು
ತೀಡದೇಹೊಲೆಯರೆನುತಿರ್ಪ। ಹಾರುವನ
ಕಾಡಿಗಿಕ್ಕೆಂದ ಸರ್ವಜ್ಞ ॥ ೩೫ ॥

ತನ್ನಿವ್ಯೆಯುಂಟೆಂದು। ಕನ್ನೆಯಾಡನುತಿಂದು
ಉನ್ನತದಸ್ವರ್ಗಪಡೆಯುವರೆ। ಹಿಂಡಾಡ
ತಿನ್ನುವವಕೆಟ್ಟ ಸರ್ವಜ್ಞ ॥ ೩೬ ॥

ಯಾಗದಾನೆವದಿಂದ। ತೂಗಿತಿಂಬರುಆಡ
ಯಾಗದಲ್ಲೊಂದು ದಿಟವಿರಲು। ಹೋತಗಳ
ಸಾಗಲೀಸುವರೆ? ಸರ್ವಜ್ಞ ॥ ೩೭ ॥

ನೀರೊಳಗೆ ಮುಳುಗಿರ್ದ । ಸಾರವೇದವ ತರಲು
ಮಾರಿಮಾರ್ತಾಂಡನೊಡನಂದ । ವಾಜಿಗಿಂ
ಸಾರುತಾನಧಿಕ ಸರ್ವಜ್ಞ ॥ ೩೮ ॥
ಮಿಂದುಹೋಹರೆಪಾಪ । ಮಂದನೆಯಕೆಸರಲ್ಲ
ಮಿಂದರೇವ್ಯೈಯುಮಲಪೋಪು । ದಾಪಾಪ
ನಿಂದೊಜ್ರಲೇಪ ಸರ್ವಜ್ಞ ॥ ೩೯ ॥
ಬ್ರಹ್ಮಸ್ವದೇವಸ್ವ । ಪೊಮ್ಮೆ ಮನೆವೊಕ್ಕೊಡೆ
ಹೆಮ್ಮಗನುಸಾವ ಮನೆಬೇವು । ದಾಮೇಲೆ
ನಿರ್ಮೂಲವಹುದು ಸರ್ವಜ್ಞ ॥ ೪೦ ॥
ಅಕ್ಕರವಕಲಿತಾತ । ಒಕ್ಕಲನುತಿನಕಲಿತ
ಲೆಕ್ಕವನುಕಲಿತಕರಣಿಕನು । ನರಕದೊಳು
ಹೊಕ್ಕಾಡಕಲಿತ ಸರ್ವಜ್ಞ ॥ ೪೧ ॥
ಕಮ್ಮೆಯುೂಚೇಳೆನಾ । ಹೆಮ್ಮೆಯುೂಬಂದಯ್ಯ
ನೆಮ್ಮಿದರೆ ಚೇಳು ಹೊಡೆಯುವುದು । ಕಮ್ಮೆತಾ
ನೆಮ್ಮಿದರ ಹಿಡಿವ ಸರ್ವಜ್ಞ ॥ ೪೨ ॥

೨೩. ಅನ್ನಪದ್ಧತಿ.

ನೇತ್ರಗಳುಕಾಣುವುವು । ಸೂತ್ರಗಳುಉಳಿಯುವುವು
ಗಾತ್ರಕಾಲೆದ್ದು ತಿರುಗುವುವು । ಚೋಟುದ್ದ
ಸೂತ್ರದಿಂನೋಡು ಸರ್ವಜ್ಞ ॥ ೧ ॥
ಕೊಟ್ಟಣವಕುಟ್ಟುವುದು । ಮೊಟ್ಟೆಯನುಹೊರಿಸುವುದು
ಬಿಟ್ಟಬೇಸಾಯುವಮಾಡಿಪುದು । ಅದುಚೋಟು
ಹೊಟ್ಟೆಕಾಣಣ್ಣ ಸರ್ವಜ್ಞ ॥ ೨ ॥
ನಿದ್ರೆಗಳುಬಾರವವು । ಬುದ್ಧಿಗಳುತಿಳಿಯವು
ಮುದ್ದಿನಾವಮಾತುಸೊಗಸದು । ಬೋನದಾ
ಮುದ್ದೆತಪ್ಪಿದರೆ ಸರ್ವಜ್ಞ ॥ ೩ ॥

ಹಣೆಕಣ್ಣುಹತ್ತಿದುವು । ಮೊಣಕಾಲು ಬತ್ತಿದವು
ಅಣಕದಾನಗೆಯು ಸೊಗಸದು । ಬೋನೊಂದು
ಕ್ಷಣವುತಪ್ಪಿದರೆ ಸರ್ವಜ್ಞ ॥ ೪ ॥
ಉಗುರತಿದ್ದಿಸುವುದು । ಮುಗುಳುನಗೆನಗಿಸುವುದು
ಹಗರಣದಮಾತುನುಡಿಸುವುದು । ಬೋನದಾ
ಬಗೆಯನೋಡೆಂದ ಸರ್ವಜ್ಞ ॥ ೫ ॥
ಕೆಂಬಲ್ಲಸುಳಿಸುವುದು । ತಾಂಬೂಲಮೆಲಿಸುವುದು
ರಂಭೆಯುರಭೋಗಗೊಳಿಸುವುದು । ದೇಹಕ್ಕೆ
ಅಂಬಲಿಯುಬಗೆಯು ಸರ್ವಜ್ಞ ॥ ೬ ॥
ಬಟ್ಟೆಗಳಹೊದಿಸುವುದು । ಶ್ರೇಷ್ಠನೆಂದೆನಿಸುವುದು
ಕಟ್ಟಾಣಿಗತಿಗೆಕುಣಿಸುವುದು । ಗೇಣುದ್ದ
ಹೊಟ್ಟೆಕಾಣಣ್ಣ ಸರ್ವಜ್ಞ ॥ ೭ ॥
ಎತ್ತಹೋದರು ಭೋನ । ತುತ್ತುಕಟ್ಟಲುಬೇಕು
ತುತ್ತೊಂದುಗಳಿಗೆತಡೆದರೆ । ಕೈಯುಪಿಡಿ
ದೆತ್ತಬೇಕೆಂದ ಸರ್ವಜ್ಞ ॥ ೮ ॥
ತುತ್ತುತುತ್ತಿಗೆಹೊಟ್ಟೆ । ತಿತ್ತಿಯಂತಾಗುವುದು
ತುತ್ತೊಂದುಗಳಿಗೆ ತಡೆದರೆ । ಮಾನವನು
ಸತ್ತಂತೆಕಾಣೊ ಸರ್ವಜ್ಞ ॥ ೯ ॥
ಅಟ್ಟೆಹರಿದಾಡುವುದು । ಮುಟ್ಟಹತ್ತೇರುವುದು
ಹೊಟ್ಟೆಹುಣ್ಣಾಗಿನಗಿಸುವುದು । ಅನ್ನದ
ತುಷ್ಟಿಕಾಣಯ್ಯ ಸರ್ವಜ್ಞ ॥ ೧೦ ॥
ಕೂಳುಕುತ್ತವೆಕುತ್ತ । ಕೂಳುಮೇಳವೆಮೇಳ
ಕೂಳೊಂದುಗಳಿಗೆತಡೆದರೆ । ಕೈಯೂರಿ
ಏಳಬೇಕೆಂದ ಸರ್ವಜ್ಞ ॥ ೧೧ ॥
ಅನ್ನದೇವರಿಗಿಂತ । ಅನ್ಯದೇವರು ಇಲ್ಲ
ಅನ್ನನೀಡಲ್ಕೆಹಿರಿದಿಲ್ಲ । ಲೋಕಕ್ಕೆ
ಅನ್ನವೇದೈವ ಸರ್ವಜ್ಞ ॥ ೧೨ ॥

೨೪. ಶಿಖಾಮಣಿಪದ್ಧತಿ.

ನಿಂಬೆಯಿಂಹುಳಿಯಿಲ್ಲ । ತುಂಬಿಯಿಂಕರಿದಿಲ್ಲ
ಅಂಬುಜಮಿತ್ರಗೆಣೆಯಿಲ್ಲ । ಲೋಕದೊಳು
ಶಂಭುವಿಂದಿಲ್ಲ ಸರ್ವಜ್ಞ ॥ ೧ ॥
ಇದ್ದಿಲಿಂಕರಿದಿಲ್ಲ । ಬುದ್ಧಿಯಿಂಹಿರಿದಿಲ್ಲ
ಸಿದ್ಧರಿಂದಧಿಕಬಲರಿಲ್ಲ । ದೈವದೊಳು
ರುದ್ರನಿಂದಿಲ್ಲ ಸರ್ವಜ್ಞ ॥ ೨ ॥
ಹಾಲಿನಿಂಬಿಳುಪಿಲ್ಲ । ನಾಲಿಗೆಯನುಣುಪಿಲ್ಲ
ಓಲೆಯಿಂದಧಿಕಬಲವಿಲ್ಲ । ದೈವದೊಳು
ಶೂಲಿಯಿಂದಿಲ್ಲ ಸರ್ವಜ್ಞ ॥ ೩ ॥
ಮೇರುವಿಗೆಯೆಣೆಯಿಲ್ಲ । ಧಾರಿಣಿಗೆ ಪಡಿಯಿಲ್ಲ
ಕಾರುಣಿಕಮುಪ್ಪಹಿತರಿಲ್ಲ । ದೈವದೊಳು
ವೀರನಿಂದಿಲ್ಲ ಸರ್ವಜ್ಞ ॥ ೪ ॥
ರಾಮನಾಮವೆ ನಾಮ । ಸಾಮವೇದವೆ ವೇದ
ಆಮಹಾರುದ್ರಪರದೈವ । ಲೋಕದೊಳು
ಭೀಮನೇಭಕ್ತ ಸರ್ವಜ್ಞ ॥ ೫ ॥
ಒಂದಕ್ಕೆ ಎಣೆಯಿಲ್ಲ । ಸಂದಿಲ್ಲವೆರಡಕ್ಕೆ
ಮುಂದೆಮೂರಕ್ಕೆಯೇನಿಲ್ಲ । ನಾಲ್ಕಕ್ಕೆ
ಹಿಂದುಮುಂದಿಲ್ಲ ಸರ್ವಜ್ಞ ॥ ೬ ॥
ಯೋಗಿಗೆಕುಲವಿಲ್ಲ । ಸಾಗರಕೆನೆಲೆಯಿಲ್ಲ
ಯೋಗಪಟ್ಟಗೆಗೆಸೆರಗಿಲ್ಲ । ಧರ್ಮಕ್ಕೆ
ಆಗುಹೋಗಿಲ್ಲ ಸರ್ವಜ್ಞ ॥ ೭ ॥
ಕುಲವಿಲ್ಲಯೋಗಿಗೇ । ಚಲ್ಲವಿಲ್ಲಬಲ್ಲಿದಗೆ
ತೊಲೆಕಂಭವಿಲ್ಲಗಗನಕ್ಕೆ । ಸ್ವರ್ಗದಲಿ
ಹೊಲೆಗೇರಿಯಿಲ್ಲ ಸರ್ವಜ್ಞ ॥ ೮ ॥

ಲಿಂಗದಿಂಪಿರಿದಿಲ್ಲ। ಗಂಗೆಗಾಹೊಲೆಯಿಲ್ಲ
ಕಂಗಳಿಂದಧಿಕಹಿತರಿಲ್ಲ। ಭಕ್ತರೊಳು
ಜಂಗಮಿಂದಿಲ್ಲ ಸರ್ವಜ್ಞ ॥ ೯ ॥
ದಿನಪತಿಗೆಯೆಣೆಯಿಲ್ಲ। ಧನಪತಿಗೆಸ್ಥಿರವಿಲ್ಲ
ಅನುಭವಿಗೆಬೇರೆಮತವಿಲ್ಲ। ಬಲ್ಲವಗೆ
ಮುನಿವವರೆಯಿಲ್ಲ ಸರ್ವಜ್ಞ ॥ ೧೦ ॥
ಜಾಣಂಗೆಮುನಿಸಿಲ್ಲ। ಕೋಣಂಗೆಮತಿಯಿಲ್ಲ
ಕಾಣದಂಧಕಗೆಹಗಲಿಲ್ಲ। ಸಿಂಹಕ್ಕೆ
ಕ್ಷೀಣವೇಇಲ್ಲ ಸರ್ವಜ್ಞ ॥ ೧೧ ॥
ಸೀತೆಯಿಂಹೆಣ್ಣಿಲ್ಲ। ಸೂತನಿಂದಾಳಿಲ್ಲ
ಮಾತನಿಂಬಿಟ್ಟಗಿದಿರಿಲ್ಲ। ಶೂದ್ರಂಗೆ
ಭೀತಿಯೇಇಲ್ಲ ಸರ್ವಜ್ಞ ॥ ೧೨ ॥
ನಿದ್ರೆಗೆಬುದ್ಧಿಲ್ಲ। ಭದ್ರಂಗೆತಾಯಿಲ್ಲ
ಕದ್ದುಕೊಂಬಂಗೆಬದುಕಿಲ್ಲ। ಸಾವಂಗೆ
ಮುದ್ದುಗಳೆಯಿಲ್ಲ ಸರ್ವಜ್ಞ ॥ ೧೩ ॥
ಸತ್ಯಕ್ಕೆಸಮವಿಲ್ಲ। ಭಕ್ತಿಗೇಬೆಲೆಯಿಲ್ಲ
ಹೆತ್ತಮ್ಮಗಿಂತಹಿತರಿಲ್ಲ। ಮನುಜರ್ಗೆ
ನಿತ್ಯವೇಇಲ್ಲ ಸರ್ವಜ್ಞ ॥ ೧೪ ॥
ಎಲ್ಲಬಲ್ಲವರಿಲ್ಲ। ಬಲ್ಲಿದರುವೊದಲಿಲ್ಲ
ಒಲ್ಲದಳನೊಲಿಸಿದವರಿಲ್ಲ। ಸಾಹಿತ್ಯ
ವೆಲ್ಲರಿಗುವಿಲ್ಲ ಸರ್ವಜ್ಞ ॥ ೧೫ ॥

* * * * * ॥ ೧೬ ॥

೨೫. ನೀತಿ ಪದ್ಧತಿ.

ಎರೆಯನೆಲಹೊಂದುವುದು। ದೊರೆಯನೋಲೈಸುವುದು
ಉರಗಭೂಷಣನನೆನೆಯುವುದು। ಭಾಗ್ಯತಾ
ನರಿದಲ್ಲವವಗೆ ಸರ್ವಜ್ಞ ॥ ೧ ॥

ಉತ್ತರೆಯುಹುಸಿದರೆ । ಹೆತ್ತಮ್ಮತೊರೆದರೆ
ಸತ್ಯರುತಪ್ಪಿನಡೆದರೆ । ಲೋಕವಿಂ
ನೆತ್ತಸೇರುವುದು? ಸರ್ವಜ್ಞ ॥ ೨ ॥
ಆರಯ್ದುನುಡಿಯುವವನು । ಆರಯ್ದುನಡೆವವನು
ಆರಯ್ದು ಅಡಿಯನಿಡುವವನು । ಲೋಕಕ್ಕೆ
ಆರಾಧ್ಯನಕ್ಕು ಸರ್ವಜ್ಞ ॥ ೩ ॥
ಗಂಹ್ವರವಹೊಗುವುದಾ । ಸಿಂಹವನಿರಿಯುವುದು
ಸಂಹಾರಮಾಡಿತರಿಯುವುದು । ದುರ್ಜನರ
ಜಿಹ್ವೆಕಾಣಣ್ಣ ಸರ್ವಜ್ಞ ॥ ೪ ॥
ಸುರಗಿಯಾಮೊನೆನಂಜು । ಉರಗನಾಹಲುನಂಜು
ಬೆರಸಿತಪ್ಪುವರನುಡಿನಂಜು । ದುರ್ಜನರ
ಹರುಷವೇನಂಜು ಸರ್ವಜ್ಞ ॥ ೫ ॥
ಮುತ್ತುನೀರೊಳುಹುಟ್ಟಿ । ಹತ್ತಕ್ಕೆಬೆಲೆಯಹುದು
ಹತ್ತುಚಿಪ್ಪುಕೂಡಿಹಣವಿಲ್ಲ । ವಿದ್ಯೆಯಾ
ಬಿತ್ತುಲೇಸೆಂದ ಸರ್ವಜ್ಞ ॥ ೬ ॥
ಸಿರಿಯುಸಂಸಾರವನು । ಹಿರಿದೆಂದು ನಂಬದಿರು
ಹಿರಿದಾಗಿಸಂತೆನೆರೆದೊಂದು । ಗಳಿಗೆಯೊಳು
ಹರಿದುಹೋದಂತೆ ಸರ್ವಜ್ಞ ॥ ೭ ॥
ಕೇಳುವರುವುಳ್ಳೊಡೆ । ಹೇಳುವುದುಬುದ್ಧಿಯನು
ಕೇಳದೇಸಿಕ್ಕಿಕೆಡುವವಗೆ । ಬುದ್ಧಿಯನು
ಹೇಳುವನೆಹೆಡ್ಡ ಸರ್ವಜ್ಞ ॥ ೮ ॥
ನರಳುವಗೆಕಡುರೋಗ । ಮೊರೆವಂಗೆರಾಗವು
ಬರೆವರಿಗೆಓದುಬರುವಂತೆ । ಸಾಧಿಪಗೆ
ಬಾರದುದುಉಂಟೆ? ಸರ್ವಜ್ಞ ॥ ೯ ॥
ಕಣ್ಣುನಾಲಿಗೆಮನವು । ತನ್ನದೆಂದೆನಬೇಡ
ಅನ್ಯರುಕೊಂದರೆನಬೇಡ । ಇವುಮೂರು
ತನ್ನಕೊಲ್ಲುವುವು ಸರ್ವಜ್ಞ ॥ ೧೦ ॥

ನಿತ್ಯವುಳ್ಳವರೀಗ । ಸತ್ತಹಾಗಿರುವರು
ನಿತ್ಯವಿಲ್ಲದರಒಡನಾಟ । ಬೇಲಿಯ
ಒತ್ತಿನಂತಕ್ಕು ಸರ್ವಜ್ಞ ॥ ೧೧ ॥

ಬಲ್ಲವರಒಡನಾಟ । ಬೆಲ್ಲವನುಮೆದ್ದಂತೆ
ಅಲ್ಲವಹುದೆಂಬಅಜ್ಞಾನಿ । ಯೊಡನಾಟ
ಕಲ್ಲುಹಾಯ್ದಂತೆ ಸರ್ವಜ್ಞ ॥ ೧೨ ॥

ಒಳ್ಳೆಯವನಿಲ್ಲದೂ । ಕಳ್ಳನೊಡನಾಟವು
ಸುಳ್ಳನಮಾತು ಇವುಮೂರು । ಕೆಸರೊಳಗೆ
ಮುಳ್ಳುತುಳಿದಂತೆ ಸರ್ವಜ್ಞ ॥ ೧೩ ॥

ಕೆಂಪಿನಾದಾಸಳಕೆ । ಕೆಂಪುಂಟುಕಂಪಿಲ್ಲ
ಕೆಂಪಿನವರಲ್ಲಿಗುಣವಿಲ್ಲ । ಕದ್ದೊಡವೆ
ಕೆಂಪಿರ್ದರೇನು? ಸರ್ವಜ್ಞ ॥ ೧೪ ॥

ಗೀತವಿದ್ಯೆಯನಿತ್ಯ । ಜಾತರಾವೊಲುಮೆಯ
ಪ್ರೀತಿಯನುನುಡಿಯಲರಿಯದೆ । ಹೋಗುವರು
ಮಾತಿನಿಂಕೇಡು(?) ಸರ್ವಜ್ಞ ॥ ೧೫ ॥

ಧನಕನಕವುಳ್ಳನಕ । ದಿನಕರನಂತಕ್ಕು
ಧನಕನಕಹೋದಮರುದಿವಸ । ಆಅಣ್ಣ
ಶುನಕನಂತಕ್ಕು ಸರ್ವಜ್ಞ ॥ ೧೬ ॥

* * * * ॥ ೧೭–೧೮ ॥

ಸಿರಿಯಣ್ಣವುಳ್ಳನಕ । ಹಿರಿಯಣ್ಣನಂತಿರ್ಕು
ಸಿರಿಯಣ್ಣ ಹೋದಬೆಳಗಾಗ । ಆಯಣ್ಣ
ನರಿಯಣ್ಣನಕ್ಕು ಸರ್ವಜ್ಞ ॥ ೧೯ ॥

ಎಂಟುಹಣವುಳ್ಳನಕ । ನೆಂಟರುಘನವಕ್ಕು
ಎಂಟುಹಣಹೋದಬೆಳಗಾಗ । ಆಳಿನಾ
ಹೆಂಟೆಯಂತಕ್ಕು ಸರ್ವಜ್ಞ ॥ ೨೦ ॥

ಪ್ರತ್ಯಕ್ಷದುರಗನ । ಮಸ್ತಕದಹಲುನಂಜು
ಮಿಥ್ಯದುರ್ಜನರಹೊಲ್ಲೆಹವು । ಪಾಪದ
ಮಸ್ತಕನಂಜು ಸರ್ವಜ್ಞ ॥ ೨೧ ॥

ನಾಲ್ಕುಹಣವುಳ್ಳನಕ । ಸಾಕಾರಘನವಕ್ಕು
ನಾಲ್ಕುಹಣಹೋದಬೆಳಗಾಗ । ಆಅಣ್ಣ
ನೂಕಣ್ಣನೆಂದ ಸರ್ವಜ್ಞ ॥ ೨೨ ॥
ಎರಡುಹಣವುಳ್ಳನಕ । ಗರುಡನಂತಿರುತಿರ್ಕು
ಎರಡುಹಣಹೋದಬೆಳಗಾಗ । ಅರೆಬೆಂದ
ಕರಡಿಯಂತಕ್ಕು ಸರ್ವಜ್ಞ ॥ ೨೩ ॥
ಸಿರಿಬಲವನುಳ್ಳಾಗ । ಮೆರೆಯದಿರ್ಪನುಜಾಣ
ಕೊರತೆಯಾದಾಗಕೊಡುವೆನು । ಕಡಿವೆನೆಂ
ದರಿವನೇಹೆಡ್ಡ ಸರ್ವಜ್ಞ ॥ ೨೪ ॥
ಸಜ್ಜನರುಸತ್ತೊಡಂ । ಇದ್ದಂತೆಯಿರುತಿಹರು
ದುರ್ಜನನುಸತ್ತರೇನುಂಟು? ಹತ್ತಿರ್ದ
ಕಜ್ಜಿಹರಿದಂತೆ ಸರ್ವಜ್ಞ ॥ ೨೫ ॥

೨೬. ಉತ್ತಮಪದ್ಧತಿ.

ಹಂಗಿನಾಹಾಲಿಂದ । ಹಿಂಗಿದಂಬಲಿಲೇಸು
ಭಂಗಪಟ್ಟುಂಬಬಿಸಿಗಿಂತ । ತಿರಿದುಂಬ
ತಂಗಳೇಲೇಸು ಸರ್ವಜ್ಞ ॥ ೧ ॥
ತಿಗುಳನಾನೆರೆಗಿಂತ । ಬಗುಳುವಾನಾಯ್ಲೇಸು
ಮುಗುಳಿಯಾಮರದನೆಳಲಿಂದ । ನುಂಗುವಾ
ನೆಗಳೆ ಲೇಸೆಂದ ಸರ್ವಜ್ಞ ॥ ೨ ॥
ಚುಚ್ಚುವಾಕೆರಕಿಂತ । ಕಚ್ಚುವಾನಾಯ್‌ಲೇಸು
ನುಚ್ಚರಿಸಿಜರೆವಸತಿಗಿಂತ । ಹೊಡೆದೊಯ್ವ
ಕಿಚ್ಚೆಲೇಸೆಂದ ಸರ್ವಜ್ಞ ॥ ೩ ॥
ಸೋರುವಾಮನೆಗಿಂತ । ದಾರಿಯಾಮರಲೇಸು
ದಾರಿದ್ರ್ಯವವನಬದುಕಿಂದ । ಹೊಡೆದೊಯ್ವ
ಮಾರಿಯೇಲೇಸು ಸರ್ವಜ್ಞ ॥ ೪ ॥

ನಾಟರಾಗವೇಲೇಸು । ತೋಟವಲ್ಲಿಗೆಲೇಸು
ಕೂಟವೇಲೇಸುಹಿರಿಯವರಾ । ಶಿವನನರಿ
ವಾಟವೇಲೇಸು ಸರ್ವಜ್ಞ ॥ ೫ ॥
ಕುದಿಯದಿಹಕೂಳಿಂದ । ಕದಡಿದಂಬಲಿಲೇಸು
ಹೃದಯಶೂನ್ಯೆಯರಜಲವಿಂದ । ಒಲಿದವರ
ಕದನವೇಲೇಸು ಸರ್ವಜ್ಞ ॥ ೬ ॥
ಹರಗೆಹಂದಲೆಲೇಸು । ಮರಣಭೂತಕೆಲೇಸು
ವರಯುದ್ಧಲೇಸುಸುಭಟಂಗೆ । ಯೋಗಿಗೆ
ಹಠಯೋಗಲೇಸು ಸರ್ವಜ್ಞ ॥ ೭ ॥
ಹಾಲುಬೋನವುಲೇಸು । ಬಾಲೆಸದನಕೆಲೇಸು
ಸಾಲವಿಲ್ಲದನಮನೆಲೇಸು । ಬಾಲ್ಯದ
ಲೀಲೆಯೋಲೇಸು ಸರ್ವಜ್ಞ ॥ ೮ ॥
ತುಪ್ಪಬೋನವೆಲೇಸು । ಉಪ್ಪರಿಗೆಗುಡಿಲೇಸು
ಅಪ್ಪಬಾರೆಂಬಮಗಲೇಸು । ಊರಿಂಗೆ
ಚಿಪ್ಪಿಗನೆಲೇಸು ಸರ್ವಜ್ಞ ॥ ೯ ॥
ಹುತ್ತುಹಾವಿಗೆಲೇಸು । ಮುತ್ತುಕೊರಳಿಗೆಲೇಸು
ಕತ್ತಿಯಾಹೇರುತರೆಲೇಸು । ತೈಲದಾ
ತುತ್ತುಲೇಸೆಂದ ಸರ್ವಜ್ಞ ॥ ೧೦ ॥
ಕಂಚಿಯ ಫಲಲೇಸು । ಮಿಂಚು ಮುಗಿಲಿಗೆಲೇಸು
ಕೆಂಚಿನಸ್ತ್ರೀಯಳಿರೆಲೇಸು । ಊರಿಗೆ
ಪಾಂಚಾಳ ಲೇಸು ಸರ್ವಜ್ಞ ॥ ೧೧ ॥
ಎಮ್ಮೆ ಹಯನವೆಲೇಸು । ಕಮ್ಮನಾಂಬ್ರವುಲೇಸು
ಸುಮ್ಮನೇ ಒಡವೆಬರೆಲೇಸು । ಊರಿಗೇ
ಕಮ್ಮಾರಲೇಸು ಸರ್ವಜ್ಞ ॥ ೧೨ ॥
ಹಡಗು ಗಾಳಿಗೆಲೇಸು । ಗುಡುಗುಮುಗಿಲಿಗೆ ಲೇಸು
ಒಡಹುಟ್ಟಿದವರು ಇರೆಲೇಸು । ಊರಿಗೆ
ಬಡಗಿಲೇಸೆಂದ ಸರ್ವಜ್ಞ ॥ ೧೩ ॥

ಅಂಬು ಬಿಲ್ಲಿಗೆಲೇಸು । ತುಂಬು ಕೇರಿಗೆಲೇಸು
ಸಂಬಾರಲೇಸು ಅಡಿಗೆಗೇ । ಊರಿಗೆ
ಕುಂಬಾರಲೇಸು ಸರ್ವಜ್ಞ ॥ ೧೪ ॥
ಆಗಸೆ ವೂರಿಗೆಲೇಸು । ಸೊಗಸು ರಾಗಕೆಲೇಸು
ಬಗಿಸೆಯುಳ್ಳವರ ಕೆಳೆಲೇಸು । ಊರಿಗೆ
ಅಗಸಲೇಸೆಂದ ಸರ್ವಜ್ಞ ॥ ೧೫ ॥
ಅಕ್ಕಿಯೋಗರಲೇಸು । ತಕ್ಕವರ ಕೆಳೆಲೇಸು
ಹಕ್ಕಿಗಳೊಳಗೆಗಿಳಿಲೇಸು । ಊರಿಗೆ
ಅಕಸಾಲೆಲೇಸು ಸರ್ವಜ್ಞ ॥ ೧೬ ॥
ಒಸರುವಾ ತೊರೆಲೇಸು । ಕೆಸರುಳ್ಳಕೆರೆಲೇಸು
ಹೆಸರುಳ್ಳವರನೆರೆಲೇಸು । ಸಾಗರವು
ವಸುಧೆಗೆಲೇಸು ಸರ್ವಜ್ಞ ॥ ೧೭ ॥
ತೊಗರಿಯಾ ತೊಗೆಲೇಸು । ತಿಗುರಿಯಾ ಮೊಳೆಲೇಸು
ಟಗರಿಗೇ ಹಿಂಗಾಲಸತ್ವ । ರಾಜರ್ಗೆ
ಬಿಗಿಬಂದುಲೇಸು ಸರ್ವಜ್ಞ ॥ ೧೮ ॥
ಉಪ್ಪಿನಾ ವಡೆಲೇಸು । ಬುದ್ಧಿವಂತಿಗೆಲೇಸು
ಬಿಟ್ಟೊಡವೆ ಕೈಗೆಬರೆಲೇಸು । ಶಿಶುವಿಂಗೆ
ಮುದ್ದುತಾಲೇಸು ಸರ್ವಜ್ಞ ॥ ೧೯ ॥
ತಿರುಳುಹೋಳಿಗೆ ಲೇಸು । ಮುರುಕು ಬೆಳ್ಳಿಲಿ ಲೇಸು
ಅರಿಕೆಯುಳ್ಳವರ ನಡೆಲೇಸು । ಪಾಯಸವ
ಜುರುವುದೇಲೇಸು ಸರ್ವಜ್ಞ ॥ ೨೦ ॥
ಜಾಣರಾಸುಡಿಲೇಸು । ಗಾನದಾ ಸವಿಲೇಸು
ವಾಣದಾಮಧುರರಸಲೇಸು । ಕೂರ್ತವರ
ಕಾಣುವುದೆ ಲೇಸು ಸರ್ವಜ್ಞ ॥ ೨೧ ॥
ಕಾಸುವೆಚ್ಚಕೆಲೇಸು । ದೋಸೆಕ್ಷೀರಕೆಲೇಸು
ಕೂಸುಮನೆಯೊಳಗೆ ಇರೆಲೇಸು । ಹಿರಿಯರ್ಗೆ
ಮೀಸಲೇ ಲೇಸುಸರ್ವಜ್ಞ ॥ ೨೨ ॥

ಮಜ್ಜಿಗೆಯು ಊಟಕ್ಕೆ । ಮಜ್ಜನಕೆಮಡಿಲೇಸು
ಕಜ್ಜಾಯತುಪ್ಪಮುಣಲೇಸು । ಮನೆಗೊಬ್ಬ
ಅಜ್ಜಿಯೇಲೇಸು ಸರ್ವಜ್ಞ ॥ ೨೩ ॥
ಮಂಜಿಗಾಮಳೆಲೇಸು । ನಂಜು ಸರ್ಪಕೆಲೇಸು
ಪಂಜರವುಲೇಸು ಅರಗಿಳಿಗೆ । ಜಾಡಂಗೆ
ಗಂಜಿಲೇಸೆಂದ ಸರ್ವಜ್ಞ ॥ ೨೪ ॥
ಜಾಣಜಾಣಗೆಲೇಸು । ಕೋಣೆಗಾ ಮಗುಲೇಸು
ನಾಣ್ಯತಾಲೇಸು ಮಂದಿರಕೆ । ಊರಿಗೇ
ಗಾಣಿಗಲೇಸು ಸರ್ವಜ್ಞ ॥ ೨೫ ॥
ಜಾಜಿಕುಸುಮವುಲೇಸು । ತೇಜಿವಾಹನಲೇಸು
ರಾಜಂಗೆ ಒಕ್ಕಲಿರೆಲೇಸು । ಊಟಕ್ಕೆ
ರಾಜಾನ್ನಲೇಸು ಸರ್ವಜ್ಞ ॥ ೨೬ ॥
ಗಾಳಿಧೂಳಿಯದಿನಕೆ । ಮಾಳಿಗೆಯ ಮನೆಲೇಸು
ಹೋಳಿಗೆ ತುಪ್ಪಮುಣಲೇಸು । ಮೇಲೊಂದು
ವೀಳೆಯವುಲೇಸು ಸರ್ವಜ್ಞ ॥ ೨೭ ॥
ಹೋರುವಾಸತಿಗಿಂತ । ಸೋರುವಾಮನೆ ಲೇಸು
ಪೂರಯಿಸದವನಕೆಳೆಗಿಂತ । ಹೊರಗಣ
ಮಾರಿಲೇಸೆಂದ ಸರ್ವಜ್ಞ ॥ ೨೮ ॥
ಸಿರಿಯು ಬಂದರೆಲೇಸು । ಹಿರಿಯ ಪೂಜ್ಯತೆಲೇಸು
ಮರಣವಿಲ್ಲದ ಮಕ್ಕಳಿರೆಲೇಸು । ಈಶ್ವರಗೆ
ಶರಣೆತಾಂಲೇಸು ಸರ್ವಜ್ಞ ॥ ೨೯ ॥
ಹಾಸಂಗಿಹರಿವರೇ । ವೇಸಿಯರು ಪೊಲಿವರೇ
ವೀಸಕ್ಕೆ ವೀಸನೆರೆಯುವರೆ । ಇವುಮೂರು
ಈಶನ ಕರುಣ ಸರ್ವಜ್ಞ ॥ ೩೦ ॥
ರಾಗಯೋಗಿಗೆ ಹೊಲ್ಲ । ಭೋಗತಪಸಿಗೆಹೊಲ್ಲ
ಓಗರಕೆಎಣ್ಣೆಯುಮುಹೊಲ್ಲ । ಪರನಿಂದೆ
ಯೋಗಳುಂಹೊಲ್ಲಸರ್ವಜ್ಞ ॥ ೩೧ ॥

ನಷ್ಟಪಡವಿಯಾ ಮಳೆಯು । ದುಷ್ಟರಾಸಂಗವು
ಕಷ್ಟಯಾದವಳ ತಲೆಬೇನೆ । ಇವುಮೂರು
ಕೆಟ್ಟರೆ ಸಾಕು ಸರ್ವಜ್ಞ ॥ ೩೨ ॥
ಗಿಡ್ಡ ಹೆಂಡತಿಲೇಸು । ಮುಡ್ಡಿಕುದುರೆಗೆಲೇಸು
ಬಡ್ಡಿಯಸಾಲಕೊಡಲೇಸು । ಹೂಗಳೊಳು
ಪಡ್ಡಳಿಯೆಲೇಸು ಸರ್ವಜ್ಞ ॥ ೩೩ ॥
ಅಜ್ಜಿಯಿಲ್ಲದ ಮನೆಯು । ಮಜ್ಜಿಗಿಲ್ಲದ ಊಟ
ಕೊಜ್ಜೆಯದು ಇಲ್ಲದರಮನೆಯು । ಇವುಮೂರು
ಲಜ್ಜೆಗೆಟ್ಟಂತೆ ಸರ್ವಜ್ಞ ॥ ೩೪ ॥
ಓಡಿಹೋದವಕೆಟ್ಟ । ಜಾಡನೇಯದೆಕೆಟ್ಟ
ನೋಡದೇಕೆಟ್ಟ ಬೆಳೆದಹೊಲ । ಪರವೆಣ್ಣಾ
ಕೂಡಿದವಕೆಟ್ಟ ಸರ್ವಜ್ಞ ॥ ೩೫ ॥
ಹೇಳಿದರೆ ಕೇಳುವನ । ಕೇಳಿನಲಿಸಿರಿಯುಂಟು
ಹೇಳಿದಮಾತುಕೇಳದನ । ಬಿಡು ಅವನ
ಗಾಳಿಯೇ ಬೇಡ ಸರ್ವಜ್ಞ ॥ ೩೬ ॥
ಹರದನಾವಿಶ್ವಾಸ । ಹಿರಿದುನಂಬಲುಬೇಡ
ಗರಗಸದೊಡನೆ ಮರಹೋರಿ । ತನ್ನತಾ
ನಿರಿದುಕೊಂಡಂತೆ ಸರ್ವಜ್ಞ ॥ ೩೭ ॥
ಉತ್ತಮದ ಸತಿಮೇಲೆ । ಮತ್ತೆಸೂಳೆಯದೇಕೆ?
ಕುತ್ತದಮೇಲೆ ಮಸಗುತಿಹ । ಆತಂಗೆ
ಮತ್ತಿಕಿಚ್ಚೇಕೆ? ಸರ್ವಜ್ಞ ॥ ೩೮ ॥
ಅಂಬಲಿಯನುಣಸಲ್ಲ । ಕಂಬಳಿಹೊದೆಯಸಲ್ಲ
ಡೊಂಬತೀಸೂಳೆಯಿರಹೊಲ್ಲ । ತನಗಾಗ
ದುಂಬುವುದುಹೊಲ್ಲ ಸರ್ವಜ್ಞ ॥ ೩೯ ॥
ಕಟ್ಟಾಸೆಭಾವಿಗೆ । ಕೊಟ್ಟಾಸೆಸೂಳೆಗೆ
ಪಟ್ಟಣದಾಸೆಬಡವಂಗೆ । ಬೇಡಿದಗೆ
ಕೊಟ್ಟಷ್ಟುಆಸೆ ಸರ್ವಜ್ಞ ॥ ೪೦ ॥

ಒತ್ತಿದಾಜಗಳಕ್ಕೆ । ಸುತ್ತುಮುತ್ತಿಗೆಯೇಕೆ?
ತೊತ್ತಳದುಳಿದು ಕೊಲುವಾಗ । ಉಳುಮೆಯ
ಕರ್ತಬಂದಾನು ಸರ್ವಜ್ಞ ॥ ೪೧ ॥
ಸಾಕಿದವರನುತಿಂಬ । ಸೋಕಿದವರನುತಿಂಬ
ತಾಕಿಸಿದವರಬಡಿತಿಂಬ । ಬೇಡನ
ಏಕಾಂತಬೇಡ ಸರ್ವಜ್ಞ ॥ ೪೨ ॥
ಒಡಹುಟ್ಟಿದನ ಭಾಗ । ದೊಡವೆಯನು ಬೇಡಿದರೆ
ತಡೆಯದೇಕೊಡುವುದತಿಚಂದ । ಮಡಿದರೆ
ಕೊಡದವನೆ ಕೆಟ್ಟ ಸರ್ವಜ್ಞ ॥ ೪೩ ॥
ನಾಡನಾಡುವಅರಸು । ರೂಢಿಗೀಶ್ವರನಂತೆ
ಕಾಡಹಂದಿವೊಲುಗರ್ಜಿಸಲು । ಆನಾಡು
ಕಾಡಾಗದಿಹುದೆ? ಸರ್ವಜ್ಞ ॥ ೪೪ ॥
ಕಿರುವಿಾನ ಹಿರಿವಿಾನ । ಕೊರೆಕೊರೆದುತಿಂಬಾತ
ಇರುವಳಾಒಬ್ಬಮಗಸಾಯೆ । ತಾನಿನ್ನು
ಕೊರಗದೆಯಿಹಳೆ? ಸರ್ವಜ್ಞ ॥ ೪೫ ॥
ಪರಸ್ತ್ರೀಯಸಂಗದಿಂ । ನರಲೋಕಚೀಃಎನಲು
ಸಿರಿತೊಲಗಿತಲೆಯು ಕಡಿದತ್ತು । ರಾವಣಗೆ
ಪರಲೋಕವಾಯ್ತೆ? ಸರ್ವಜ್ಞ ॥ ೪೬ ॥

* * * * ॥ ೪೭–೪೮ ॥

೨೭. ನಿಂದಾಪದ್ಧತಿ.

ಬಣಜಿಗಭಕುತನಲ್ಲ । ಅಣಬೆಸತ್ತಿಗೆಯಲ್ಲ
ಕೊಣಕಲ್ಲುಬಂಗಾರವಲ್ಲ । ಬಣಜಿಗನು
ಗುಣವಂತನಲ್ಲ ಸರ್ವಜ್ಞ ॥ ೧ ॥
ಗಾಣಿಗನ ಒಡನಾಟ । ಕೋಣನಾಬೇಸಾಯ
ಕ್ಷೀಣವಹುವಲ್ಲಿಸುಖವಿಲ್ಲ । ಅದರಿಂದ
ಪ್ರಾಣದಾಗಾಪಿ ಸರ್ವಜ್ಞ ॥ ೨ ॥

ಗಾಣಿಗನುಈಶ್ವರನ । ಕಾಣೆನೆಂಬುದುಸಹಜ
ಏಣಾಂಕಧರನುಬರಲವನ । ಕೈಯಲ್ಲಿ
ಗಾಣವಾಡಿಸುವ ಸರ್ವಜ್ಞ ॥ ೩ ॥
ಮಠಪತಿಗೆಭಕ್ತಿಲ್ಲ । ಕಟುಕನಿಗೆಮುಕ್ತಿಲ್ಲ
ಪಟವೆಂಬುದಕ್ಕೆ ನೆಳಲಿಲ್ಲ । ಹಟಗಾರ
ಕುಟಿಲನಹನೆಂದ ಸರ್ವಜ್ಞ ॥ ೪ ॥
ಭಂಗಿಯನುಸೇದುವನ । ಭಂಗವನುನೋಡಿರಿ
ಭಂಗಿಯರಸವುತಲೆಗೇರೆ । ಚಿತ್ರದ
ಬಿಂಗಿಯಂತಿಹನು ಸರ್ವಜ್ಞ ॥ ೫ ॥
ಮದ್ದುತಿಂಬವನುಪ್ರ । ಬುದ್ಧನೆಂದೆನಬೇಡ
ಮದ್ದುತಲೆಗೇರಿಇರುವಾಗ । ಎಡಕತ್ತೆ
ಗುದ್ದುವುದನರಿಯ ಸರ್ವಜ್ಞ ॥ ೬ ॥
ಹೊಗೆಯಸೇದುವನನ್ನು । ಸುಗುಣನೆಂದೆನಬೇಡ
ಹೊಗೆಯತೆಗೆದೆಲೆಯಮೆಲಲು । ಶೇಂದಿಯ
ಲಗಳೆಯಂತಿಹುದು ಸರ್ವಜ್ಞ ॥ ೭ ॥
ಬಚ್ಚಲಿಲ್ಲದಮನೆಯು । ಕೆಚ್ಚಲಿಲ್ಲದಹಯನು
ನಚ್ಚಿಗಿಲ್ಲದನಸಂಸಾರ । ಬೇಸಿಗೆಯ
ಕಿಚ್ಚುಕಾಯ್ದಂತೆ ಸರ್ವಜ್ಞ ॥ ೮ ॥
ಬೇಡನೊಳ್ಳಿದನೆಂದು । ಆಡದಿರುಸಭೆಯೊಳಗೆ
ಬೇಡಿದುದಕೊಡದಿರಲ್ಕವನು । ಮರುದಿವಸ
ಗೋಡೆಯನುಕೊರೆವ ಸರ್ವಜ್ಞ ॥ ೯ ॥
ಆಡಿಹುಸಿಯಲುಹೊಲ್ಲ । ಕೂಡಿತಪ್ಪಲುಹೊಲ್ಲ
ಕಾಡುವನೆಂಟಬರಹೊಲ್ಲ । ಧನಹೀನ
ನಾಡಲೇಹೊಲ್ಲ ಸರ್ವಜ್ಞ ॥ ೧೦ ॥
ಕಣುಕನೆನೆದರೆಹೊಲ್ಲ । ಗಣಿಕೆಮುದುಕಿಯುಹೊಲ್ಲ
ಕಣುಕಟ್ಟುಹೊಲ್ಲಮನುಜಂಗೆ । ಅರಮನೆಗೆ
ಒಣತಂಟೆಹೊಲ್ಲ ಸರ್ವಜ್ಞ ॥ ೧೧ ॥

ಓತಿತ್ತಹೆಣ್ಣಿಂಗೆ । ಸೋತುಹಲುಬುವಹೆಡ್ಡ
ಹೂತಮಲ್ಲಿಗೆಯುವನದೊಳಗೆ । ತುರುಬಿಲ್ಲ
ಘಾತಸುಳಿದಂತೆ ಸರ್ವಜ್ಞ ॥ ೧೨ ॥

* * * * ॥ ೧೩ ॥

ಬೇಡಗಡವಿಯಚಿಂತೆ । ಆಡಿಗೇಮೆಳೆಚಿಂತೆ
ನೋಡದಾಚಿಂತೆನವಿಲಿಂಗೆ । ಹೆಳೆವ ನಡೆ
ದಾಡುವುದೆಚಿಂತೆ ಸರ್ವಜ್ಞ ॥ ೧೪ ॥

ಅಲಸಿಕೆಯನುಳ್ಳವನು । ಕೆಲಸಿಲ್ಲ ಕುಳ್ಳಿರುವ
ಕೆಲಸವ್ಯವಹಾರಕಲಿತವಗೆ । ಬೇರಿಂದ
ಹಲಸುಕಾತಂತೆ ಸರ್ವಜ್ಞ ॥ ೧೫ ॥

ಬಡವಬಟ್ಟೆಯಹೋಹ । ರೊಡನೆತಿರುಗುವುದೇಕೆ?
ಬಡತನವೆಂಬಹುಲಿಗೂಡಿ । ಬರುತಿರಲು
ನುಡಿಸುವವರಿಲ್ಲ ಸರ್ವಜ್ಞ ॥ ೧೬ ॥

ತಪ್ಪುಮಾಡಿದವಂಗೆ । ಒಪ್ಪುವುದುಸಂಕಲೆಯು
ತಪ್ಪುಮಾಡದೆಯೆಸಂಕಲೆಯ । ಸಹವಾಗಿ
ಒಪ್ಪುವನೆಪಾಪಿ ಸರ್ವಜ್ಞ ॥ ೧೭ ॥

ಮುತ್ತುಮೂಗುತಿಗೇಕೆ? ತುತ್ತೇಕೆನೊಣಗಳಿಗೆ?
ಕತ್ತಲೆಯಮುಡಿಗಳೇಕೆ? ನಿಡುಗೆಲಸ
ತೊತ್ತಿಗಿನ್ನೇಕೆ? ಸರ್ವಜ್ಞ ॥ ೧೮ ॥

ಆಡಿಗಿಟ್ಟಿಡೆಯೇಕೆ? ಬೋಡಂಗೆನಗೆಯೇಕೆ?
ಕೋಡಗವಕ್ಕೈಗೆಬಳೆಯೇಕೆ? ಬಡವಂಗೆ
ಸಾಡುಮಾತೇಕೆ? ಸರ್ವಜ್ಞ ॥ ೧೯ ॥

ಅಬ್ಬರಿಸಿಕೂಗೇಕೆ? ಕಬ್ಬೇಕೆಬೋಡನಿಗೆ?
ನಿಬ್ಬಣವೇಕೆಕುರುಡನಿಗೆ? ವನದೊಳಗೆ
ಹೆಬ್ಬುಲಿಯದೇಕೆ? ಸರ್ವಜ್ಞ ॥ ೨೦ ॥

ಆನೆಗಂದಣವೇಕೆ? ಶ್ವಾನಂಗೆಸೊಬಗೇಕೆ?
ಗಾಣಹೂಡುವಗೆಮುಡಿಯೇಕೆ? ಕುರುಡಂಗೆ
ಛಸಂದವೇಕೆ? ಸರ್ವಜ್ಞ ॥ ೨೧ ॥

ಉಂಡುಕೊಂಡಿರಹೊಲ್ಲ। ಕೊಂಡವರಕೆಳೆಹೊಲ್ಲ
ಮಂಡೆಯಲಿಹೊರೆಯಹೊರಹೊಲ್ಲ। ರಾಜಂಗೆ
ಕೊಂಡೆಯವೆಹೊಲ್ಲ ಸರ್ವಜ್ಞ ॥ ೨೨ ॥
ಮಗಳಮಕ್ಕಳುಹೊಲ್ಲ। ಹಗೆಯರಾಕೆಳೆಹೊಲ್ಲ
ಜಗಳವಾಡುವರನೆರೆಹೊಲ್ಲ। ಮೂಗಿಗೆ
ನೆಗಡಿತಾಹೊಲ್ಲ ಸರ್ವಜ್ಞ ॥ ೨೩ ॥
ನುಚ್ಚನ್ನಮುಣಹೊಲ್ಲ। ಮತ್ಸರನಕೆಳೆಹೊಲ್ಲ
ಕುತ್ತದಿಂನುಡಿವಮಗಹೊಲ್ಲ। ಒಡೆಯಂಗೆ
ಮುಚ್ಚುಗಣ್ಣೊಲ್ಲ ಸರ್ವಜ್ಞ ॥ ೨೪ ॥
ಹರಳುಹಾದಿಗೆಹೊಲ್ಲ। ಹುರುಡೊಲ್ಲಹುಲಿಯೊಡನೆ
ತಿರುಳುಕೈಸೂರೆಯಿಡಲೊಲ್ಲ। ತೊತ್ತಿಗೆ
ಕುರುಳುತಾಹೊಲ್ಲ ಸರ್ವಜ್ಞ ॥ ೨೫ ॥
ಉಪ್ಪಿಲ್ಲದುಣಹೊಲ್ಲ। ಮುಪ್ಪುಬಡತನಹೊಲ್ಲ
ತಪ್ಪಾದನುಡಿಯಸತಿಹೊಲ್ಲ। ಹಾದಿಯಲಿ
ಸರ್ಪವಿರಹೊಲ್ಲ ಸರ್ವಜ್ಞ ॥ ೨೬ ॥
ಜೋಳುವಲೆಯಿರಹೊಲ್ಲ। ಕೀಳನೊಳುಇರಸಲ್ಲ
ಹೇಳದಾತನಕೆಬರಹೊಲ್ಲ। ಕೊಂಡೆಯರ
ಗಾಳಿತಾಹೊಲ್ಲ ಸರ್ವಜ್ಞ ॥ ೨೭ ॥
ಅಗಡೆತ್ತಕೊಳಹೊಲ್ಲ। ಜಗಳವಾಡಲುಹೊಲ್ಲ
ಪಗಡೆಯಾಡುವನಕೆಳೆಹೊಲ್ಲ। ಸಜ್ಜನರ
ನಗಲುವುದುಹೊಲ್ಲ ಸರ್ವಜ್ಞ ॥ ೨೮ ॥
ಮೋಟೆತ್ತಕೊಳಹೊಲ್ಲ। ಮೋಟುಗಾರಿಕೆಹೊಲ್ಲ
ತಾಟಗಿತ್ತಿಯರನೆರೆಹೊಲ್ಲ। ಕಜ್ಜಿಯ
ಕಾಟವೇಹೊಲ್ಲ ಸರ್ವಜ್ಞ ॥ ೨೯ ॥
ಇದ್ದೂರುಹಗೆಹೊಲ್ಲ। ಕದ್ದುಪೊರೆಯಲುಹೊಲ್ಲ
ತಿದ್ದದಾಎತ್ತತರಹೊಲ್ಲ। ಮನೆಯೊಳಗೆ
ಗುದ್ದಾಟಹೊಲ್ಲ ಸರ್ವಜ್ಞ ॥ ೩೦ ॥

ಮೊಸರಿಲ್ಲದಾಊಟ । ಕೆಸರಿಲ್ಲದಿಹಗದ್ದೆ
ಹಸನಿಲ್ಲದಿರ್ಪಸಂಸಾರ । ಶ್ರಾವಣದ
ಬಿಸಿಲುಕಾದಂತೆ ಸರ್ವಜ್ಞ ॥ ೫೩ ॥
ತುಪ್ಪವಿಲ್ಲದಊಟ । ಒಪ್ಪವಿಲ್ಲದಹೆಣ್ಣು
ತಪ್ಪಲಾಗೆಡ್ಡೆ ಕೊನೆಕಬ್ಬು । ಇವುನಾಲ್ಕು
ಸಪ್ಪೆಕಾಣಯ್ಯ ಸರ್ವಜ್ಞ ॥ ೫೪ ॥
ಆಸೆಯಿಲ್ಲದಊಟ । ವಿಾಸೆಯಿಲ್ಲದಮೋರೆ
ವಾಸನೆಯಮುಡಿಯದಿಹತುರುಬು । ಇವುಮೂರು
ಲೇಸಲ್ಲವೆಂದ ಸರ್ವಜ್ಞ ॥ ೫೫ ॥
ತೊಗೆಯುಯಿಲ್ಲದಊಟ । ಅಗತೆಯಿಲ್ಲದತೋಟ
ನಗೆಯಿಲ್ಲದವರಒಡನಾಟ । ತೂತಿನ
ದೋಣಿಯಂತಿಕಾಣೊ ಸರ್ವಜ್ಞ ॥ ೫೬ ॥
ರೊಟ್ಟಿಯಿಲ್ಲದಊಟ । ಕಟ್ಟೆಯಿಲ್ಲದಮರನು
ಹೆಟ್ಟುಗೆಯರಿಲ್ಲದರಮನೆಯು । ಚಂದನವ
ಕುಟ್ಟಿಕುಡಿದಂತೆ ಸರ್ವಜ್ಞ ॥ ೫೭ ॥
ಮೋಡಿಯಿಲ್ಲದಬಿಲ್ಲು । ಕೋಡಿಯಿಲ್ಲದಕೆರೆಯು
ಬೇಡಂಗೆಮಾಡಿದುಪಕಾರ । ಇವುಮೂರು
ಕೇಡುಕಾಣಯ್ಯ ಸರ್ವಜ್ಞ ॥ ೫೮ ॥
ಆಸರಿಲ್ಲದನಿದ್ದೆ । ಪೂಸರಿಲ್ಲದವಿಾಹ
ಭಾಷೆಯಿಲ್ಲದನಕೆಳೆತನವು । ವೋಟ ಕೈ
ಬೀಸಿಕರೆದಂತೆ ಸರ್ವಜ್ಞ ॥ ೫೯ ॥
ಕೋಳಿಯನುಹಂದಿಯನು । ಮೋಳದಿಂಪಲಿಸಾಕಿ
ಆಳುತ್ತಕಡಿದುಬಡಿತಿಂಬ । ಪಾಪಿಗಳ
ಮೇಳವೇನರಕ ಸರ್ವಜ್ಞ ॥ ೬೦ ॥
ತಾಯುಮುಂವಣಶಿಶುವ । ತಾಯನಗಲಿಸಿಕೊಲ್ವ
ತಾಯಿಯುನುಮುಗುವಕೊಲ್ಲುವನು । ಅವತನ್ನ
ತಾಯಕೊಂದಂತೆ ಸರ್ವಜ್ಞ ॥ ೬೧ ॥

ಸಾದವಾದಿಗರೆಂಬ । ಭೇದಗಳನಿಡಬೇಡ
ವಾದಿಗನುತಿಂಬಪಶುವನ್ನು । ಸಾದ ತನ
ಗಾಢವರತಿಂಬ ಸರ್ವಜ್ಞ ॥ ೬೨ ॥

ಸತ್ತೆತ್ತ ಹೊರುವವನು । ಉತ್ತಮದವಾದಿಗನು
ಸತ್ತಕತ್ತೆಯನು ಅರ್ಥಿಯಲಿ । ಹೊರುವವನು
ಎತ್ತಣವನೈಯ ಸರ್ವಜ್ಞ ॥ ೬೩ ॥

* * * * ॥ ೬೪—೬೯ ॥

ಗವುಡನೊಳುಹಗೆತನವು । ಕಿವುಡನೊಡನೇಕಾಂತ
ತವುಡಿನಾಅಡಿಗೆಯುಣ್ಣುವುದು । ಇವುಮೂರು
ಅವುಡೆ (?) ಯಂತಕ್ಕು ಸರ್ವಜ್ಞ ॥ ೭೨ ॥

ಕೆಟ್ಟಹಾಲಿಗಿಂತ । ಹಿಟ್ಟಿನಾತಿಳಿಲೇಸು
ಕೆಟ್ಟುಬದುಕಿದನಕೆಳೆಗಿಂತ । ಕಾಡಿನ
ಬೆಟ್ಟವೇಲೇಸು ಸರ್ವಜ್ಞ ॥ ೭೩ ॥

೨೮. ವಿಟಗಾತಿಯರ ಪದ್ಧತಿ.

ಅರಳಿಗೇಹೂವಿಲ್ಲ । ಕುರುಳುಕೋಡಗಕಿಲ್ಲ
ದುರುಳರಿಗೆ ಕಲಿಸುವವರಿಲ್ಲ । ಸೂಳೆಗೆ
ಮರುಕವೇ ಇಲ್ಲ ಸರ್ವಜ್ಞ ॥ ೧ ॥

ಅತ್ತಿಮರಕರಳಿಲ್ಲ । ಕತ್ತೆಗಾ ಕೋಡಿಲ್ಲ
ಬತ್ತಿದ ಕೆರೆಗೆ ತೆರೆಯಿಲ್ಲ । ಸೂಳೆಗೆ
ಸತ್ಯವೇ ಇಲ್ಲ ಸರ್ವಜ್ಞ ॥ ೨ ॥

ಆಲಕ್ಕೆ ಹೂವಿಲ್ಲ । ಸಾಲಕ್ಕೆ ಕೊನೆಯಿಲ್ಲ
ಕಾಲಿಲ್ಲದವಗೆ ನಡೆಯಿಲ್ಲ । ಸೂಳೆಗೆ
ಶೀಲವೇ ಇಲ್ಲ ಸರ್ವಜ್ಞ ॥ ೩ ॥

* * * * ॥ ೪—೯ ॥

ಹಪ್ಪು ಹಾವನುನುಂಗೆ । ಮದ್ದುಕುತ್ತವನುಂಗೆ
ಸಿಪ್ಪೆಯನುನುಂಗಿ ಸೂಳೆ । ತನ್ನನ್ನು
ಹೊದ್ದಿದರನುಂಗು ಸರ್ವಜ್ಞ ॥ ೧೦ ॥

ಬಿಕ್ಕಿಬಿಕ್ಕಿಯಳುತ್ತ । ಲಿಕ್ಕುವಳು ಕಣ್ಣೀರ
ಸಿಕ್ಕಿದಳು ಸೂಳೆಯೆನಬೇಡ । ರೊಕ್ಕವನು
ತೆಕ್ಕೊಂಬತನಕ ಸರ್ವಜ್ಞ ॥ ೧೧ ॥
ಹರಿಗೋಲುಸೂಳೆಯಾ । ತೆರನೆರಡು ವೊಂದೈಯ
ಹರಿಗೋಲುದಡಕೆ ಸೇರಿದರೆ । ಮತ್ತೊಬ್ಬ
ನೆರಗಿಹತ್ತುವನು ಸರ್ವಜ್ಞ ॥ ೧೨ ॥
ಹದ್ದಿಗಲ್ಲಣವೇಕೆ ? ಗುದ್ದಲಿಗೆ ವೊರೆಯೇಕೆ ?
ಇದ್ದಲಿಗೆ ಬಿಳುಪುತಾನೇಕೆ ? ಸೂಳೆಗೆ
ನಿದ್ದೆಗಣ್ಣೇಕೆ ? ಸರ್ವಜ್ಞ ॥ ೧೩ ॥
ಒಕ್ಕಲಿಗೆ ಊರಾಸೆ । ಮಕ್ಕಳಿಗೆ ತಾಯಾಸೆ
ಜಕ್ಕವಕ್ಕಿಗೆ ಕೊಳದಾಸೆ । ಸೂಳೆಗೆ
ರೊಕ್ಕದೊಳಗಾಸೆ ಸರ್ವಜ್ಞ ॥ ೧೪ ॥
ಒಡೆದವಕಣ್ಬಂದರೆ । ಸಿಡಿಲೆರಗಿ ಬದುಕಿದರೆ
ನಡುಗಡಲ ಮುಳುಗಿವುಳಿಯುವರೆ । ಸೂಳೆಯ
ನುಡಿಯನೆಚ್ಚುವುದು ಸರ್ವಜ್ಞ ॥ ೧೫ ॥
ಮಳೆಗೆಹಂದರಹೊಲ್ಲ । ಗಿಳಿಗೆಬಾವುಗ ಹೊಲ್ಲ
ಸುಳಿಗಾಳಿಹೊಲ್ಲ ಸೊಡರಿಂಗೆ । ಸೂಳೆಗೆ
ದಳೆಗಾಲು ಹೊಲ್ಲಸರ್ವಜ್ಞ ॥ ೧೬ ॥
ಮಳೆಗೆ ಮಂಟಪಲೇಸು । ಗಿಳಿಗೆಪಂಜರಲೇಸು
ಸುಳಿಗಾಳಿಲೇಸು ಬೆವರಿಂಗೆ । ಸೂಳೆಗೆ
ಗಳಿಸುವುದೆಲೇಸು ಸರ್ವಜ್ಞ ॥ ೧೭ ॥

* * * * ॥ ೧೮—೪೨ ॥

೨೯. ಬೆಡಗಿನ ಪದ್ಧತಿ.

ಕಲ್ಲರಳಿಹೂವಾಗಿ । ಎಲ್ಲರಿಗೆ ಬೇಕಾಗಿ
ಮಲ್ಲಿಕಾರ್ಜುನ ಶಿಖರಬೆಳಕಾಗಿ । ಇದರರ್ಥ
ಬಲ್ಲವರು ಹೇಳಿ ಸರ್ವಜ್ಞ ॥ ೧ ॥

ಮರನೊತ್ತಿ ಬೇಯುವುದು । ಉರಿತಾಕಿ ಬೇಯುವುದು
ಪುರಗಳನು ನುಂಗಿ ಬಗುಳುವುದು । ಲೋಕದಲಿ
ನರನಿದೇನೆಂಬ ಸರ್ವಜ್ಞ ॥ ೨ ॥
ಉರಿಬಂದು ಜೇಲಿಯನು । ಹರಿದುಹೊಕ್ಕುದು ಕಂಡೆ
ಅರಿದಿದುಬಗೆಗೆ ಕವಿಕುಲದ । ಶ್ರೇಷ್ಠರೆ
ಲ್ಲರಿತಿದನುಪೇಳಿ ಸರ್ವಜ್ಞ ॥ ೩ ॥
ಕಾಲಿಲ್ಲದಲೆ ಹರಿಗು । ತೋಳಿಲ್ಲದಲೆ ಹೊರುಗು
ನಾಲಿಗಿಲ್ಲದೆಯೆ ಉಲಿಯುವುದು । ಕವಿಕುಲದ
ಮೇಲುಗಳೆಪೇಳಿ ಸರ್ವಜ್ಞ ॥ ೪ ॥
ಇರಿದರೆಯು ಯೇರಿಲ್ಲ । ಹರಿದರೆಯು ಸೀಳಿಲ್ಲ
ತಿರುಗೂಳಗೊಂಡರುಣಲಿಲ್ಲ । ಕವಿಗಳಿರ
ಅರಿದಿದನು ಹೇಳಿ ಸರ್ವಜ್ಞ ॥ ೫ ॥
ಆಡಿವರೆ ಆಡುವುದು । ಓಡಿಮರನೇರುವುದು
ಕೂಡದೇಕೊಂಕಿ ನಡೆಯುವುದು । ಕಡಿದರದು
ಬಾಡದವದಹೇಳಿ ಸರ್ವಜ್ಞ ॥ ೬ ॥
ಕತ್ತಿಕ್ಕೆಹುರಿಸುತ್ತಿ । ಬತ್ತಿಯಂತುಳಿವುದು
ಕಿತ್ತುಬೀಸಾಡೆ ನಡೆಯುವುದು । ಕವಿಜನರೆ
ಅರ್ಥಿಯಿಂಹೇಳಿ ಸರ್ವಜ್ಞ ॥ ೭ ॥
ಕಚ್ಚಿದರೆಕಚ್ಚುವುದು । ಕಿಚ್ಚಲ್ಲಚೇಳಲ್ಲ
ಅಚ್ಚರಿಯಲ್ಲ ಅರಿವಲ್ಲ । ಈಮಾತು
ನಿಶ್ಚಯವೆಲ್ಲ ಸರ್ವಜ್ಞ ॥ ೮ ॥
ಹತ್ತುಸಾವಿರಕಣ್ಣು । ನೆತ್ತಿಯೊಳಗುರುಬಾಲ
ಹುತ್ತಿನಹುಳುವಹಿಡಿಯುವುದು । ಕವಿಜನರ
ಮೊತ್ತವಿದ ಹೇಳಿ ಸರ್ವಜ್ಞ ॥ ೯ ॥
ತನ್ನಸುತ್ತಲುಮಣೆಯು । ಬೆಣ್ಣೆಕುಡಿವಾಲುಗಳು
ತಿನ್ನದೇಹಿಡಿದುತರುತಿಹುವು । ಕವಿಗಳಿದ
ನನ್ನಿಯಿಂಹೇಳಿ ಸರ್ವಜ್ಞ ॥ ೧೦ ॥

ಬಟ್ಟಲಿನಬಾಯಂತೆ । ಹುಟ್ಟುವುದು ಲೋಕದೊಳು
ಮುಟ್ಟುವುದು ತನ್ನ ಹೆಂಡಿರನು । ಕವಿಗಳೊಳು
ಧಿಟ್ಟರಿದಹೇಳಿ ಸರ್ವಜ್ಞ ॥ ೧೧ ॥
ಹಲ್ಲುನಾಲಗೆಯಿಲ್ಲ । ಸೊಲ್ಲುಸೋಜಿಗವಲ್ಲ
ಕೊಲ್ಲದೇಮೃಗವಹಿಡಿಯುವುದು । ಲೋಕದೊಳ
ಗೆಲ್ಲತಾವಿನಲಿ ಸರ್ವಜ್ಞ ॥ ೧೨ ॥
ಆಸನದಲುಂಬುವುದು । ಸೂಸುವುದು ಬಾಯಲ್ಲಿ
ಬೇಸರದೆಹೊತ್ತುಕೊಳ್ಳುವುದು । ಕವಿಗಳೊಳು
ಸಾಸಿಗರುಪೇಳಿ ಸರ್ವಜ್ಞ ॥ ೧೩ ॥
ಹಲವುಮಕ್ಕಳತಂದೆ । ತಲೆಯಲ್ಲಿಜುಟ್ಟವಗೆ
ಸಲೆಗಳಿಗೆ ಜಾವವರಿವವನ । ಹೆಂಡತಿಗೆ
ಮೊಲೆಯಿಲ್ಲನೋಡು ಸರ್ವಜ್ಞ ॥ ೧೪ ॥
ಮಲ್ಲಿಗೆಗೆ ಹುಳಿಯಕ್ಕು । ಕಲ್ಲಿಗೆಗಂಟಕ್ಕು
ಹಲ್ಲಿಗೆನೊಣನುಸವಿಯಕ್ಕು । ಕನ್ನಡದ
ಸೊಲ್ಲುಗಳನೋಡು ಸರ್ವಜ್ಞ ॥ ೧೫ ॥
ಅಣಿಯನೋಡಿದನೊಬ್ಬ । ಮಣಿಯಮಾಡಿದನೊಬ್ಬ
ಕುಣಿದಾಡಿಸುವವತಾನೊಬ್ಬ । ಸನ್ನೆಯಲಿ
ಹೆಣವಾರುತೈತೆ ಸರ್ವಜ್ಞ ॥ ೧೬ ॥
ಎಂಟುಬಳ್ಳದನಾವು । ಗಂಟಲಲಿ ಮುಳ್ಳುಂಟು
ಬಂಟರನು ಹಿಡಿದು ಬಡಿಸುವುದು । ಕವಿಯೆಂಬ
ತೋಂಟರಿದಹೇಳಿ ಸರ್ವಜ್ಞ ॥ ೧೭ ॥
ಬಂದೇನುಮತ್ತೊಮ್ಮೆ । ಬಂದೇನು ಹೋದೇನು
ನಿಂದೇನುನಿಂದು ಇರಲೊಲ್ಲೆ । ಹೋದೇನು
ಬಂದೇನುಬಾರೆ ಸರ್ವಜ್ಞ ॥ ೧೮ ॥
ಕಚ್ಚಿದೊಡೆಲುರಿಯುವುದು । ಕಿಚ್ಚುಕೊಳ್ಳಿಗಳಲ್ಲ
ಅಚ್ಚರಿಯಲ್ಲ ಅರಿದಲ್ಲ । ಈಮಾತು
ನಿಶ್ಚಯುವೆಲ್ಲ ಸರ್ವಜ್ಞ ॥ ೧೯ ॥

ಕಡೆಕಪ್ಪುನಡುಬಿಳಿದು । ಉಡುವವಸ್ತ್ರವದಲ್ಲ
ಬಿಡದೆನೀರುಂಟು ಮಡುವಲ್ಲ । ಕವಿಗಳೀ
ಬೆಡೆಗುಪೇಳುವುದು ಸರ್ವಜ್ಞ ॥ ೨೦ ॥

ಮೂರು ಕಾಲಲಿ ನಿಂತು । ಗೀರಿತಿಂಬುದು ಮರಸ
ಆರಾರೆನೀರು ಕುಡಿಯುವುದು । ಕವಿಯೆಂಬ
ಧೀರರಿದಹೇಳಿ ಸರ್ವಜ್ಞ ॥ ೨೧ ॥

ಒಣಗಿದಾಮರ ಚಿಗುತು । ಬಿಣಲುಬಿಡುವುದು ಕಂಡೆ
ತಣಿಗೆಯಾಸ್ಥಾನಕ್ಕೆ ಬಹುದು । ಕವಿಯೆಂಬ
ಗುಣಯುತರು ಪೇಳಿ ಸರ್ವಜ್ಞ ॥ ೨೨ ॥

ನೆತ್ತಿಯಲಿಉಂಬುದು । ಸುತ್ತಲೂ ಸುರಿಯುವುದು
ಎತ್ತಿದರೆ ಎರಡುಹೋಳಹುದು । ಕವಿಗಳಿದ
ರರ್ಥವನು ಹೇಳಿಸರ್ವಜ್ಞ ॥ ೨೩ ॥

ಅರೆಯಕಲ್ಲಿನಮೇಲೆ । ಮರಮೂಡಿದುದಕಂಡೆ
ಮರದಮೇಲೆರಡು ಕೈಕಂಡೆ । ಚೆನ್ನಾಗಿ
ಇರುವುದನು ಕಂಡೆ ಸರ್ವಜ್ಞ ॥ ೨೪ ॥

ಹತ್ತುಸಾವಿರಕಣ್ಣು । ನೆತ್ತಿಯಲಿತಾಬಾಲ
ಹತ್ತೆಂಟುಮಿಕವ ಹಿಡಿಯುವುದು । ಕವಿಗಳಿದ
ರರ್ಥವನುಪೇಳಿ ಸರ್ವಜ್ಞ ॥ ೨೫ ॥

ಕೆನ್ನೆಯಲಿಕುಡಿವಾಲ । ತನ್ನಸುತ್ತಲುಮಣಿಯು
ತನ್ನದೇಹವನೆಹರಡುವುದು । ಕವಿಯೆಂಬ
ಚನ್ನರಿದಹೇಳಿ ಸರ್ವಜ್ಞ ॥ ೨೬ ॥

ಮುಂಗೈಯೊಳಾಡುವುದು । ಹಿಂಗುವುದು ಹಿಗ್ಗುವುದು
ಸಿಂಗಿಯಲಿ ಸೀಲಬಿಡುತಿಹುದು । ಆವಿಕದ
ಭಂಗವನು ನೋಡಿ ಸರ್ವಜ್ಞ ॥ ೨೭ ॥

ಹತ್ತುತ್ತಲದೆಕೆಂಪು । ಮತ್ತಾರುತಲೆಕಪ್ಪು
ಹೆತ್ತಪ್ಪನೊಡಲನುರಿಸುವುದು । ಕವಿಗಳಿದ
ರರ್ಥವನು ಪೇಳಿ ಸರ್ವಜ್ಞ ॥ ೨೮ ॥

ಅರಮನೆಯಲಿರ್ಪುದದು । ಕರೆದಲ್ಲಿಬರುತಿಹುದು
ತರಿವುದದು ತನ್ನಬಳಗವನು । ಕವಿಗಳಿದ
ನರುಹುವುದು ಬೇಗ ಸರ್ವಜ್ಞ ॥ ೨೯ ॥
ಧರೆಯೊಳಗೆಹುಟ್ಟಿಯುಂ । ಬರದೊಳಗೆ ಓಡುವುದು
ದೊರೆಯುತ್ತಕಿಡಿಯನುಗುಳುವುದು । ಕವಿಯೆಂಬ
ನೆರೆಜಾಣಪೇಳು ಸರ್ವಜ್ಞ ॥ ೩೦ ॥
ಇಂತಅಂಬಲಿಯೊಳಗೆ । ನಿಂತಿರ್ಪನಿವನಾರು ?
ಅಂತಕನಲ್ಲ ಅಜನಲ್ಲ । ಅಂಬಲಿಯ
ನೆಂತುಂಬನಯ್ಯ ಸರ್ವಜ್ಞ ॥ ೩೧ ॥
ಸಂದಮೇಲ್ಸುಡುವುದದು । ಬೆಂದಮೇಲುರಿಯುವುದು
ಬಂಧುಗಳನೆದ್ದು ಬಡಿಯುವುದು । ನೀವಿದರ
ದಂದುಗವನೋಡಿ ಸರ್ವಜ್ಞ ॥ ೩೨ ॥
ಅಟ್ಟರೂ ಆದರಣೆ । ಸುಟ್ಟರೂ ಕುಂಟೆನಿಯು
ಇಟ್ಟಗೆಯಮೂಗನರಿದರು । ಮೂರುಭವ
ಕಟ್ಟಿಕೂಡುವುವು ಸರ್ವಜ್ಞ ॥ ೩೩ ॥

* * * * ॥ ೩೪—೩೭ ॥

+೧೦೬
೧೦೯

೩೦. ಮಿಶ್ರಪದ್ಯಗಳು.

ಸೃಷ್ಟಿಯೆಲ್ಲವನುಮನ । ಮುಟ್ಟುವದುನಿಮಿಷಕ್ಕೆ
ನೆಟ್ಟಭಾವನೆಯುಲಿಂಗ । ಮೂರೊಂದಿ
ಶ್ರೇಷ್ಠ ತಾನಹನು ಸರ್ವಜ್ಞ ॥ ೧ ॥
ಕಟ್ಟಬಿಟ್ಟಲುಶಿವನು । ಕೊಟ್ಟಕರ್ತನೆ ನಾನು
ಕಟ್ಟಿದಲಿಂಗಭಜಿಸಿದೊಡೆ । ಆವಾಗ
ಬಟ್ಟಬಯಲಕ್ಕು ಸರ್ವಜ್ಞ ॥ ೨ ॥
ಅಂಗವನುಲಿಂಗವನು । ಸಂಗೊಳಿಸಲೆಂತಕ್ಕು
ಲಿಂಗದಲಿನೆನೆಹುಘನವಾಗೆ । ಆ ಲಿಂಗ
ಅಂಗ ತಾನಕ್ಕು ಸರ್ವಜ್ಞ ॥ ೩ ॥

ಹಲವನೋದಿದೊಡೇನು ? ಚಲುವನಾದೊಡದೇನು ?
ಕುಲವಂತನಾಗಿಫಲವೇನು ? ಲಿಂಗದ
ನೊಲುಮೆಯಿಲ್ಲದವ ಸರ್ವಜ್ಞ ॥ ೪ ॥

ಪುಸಿವನ ವ್ಯವಹಾರ । ಕಸಹತ್ತಿದಾರಂಬ
ವಿಷಯವುಳ್ಳವನಗುರುತನವು । ಇವುಮೂರು
ಮಸಿವಣ್ಣಕಂಡ್ಯಾ ಸರ್ವಜ್ಞ ॥ ೫ ॥

ಕತ್ತೆಯಕಿವಿಯಂತೆ । ಬಿತ್ತಾರುಬೆಳೆದಾರು
ನೊತ್ತೊತ್ತಿಹೊಗೆಯಕುಡಿದಾರು । ಜಗವೆಲ್ಲ
ಕತ್ತೆಯೆಂದಾರು ಸರ್ವಜ್ಞ ॥ ೬ ॥

ಕುಂಡಲಿಯಭೇದದ । ಗುಂಡನಾಳದ ನಡುವೆ!
ಮಂಡಲಿಸುತಿರ್ಪ ಹಂಸನ । ಹತ್ತಿರ
ಕಂಡಿರ್ಪಸುಳಿವು ಸರ್ವಜ್ಞ ॥ ೭ ॥

ಕುಂಡಲಿಯಸರ್ಪವನು । ಉಂಡಲ್ಲಿಯಲ್ಲವೇ !
ಮಂಡಲವುಮೂರು ತನಗಕ್ಕು । ಕಾಲನಿಗೆ
ಗಂಡತಾನಕ್ಕು ಸರ್ವಜ್ಞ ॥ ೮ ॥

ಮುತ್ತೊಡೆದುಹತ್ತಿಕ್ಕು । ಮತ್ತಾನೆಸತ್ತಿಕ್ಕು
ಹುತ್ತವನೇರಿನರಿಕೂಗೆ । ಲೋಕಕ್ಕೆ
ಕತ್ತಲೋಡಿತ್ತು ಸರ್ವಜ್ಞ ॥ ೯ ॥

ಉತ್ತುಂಗಮಾಣಿಕದ । ಭಿತ್ತಿಮಂಟಪದೊಳಗೆ
ನಿತ್ಯನಿರ್ಮಲದನಿಜಕಂಡ । ಯೋಗಿಗೆ
ಯೆತ್ತಣಸಾವು? ಸರ್ವಜ್ಞ ॥ ೧೦ ॥

ಆತ್ಮದಾಲಿಂಗವನು । ಪ್ರೀತಿಯಿಂದರಿತೊಡೆ
ಸೂತಕವಿಲ್ಲ ಭಯವಿಲ್ಲ । ಪಂಚಮಹ
ಪಾತಕವೆಯಿಲ್ಲ ಸರ್ವಜ್ಞ ॥ ೧೧ ॥

ನಾದದಾಬಳಿವಿಡಿದು । ಎಯ್ದುಸೈಪರಮನನು
ಆದಿಯನರಿದು ಸುಖಿಯಾಗು । ನೀ ಯಮನ
ಹಾದಿಗೊಳಬೇಡ ಸರ್ವಜ್ಞ ॥ ೧೨ ॥

ಯೆಲ್ಲದರಳಿಕೆಬಿ। ಟ್ಟಲ್ಲಿಯೇ ಕೈಲಾಸ
ಯೆಲ್ಲವನುಬಯಸಿತಾ ಭ್ರಮಿಸಿ। ದೊಡೆನರಕ
ಅಲ್ಲಿಯೇನೋಡು ಸರ್ವಜ್ಞ ॥ ೧೩ ॥

ಅರುವತ್ತುಸಿಂಹವೊಂ। ದಿರುವೆ ಕಚ್ಚಿತುಕಂಡೆ
ಮರವೆಕೊಂಬೊಡೆದು ಧರೆಬೆಂದು। ಕೈಲಾಸ
ವುರಿವುದಕಂಡೆ ಸರ್ವಜ್ಞ ॥ ೧೪ ॥

ಸೀಗೆಬಾಗೆಯನಾರು। ಕಾಗಿಮೋರೆಯಗಡ್ಡೆ
ಸಾಗರದಸತ್ತುವೊಡಗೂಡೆ। ಹೇಮತಾ
ನಾಗಲೇಅಕ್ಕು ಸರ್ವಜ್ಞ ॥ ೧೫ ॥

ಹೆಂಣುಬಿಟ್ಟವದೈವ। ಹೊನ್ನುಬಿಟ್ಟವದೈವ
ಮಂಣುಬಿಟ್ಟವನೆದೈವ। ಲೋಕಕ್ಕೆ ಮು
ಕ್ಕಣ್ಣನೆದೈವ ಸರ್ವಜ್ಞ ॥ ೧೬ ॥

ಓದಿದವೋದೆಲ್ಲ। ಮೇದಕಬ್ಬಿನಸಿಪ್ಪೆ
ವೋದಿನಒಡಲು ತಿಳಿಯಲ್ಕೆ। ಸಿಪ್ಪೆಕ
ಬ್ಬಾದಂತೆ ತಾನೆ ಸರ್ವಜ್ಞ ॥ ೧೭ ॥

ಲಘು ಟಿಪ್ಪಣಿ.

1. ೧ ಸೂಡು—ಮುಡಿ ೩ ಮುಂ, ದೇವಋಷಿಯಾಗಿ, ೯ ಬಿಂದು+ಇಟ್ಟು= ಬಿಂದಿಟ್ಟು ೨೦ ಹರುವಾಗಿಹೋಯ್ತು—ಸುಲಭವಾಗಿ ತಿಳಿಯಿತು ೨೪ ಅಂಬರಕೆ—ಆಕಾಶಕ್ಕೆ, ೨೮ ಪಂಚಪಾಶ—ಪಂಚಭೂತಗಳು.

2. ೪ ಸುರಭಿ—ಕಾಮಧೇನುವು ಆವು—ಹಸು. ಪರುಸ—ಸ್ಪರ್ಶವೇಧಿಯೆಂಬ (ಲೋಹವನ್ನು ಚಿನ್ನಮಾಡುವ) ಕಲ್ಲು. ೮ ಐಮೊಗ—ಪಂಚಮುಖಗಳು ೯ ದರುಶನಗಳು ಆರು—ಸಾಂಖ್ಯ, ಯೋಗ, ನ್ಯಾಯ, ವೈಶೇಷಿಕ, ಪೂರ್ವಮೀಮಾಂಸೆ, ಉತ್ತರಮೀಮಾಂಸೆ ಇವು. ಪುರುಷರು ಮೂವರು ತ್ರಿಮೂರ್ತಿಗಳು ೧೦. ಒಮ್ಮಾರು—ಒಂದುಮಾರು. ೧೭. ಬೆಳಲಹಣ್ಣು—ಬೇಲದಹಣ್ಣು ೩೦. ರಾಜಾನ್ನ—ರಾಜವೆಂಬಬತ್ತ. ೩೮. ಹಯನು—ಕರೆಯುವ ಹಸುವು. ೪೦. ತತ್ವಮಸಿ—ತತ್, ತ್ವಂ, ಅಸಿ ಎಂಬವೇದಾಂತವಾಕ್ಯಗಳು. ೪೪. ಕರತಳಾಮಲಕ—ಅಂಗೈಯಲ್ಲಿಹಿಡಿದ ನೆಲ್ಲಿಯಕಾಯಿ. ೪೬. ಹೊಲಬು (ಮುಕ್ತಿಯ) ಮಾರ್ಗ.

3. ೭ ಹುಟ್ಟಪನಶಿರ—ಬ್ರಹ್ಮನತಲೆ ೮. ಪೊಡಮಡುತ—ನಮಸ್ಕರಿಸುತ್ತ. ೧೧. ಕುಂಜರವು—ಆನೆಯು ೧೬. ಹತ್ತುಜನನ—ದಶಾವತಾರಗಳು. ೨೩. ಆರಕ್ಕರ—ಷಡಕ್ಷರಗಳು (ಓಂನಮಶ್ಶಿವಾಯ) ೨೪ ಕನಿದಂ—ಕೋಪಿಸಿದವನು ೨೫. ಬಲ್ಲಿದ—ಘನವಾದ. ೩೦. ಕಾಯುವೆಂಬ ಕಮಲವೇ ಸಂಜ್ಞೆ. ಕಾಯ (?)

4. ೧. ನಿಟ್ಟಿಪ್ಪನು—ನೋಡುವವನು. ೧೧. ಕೊಟ್ಟಗೆ+ಉರಿದಂತೆ. ೧೪. ಜಾಳು—ಒಣಮಾತುಗಳು ೧೫. ಬತ್ತೀಸ—ಮೂವತ್ತೆರಡು. ೨೪. ಬಣಗುಗಳ—ಮೂಢರನ್ನು.

5. ೩ ಕಾತಂತೆ—ಕಾಯಿಗಳುಬಿಟ್ಟಹಾಗೆ. ೭ ವರ್ಮ—ಕವಚವು (ಧರ್ಮ ?) ೮. ಅರೆನೂರನು—ಅಯ್ವತ್ತನ್ನು. ೧೧. ಬೇಹಾರ—ವ್ಯಾಪಾರ. ೧೨. ಕಾಯಿಕ—ಶರೀರದ ಸಂಬಂಧವಾದ ೧೬. ನವನಾಳ—ಕಿವಿಮುಂತಾದ ನವರಂಧ್ರಗಳು. ೧೭ ಹರದೆಯರು—ಸ್ತ್ರೀಯರು. ಕರಣಗಳ—ಇಂದ್ರಿಯಗಳನ್ನು.

6. ೧ ಆರರಅಟ್ಟುಳಿ—ಕಾಮಕ್ರೋಧಾದಿ ಅರಿಷಡ್ವರ್ಗದ ಉಪದ್ರವ. ಮೂರುಕಂಟಕ—ತಾಪತ್ರಯಗಳು. ೪. ಆಣವಾದಿಯೊಳು—ಆಣವಮುಂತಾದ ಮೂರುಮಲಗಳಲ್ಲಿ. ಕೇಣವಿಡದೆ—ಕ್ರೋಧವಿಲ್ಲದೆ. ೬. ಮಲಯಜ—ಶ್ರೀಗಂಧದ ಮರ. ೧೧. ತಾಕು—ತಡೆ ೧೨. ಅರುಹು—ಜ್ಞಾನ ೧೪. ಅಯ್ದರ ಅಟ್ಟುಳಿ—ಪಂಚೇಂದ್ರಿಯಗಳ ಕಾಟ.

7. ಪಂಚಮಹಾಪಾತಕ—ಬ್ರಹ್ಮಹತ್ಯಾದಿ ಮಹಾಪಾಪಗಳು. ೧೩. ಕಳಹೋಗಿ—ಕದಿಯಲಿಕ್ಕೆಹೋಗಿ. ೧೬. ಮಿಥ್ಯ—ಸುಳ್ಳು. ೨೧. ಮುಕುರ—ಕನ್ನಡಿ. ಊಣೆಯು—ಕೊರತೆ. ೩೭. ಬಿತ್ತು—ಬೀಜ. ೩೮. ನಿರಾಕಾರ—ಆಕಾರವಿಲ್ಲದವನು. ೪೨. ಹಂಚು—ಮಡಕೆ ೪೫. ಹೇವ—ಅಸಹ್ಯ. ೫೪. ಅನ್ನೆಯು—ಅನ್ಯಾಯು. ೫೬ ಕೇಳುವೆ—ಗಾನ. ೬೭ ಕೀಳಿಲಿ ಕೆಳಭಾಗದಲ್ಲಿ. ೭೩. ನಿರ್ವ್ಯಾಜ—ನೆವವಿಲ್ಲದೆ. ೭೬. ಹಣ್ಣದಿಹುದು—ಮಾಡದೆಇರುವುದು. ೭೯. ಅಯ್ವರನು—ಪಂಚೇಂದ್ರಿಯಗಳನ್ನು. ೮೪ ಕಪ್ಪರ—ಭಿಕ್ಷಾಪಾತ್ರೆ. ೮೬. ಮಿಸುನಿ—ಚಿನ್ನ. ೯೫. ಆತುಮನ—ಪರಮಾತ್ಮನ.

8. ೨. ಮುಳ್ಳಿಡಿದು—ಮರುಳುಹಿಡಿದು. ೧೫. ಗಜ—ಆನೆ. ೧೮. ದಿಂಡೆಯು—ದುಷ್ಟನು. ೨೭. ತುರುಕರು—ಹಸುವು ಮತ್ತು ಕರುವು. ೨೮. ಇಕ್ಕಿ+ಆಡಕಲಿತ—ದಾನಮಾಡಿ ಅವನ್ನು ಹೇಳಿಕೊಂಡವನು. ೩೧. ಧಾತು+ಒಂದು

9. ೧. ಯೋಗವಟ್ಟಿಗೆ—ಯೋಗದಂಡ. ೨. ದೂಸಿಯು—ರಂಧ್ರ ಬಿದ್ದ. ೬. ಹರಿಸಹಕ್ಕಿಯು—ಸ್ವೇಚ್ಛೆಯಿಂದ ಓಡುವ ಇಂದ್ರಿಯಗಳನ್ನು ನೊರೆವಾಲ—ಆತ್ಮಧ್ಯಾನವೆಂಬ ಹಾಲನ್ನು. ೭. (ತಾ)ಹೃದಯವೆಂಬ ಕಮಲಮಧ್ಯದಲ್ಲಿರುವ ಪರಮಾತ್ಮನಲ್ಲಿ ಮನಸ್ಸನ್ನು ನಿಲ್ಲಿಸುವವನೇಯೋಗಿಯು. ೮. ಮೂರೂರು—ಇಡಾಪಿಂಗಳಾ ಸುಷುಮ್ನೆಗಳೆಂಬ ಮೂರು. ನಾಡಿಗಳು ಬಟ್ಟೆಗಳು ನಾಲ್ಕು—ಕಣ್ಣು ರಂಧ್ರಗಳೆರಡು, ಮೂಗಿನರಂಧ್ರಗಳೆರಡು. ೯. ಕಾಳಿಂಗೆ—ಕಪ್ಪಿಗೆ ೧೧. ಒಂದು ಕಂಬದೊಳು—ಮನಸ್ಸಿನಲ್ಲಿ, ಐದು ಗಂಧ ಹಂಸನ—ಪಂಚೇಂದ್ರಿಯಗಳನ್ನು. ೧೬. ಹಮ್ಮು—ಅಹಂಕಾರ. ೧೮. ಕುಂಡಲಿ—ಮನಸ್ಸೆಂಬಸರ್ಪ. ೨೨. ಒಂದರಾಮೊದಲೊಳಗೆ—ಪ್ರಕೃತಿಪ್ರಾರಂಭದಲ್ಲಿ ೨೬. ಇಪ್ಪತ್ತೈದನೆಯ ತತ್ವ ಆತ್ಮನು. ೩೪. ಕಾದಾತ—ಜಯಿಸಿದನು (ರಕ್ಷಿಸಿದನು) ೩೬. ನೂರು—ಶತವರ್ಷಗಳು, ೩೮. ಒಪ್ಪು+ಅರಸಿ—ಯೋಗ್ಯವಾದುದನ್ನು ಹುಡುಕಿ. ೪೨ ಭವಮಾಲೆ—ಜನ್ಮಗಳಸಾಲು, ೪೪. ಶ್ವಪಚ—ನಾಯನ್ನು ಬೇಯಿಸುವವನು (ಚಂಡಾಲನು) ೫೧. ನಲ್ಲೆಯರು—ಸ್ತ್ರೀಯರು

10. ೧. ನನ್ನಿ—ಸತ್ಯವಾಕ್ಯ ೧೩ ಅಂದಳ—ಪಾಲಕಿ ಸತ್ತಿಗೆ—ಛತ್ರಿ ಬಿದರದವ—ಭಯವಿಲ್ಲದವನು (?) ೪೮ ಇಟ್ಟು—ಅನ್ನವಿಟ್ಟು. ೫೪. ಬೈತು—ಬಚ್ಚಿಟ್ಟು ೫೫ ಮರ್ತ್ಯ—ಭೂಲೋಕ. ೫೬ ಅಟ್ಟು—ಅಡಿಗೆಮಾಡಿ. ೬೩. ಹಸ್ಗೆಸಿ—ಉಂಟುಮಾಡಿ ಹರದೆಯರು—ಸ್ತ್ರೀಯರು. ೬೬. ಕಪ್ಪರ—ಚಿಪ್ಪು (ಭಿಕ್ಷಾಪಾತ್ರೆ).

11. ೬ ಬಿನ್ನಣ—ಚಾತುರ್ಯವಾಕ್ಯ (ವಿಜ್ಞಾನಂ) ೧೧. ಹಾವಸೆ—ಪಾಚಿ. ೨೦. ಬೈತ್ರ—ದೋಣಿ (ಹಡಗು). ೨೧. ಇಚ್ಛಕ+ಬೇಳುವೆಮಾತು. ೨೪. ರೂಢಿ

ಪತಿ—ದೊರೆ. ೨೬. ಸಿದಿಗೆ—ಸತ್ತಿಗೆ (ಛತ್ರಿ) ೨೯. ಬಿಸಲಾದ—ಗರ್ಭವಾದ. ೩೩ ಸುರಗಿ—ಚಿಕ್ಕಕತ್ತಿ, ೩೫. ಖಂಡೆಯ—ಕತ್ತಿ. ೩೯ ನುಲಿಬೆಂದಹೊರಸು—ನುಲಿತಪ್ಪಿ ಬಿಚ್ಚಿಹೋದಹಗ್ಗ ೪೦ ತೇಜಿ—ಕುದುರೆ, ಹೊಟ್ಟೆಗೆಯರು—ಗೌಡಿಯುರು. ೪೬. ತಲ್ಲಣನು—ಭಯಂಕರನು. ೪೯. ಹೊರಸು ಜೋಳಿಗೆ—ಹಗ್ಗದ ಜೋಳಿಗೆ (ಚೀಲ) ೫೩. ಹಮ್ಮು—ಗರ್ವ.

13. ಉರ—ಎದೆ ೫. ಹರದ—ವ್ಯಾಪಾರಿ ೬. ಅಳೆ—ಮಜ್ಜಿಗೆ ೧೦ ಶುನಿ—ಹೆಣ್ಣುನಾಯಿ. ೧೯. ಹೊಳಹು—ಕಾಂತಿ. ೨೦. ಇಪ್ಪುರಿ—ಎರಡುಹುರಿ

14. ೬ ನೆಗಳು—ಮೊಸಳೆ. ಹುಡಿ—ನೆಲದಮಣ್ಣು. ೧೧. ಜೊನ್ನ—ಬೆಳದಿಂಗಳು. ೧೨. ಮಿಂಡಿ—ಪ್ರಾಯದಹೆಣ್ಣು. ಬೈತ್ರ—ದೋಣಿ. ಕೊಂಡೆಯನು—ಚಾಡಿಗಾರನು.

15. ೧. ಹಸ್ತಿ—ಆನೆ ಕಸ್ತಿ—ಸಾಮರ್ಥ್ಯ. ೩. ವ್ಯಾಧನು—ಬೇಡನು ಪ್ರತಿರೂಹು—ಪ್ರತಿಯಾದರೂಪ ೬. ಶ್ವಾನ—ನಾಯಿ.

16. ೮. ಓತು—ಪ್ರೀತಿಯಿಂದ. ಚಿಪ್ಪಿಲಿ—ಚಿಪ್ಪಿನಲ್ಲಿ. ೨೯. ಹಣ್ಣಾವು—ನಡೆಯುವುವು.

17. ೨. ಕಚ್ಚುಟ—ದಟ್ಟಿ.

18. ೪. ಹೆರೆ—ಪೊರೆ. ೧೩. ಕಿಸುಕೂಳು—ಕೆಂಬಣ್ಣದ ಅನ್ನ

19. ೧. ದೊಗ್ಗಮಜ್ಜಿಗೆ—ನೀರುಮಜ್ಜಿಗೆ ಕಿಸುವಾಯಿ—ಕೆಂಪುಬಾಯಿ. ೪. ತೊಗೆ—ತೊವ್ವೆ. ಹವಣ—ಪ್ರಮಾಣವನ್ನು. ೬. ಮಣಕೆಮ್ಮೆ—ಎಮ್ಮೆಯ ಕಡಸು.

20. ೬. ಅಳೆ—ಮಜ್ಜಿಗೆ. ೧೨. ಉದ್ದರಿ—ಸಾಲ. ೧೮ ಸವಾಲಕ್ಷ—ಒಂದೂ ಕಾಲು ಲಕ್ಷ. ೨೨. ತ್ರಿಣಯನ—ಈಶ್ವರನು. ೨೬. ಶಶಕ—ಮೊಲ ೨೯. ಶುಲ್ಬ—ಲಾಮಂಚದತೊಗಟೆ.

21. ೧. ರಂಧ್ರ, ೯. ಗತಿ. ೪. ಆದಿತ್ಯ. ೧೨. ಇವುಮೂರುಕೂಡಿ ಅರ್ಧಮಾಡಿ ಅದಕ್ಕೆ ಆತಿಥಿಯ ಸಂಖ್ಯೆ ಕೂಡಿಸಿದರೆ ಅಷ್ಟನೆಯ ನಕ್ಷತ್ರವು ೨. ಚೈತ್ರಾದಿ ಕಳೆದಮಾಸವನ್ನು ನಾಲ್ಕರಿಂದ ಗುಣಿಸಿ, ಅಂದಿನತಿಥಿ ಸೇರಿಸಿದರೆ ಅಷ್ಟನೆಯ ಕರಣವು ೩. ಕಳೆದಮಾಸ ಸಂಖ್ಯೆಯನ್ನು ೨ ರಿಂದಗುಣಿಸಿ, ಅಂದಿನತಿಥಿ ಕೂಡಿಸಿದರೆ ನಕ್ಷತ್ರವು ಬರುವುದು. ೬ ಮಾಸದಸಂಖ್ಯೆಯನ್ನು ೪. ರಿಂದ ಗುಣಿಸಿ ಆ ದಿನದತಿಥಿಯನ್ನು ಸೇರಿಸಿದರೆ ಯೋಗವು ಬರುವುದು ೧೦. ಮಾರ್ತಾಂಡ—ಸೂರ್ಯನು. ಪರಿವೇಷ—ಗುಡಿಕಟ್ಟುವುದು. ೧೩. ಅಳಿ—ತುಂಬಿ (ಕಪ್ಪು) ೨೨. ಸೀನುವವನು ಬಲಗಡೆ ಇದ್ದರೆ ಶುಭವು. ೨೪ ಕುರಿ—ಮೇಷ

ರಾಶಿ. ೨೫. ಮಿಸುನಿ—ಚಿನ್ನ. ೨೭. ಏಡಿ—ಕರ್ಕಾಟಕರಾಶಿ. ೩೧ ಚೇಳು—ವೃಶ್ಚಿಕ ೩೨. ಬಿಲ್ಲನು—ಧನುಸ್ಸನ್ನು. ೩೭. ಭಗಣ—ನಕ್ಷತ್ರ. ೩೮ ಶಂಕರನ ದೆಸೆ—ಈಶಾನ್ಯ. ಪಂಕಜಾರಾತಿ—ಸೂರ್ಯನು. ೪೦. ಎಗ್ಗನು—ಮೂಢನು.

22. ೮. ಮಿಾಪರೇ—ಸ್ನಾನಮಾಡುವರೆ. ೧೫. ಕೌದಿ—ಬೊಂತೆ. ೨೯. ಬಿಟ್ಟತೊಗಲು—ಕೃಷ್ಣಾಜಿನ. ೩೯. ನಿಂದ+ವಜ್ರಲೇಪ.

23. ೧೦. ತುಷ್ಟಿ—ತೃಪ್ತಿ. ೧೧. ಕುತ್ತ—ಬಾಧೆ

24. ೭. ಯೋಗಪಟ್ಟಿಗೆ—ಯೋಗಿಯು ಧರಿಸುವವಸ್ತ್ರ.

25. ೨. ಹುಸಿದರೆ—ಮಳೆಸುರಿಯದೆ ತಪ್ಪಿದರೆ ೪. ಗಂಹರ—ಗವಿ.

26. ೭. ಹಂದಲೆ—ಹಸಿಯ (ತೋಯುತ್ತಿರುವ) ತಲೆ. ೧೫. ಅಗಸೆ—ಪೌಳಿ. ೨೦. ಬೆಳ್ಳಿಲೆ—ಬಿಳಿಯ ವೀಳ್ಯದೆಲೆ. ಜುರುವುದು—ಜೂರುವುದು ೨೧. ಕೂರ್ತವರ—ಪ್ರೀತಿಸಿದವರನ್ನು. ೩೩. ಮುಡ್ಡಿ—ಹೆಂಡದಮುಡ್ಡಿಯು. ೩೩. ಪಡ್ಡಳಿ—ಜಾಜಿಹೂವು. ೨೭. ೩. ಏಣಾಂಕಧರನು—ಶಿವನು. ೫. ಬಿಂಗಿ—ನರ್ತಕನು (ಭೃಂಗಿ) ೭. ಲಗಳೆ+ಲೋಳೆ, ೧೧. ಗಣಿಕೆ—ವೇಶ್ಯಾಸ್ತ್ರೀ, ೨೦. ಬೋಡ—ಬೋಡು ಬಾಯವನು. ೨೧. ಅಂದಣ—ಪಾಲಕಿ. ೨೪. ಕುತ್ಸದಿಂ—ನಿಂದೆಯಿಂದ, ಏಗಳುಂ—ಯಾವಾಗಲೂ. ೪೧. ಬಾಸರಿಸಿಕೊಂಬ—ಅಸಹ್ಯ ಪಡುತ್ತಿರುವ ೪೪. ಕಡುಕು—ಕರ್ಣಾಭರಣ. ೫೨ ಹೆಟ್ಟುಗೆ—ಗೌಡಿಯರು.

27. ೮. ನಚ್ಚಿಗೆ—ನಂಬಿಕೆ. ೧೫ ಕೆಲಸಿಲ್ಲ—ಕೆಲಸವಿಲ್ಲ, ಕಾತಂತೆ—ಕಾಯಿಬಿಟ್ಟಂತೆ. ೫೮. ಹೊರಸು—ಹಾಸಿಗೆ.

28. ೧೩. ಅಲ್ಲಣ—ಹಲ್ಲಣ (ಜೀನು) ೧೬. ಹಂದರ—ಚಪ್ಪರ. ಬಾವುಗ—ಬೆಕ್ಕು.

29 ಈಪದ್ಧತಿ ಎಲ್ಲಾ ಒಗಟೆಗಳು ಇದರ ಉತ್ತರಮಾತ್ರಬರೆದಿದೆ, ೧. ಸುಣ್ಣ, ೨. ಗುಡುಗುಮಿಂಚು, ೩ ಸೂರ್ಯನಬೆಳಕು, ೪. ಹೊಳೆ, ೫. ಏರಿಲ್ಲ—ಗಾಯವಿಲ್ಲ, ಬೆಂಕಿ ೬. ವೀಣೆಯತಂತಿ, ೭ ತಲೆಕೂದಲು, ೮. ಮೆಣಸು, ೯. ನವಿಲು, ೧೦ ಕಟಿಗೋಲು, ೧೧. ಸೂರ್ಯನು, ೧೨ ಬಲೆ, ೧೩. ತುಪಾಕಿ, ೧೪ ಕೋಳಿಯಹುಂಜ, ೫೧. ವರ್ಣನೆ(ಕನ್ನಡಶ್ಲೇಷೆ), ೧೬. ಮಿಾನಿನಬಲೆ, ೧೭. ಇಕ್ಕಳ, ೧೮. ಶರೀರ, ೧೯. ಚೇಳು, ೨೦ ಕಣ್ಣು, ೨೧. ಸಾಣೆಯಕಲ್ಲು, ೨೨. ಸ್ಯಾವಿಗೆಯ ಒರಳು, ೨೩. ಬೀಸುವಕಲ್ಲು, ೨೪. ಗಂಧವನ್ನು ತೇಯುವುದು, ೨೫. ಮಿಾನಿನಬಲೆ, ೨೬. ಬಲೇ ಬೀಸುವುದು, ೨೭ ಗಿಣಿ, ೨೮ ಬೆಂಕಿ, ೨೯. ಅರ, ೩೦. ಬಾಣ, ೩೧. ನೊಣ, ೩೨. ಕೋಲು, ೩೩. ತಾಂಬೂಲ.

30. ೫ ಮುಸಿವಣ್ಣ. ಮುಸಿಯಬಣ್ಣ (ಕಪ್ಪು).